ಮಕ್ಕಳ ಬುದ್ಧಿಶಕ್ತಿ ಮತ್ತು ಪರಿಸರ

ಡಾ॥ ರಾಮಚಂದ್ರ ಶರ್ಮ



ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಮಕ್ಕಳ ಬುದ್ಧಿಶಕ್ತಿ ಮತ್ತು ಪರಿಸರ

(ಭಾರತದ ಮಕ್ಕಳ ಬಗೆಗೆ ನಡೆಸಿದ ಒಂದು ಸಂಶೋಧನೆಯ ವರದಿ)

ಡಾ. ರಾಮಚಂದ್ರ ಶರ್ಮ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

MAKKALA BUDDI SHAKTHI MATTU PARISARA :
By Dr. Ramachandra Sharma. Published by Prasaranga, Bangalore University, Bangalore

PP 212+viii

ಪ್ರಕಾಶಕರು :
ಹೆಚ್. ಆರ್. ದಾಸೇಗೌಡ
ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560056

ಪ್ರಕಟಣ ಸಹಾಯಕ :
ಬಿ. ಕೆ. ಕರೀಗೌಡ

ಬೆಲೆ : 8-00

ಮುದ್ರಣ :
ನಂದನ ಪ್ರಿಂಟಿಂಗ್ ಪ್ರೆಸ್,
317/10, 10ನೇ ಮುಖ್ಯ ರಸ್ತೆ,
ವಿಲ್ಸನ್ ಗಾರ್ಡನ್, ಬೆಂಗಳೂರು—560 027.

ಮೊದಲ ಮಾತು

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಕನ್ನಡ ಮಾಧ್ಯಮದ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ಈಗಾಗಲೇ ಪಠ್ಯ ಪುಸ್ತಕ-ಗಳನ್ನು ಸಿದ್ಧಪಡಿಸಿ ಪ್ರಕಟಿಸಿದೆ. ಇದರ ಜೊತೆಗೆ ವಿಶ್ವವಿದ್ಯಾಲಯವು ಸಾರ್ವಜನಿಕರಿಗಾಗಿ ವರ್ಷಾದ್ಯಂತ ಏರ್ಪಡಿಸುವ ಪ್ರಚಾರೋಪನ್ಯಾಸಗಳನ್ನು ವಿಶೇಷೋಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳು ಕೈಗೊಳ್ಳುವ ವೈಯಕ್ತಿಕ ಹಾಗೂ ಸಾಮೂಹಿಕ ಸಂಶೋಧನಾತ್ಮಕ ವ್ಯವಸಾಯಕ್ಕೆ ಗ್ರಂಥರೂಪದ ಅಭಿವ್ಯಕ್ತಿಯನ್ನು ಕೊಡುವ ಕಾರ್ಯವೂ ನಡೆದಿದೆ. ಇದರಿಂದಾಗಿ ವಿವಿಧ ವಿಭಾಗಗಳ ಅಧ್ಯಾಪಕರ ಸಂಶೋಧನಾತ್ಮಕ ಪ್ರವೃತ್ತಿಗೆ ಸಾಕಷ್ಟು ಪ್ರೇರಣೆ ದೊರೆತಿದೆ. ಇದಲ್ಲದೆ ವಿಶ್ವವಿದ್ಯಾಲಯೇತರ ಕ್ಷೇತ್ರಗಳಲ್ಲಿರುವ ವಿವಿಧ ಪರಿಣತರ ಕೃತಿಗಳನ್ನು, ಸಂಶೋಧನೆ, ಸಂಪಾದನೆ, ಪರಿಷ್ಕರಣ, ಜಾನಪದ, ಅನುವಾದ ಇತ್ಯಾದಿ ನಾನಾ ಬಗೆಯ ಗ್ರಂಥಗಳನ್ನು ಪ್ರಸಾರಾಂಗ ಪ್ರಕಟಿಸುತ್ತಿದೆ.

ಪ್ರಸ್ತುತ ಕೃತಿ, 'ಮಕ್ಕಳ ಬುದ್ಧಿಶಕ್ತಿ ಮತ್ತು ಪರಿಸರ' ಭಾರತದ ಮಕ್ಕಳ ಬಗೆಗೆ ಮನಶಾಸ್ತ್ರೀಯವಾಗಿ ಅಧ್ಯಯನ ನಡೆಸಿರುವ ಗಂಭೀರವಾದ ಮೌಲಿಕವಾದ ಗ್ರಂಥ. ಇಂತಹ ಮಹತ್ವದ ಕೃತಿಯನ್ನು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಪ್ರಕಟಿಸಲು ಅನುವುಮಾಡಿಕೊಟ್ಟ ಡಾ. ರಾಮಚಂದ್ರಶರ್ಮ ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ತ.ರಾ. ಜಯರಾಮನ್
ಉಪಕುಲಪತಿ
ಬೆಂಗಳೂರು ವಿಶ್ವವಿದ್ಯಾಲಯ

ನಾಲ್ಕು ಮಾತು

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸುವ ಸದುದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಪಠ್ಯ ಹಾಗೂ ಪಠ್ಯೇತರ ಹೊತ್ತಿಗೆಗಳನ್ನು ಪ್ರಕಟಿಸುವುವರ ಜೊತೆಗೆ ಇತರ ವಿಷಯದಲ್ಲಿ ಪ್ರಸಿದ್ಧರಾದ ವಿದ್ವಾಂಸರಿಂದ ಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಆಧುನಿಕ ಕನ್ನಡ ಸಾಹಿತ್ಯದ ಆವರಣಕ್ಕೆ ಅಗತ್ಯವಾದ ಹಾಗೂ ಜನಸಾಮಾನ್ಯರಿಗೆ ಜ್ಞಾನವನ್ನು ನೀಡಬಲ್ಲ, ವಿಜ್ಞಾನ, ತತ್ವಶಾಸ್ತ್ರ, ಚರಿತ್ರೆ, ಧರ್ಮ, ನೀತಿ, ಸಂಸ್ಕೃತಿ, ಜಾನಪದ, ಸಾಮಾಜಿಕ ಹಾಗೂ ಮಾನಸಿಕಶಾಸ್ತ್ರ ಮುಂತಾದ ವಿಷಯಗಳ ಮೇಲೆ ಸ್ವತಂತ್ರವಾಗಿಯೋ, ಭಾಷಾಂತರದ ಮೂಲಕವೋ ಅಥವಾ ಸಂಕಲನದ ಮೂಲಕವೋ ಸರಳ ಹಾಗೂ ಖಚಿತವಾದ ಹೊಸಗನ್ನಡ ಶೈಲಿಯ ಮೂಲಕ ಪ್ರಸಾರಾಂಗವು ಈಗಾಗಲೇ ಅನೇಕ ಹೊತ್ತಿಗೆಗಳನ್ನು ಪ್ರಕಟಿಸಿದೆ. ಈ ರೀತಿಯಲ್ಲಿ ದೇಶದ ಇತರೆ ಭಾಷೆಗಳಾದ ತಮಿಳು, ಉರ್ದು, ಹಿಂದಿ, ಸಂಸ್ಕೃತ ಮೊದಲಾದವುಗಳ ಪಠ್ಯ ಹಾಗೂ ಇತರೆ ಪುಸ್ತಕಗಳನ್ನು ನಮ್ಮ ವಿಭಾಗ ಈಗಾಗಲೇ ಪ್ರಕಟಿಸಿದೆ. ಇವುಗಳಲ್ಲಿ ಅನೇಕ ಕೃತಿಗಳು ಮರುಮುದ್ರಣಗೊಂಡಿವೆ. ಮುಂದೆಯೂ ಇಂಥ ಹಲವಾರು ವಿಷಯಗಳ ಮೇಲೆ ಎಲ್ಲಾ ಭಾಷೆಯಲ್ಲಿಯೂ ಮಹತ್ತರವಾದ ಹೊತ್ತಿಗೆಗಳನ್ನು ಪ್ರಕಟಿಸಬೇಕೆಂಬ ಮಹೋದ್ದೇಶವನ್ನು ಪ್ರಸಾರಾಂಗ ಹೊಂದಿದೆ.

ಪ್ರಸ್ತುತ ಕೃತಿ, 'ಮಕ್ಕಳ ಬುದ್ಧಿಶಕ್ತಿ ಮತ್ತು ಪರಿಸರ' ಭಾರತದ ಮಕ್ಕಳ ಬಗೆಗೆ ನಡೆಸಿದ ಒಂದು ಸಂಶೋಧನೆಯ ವರದಿಯಾಗಿದೆ. ಈ ಕೃತಿಯ ಲೇಖಕರಾದ ಡಾ. ರಾಮಚಂದ್ರ ಶರ್ಮ ಅವರು ಕನ್ನಡದ ಪ್ರಖ್ಯಾತ ಕವಿಗಳೂ, ಶಿಕ್ಷಣ ತಜ್ಞರೂ ಆಗಿದ್ದಾರೆ. ಅವರು

ಇಂಗ್ಲೆಂಡಿನಲ್ಲಿ ಕೆಲವು ದಿನಗಳ ಹಿಂದೆ ಮನೋವಿಜ್ಞಾನಿಯಾಗಿ ಕೆಲಸ ಮಾಡುತ್ತಿದ್ದಾಗ, ಅಲ್ಲಿಗೆ ಭಾರತದಿಂದ, ವೆಸ್ಟ್ ಇಂಡೀಸ್ ಕಡೆಯಿಂದ ವಲಸೆ ಬರುತ್ತಿದ್ದ ಮಕ್ಕಳ ಬುದ್ಧಿಶಕ್ತಿಯನ್ನು ಪರೀಕ್ಷೆ ಮಾಡಿ, ಅವುಗಳ ಭವಿಷ್ಯದ ಬಗ್ಗೆ ಕುರಿತು ಚಿಂತಿಸಿದ ಚಿಂತನೆಗಳು ಈ ಕೃತಿಯಲ್ಲಿ ಮೂಡಿ ಬಂದಿವೆ. ಮಕ್ಕಳ ವರ್ಷದಲ್ಲಿ ಇಂತಹ ಉಪಯುಕ್ತವಾದ ಕೃತಿಯನ್ನು ಬರೆದು ನಮ್ಮ ಪ್ರಸಾರಾಂಗದ ಪ್ರಕಟಣೆಗೆ ಅನುವು ಮಾಡಿಕೊಟ್ಟಿದ್ದಾರೆ. ಅವರ ಈ ಸಹಕಾರಕ್ಕಾಗಿ ವಿಶ್ವವಿದ್ಯಾಲಯದ ಪರವಾಗಿ ನಾನು ತುಂಬಾ ಆಭಾರಿ. ಹಾಗೆಯೇ ಈ ಕೃತಿಯನ್ನು ಮುದ್ರಿಸುವಲ್ಲಿ ನೆರವಾದ ನಂದನ ಪ್ರಿಂಟಿಂಗ್ ಪ್ರೆಸ್‌ನ ಶ್ರೀ ಅಶೋಕ ಅವರಿಗೂ ನನ್ನ ವಂದನೆಗಳು. ಕನ್ನಡಿಗರ ಸೌಹಾರ್ದಸಹಕಾರಗಳಿಂದ ಹೀಗೆಯೇ ನಿರಂತರವಾಗಿ ವಿಶ್ವವಿದ್ಯಾಲಯದ ಪ್ರಸಾರಾಂಗದ ಗ್ರಂಥಮಾಲೆಯು ಬೆಳೆಯಲೆಂದು ಆಸಿಸುತ್ತೇನೆ.

ಹೆಚ್. ಆರ್. ದಾಸೇಗೌಡ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ

ಮುನ್ನುಡಿ

ಕೆಲವೊಂದು ವರ್ಷಗಳ ಹಿಂದೆ ನಾನು ಇಂಗ್ಲೆಂಡಿನಲ್ಲಿ ಮನೋವಿಜ್ಞಾನಿಯಾಗಿ ಕೆಲಸ ಮಾಡುತ್ತಿದ್ದೆ. ಹಾರ್ಟ್‌ಫರ್ಡ್‌ಶೈರ್ ಪ್ರಾಂತದ ವಿದ್ಯಾಭ್ಯಾಸದ ಇಲಾಖೆಯಲ್ಲಿ ನನ್ನ ಕೆಲಸ. ಇಂಗ್ಲಿಷ್ ಮಕ್ಕಳನ್ನು ಹೇಗೋ ಹಾಗೇ ಭಾರತದಿಂದ, ವೆಸ್ಟ್ ಇಂಡೀಸ್ ಕಡೆಯಿಂದ ವಲಸೆ ಬರುತ್ತಿದ್ದ ಮಕ್ಕಳನ್ನು ಕಂಡು ಅವರ ಬುದ್ಧಿ ಪರೀಕ್ಷೆ ಮಾಡಿ ಅವರ ಭವಿಷ್ಯತ್ತಿನ ಬಗೆಗೆ ಸಲಹೆ ಕೊಡುವುದು ನನ್ನ ಕೆಲಸವಾಗಿತ್ತು.

ಇಂಗ್ಲಿಷ್ ಮನೋವಿಜ್ಞಾನಿಗಳು ಹೊರಗಿನಿಂದ ಬಂದ ಮಕ್ಕಳ ಪರೀಕ್ಷೆ ಮಾಡುವಾಗ ಪಡುತ್ತಿದ್ದ ಪಾಡು, ಅಸಹಾಯಕತೆ, ಮಕ್ಕಳಿಗೆ ಅನ್ಯಾಯ ಮಾಡುವಂತಹ ಸಲಹೆ ಕೊಡುವದರ ಬಗೆಗೆ ಅವರು ಅನುಭವಿಸುತ್ತಿದ್ದ ಆತಂಕಗಳು ನನ್ನನ್ನು ಮೊದಲು ಭಿನ್ನಸಂಸ್ಕೃತಿಗಳ ಸಂಶೋಧನೆಯ ಕಡೆಗೆ ಎಳೆದವು. ಅಂತಹ ಸಂಶೋಧನೆ ಒಡ್ಡುವ ಸಮಸ್ಯೆಗಳ ಬಗೆಗೆ ಚಿಂತಿಸುತ್ತಿರುವಾಗ, ನಾನು ಭಾರತದಿಂದ ಬ್ರಿಟನ್ನಿಗೆ ವಲಸೆ ಬಂದ ಮಕ್ಕಳಿಗೆ ಸಂಬಂಧಪಟ್ಟ ಹಾಗೆ ಸಂಶೋಧನೆ ನಡೆಸುವದಾದರೆ, ಬ್ರಿಟನ್ನಿನ ಮನೋವಿಜ್ಞಾನಿಗಳಿಗೆ ತುಂಬ ಸಹಾಯವಾಗುವದೆಂದು ಸೂಚಿಸಿದವರು: ಪ್ರೊಫೆಸರ್ ಪಿ.ಇ.ವರ್ನನ್.

ಅಂತರರಾಷ್ಟ್ರೀಯ ಖ್ಯಾತಿ ವರ್ನನ್ ಅವರದ್ದು. ಮಕ್ಕಳ ಬುದ್ಧಿ ಪರೀಕ್ಷೆಯ ಕ್ಷೇತ್ರದಲ್ಲಿ ಅವರು ಮಾಡಿರುವ ಕೆಲಸ ಅಗಾಧ. ಇಂತಹ ಮನೋವಿಜ್ಞಾನಿ ಕೇಳುವುದು ಹೆಚ್ಚೋ ನಾನು ಸಂಶೋಧನೆ ಮಾಡುವುದೋ ಹೆಚ್ಚೋ ಎಂದುಕೊಂಡು ಅವರ ಮಾರ್ಗದರ್ಶನದಲ್ಲಿ ಕೆಲಸ ಶುರು ಮಾಡಿದೆ.

ಆ ಸಂಶೋಧನೆಯೇ ಈ ಪುಸ್ತಕದ ವಸ್ತು. ಸಂಶೋಧನೆಗೆ ಬೇಕಾದ ಆರ್ಥಿಕ ನೆರವನ್ನು ಕೊಟ್ಟಿದ್ದು ಬ್ರಿಟನ್ನಿನ ಸರ್ಕಾರ. ಕಾಲಾವಕಾಶ

ದೊರಕಿದ್ದು ನನ್ನ ಪ್ರಾಂತದ ವಿದ್ಯಾಧಿಕಾರಿಗಳ ಕೃಪೆಯಿಂದ. ಬೆಂಬಲ ವಾಗಿ ನಿಂತು ಚುಚ್ಚಿ ಕೆಲಸ ಮಾಡಿಸಿದ್ದು ಪದ್ಮ, ನನ್ನ ಹೆಂಡತಿ, ಎಲ್ಲರಿಗೂ ನಾನು ಆಭಾರಿ.

ಈ ತರಹದ ಸಂಶೋಧನೆಗಳು ಕನ್ನಡದಲ್ಲಿ ವರದಿಯಾಗಿರುವುದು ವಿರಳವೆಂದು ಸ್ನೇಹಿತರು ಹೇಳಿದಾಗ ಕನ್ನಡದಲ್ಲಿ ಬರೆಯುವ ನಿರ್ಧಾರ ಮಾಡಿದೆ. ಇದರ ಬಗೆಗೆ ಮಾತು ಬಂದಾಗ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸುವ ಆಸೆ ತೋರಿಸಿದ್ದು ಸಮಾಧಾನದ ವಿಷಯ.

ಮಕ್ಕಳಿಗೆ ಸಂಬಂಧಪಟ್ಟ ಈ ಪುಸ್ತಕ ಮಕ್ಕಳ ವರ್ಷದಲ್ಲಿ ಹೊರಬರುತ್ತಿರುವುದು ಹೆಚ್ಚಿನ ಮಾತು.

ರಾಮಚಂದ್ರ ಶರ್ಮ

ಪರಿವಿಡಿ

ಅಧ್ಯಾಯ ಒಂದು

ಭಿನ್ನ ಸಂಸ್ಕೃತಿಗಳ ಅಭ್ಯಾಸ-ವಿಧಾನ ಶಾಸ್ತ್ರದ ಸಮಸ್ಯೆಗಳು

ಭಿನ್ನ ಸಂಸ್ಕೃತಿಗಳ ಅಭ್ಯಾಸ ಹತ್ತೊಂಬತ್ತನೇ ಶತಮಾನದ ಅರ್ಧಕ್ಕೆ ಆರಂಭವಾದಾಗ ಆ ಕ್ಷೇತ್ರಕ್ಕೆ ಮೊದಲು ಕಾಲಿಟ್ಟವರು ಸಮಾಜಶಾಸ್ತ್ರಜ್ಞರು ಹಾಗೂ ಕುಲಶಾಸ್ತ್ರಜ್ಞರು. ಈ ತರಹದ ಅಭ್ಯಾಸಕ್ಕೆ ಅಗತ್ಯವಾಗಿದ್ದ ಸಾಮಗ್ರಿಗಾಗಿ ಅವರು ತಮ್ಮ ದೇಶ ಬಿಟ್ಟು ಹೋದದ್ದು ವಿರಳ. ಬೇರೆ ಸಂಸ್ಕೃತಿಯ ಜನದ ನಡವಳಿಕೆಯೇನು, ಅವರ ಸಮಾಜ ಸಂಘಟನೆ ಎಂತಹದು ಅನ್ನುವ ಕುತೂಹಲ ಅವರನ್ನು ಕರೆದೊಯ್ದದ್ದು ಊರಿನ ಪುಸ್ತಕಾಲಯಗಳಿಗೆ, ಧೂಳು ಕವಿದ ದಾಖಲೆಗಳಿಗೆ. ಆಗ ಈಗ ಒಬ್ಬರೋ ಇಬ್ಬರೋ ಅಭ್ಯಾಸಕ್ಕೆ ಆರಿಸಿಕೊಂಡಿದ್ದ ಜನರಿದ್ದ ದೇಶಕ್ಕೆ ಹೋಗಿಬಂದಾಗಲೂ ಅವರು ಕೊಟ್ಟಿದ್ದ ಕಣ್ಣು ಕಂಡದ್ದರ ವರ್ಣನೆ—ಆ ಬುಡಕಟ್ಟಿನ ಸಂಪ್ರದಾಯಗಳ, ವಿಧ್ಯುಕ್ತ ಕ್ರಿಯೆಗಳ, ರಕ್ತಸಂಬಂಧಗಳ ವರ್ಣನೆ.

ಆ ಕಾಲದ ಈ ತರಹದ ವರ್ಣನಾತ್ಮಕ ಬರಹಗಳಿಗೆ ಬೆಲೆಯಿಲ್ಲವೆಂದಲ್ಲ. ಆ ತರುವಾಯ ಬಂದ ಸಂಶೋಧಕರಿಗೆ ಅತ್ಯಗತ್ಯವಾಗಿದ್ದ ಹಿನ್ನೆಲೆಯನ್ನು ಒದಗಿಸಿದ್ದೇ ಈ ತರಹದ ಬರಹ. ಸಂಶೋಧಕನ ಸಾಂಸ್ಕೃತಿಕಪರಿಸರವೇ ಕಾರಣವಾಗಿ

ಅವನಿಟ್ಟುಕೊಂಡು ಹೊರಟ ಆಧಾರ ಕಲ್ಪನೆಗಳ ಸಾರ್ವತ್ರಿಕತ್ವವನ್ನು ಪರೀಕ್ಷಿಸುವುದು ಸಾಧ್ಯವಾದದ್ದೇ ಈ ತರಹದ ಬರಹಗಳಿಂದ.

'ಭಿನ್ನ ಸಂಸ್ಕೃತಿಗಳ ಅಭ್ಯಾಸ ಸದ್ಗುಣದ ಹಾಗೆ—ಸದ್ಗುಣ ಅಗತ್ಯವೆಂದು ಎಲ್ಲ ಒಪ್ಪಿದರೂ ಅದರ ಸ್ವರೂಪವೇನು, ಅದರ ಉದ್ದೇಶವೇನು ಅನ್ನುವುದರ ಬಗೆಗೆ ಭಿನ್ನಾಭಿಪ್ರಾಯ'. ಫ್ರಿಜಡಾ ಮತ್ತು ಜಹೋದಾ[1] ಹೇಳಿದ ಮಾತು ವಾಸ್ತವ. ಭಿನ್ನ ಸಂಸ್ಕೃತಿಗಳ ಹೆಸರಿನ ಎಷ್ಟೋ ಅಭ್ಯಾಸಗಳು ನ್ಯಾಯವಾಗಿ ಭಿನ್ನ ರಾಷ್ಟ್ರಗಳ ಅಥವಾ ಭಿನ್ನ ಜನಾಂಗಗಳ ಸಂಶೋಧನೆಗಳು. ಉದಾಹರಣೆಗೆ ಹೇಳುವದಾದರೆ ಜರ್ಮನಿಯ ಮತ್ತು ಅಮೆರಿಕದ ಎರಡು ವಿಶ್ವವಿದ್ಯಾನಿಲಯಗಳಲ್ಲಿರುವ ವಿದ್ಯಾರ್ಥಿಗಳನ್ನು ಯಾವುದಾದರೂ ಮಾನಸಿಕ ಕ್ರಿಯೆಯೊಂದರ ದೃಷ್ಟಿಯಿಂದ ಹೋಲಿಸಿ ನೋಡುವ ಸಂಶೋಧನೆ ನಿಜಕ್ಕೂ ಭಿನ್ನ ಸಂಸ್ಕೃತಿಗಳ ಅಭ್ಯಾಸವೇ ? ಜರ್ಮನಿಯ ಹಾಗೂ ಅಮೆರಿಕದ ಸಂಸ್ಕೃತಿಗಳು ತಮ್ಮ ಸಂಸ್ಥೆಗಳ ಮೂಲಕ ಸಾಧಿಸುವ ಅಭಿವ್ಯಕ್ತಿಗಳಲ್ಲಿ ವ್ಯತ್ಯಾಸವೇ ಇಲ್ಲವೆಂದಲ್ಲ. ಅವೆರಡರ ನಡುವೆ ಕಂಡುಬರುವ ವ್ಯತ್ಯಾಸಕ್ಕಿಂತ ಇರುವ ಸಾಮ್ಯವೇ ಹೆಚ್ಚೆಂಬುದರ ಬಗೆಗೆ ವಾದವಿರಲಾರದು ; ಅದೇ ರೀತಿ, ಅವೆರಡರ ನಡುವೆ, ಜರ್ಮನಿಯ ಹಾಗೂ ಭಾರತದ ಸಂಸ್ಕೃತಿಗಳ ನಡುವೆಗಿರುವದಕ್ಕಿಂತ ಹೆಚ್ಚಿನ ಸಾಮ್ಯವಿದೆಯೆನ್ನುವುದನ್ನೂ ಜನ ಒಪ್ಪಿಯಾರು. ಹಾಗಾದರೆ, ಎರಡು ಸಂಸ್ಕೃತಿಗಳನ್ನು ಅಭ್ಯಾಸಕ್ಕೆ ಆರಿಸಿಕೊಂಡರಷ್ಟೇ ಸಾಲದು. ಒಂದು ಸಂಶೋಧನೆಗೆ ಭಿನ್ನ ಸಂಸ್ಕೃತಿಗಳ ಅಭ್ಯಾಸದ ಹೆಸರು ಕೊಡುವ ಮೊದಲು, ಅವೆರಡರ ಗಡುವಿನ ವ್ಯತ್ಯಾಸದ ಗಾತ್ರವನ್ನೂ ಗಮನಿಸಬೇಕು ಅಂದ ಹಾಗಾಯಿತು.

ಭಿನ್ನಸಂಸ್ಕೃತಿಗಳ ಅಪ್ಪಟವಾದ ಒಂದು ಅಭ್ಯಾಸದ ಉದ್ದೇಶವೇನು ? ಒಂದು ಜನದ ಮೇಲೆ ಅವರ ಸಾಂಸ್ಕೃತಿಕ ಪರಿಸರ ಎಂತಹ ಪ್ರಭಾವ ಹೊಂದಿದೆ ಅನ್ನುವುದರ ಪರಿಶೀಲನೆಯೇ ಇಂತಹ ಅಭ್ಯಾಸದ ಮುಖ್ಯೋದ್ದೇಶವಾಗಿರಬೇಕು ಅನ್ನುವುದು ಪ್ರೈಸ್ ವಿಲಿಯಮ್ಸ್ ಅಸರವುತ (1969)[2] ಅಥವಾ ಕಣ್ಣು ಕಾಣುವ ವರ್ತನೆಗೂ ಪರಿಸರದ ಕೆಲವೊಂದು ಅಂಶಗಳಿಗೂ ಕಾರ್ಯಕಾರಣ ಸಂಬಂಧವನ್ನು ಸ್ಥಾಪಿಸುವುದೇ ಇಂತಹ ಅಭ್ಯಾಸದ ಗುರಿ. ಕಂಡು ಬರುವ ವರ್ತನೆಗೆ ಅಲ್ಲಿಯ ನೆಲದ ಗುಣ, ಸಾಂಪ್ರದಾಯಿಕವಾಗಿರುವ ಆಹಾರೋತ್ಪತ್ತಿಯ ವಿಧಾನ, ಶಿಶುಪಾಲನೆಯ ಕ್ರಮ, ಅಕ್ಷರತೆಯ ಮಟ್ಟ, ಅಚ್ಚಕ್ಷರ ಹಾಗೂ ಚಿತ್ರಗಳ ಜೊತೆಗೆ ಜನಕ್ಕಿರುವ ಸಂಪರ್ಕದ ಮಟ್ಟ–ಯಾವುದು ಬೇಕಾದರೂ ಕಾರಣವಾಗಿರಬಹುದು. ಒಂದು ಸಂಶೋಧನೆ ಮೆಕ್ಸಿಕೋದಲ್ಲೋ ಇಥಿಯೋಪಿಯಾದಲ್ಲೋ ನಡೆಯಿತೆಂದ ಮಾತ್ರಕ್ಕೇ ಅದನ್ನು ಭಿನ್ನ ಸಂಸ್ಕೃತಿಗಳ ಅಭ್ಯಾಸವೆಂದು ಕರೆಯುವುದು ತಪ್ಪು. ಸಾಂಸ್ಕೃತಿಕ ಪರಿಸರದಲ್ಲಿರುವ ಅಸ್ಥಿರವಾದ ಒಂದಂಶವನ್ನು ತನಿಖೆಗೆ ಗುರಿಪಡಿಸದ ಯಾವ ಸಂಶೋದನೆಗೂ ಈ ಹೆಸರನ್ನು ಕೊಡಬಾರದು.

ಎರಡು ಸಂಸ್ಕೃತಿಗಳ ಹೋಲಿಕೆಗೆ ಕೈ ಹಾಕುವಾಗ ಪಾಶ್ಚಾತ್ಯದ ಯಾವುದಾದರೂ ಒಂದನ್ನು, ಪ್ರವರ್ಧಮಾನಕ್ಕೆ ಬಂದಿರದ ಬಹುತೇಕ ಅನಕ್ಷರಸ್ಥನಾಗಿಯೂ ಸಂಪ್ರದಾಯ ಬದ್ಧವಾಗಿಯೂ ಇರುವ, ಇನ್ನೊಂದರ ಜೊತೆಗಿಡುವುದು ರೂಢಿಯಾಗಿದೆ. ಭಿನಸಂಸ್ಕೃತಿಗಳ ಅಭ್ಯಾಸ ಈ ದಾರಿ ಹಿಡಿದದಕ್ಕೆ ಕಾರಣವಿಲ್ಲದೇ ಇಲ್ಲ. ತಿಳಿದ ಜನ ಹಾಗೂ ಅಗತ್ಯವಾದ ಹಣವಿದ್ದದ್ದು ಪಾಶ್ಚಾತ್ಯದೇಶಗಳಲ್ಲಿ; ಮಾನಸ ಕ್ರಿಯೆಗಳ ಮಾಪಕಗಳ ಉಗಮ ಆ ದೇಶಗಳಲ್ಲಿ; ತಮ್ಮಂತಲ್ಲದ ಜನಗಳ ಬಗೆಗೆ ಕುತೂಹಲ ಕಂಡುಬಂದದ್ದು ಅಲ್ಲಿ. ಹೀಗಾಗಿ ಇಂತಹ ಅಭ್ಯಾಸಕ್ಕೆ ಪಾಶ್ಚಾತ್ಯ ದೇಶಗಳ ಸಂಶೋಧಕರು ಮೊದಲಿಗರಾಗಿ ಕೈ ಹಾಕಿದ್ದಾಗಲೀ ಅಭ್ಯಾಸ ಕ್ಷೇತ್ರವನ್ನು ಸಾಕಷ್ಟು ವಿಸ್ತರಿಸದ್ದಾಗಲೀ ಆಶ್ಚರ್ಯವಲ್ಲ. ಸ್ವಾತಂತ್ರ್ಯ ಬಂದ ಮೇಲೆ ಹುಟ್ಟಿದ ಏಷ್ಯ, ಆಫ್ರಿಕ ಹಾಗೂ ದಕ್ಷಿಣ ಅಮೆರಿಕದ ವಿಶ್ವವಿದ್ಯಾನಿಲಯಗಳಲ್ಲಿ, ಪಾಶ್ಚಾತ್ಯ ಸಂಶೋಧಕರ ಬೆಂಬಲ ಮಾರ್ಗದರ್ಶನಗಳಿಲ್ಲದೇ, ಇವೊತ್ತು ನಡೆಯುತ್ತಿರುವ ಸಂಶೋಧನೆಗಳ ಸಂಖ್ಯೆ ಆಶ್ಚರ್ಯಕ್ಕೆ ಕಾರಣ, ಸಮಾಧಾನದ ಮಾತು.

ಪಾಶ್ಚಾತ್ಯ ಸಮಾಜಕ್ಕೂ ಸಂಪ್ರದಾಯ ಬದ್ಧವಾದೊಂದು ಸಮಾಜಕ್ಕೂ ಇರುವ ವ್ಯತ್ಯಾಸವನ್ನು ಸಮಾಜಸಂಘಟನೆಯ ದೃಷ್ಟಿಯಿಂದ ಕ್ರೋಢೀಕರಿಸುವ ಪ್ರಯತ್ನಗಳನ್ನು ಜನ ಮಾಡುತ್ತಲೇ ಬಂದಿದ್ದಾರೆ: ಸಮಾಜಗಳನ್ನು 'ನಾಗರಿಕ' 'ಅನಾಗರಿಕ'ಗಳೆಂದು ವಿಂಗಡಿಸಿದ ಡೂಬ್[3] ಅವರ 1960ರ ಪ್ರಯತ್ನವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಡೂಬ್ ಅವನ ಪ್ರಕಾರ ಅನಾಗರಿಕ ಸಮಾಜದ ಪ್ರಧಾನ ಲಕ್ಷಣಗಳು ಇವು :

1. ಅಲ್ಲಿಯ ಜನ ಬಹುಮಟ್ಟಿಗೆ ಸಣ್ಣ ಗುಂಪುಗಳನ್ನು ಕಟ್ಟಿಕೊಂಡು ಬದುಕುತ್ತಾರೆ.

2. ಸಮಾಜದ ಸದಸ್ಯರ ನಡುವೆ ಮುಖಾಮುಖಿ ಪರಿಚಯ ಇರುತ್ತದೆ.

3. ಸಮಾಜದ ವ್ಯವಸ್ಥೆ ನಿಷ್ಕರ್ಷೆಯಾಗಿದ್ದು ಅದಕ್ಕೆ ಹೊಂದಿಕೊಂಡಂತೆ ಬದುಕುವುದೂ ಅದನ್ನು ಉಳಿಸಿಕೊಂಡು ಬರುವುದೂ ಮುಖ್ಯ ಉದ್ದೇಶಗಳು.

4. ಹೆಚ್ಚು ಕಡಿಮೆ ಸ್ಥಿರವಾದ ಸಮಾಜದಲ್ಲಿ ಜನದ ನಂಬಿಕೆಗಳ ಮುಖ್ಯ ಲಕ್ಷಣ ಅದಕ್ಕಿರುವ ಪರಿಶುದ್ಧ ರೂಪ.

5. ಭೌತಿಕ ಜೀವನ ಕ್ರಮ ಎಂದೋ ಇತ್ಯರ್ಥವಾದ ಸತ್ಯ ಹಾಗೂ ಪೂರ್ವಿಕರ ಅನುಭವಗಳಿಂದ ಪರಿಷ್ಕೃತವಾದ ಕಟ್ಟುಕಟ್ಟಳೆಗಳು ಶಾಶ್ವತವೆನ್ನುವ ದೃಢ ವಿಶ್ವಾಸ.

6. ಬದುಕಿನ ಎಲ್ಲ ವ್ಯಾಪಾರಗಳ ಕೇಂದ್ರವಾಗಿ ದೈಹಿಕವಾದ ಅಗತ್ಯಗಳ ಪೂರೈಕೆ.

7. ಬದುಕು ಸರಳ ಹಾಗೂ ಅವಿಭಾಜ್ಯ: ಕೌಟುಂಬಿಕ ಬದುಕು ಧಾರ್ಮಿಕ ಆಚರಣೆಗಳು ಮತ್ತು ಶಿಶುಪಾಲನೆಯ ಕ್ರಮ–ಎಲ್ಲವೂ ಒಂದೇ ಮೊತ್ತದ ಅಭಿವ್ಯಕ್ತಿಗಳು.

8. ಸದ್ಯದ ಬದುಕೇ ಮುಖ್ಯ: ನೆನ್ನೆಗಳ ಲಾಂಛನೆಯಾಗಿರುವದರಿಂದ ಇವೊತ್ತಿಗೆ ಬೆಲೆ; ನಾಳೆಯ ಯೋಚನೆ ನಾಳೆಗೆ ಅನ್ನುವ ಮನೋಭಾವ.

ಎಲ್ಲ ಕ್ರೋಢೀಕರಣಗಳ ಪ್ರಯತ್ನಗಳಿಗೂ ತಟ್ಟುವ ಸರಳೀಕರಣದ ದೋಷ ಡೂಬ್ ಅವರ ಪ್ರಯತ್ನಕ್ಕೂ ತಟ್ಟಿದೆ. ಇವೊತ್ತಿನ ಪ್ರಪಂಚದಲ್ಲಿ ಪಾಶ್ಚಾತ್ಯ ಸಂಸ್ಕೃತಿಗಳ ಸಂಪರ್ಕ ಕಿಂಚಿತ್ತಾದರೂ ಇಲ್ಲದ ಸಮಾಜವೇ ಇರಲಾರದು. ಎರಡನೇ ಮಹಾಯುದ್ಧಕ್ಕೆ ಮೊದಲು ತಮ್ಮ ಸಂಪ್ರದಾಯಗಳನ್ನು ಹೆಚ್ಚು ಕಡಿಮೆ ಉಳಿಸಿ ಕೊಂಡಿದ್ದ ಸಮಾಜಗಳೂ ಇವೊತ್ತು ಗುರುತು ಸಿಕ್ಕದ್ದಷ್ಟು ಬದಲಾಗಿವೆ. ಈ ಪರಿಸ್ಥಿತಿಗೆ ಅನೇಕ ಕಾರಣಗಳಿರುವುದು ನಿಜವಾದರೂ. ಮಕ್ಕಳ ವಿದ್ಯಾಭ್ಯಾಸ ಕ್ರಮ ದಲ್ಲಿ ಈಚೆಗೆ ಆಗಿರುವ ಬದಲಾವಣೆ ಅತಿಮುಖ್ಯವಾದದ್ದೆನ್ನಬಹುದು.

ಪರಿಸರವಿಲ್ಲದೆ ಮನಸ್ಸಿನ ಬೆಳವಣಿಗೆಯೇ ಇಲ್ಲವೆನ್ನುವ ಆಧಾರ ಕಲ್ಪನೆ ಬ್ರೂನರ್[4] ಅವರದು. ಪಾಶ್ಚಾತ್ಯ ಸಮಾಜಕ್ಕೂ ಸಾಂಪ್ರದಾಯಕ ಸಮಾಜಕ್ಕೂ ಇರುವ ವ್ಯತ್ಯಾಸಕ್ಕೆ ಮಕ್ಕಳು ಕೌಶಲಗಳನ್ನು ಹೇಗೆ ಕಲಿಯುತ್ತಾರೆ ಅನ್ನುವುದೇ ಅತಿಮುಖ್ಯವಾದ ಕಾರಣವೆಂದು ಬ್ರೂನರ್ ಮತ್ತೆ ಮತ್ತೆ ಹೇಳಿದ್ದಾರೆ. ಕೈಗಾರಿಕೆ ಬೆಳೆದ ಸಮಾಜದಲ್ಲಿ ಮಕ್ಕಳ ಕಲಿಕೆ ನಡೆಯುವುದು ಶಾಲೆಯಲ್ಲಿ–ಅಷ್ಟರಮಟ್ಟಿಗೆ ಅದು ದಿನ ನಿತ್ಯದ ಬದುಕಿನಿಂದ ದೂರ, ಎಂದೇ ಅಮೂರ್ತ. ಸಾಂಪ್ರದಾಯಿಕ ಸಮಾಜದಲ್ಲಿ ಮಕ್ಕಳು ಕಲಿಯುವುದು ಬದುಕಿನ ಸಂದರ್ಭದಲ್ಲಿ–ಎಂದೇ ಕಲಿಕೆ ಕಾರ್ಯಗಳ ನಡುವೆ ಕಂದರವಿಲ್ಲ. ಇಂತಹ ಸಮಾಜಗಳಲ್ಲಿ ವಿದ್ಯಾಭ್ಯಾಸದ ವ್ಯವಸ್ಥೆ ಗಾಗಿ ಶಾಲೆಗಳು ಸ್ಥಾಪಿತವಾದಾಗ ಜನದ ಬದುಕಿನಲ್ಲಾಗುವ ವಿಪ್ಲವ ಸಾಮಾನ್ಯ ವಾದದ್ದಲ್ಲ.

ಭಿನ್ನ ಸಂಸ್ಕೃತಿಗಳ ಸಂಶೋಧನೆಗೆ ಆರಿಸಿಕೊಂಡಿರುವ ಸಮಸ್ಯೆಗಳ ವ್ಯಾಪ್ತಿ ಗಮನಾರ್ಹವಾಗಿದೆ. ವಿಶಿಷ್ಟ ವ್ಯಕ್ತಿಯಾಗಿರುವದರ ಜೊತೆಗೆ ತನ್ನ ಸಮಾಜದ ಸದಸ್ಯನಾಗಿ ಬಾಳುವ ಮನುಷ್ಯನ ಅಷ್ಟೂ ವರ್ತನೆಗಳು ಪರಿಶೀಲನೆಗೆ ಒಳಗಾಗಿರುವ ದನ್ನು ನೋಡಬಹುದು. ವ್ಯಕ್ತಿ–ಸಮಾಜದ ಸಂಬಂಧದ ಕಡೆಗೆ ಸಮಾಜಶಾಸ್ತ್ರಜ್ಞರು

ಹೆಚ್ಚಿನ ಗಮನ ಕೊಟ್ಟಿದ್ದರೆ ಮನೋವಿಜ್ಞಾನಿಗಳು ಕಣಪ್ರಮಾಣದ ದೃಷ್ಟಿಭ್ರಾಂತಿ
ಯಿಂದ ಮನುಷ್ಯನ ಬುದ್ಧಿಶಕ್ತಿ, ವ್ಯಕ್ತಿತ್ವಗಳಂತಹ ಮೊತ್ತಗಳವರೆಗೆ ಗಮನ ಚಾಚಿ
ದ್ದಾರೆ. ಇಷ್ಟಾದರೂ, ಮನುಷ್ಯನ ವರ್ತನೆ ಸಂಕೀರ್ಣವಾಗುತ್ತ ಹೋದ ಹಾಗೆ
ಅದರ ಮೇಲೆ ಪರಿಸರಕ್ಕಿರಬಹುದಾದ ಪ್ರಭಾವ ಗುರುತರವಾದದ್ದು ಅನ್ನುವ ತಿಳಿವು
ಎಲ್ಲ ಸಂಶೋಧಕರಿಗೂ ಇದ್ದಹಾಗೆ ಕಾಣುವುದಿಲ್ಲ ಅನ್ನುವ ಹೋಲ್ಡ್ಸ್‌ಮನ್[5]
ಅವರ ಆಕ್ಷೇಪಣೆ ವಾಸ್ತವ ಅನ್ನಿಸುತ್ತದೆ. ಮನುಷ್ಯನ ನಿರಿಚ್ಛಾ ಪ್ರತಿಕ್ರಿಯೆಗಳನ್ನು
ಪರಿಶೀಲಿಸುವಾಗ ಪರಿಸರದ ಮಾತು ಗೌಣವೇನೋ. ಸಾಂಸ್ಕೃತಿಕ ಸನ್ನಿವೇಶಕ್ಕೂ
ಮನುಷ್ಯನ ದೃಷ್ಟಿಕಾರ್ಯದ ಒಂದಂಶವಾದ ದೃಷ್ಟಿಭ್ರಾಂತಿಗೂ ಸಾರ್ಥಕವಾ
ದೊಂದು ಸಂಬಂಧವಿರುವುದು ಸೀಗಲ್, ಕ್ಯಾಂಪ್‌ಬೆಲ್ ಮತ್ತು ಕೆರ್‌ಸ್ಕೊವಿಟ್ಸ್[6]
ಅವರ ಸಂಶೋಧನೆಯಿಂದ ತಿಳಿದು ಬಂದಿರುವಾಗ ಬುದ್ಧಿಶಕ್ತಿಯಂತ, ವ್ಯಕ್ತಿತ್ವ
ದಂತಹ ಮೊತ್ತದ ವರ್ತನೆಗೂ ಪರಿಸರಕ್ಕೂ ಕಾರ್ಯಕಾರಣ ಸಂಬಂಧವಿಲ್ಲವೆನ್ನು
ವಂತೆ ಅಥವಾ ಅಂತಹ ಸಂಬಂಧ ಇದ್ದರೂ ಮುಖ್ಯವಲ್ಲವೆನ್ನುವ ಹಗುರದ ಮಾತ
ನ್ನಾಡುವುದು ವಿಜ್ಞಾನದ ವಿಧಾನಕ್ಕೆ ಅಪಚಾರ ಮಾಡಿದ ಹಾಗೆ.

ಭಿನ್ನ ಸಂಸ್ಕೃತಿಗಳ ಅಭ್ಯಾಸದ ಇತಿಹಾಸ ನೋಡಿದಾಗ ಒಂದು ವಿಷಯ
ನಮ್ಮ ಗಮನ ಸೆಳೆಯುತ್ತದೆ. ಯಾವುದೋ ಬುಡಕಟ್ಟಿನ ಜನ ಹೇಗೆ ಬದುಕುತ್ತಾರೆ,
ಅಥವಾ ಅಲ್ಲಿಯ ಒಬ್ಬ ವ್ಯಕ್ತಿಯ ವೈಶಿಷ್ಟ್ಯವೇನು ಅನ್ನುವುದನ್ನು ಬಣ್ಣಿಸುವ ಬರಹ
ಈಚಿನ ಸಮಾಜಶಾಸ್ತ್ರಜ್ಞರಾಗಲೀ ಮನೋವಿಜ್ಞಾನಗಳಾಗಲೀ ಸಮಾಧಾನ
ಕೊಟ್ಟಿಲ್ಲ. ವ್ಯಕ್ತಿಯಲ್ಲಿ ಹಲವಾರು ಕೌಶಲಗಳ ಸಂಘಟನೆ ಒಂದು ವಿಶಿಷ್ಟ ರೀತಿ
ಯದ್ದಾಗಿರುವುದಕ್ಕೆ ಅಥವಾ ಯಾವುದೋ ಒಂದು ಜನ ಸಂಘಜೀವನಕ್ಕೆ ತಮ್ಮದೇ
ಆದ ವ್ಯವಸ್ಥೆ ಕೊಟ್ಟಿರುವುದಕ್ಕೆ ಜೀವ ಪರಿಸ್ಥಿತಿಯ ಯಾವ ಯಾವ ಅಂಶಗಳು
ಕಾರಣ ? ಎರಡು ಸಂಸ್ಕೃತಿಗಳ ಜನದ ವರ್ತನೆಯಲ್ಲಿ ವ್ಯತ್ಯಾಸವಿದೆಯೆಂದು ತಿಳಿದು
ಬಂದಾಗ ಆ ವ್ಯತ್ಯಾಸದ ದಿಕ್ಕನ್ನೂ ಗಾತ್ರವನ್ನೂ ನಿರ್ಧರಿಸುವ ಅಂಶಗಳು
ಯಾವುವು ? ಇಂತಹ ಗಂಭೀರ ಪ್ರಶ್ನೆಗಳನ್ನು ಕೇಳುವುದೂ, ಪ್ರಶ್ನೆಗಳಿಗೆ ಉತ್ತರ
ಹುಡುಕುವುದೂ ತಮ್ಮ ಕೆಲಸವೆಂದು ಸಂಶೋಧಕರಿಗೆ ಅನ್ನಿಸಹತ್ತಿದಾಗ ಮೊದ
ಮೊದಲ ಬರಹಗಳು ತೆಳ್ಳಗೆ ಕಂಡಿದ್ದು ಸಹಜ. ಈಚಿನ ಸಂಶೋಧಕರ ಅತೃಪ್ತಿಗೆ
ಇನ್ನೂ ಒಂದು ಕಾರಣವಿತ್ತು : ಸಾಮಾನ್ಯ ಬಿಳಿಯ ಅಮೆರಿಕನ್ನನ ವರ್ತನೆಯಷ್ಟನ್ನೇ
ಆಧಾರವಾಗಿಟ್ಟುಕೊಂಡು ಇಡೀ ಮಾನವಕುಲದ ಬಗೆಗೇ ಸಾರ್ವತ್ರಿಕ ಹಾಗೂ
ಸಾರ್ವಕಾಲಿಕ ಸತ್ಯಗಳನ್ನು ಪ್ರತಿಪಾದಿಸುವ ಅಧಿಕಾರ ತಮಗಿಲ್ಲವೆಂದು ಸಂಶೋಧಕ
ರಿಗೆ ಅನ್ನಿಸಹತ್ತಿದ್ದು ; ಎಲ್ಲ ಜನರ ಸಂಕೀರ್ಣ ಮಾನಸ ಕ್ರಿಯೆಗಳೂ ಒಂದೇ ಜಾತಿ
ಯವು ಅನ್ನುವ ತೀರ್ಮಾನಕ್ಕೆ ಸಾಕಷ್ಟು ಪ್ರಮಾಣಗಳು ಸದ್ಯಕ್ಕಂತೂ ಇಲ್ಲವೆನ್ನುವ
ಅರಿವು ಮೂಡಿದ್ದು. 1949ರ ಹೊತ್ತಿಗೇ ಅನಸ್ಟಾಸಿ ಮತ್ತು ಫೋಲಿ[7] ಹೇಳಿದ

ಹಾಗೆ 'ಒಂದು ಜನದ ಸಂಕೀರ್ಣ ಮಾನಸ ಕ್ರಿಯೆ ಇನ್ನೊಂದು ಜನದ ಪಾಲಿಗೆ ಕೆಲಸಕ್ಕೆ ಬಾರದ ದೊಂಬರ ಕುಣಿತವಾಗಿರುವುದೂ ಸಾಧ್ಯ'.

ಭಿನ್ನ ಸಂಸ್ಕೃತಿಗಳ ಬಗೆಗೆ ಸಂಶೋಧನೆಗೆ ಹೊರಡುವವನ ಉದ್ದೇಶ ಏನಾಗಿರಬೇಕು ಅನ್ನುವ ಪ್ರಶ್ನೆ ಕೇಳಿಕೊಂಡು ಅದಕ್ಕೆ ತಮ್ಮದೇ ಆದ ಉತ್ತರ ಕೊಟ್ಟವರಲ್ಲಿ ಮುಖ್ಯವಾದವರು ವೈಟಿಂಗ್[8]. ಅವರ ದೃಷ್ಟಿಯಲ್ಲಿ, ಮನುಷ್ಯನ ವರ್ತನೆಯನ್ನು ಅಭ್ಯಾಸ ಮಾಡಿದಾಗ ಸ್ಫುರಿಸುವ ಆಧಾರ ಕಲ್ಪನೆಗಳ ಸತ್ಯತೆಯನ್ನು ಪರೀಕ್ಷಿಸುವುದು ಸಂಶೋಧಕನ ಉದ್ದೇಶವಾಗಿರಬೇಕು. ಇಂತಹ ಆಧಾರ ಕಲ್ಪನೆಗಳಿಗೆ ಸಂಸ್ಕೃತಿ ವಿಕಾಸವಾಗುವ ವಿಧಾನಗಳ ಅಭ್ಯಾಸ ಕಾರಣವಾಗಿರಬಹುದು; ಅಥವಾ ಭಿನ್ನ ಸಂಸ್ಕೃತಿಗಳ ಅನುಕಲನ ಅವನ್ನು ಸೂಚಿಸಿರಬಹುದು: ಅಥವಾ ಅಂತಹ ಆಧಾರ ಕಲ್ಪನೆಗಳು ವ್ಯಕ್ತಿ ಸಮಾಜಗಳ ಸಂಬಂಧ ಅಭಿವ್ಯಕ್ತಿ ಹೊಂದುವ ಕ್ರಮವನ್ನು ಅಭ್ಯಾಸ ಮಾಡುವದರಿಂದ ಸಂಶೋಧಕನಿಗೆ ಹೊಳೆದಿರಬಹುದು.

ವೈಟಿಂಗ್ ಅವರ ಆಧಾರ ಕಲ್ಪನೆಗಳು ಎರಡು: ಸಮಾಜದ ವಾಡಿಕೆಗಳು ಮನುಷ್ಯನೊಬ್ಬನ ಚಟಗಳ ಹಾಗೆ; ಚಟಗಳ ಬಗೆಗೆ ಯಾವ ಮಾತು ಯುಕ್ತವೋ ಅದು ವಾಡಿಕೆಗಳ ಬಗೆಗೂ ಸಮಂಜಸವಾಗಿರುತ್ತದೆ. ಪ್ರತಿಯೊಬ್ಬ ಮನುಷ್ಯನೂ ಹೇಗೆ ಏಕಮಾತ್ರನೋ ಹಾಗೇ ಪ್ರತಿ ಸಮಾಜ ಕೂಡ; ಆದರೂ, ಒಟ್ಟು ಸಮಾಜಗಳಲ್ಲಿನ ಲಕ್ಷಣಗಳನ್ನು ಹೊರತೆಗೆಯುವದರಿಂದ, ಎರಡು ಸಮಾಜಗಳ ವಾಡಿಕೆಗಳನ್ನು ಹೋಲಿಸಿ ನೋಡುವುದು ಸಾಧ್ಯ ಹಾಗೂ ಶಾಸ್ತ್ರಸಮ್ಮತ.

ವೈಟಿಂಗ್ ಅವರ ನಿಲುವು ಎಲ್ಲ ಸಂಶೋಧಕರಿಗೂ ಹಿಡಿಸಿಲ್ಲ. ವಾಡಿಕೆ ಅನ್ನುವ ಮಾತು ಕಾರ್ಯಪ್ರಪಂಚಕ್ಕೆ ಸೇರಿದ್ದು. ಎರಡು ಸಮಾಜಗಳಲ್ಲಿ ಕಂಡು ಬರುವ ಕ್ರಿಯೆಯೊಂದರ ಸ್ವರೂಪ ಒಂದೇ ಆಗಿದ್ದರೂ ಅದರೊಳಗಿನ ಅರ್ಥವೂ ಒಂದೇ ಅನ್ನುವ ನಿರ್ಣಯ ಸದಾಕಾಲಕ್ಕೂ ಸಾಧುವಲ್ಲ. ಬಾಹ್ಯ ರೂಪದಲ್ಲಿ ಸಮಾನವಾಗಿ ಕಾಣುವ ವಾಡಿಕೆಗಳನ್ನು ಹೋಲಿಸುವ ಮೊದಲು ಅವುಗಳ ಅರ್ಥ ಸಮಾನತೆಯ ಕಡೆಗೆ ಗಮನ ಕೊಡದ ಸಂಶೋಧಕ ದಾರಿ ತಪ್ಪುವುದು ಸಾಧ್ಯ. ಉದಾಹರಣೆಗೆ, ಭಾನುವಾರ ಭಾನುವಾರ ಚರ್ಚಿಗೆ ಹೋಗುವ ವಾಡಿಕೆ: ಎರಡು ಸಮಾಜಗಳಲ್ಲಿನ ಜನ ಚರ್ಚಿಗೆ ಹೋಗಿ ಬಂದದ್ದರ ಲೆಕ್ಕ ಅವುಗಳಲ್ಲಿನ ಮತ ಶ್ರದ್ಧೆಯ ಸೂಚಕವೆಂದು ಪರಿಗಣಿಸುವುದು ಸರಿಯಾಗಲಾರದು. ಕೆಲವೊಂದು ಸಮಾಜಗಳಲ್ಲಿ ಚರ್ಚಿಗೆ ಹೋಗುವುದು ಕೇವಲ ಸಾಮಾಜಿಕ ಆಚರಣೆಯಾಗಿ ಉಳಿದಿರುವುದನ್ನು ಸಂಶೋಧಕ ಮರೆಯಬಾರದು.

ವೈಟಿಂಗ್ ಅವರ ನಿಲುವಿನ ಬಗೆಗೆ ಎತ್ತಿದ ಆಕ್ಷೇಪಣೆ ಅಲ್ಲಿಗೇ ಮುಗಿಯಲಿಲ್ಲ. ಅವರ ದೃಷ್ಟಿಯಲ್ಲಿ ಸಮಾಜ ನಿರ್ವಿಕಾರ; ಅದರೊಳಗಿನ ಶಕ್ತಿಗಳಿಗೂ ಅದು ರೂಪಿಸುವ ವ್ಯಕ್ತಿತ್ವಕ್ಕೂ ಏಕಪರಿಣಾಮಾತ್ಮಕವಾದ ಸಂಬಂಧವಿದೆ. ವೈಟಿಂಗ್ ಅವರ ಪ್ರಕಾರ ಅನುಮಾನ–ನಿಗಮನದ ಮಾರ್ಗವೊಂದೇ ವೈಜ್ಞಾನಿಕವಾದದ್ದು ಅನ್ನುವ ಸೂಚನೆ ಉಳಿದ ಸಂಶೋಧಕರಿಗೆ ಪ್ರಿಯವಾಗಿಲ್ಲ. ಮನುಷ್ಯನ ವರ್ತನೆಗಳಿಗೆ ಸಂಬಂಧಪಟ್ಟಿರಬಹುದಾದ ಮೂಲಭೂತ ಸತ್ಯಗಳಿಗೆ ಹೊಸ ಹೊಸ ಪ್ರಮಾಣಗಳನ್ನು ಒದಗಿಸುವಷ್ಟೇ ಸಂಶೋಧಕನ ಕೆಲಸವನ್ನುವ ಹಾಗೆ ವೈಟಿಂಗ್ ವಾದಿಸುತ್ತಾರೆ ಅನ್ನುವುದು ಸ್ಟ್ರಾಡ್‌ಬೆಕ್ಕರ ಆಕ್ಷೇಪಣೆ. ಭಿನ್ನ ಸಂಸ್ಕೃತಿಗಳ ಅಭ್ಯಾಸದಂತಹ ಸದವಕಾಶವನ್ನು ಹೊಸ ಹೊಸ ಅನುಮಾನಗಳನ್ನು ಹೇಳುವುದಕ್ಕೂ ಅವನ್ನು ತನಿಖೆಗೆ ಒಳಪಡಿಸುವುದಕ್ಕೂ ಉಪಯೋಗಿಸಬೇಕೆನ್ನುವುದು ಸ್ಟ್ರಾಡ್‌ಬೆಕ್ಕರ ವಾದ. ವಿಧವಿಧವಾದ ವರ್ತನಾ ವ್ಯವಸ್ಥೆಗಳ ಸೂಕ್ಷ್ಮ ಪರೀಕ್ಷೆಯಿಂದ, ವರ್ತನೆಗೂ ಸಾಂಸ್ಕೃತಿಕ ಪರಿಸರಕ್ಕೂ ಇರುವ ಸಂಬಂಧಗಳ ಅಭ್ಯಾಸದಿಂದ ರೂಪಿಗಿದ್ದ ಅನುಮಾನಗಳನ್ನು ಪರಿಷ್ಕರಿಸುವುದೂ ಹೊಸ ಅನುಮಾನಗಳನ್ನು ನಮೂದಿಸುವುದೂ ಸಾಧ್ಯವೆನ್ನುವುದು ಅವರ ವಿಶ್ವಾಸ. ಸಂಶೋಧಕನ ಮೊದಲ ಅನುಮಾನಗಳನ್ನು ಅವನ ಸಂಸ್ಕೃತಿಯ ಪ್ರಭಾವಗಳ ನೆಲೆಯಿಂದ ಬಿಡಿಸಿ ನೋಡುವ ಅವಕಾಶವನ್ನು ಕಳೆದುಕೊಳ್ಳಬಾರದೆಂದು ಸ್ಟ್ರಾಡ್‌ಬೆಕ್ ಹೇಳುತ್ತಾರೆ.

ಜನಜನದ ನಡುವಿಗಿರುವ ವರ್ತನೆಗಳನ್ನೂ ವರ್ತನೆಗಳ ನಡುವಿನ ವ್ಯತ್ಯಾಸವನ್ನು ವಿಶ್ಲೇಷಿಸುವಾಗ ಸ್ವಧರ್ಮಪಕ್ಷಪಾತ ನುಸುಳಿ ಬರುವುದರ ಸಾಧ್ಯತೆ ಕೆಲವು ಸಂಶೋಧಕರಿಗಾದರೂ ಹೊಳೆದದ್ದು ಬೋಆಸ್ ಅವರ 1904ರ ಮಾತುಗಳಲ್ಲಿ ಕಾಣುತ್ತದೆ; 'ಸುತ್ತಣ ಬದುಕಿನ ನಿರ್ಬಂಧದಿಂದ ಮುಕ್ತನಾಗುವುದು ಯಾವ ವ್ಯಕ್ತಿಗೂ ಸಾಧ್ಯವಿಲ್ಲ. ನಮ್ಮ ಯೋಚನೆಗಳಿಗೆ ಚಿತ್ತವೃತ್ತಿಗೆ ವರ್ತನೆಗಳಿಗೆ ಪಾಯವಾಗಿರುವುದು ನಮ್ಮ ಸಂಸ್ಕೃತಿಯ ಬಗೆಗಿರುವ ಪಕ್ಷಪಾತ. ಶ್ರದ್ಧೆ. ನಮ್ಮದರಿಂದ ವಿಭಿನ್ನವಾದ ಪರಿಸರದಲ್ಲಿ ಅರಳುವ ಬದುಕಲ್ಲಿ ಅಲ್ಲಿಯ ಯೋಚನೆ, ಚಿತ್ತವೃತ್ತಿ ವರ್ತನೆಗಳಲ್ಲಿ ಮುಳುಗಿದರೇ ನಮ್ಮದೆನ್ನುವದರ ಬಗೆಗಿರುವ ಭಕ್ತಿಯಿಂದ ಮುಕ್ತಿ.' ಇನ್ನೂ ಒಂದು ಹೆಜ್ಜೆ ಮುಂದೆ ಹೋದ ಮಾಲಿನಾವ್‌ಸ್ಕಿ ಅವರ ದೃಷ್ಟಿಯಲ್ಲಿ ಒಂದು ಸಂಸ್ಕೃತಿಯ ವ್ಯಾಖ್ಯಾನಕ್ಕೆ ಅದರೊಳಗಿನ ಮಾತುಗಳೇ ಅಗತ್ಯ, ಅದರೊಳಗಿಲ್ಲದ ಮಾತುಗಳನ್ನು ಬಳಸುವುದು ಅಪರಾಧ, (ಗೋಲ್ಡ್‌ಸ್ಮಿತ್).[10]

ಈ ತರವದ ದೃಷ್ಟಿಕೋಣದ ಫಲವೋ ಏನೋ, ಭಿನ್ನ ಸಂಸ್ಕೃತಿಗಳ ಅಭ್ಯಾಸ ಹಲವು ವರ್ಷಗಳವರೆಗೆ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿತು. ಬೇರೆ ಬೇರೆ ಸಂಸ್ಕೃತಿಗಳ ಹೋಲಿಕೆಗೆ ಬದಲಾಗಿ ಬಂದದ್ದು ಸಮಾಜಶಾಸ್ತ್ರಜ್ಞರು ಅನುಸರಿಸಿವ

ಚಾರಿತ್ರಿಕ ವಿಧಾನ. ಎರಡು ಸಂಸ್ಕೃತಿಗಳನ್ನು ಹೋಲಿಸಿ ನೋಡುವ ಕೆಲಸ ಆರಂಭದಲ್ಲಿ ಅಂದುಕೊಂಡಿದ್ದಷ್ಟು ಸುಲಭವಾಗಿರದೇ ಹೋದರೂ ಸಮಸ್ಯೆಗೆ ಪರಿಹಾರ ಮಾರ್ಗ ಪಲಾಯನವಲ್ಲವೆನ್ನುವ ಮನೋಭಾವ ಕೆಲವು ಸಂಶೋಧಕರಿಗಾದರೂ ಇದ್ದುದ್ದರಿಂದಲೇ ಆ ತರಹದ ಸಂಶೋಧನೆಗಳು ಮತ್ತೆ ಎರಡನೇ ಮಹಾಯುದ್ಧದ ಹೊತ್ತಿಗೆ ತಲೆಯೆತ್ತಿದವು.

ಸಂಸ್ಕೃತಿಯ ಪ್ರಭಾವಕ್ಕೊಳಗಾಗದ ವರ್ತನೆಗಳನ್ನು ಅವುಗಳ ಸಂಯೋಜನೆಗಳಿಂದ ಪೃಥಕ್ಕರಿಸಿದರೆ ಭಿನ್ನ ಸಂಸ್ಕೃತಿಗಳ ಸಾರ್ಥಕ ತುಲನೆ ಸಾಧ್ಯವೆಂದು ವಾದಿಸಿದವರಲ್ಲಿ ಕ್ಲುಕ್‌ಹಾನ್[11] ಅಗ್ರಗಣ್ಯರು. ಎರಡು ಸಂಸ್ಕೃತಿಗಳ ವ್ಯತ್ಯಾಸಕ್ಕೆ ಬೇಲಿ ಹಾಕುವ ಜೀವವಿಜ್ಞಾನ ಮನೋವಿಜ್ಞಾನ ಕೆಲವೊಂದು ಮೂಲಭೂತ ನಿಯಮಗಳಿಲ್ಲವೇ ಎಂದವರ ಪ್ರಶ್ನೆ. ಅಂತಹ ಬೇಲಿ ಕಾರಣವಾಗಿ ಮೇಲುನೋಟಕ್ಕೆ ವ್ಯತ್ಯಸ್ತವಾಗಿರುವ ಜೀವನ ಕ್ರಮಗಳು ಸಾದೃಶ್ಯದ ಕಡೆಗೆ ಹೊರಳುತ್ತಿರುವುದೂ, ಒಟ್ಟು ಬದುಕಿನ ಮೇಲೆ ಪ್ರಭಾವ ಹೊಂದಿರುವ ಮೂಲಭೂತ ಶಕ್ತಿಗಳು ಎಲ್ಲ ಸಮಾಜಗಳಲ್ಲೂ ಒಂದೇ ಜಾತಿಯವಾಗಿರುವುದೂ ವಾಸ್ತವವಾದರೆ ಸಂಸ್ಕೃತಿಗಳ ಹೋಲಿಕೆಗೆ ಅಗತ್ಯವಾದ ಸಾಧನಗಳನ್ನು ಕಂಡುಹಿಡಿಯುವುದು ಕ್ಲುಕ್‌ಹಾನರ ವಿಶ್ವಾಸ. ಬದುಕಿನ ಕೊರತೆಗಳನ್ನು ತುಂಬುವುದಕ್ಕೆ ಸಮಾಜಗಳು ಸ್ಥಾಪಿಸುವ ಸಂಘಗಳ ಅಭ್ಯಾಸದಿಂದ ಈ ಕಾರ್ಯ ಸಾಧ್ಯವೆನ್ನುವುದು ಅವರ ವಾದ. ಸಮಾನೋದ್ದೇಶವಿರುವ ಸಂಸ್ಥೆಗಳ ಮೇಲೆ ತಾನೇ ಸಂಸ್ಕೃತಿಗಳ ಪ್ರಭಾವ, ಸಂಸ್ಥೆಗಳ ಸಂಘಟನೆಯ ಅಭ್ಯಾಸದಿಂದ ಆ ಸಂಸ್ಕೃತಿಗಳ ನಡುವಿನ ವ್ಯತ್ಯಾಸ ಹೊರಬಾರದೇ ಅನ್ನುವ ಅವರ ಪ್ರಶ್ನೆ ಸಾಧು.

ಒಟ್ಟಿನಲ್ಲಿ ಕ್ಲುಕ್‌ಹಾನರ ನಿಲುವಿಗೆ ಬಹುಪಾಲು ಸಂಶೋಧಕರ ಬೆಂಬಲವಿದೆ. ಆದರೂ ಭಿನ್ನ ಸಂಸ್ಕೃತಿಗಳ ಅಭ್ಯಾಸಕ್ಕೆ ಅಂಟಿದ ಹಾಗಿರುವ ಸಮಸ್ಯೆಗೆ ಇಲ್ಲೂ ಪರಿಹಾರ ದೊರಕಲ್ಲವೆಂದು ವಾದಿಸುವ ಜನರೂ ಇದ್ದಾರೆ. ಕ್ಲುಕ್‌ಹಾನರ ವಾದವನ್ನು ತಮ್ಮದೇ ಆದ ರೀತಿಯಲ್ಲಿ ಸಮರ್ಥಿಸುವ ಬೆರಿಯನ್[12] ಅವರ ನಿಲುವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಸಂಸ್ಕೃತಿಯ ಪ್ರಭಾವ ಅವರ ಮಾತಲ್ಲೇ ಹೇಳುವುದಾದರೆ ಆಕಾಶದಿಂದ ಬಿದ್ದು ನೆಲ ತೋಯಿಸುವ ಮಳೆಯ ಹಾಗೆ. ಅವರ ಈ ಹೋಲಿಕೆಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದು ಕಷ್ಟ, ಮಳೆ ಬಿದ್ದಾಗ ಅಷ್ಟೂ ನೆಲ ಒಂದೇ ಪ್ರಮಾಣದಲ್ಲಿ ಒದ್ದೆಯಾಗುವುದಿಲ್ಲ, ಒಂದು ಜನದ ಬದುಕಿನ ಎಲ್ಲ ಕ್ಷೇತ್ರಗಳ ಮೇಲೆ ಅವರ ಸಂಸ್ಕೃತಿಗಿರುವ ಪ್ರಭಾವ ಸಮಾನ ಪ್ರಮಾಣದ್ದಲ್ಲ. ಎಷ್ಟೋ ಸಂಕೀರ್ಣ ಸಮಾಜಗಳಲ್ಲಿ ಅವುಗಳಲ್ಲಿರುವ ಎರಡು ಉಪ ಸಂಸ್ಕೃತಿಗಳ ನಡುವಿಗಿರುವ ವ್ಯತ್ಯಾಸಕ್ಕಿಂತ ಹೆಚ್ಚಾಗಿರುವುದು ಸಾಧ್ಯ. ಸಂಸ್ಥೆಯೆನ್ನುವುದು

ಸಂಸ್ಕೃತಿಯ ಪ್ರಭಾವಕ್ಕೆ ಬೇರೆ ಬೇರೆ ಪ್ರಮಾಣಗಳಲ್ಲಿ ಸಿಕ್ಕಿದ ಹಲವಾರು. ಅಂಶಗಳಲ್ಲಿ ಒಂದು ಒಟ್ಟು ಮೊತ್ತದ ಒಂದು ಮಾದರಿಯಾಗಿ ಸಂಸ್ಥೆ; ಅಥವಾ ಸಂಶೋಧಕ ಅಭ್ಯಾಸಕ್ಕೆ ಆರಿಸಿಕೊಂಡ ಮೊತ್ತದ ಒಂದು ಭಾಗ. ಅದರ ಅಭ್ಯಾಸದಿಂದ ಹೊಮ್ಮಿದ ಸತ್ಯವನ್ನು, ಅಷ್ಟೇ ನಿರ್ದಿಷ್ಟವಾದ ಆದರೆ ಭಿನ್ನವಾದ ಹತ್ತಾರು ಸಂದರ್ಭಗಳಲ್ಲಿ ತನಿಖೆಗೆ ಗುರಿಪಡಿಸದೇ ಮೊತ್ತಕ್ಕೆ ಆರೋಪಿಸಿ ಹೇಳುವುದು ತಾರ್ಕಿಕವಾಗಿ ಅಸಮಂಜಸ.

ಸಮಾಜಶಾಸ್ತ್ರಜ್ಞರು ಎದುರಿಸಿದ ಸಮಸ್ಯೆಗಳೂ ಸೂಚಿಸಿದ ಪರಿಹಾರಗಳೂ ಮನೋವಿಜ್ಞಾನಿಗಳಿಗೆ ಮಾರ್ಗದರ್ಶನ ಮಾಡಿವೆ. ಸಂಸ್ಥೆಗಳ ಜಾಗದಲ್ಲಿ ವರ್ತನೆ ಗಳನ್ನಿಟ್ಟರೆ ಸಮಸ್ಯೆಗಳು ಬದಲಾಗುವ ಕಾರಣವಿಲ್ಲ. ಭಿನ್ನ ಸಂಸ್ಕೃತಿಗಳ ಎರಡು ಸಂಸ್ಥೆಗಳು ಏಕೋದ್ದೇಶವನ್ನಿಟ್ಟುಕೊಂಡು ಹುಟ್ಟಿಯೂ ಕೂಡ ಹೇಗೆ ಬೇರೆ ಬೇರೆ ಸಂಘಟನೆಗಳನ್ನು ಬೆಳಸಿಕೊಳ್ಳುತ್ತವೋ ಹಾಗೇ ಸಮಾನಾರ್ಥವಿರುವ ವರ್ತನೆಗಳು ಭಿನ್ನ ಸ್ವರೂಪಗಳನ್ನು ತಾಳುವುದು ಸಾಧ್ಯ. ಸಂಸ್ಥೆಗಳನ್ನು ಹೋಲಿಸಿ ನೋಡು ವಾಗ ವಿಧಾನ ಶಾಸ್ತ್ರದ ಸಮಸ್ಯೆಗಳು ಏನಾಗಿದ್ದವೋ ಅವೇ ವರ್ತನೆಗಳ ಹೋಲಿಕೆಗೆ ಹೊರಡುವ ಮನೋವಿಜ್ಞಾನಿಗಳ ಸಮಸ್ಯೆಗಳು ಕೂಡಾ.

ಈ ಸಮಸ್ಯೆಗಳು ಎಂತಹ ಗಂಭೀರ ಪ್ರಮಾಣದವು ಅನ್ನುವುದು ಮನವರಿಕೆ ಯಾಗುವುದು, ಮಾನವನ ಬುದ್ಧಿ ವ್ಯಕ್ತಿತ್ವಗಳಂತಹ ಮೊತ್ತದ ವರ್ತನೆಗಳನ್ನು ಸಂಶೋಧಿಸುವ ಪ್ರಯತ್ನಗಳನ್ನು ಪರಿಶೀಲಿಸಿದಾಗ. ವ್ಯಕ್ತಿತ್ವವೆಂದರೇನು ಅದನ್ನು ಅಳೆಯುವುದು ಸಾಧ್ಯವೇ ಅನ್ನುವುದು ಒಂದು ಸಂಸ್ಕೃತಿಯ ಸಂಕುಚಿತ ಸಂದರ್ಭ ದಲ್ಲೂ ಬಗೆಹರಿಯದ ಸಮಸ್ಯೆಯಾಗಿರುವಾಗ (ವರ್ನನ್).[13] ಭಿನ್ನ ಸಂಸ್ಕೃತಿಗಳ ಸಂದರ್ಭದಲ್ಲಿ ಅದನ್ನು ಅಳೆಯ ಹೊರಡುವುದು ಉದ್ಧಟತನವೆನಿಸಿದರೂ ಆಶ್ಚರ್ಯ ವಲ್ಲ. ಬುದ್ಧಿಮಟ್ಟದ ವಿಷಯದಲ್ಲೂ ಈ ಮಾತು ವಾಸ್ತವ ಅನ್ನುವ ಜನರಿದ್ದಾರೆ.

ಬುದ್ಧಿಶಕ್ತಿಯೆನ್ನುವ ಭಾವವೇ ಈಚಿನ ದಶಕಗಳಲ್ಲಿ ಸಾಕಷ್ಟು ಬದಲಾಗಿದೆ. 'ವ್ಯಕ್ತಿಯೊಬ್ಬನ ಬುದ್ಧಿಶಕ್ತಿ ಎಲ್ಲ ಕಾಲಕ್ಕೂ ಸ್ಥಿರವೆನ್ನುವ ಮೂಢ ತೀರ್ಮಾನಕ್ಕೆ ಈಚಿನ ಎಷ್ಟೋ ತತ್ವಶಾಸ್ತ್ರಜ್ಞರ ಬೆಂಬಲವಿರುವ ಹಾಗಿದೆ.........ಈ ನಿರಾಶಾ ವಾದಕ್ಕೆ ನನ್ನ ವಿರೋಧ .... ' ಬೀನೇ ಅವರ ಮಾತನ್ನು (ಹಂಟ್)[14] ನಿರ್ಲ ಕ್ಷಿಸಿ ಮನುಷ್ಯನ ಬುದ್ಧಿಶಕ್ತಿಯ ಅಚಲತೆಯಲ್ಲಿ ಮನೋವಿಜ್ಞಾನಿಗಳು ಅಚಲ ವಿಶ್ವಾಸವನ್ನಿಟ್ಟುಕೊಂಡಿದ್ದ ಕಾಲವಿತ್ತು. ಬುದ್ಧಿಶಕ್ತಿಯೆನ್ನುವ ವಿಚಾರದಲ್ಲೇ ಅದೆಂತಹ ಪರಿವರ್ತನೆಯಾಗಿದೆ ಅನ್ನುವುದನ್ನು ಫರ್ಗುಸನ್[15] ಅವರ ಮಾತಿನಲ್ಲಿ ಕಾಣಬಹುದು : 'ಒಬ್ಬ ವ್ಯಕ್ತಿ ಯಾವ ಹೊತ್ತಿನಲ್ಲಿ ಏನು ಕಲಿಯಬೇಕೆನ್ನುವುದನ್ನು

ನಿರ್ಧರಿಸುವುದೇ ಅವನ ಸಾಂಸ್ಕೃತಿಕ ಸಂದರ್ಭ. ಆದ್ದರಿಂದಲೇ ಬೇರೆ ಬೇರೆ ಸಾಂಸ್ಕೃತಿಕ ಸಂದರ್ಭಗಳಲ್ಲಿ ಕಂಡು ಬರುವ ದಕ್ಷತೆಗಳ ಸ್ವರೂಪಗಳೂ ಬೇರೆ ಬೇರೆ. ಯಾವ ದಕ್ಷತೆಗಳು ಸಾಂಸ್ಕೃತಿಕ ಸಂದರ್ಭದ ದೃಷ್ಟಿಯಿಂದ ಸಮಂಜಸವೋ, ಬದುಕಿಗೆ ಅಗತ್ಯವೆನ್ನುವ ಕಾರಣದಿಂದ ತಕ್ಕ ಪುರಸ್ಕಾರ, ಪುನರಾಚರಣೆಯ ಅವಕಾಶ ಯಾವಕ್ಕಿವೆಯೋ, ಅವು ಮಾತ್ರ ವ್ಯಕ್ತಿಯ ಜೊತೆಗೂ ಬೆಳೆಯುವಂತಹವು'. ಬ್ರೂನರ್ ಮತ್ತು ಗ್ರೀನ್‌ಫೀಲ್ಡ್[16] ಅವರ 'ಸಾಂಸ್ಕೃತಿಕ ಸಂದರ್ಭ ಒದಗಿಸುವ ಸಲಕರಣೆಗಳು ಅಂತರ್ಗತವಾದಾಗಲೇ ವ್ಯಕ್ತಿಯ ಬುದ್ಧಿಶಕ್ತಿ' ಅನ್ನುವ ಮಾತಿನ ಅರ್ಥವೂ ಅದೇ ಅನ್ನಬಹುದು.

ಮಾನವನ ಬುದ್ಧಿಶಕ್ತಿಗೆ ದಶಾವತಾರವೆನ್ನುವ ಮಾತನ್ನು ಇವೊತ್ತಿನ ಎಲ್ಲ ಮನೋವಿಜ್ಞಾನಿಗಳೂ ಒಪ್ಪಿಯಾರು. ಅದರ ಮೂಲದ್ರವ್ಯ ಪರಿಸರ ಒದಗಿಸುವ ಅನುಭವಗಳು. ಹತ್ತು ಭಿನ್ನ ಪರಿಸರಗಳಲ್ಲಿ ಒದಗುವ ಅನುಭವ ಒಂದೇ ಆಗಿದ್ದರೂ ಅದು ಒಡಮೂಡುವ ರೀತಿ ಅಲ್ಲಿಯ ಭಾಷೆಗೆ, ಪರಿಸರಕ್ಕೆ ಹೊಂದಿ ಕೊಳ್ಳುವುದಕ್ಕೆ ಅಲ್ಲಿಯ ಜನ ರೂಢಿಸಿಕೊಂಡ ಪರಿಹಾರ ವಿಧಾನಗಳಿಗೆ ಹಾಗೂ ಅವರ ಜೀವನ ಮೌಲ್ಯಗಳ ಸಂಘಟನೆಗೆ ಅನುವಾದದ್ದು. ಎಂದೇ, ಅದಕ್ಕೆ ಹತ್ತು ಪರಿಸರಗಳಲ್ಲಿ ಹತ್ತು ಮುಖ. ಪರಿಸರವೊಂದರಲ್ಲಿ ಕಲಿಕೆಗೆ ಇರುವ ಅವಕಾಶಗಳ ಫಲವೇ ಬುದ್ಧಿಶಕ್ತಿಯಾದರೆ, ಭಿನ್ನ ಪರಿಸರಗಳು ಕಲ್ಪಿಸಿಕೊಡುವ ಅವಕಾಶಗಳೂ, ದಕ್ಷತೆಗೆ ಕೊಡುವ ಉತ್ತೇಜನವೂ ಬೇರೆ ಬೇರೆಯಾಗಿದ್ದು ಮಾನವನ ಬುದ್ಧಿಶಕ್ತಿಯ ಲಕ್ಷಣ ಸಿದ್ಧಾಂತವೂ ಬೇರೆ ಬೇರೆಯಾಗಿರುವುದು ಸಹಜ.

ಬೆರೆ[17] ಅವರು ಹೇಳುವ ಹಾಗೆ ಭಿನ್ನ ಜನರ ಬುದ್ಧಿಶಕ್ತಿಗಳನ್ನು ಹೋಲಿಸುವ ಸಂಶೋಧಕ ದಾರಿ ತಪ್ಪುವುದು ಮೇಲಿನ ಮಾತನ್ನು ಮರೆತಾಗ, ಮೂಲತಃ ಒಂದೇ ಆದ ಶಕ್ತಿ ಹತ್ತು ಸಮಾಜಗಳಲ್ಲಿ ಹತ್ತು ಮುಖಗಳನ್ನು ಹೊತ್ತು ಬರಬಹುದೆನ್ನುವ ದನ್ನು ಮರೆತಾಗ, ಎರಡು ಸಮಾಜಗಳು ಎದುರಿಸುತ್ತಿರುವ ಸಮಸ್ಯೆ ಒಂದೇ ಎಂದು ಮೊದಲು ಇತ್ಯರ್ಥ ಮಾಡಿಕೊಂಡ ಮೇಲೆ ಅವು ಪರಿಹಾರ ರೂಪದಲ್ಲಿ ರೂಢಿಸುವ ದಕ್ಷತೆಗಳ ಹೋಲಿಕೆಗೆ ಕೈಹಾಕುವುದು ಧರ್ಮವೆನ್ನುವ ಬೆರೆ ಅವರ ಎಚ್ಚರಿಕೆಯ ಮಾತನ್ನು ಯಾವ ಸಂಶೋಧಕನೂ ಕಡೆಗಾಣಿಸಬಾರದು. ಆಗಲೂ, ನಿರ್ದಿಷ್ಟವಾದ ದಕ್ಷತೆಗಳನ್ನು ಹೋಲಿಸುವುದು ಮಾತ್ರಾ ಸಾಧು. ಅಂತಹ ಸಂಶೋಧನೆಗಳನ್ನೇ ಆಧಾರವಾಗಿಟ್ಟುಕೊಂಡು ಭಿನ್ನ ಸಂಸ್ಕೃತಿಗಳ ಅಭ್ಯಾಸ ವಿಧಾನದ ಮೂಲಭೂತ ಸಮಸ್ಯೆಗಳಿಗೇ ಪರಿಹಾರ ಹುಡುಕಬಯಸುವುದು ಅಹಂಕಾರದ ಮಾತೆನ್ನುವುದು ಅವರ ಅಭಿಪ್ರಾಯ.

ವಾದದ ಒಂದುಂಚಿಗೆ ನಿಂತು ಎಚ್ಚರ ಹೇಳುವ ಬೆರಿ ಅವರ ಮಾತು ಕೇಳಿ ಭಿನ್ನ ಸಂಸ್ಕೃತಿಗಳ ಅಭ್ಯಾಸಕ್ಕೆ ಹೊರಟ ಯಾವ ಸಂಶೋಧಕನೂ ಅಧೀರನಾಗಬೇಕಾದ ಕಾರಣವಿಲ್ಲ. ಒಂದೇ ಒಂದು ಸಂಸ್ಕೃತಿಯ ಸಂದರ್ಭದೊಳಗೂ ಕಲಿಕೆಯ ಸ್ವರೂಪವೇನು ಎಂದು ಕೇಳಿಕೊಂಡ ಮನೋವಿಜ್ಞಾನಿಗಳು ಇನ್ನೂ ಉತ್ತರ ಹುಡುಕುತ್ತಿದ್ದಾರೆ. ಆದರೂ, ಕಲಿಕೆ ಸಾಧ್ಯವಾವಾಗಿಸುವ ಸನ್ನಿವೇಶ ಯಾವುದು, ಅದಕ್ಕೆ ಉತ್ತೇಜನ ಕೊಡುವ ಸಂದರ್ಭಗಳು ಯಾವುವು ಅನ್ನುವದರ ಬಗೆಗೆ ನಡೆಯುತ್ತಲೇ ಬಂದಿರುವ ಸಂಶೋಧನೆಗಳಿಂದ ನಮ್ಮ ತಿಳುವಳಿಕೆ ಹೆಚ್ಚಾಗಿದೆಯೆನ್ನುವದನ್ನು ಮರೆಯಬಾರದು. ಭಿನ್ನ ಸಂಸ್ಕೃತಿಗಳ ಅಭ್ಯಾಸದ ಬಗೆಗೂ ಈ ತರಹದ ಭರವಸೆಯನ್ನಿಟ್ಟುಕೊಳ್ಳುವುದು ಅಗತ್ಯ. ತಾತ್ವಿಕ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನಗಳೂ, ನಿರ್ದಿಷ್ಟ ದಕ್ಷತೆಗಳನ್ನು ಭಿನ್ನ ಸಂಸ್ಕೃತಿಗ ಸಂದರ್ಭದಲ್ಲಿ ಹೋಲಿಸಿ ನೋಡುವ ಸಂಶೋಧನೆಗಳೂ ಸಹ ಬಾಳ್ಪಿ ನಡೆಸುವುದು ಸಾಧ್ಯ.

ಭಿನ್ನ ಸಂಸ್ಕೃತಿಗಳ ಸಂಶೋಧನಕ್ಕಾಗಿ ಆರಿಸಿಕೊಂಡ ಮಾದರಿಯೊಂದರ ಯುಕ್ತಾಯುಕ್ತತೆಯನ್ನು ಅಂತಹ ಸಂಶೋಧನದ ಹಿಂದಿರುವ ಉದ್ದೇಶವನ್ನು ಗಮನಕ್ಕೆ ತಂದುಕೊಳ್ಳದೇ ನಿರ್ಧರಿಸುವುದು ಅಸಾಧ್ಯ. ಉದಾಹರಣೆಗೆ, ವರ್ಣನಾತ್ಮಕವಾದ ಸಂಶೋಧನೆಗೆ ಒೊತ್ತಿವ ಗುಣಗಳನ್ನು ಪ್ರತಿನಿಧಿಸುವ ಮಾದರಿ ಅತ್ಯಗತ್ಯ. ವರ್ತನೆಯೊಂದರ ಕಾರಣಶಕ್ತಿಗಳನ್ನು ಗುರುತಿಸುವುದು ಸಂಶೋಧನೆಯ ಉದ್ದೇಶವಾದಾಗ ಅಂತಹ ಮಾದರಿ ಗೌಣ. ಆದರೂ, ಆರಿಸಿಕೊಂಡ ಎರಡು ಸಂಸ್ಕೃತಿಗಳ ಮಾದರಿಗಳು ತುಲನಯೋಗ್ಯವಾಗಿರಬೇಕು. ಸಾಮಾನ್ಯವಾಗಿ, ಸಂಶೋಧನೆಗಳನ್ನು ವರ್ಣನಾತ್ಮಕವಾದವೆಂದೂ ಅಥವಾ ಲಕ್ಷಣ ವಿಧಾಯಕವಾದ ವೆಂದೂ ವಿಂಗಡಿಸುವುದು ವಾಡಿಕೆಯಾಗಿದ್ದರೂ, ಸಂಕೀರ್ಣ ಸಂಸ್ಕೃತಿಗಳನ್ನು ಅಭ್ಯಾಸವೊಂದೇ ಸಂಶೋಧನೆಯ ಉದ್ದೇಶವಾಗಿರದೇ ಅವುಗಳ ನಡುವೆಗಿರುವ ಸಂಬಂಧ ಸಮುದಾಯವೂ ಉದ್ದೇಶವಾದಾಗ ಮೇಲಿನೆರಡು ಜಾತಿಗಳ ನಡುವಣ ಗೋಡೆ ಕೆಳಗುರುಳುತ್ತದೆ.

ಸಂಶೋಧಕ ಆರಿಸಿಕೊಳ್ಳುವ ಸಲಕರಣೆಗೂ ಸಂಶೋಧನೆಯ ಕೊನೆಗೆ ಅವನು ಕೊಡುವ ವಿವರಣೆಗೂ ಸಂಬಂಧವಿದೆ. ಸಲಕರಣೆಯ ಹಿಂದೆ ಅಡಗಿರುವ ಆಧಾರ ಕಲ್ಪನೆಗಳು ವಿವರಣೆಯನ್ನು ಹೇಗೆ ನಿರ್ದಿಷ್ಟವಾದ ಒಂದು ದಿಕ್ಕಿಗೆ ಎಳೆಯುತ್ತವೆ ಅನ್ನುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಉದಾಹರಣೆಗೆ, ಭಿನ್ನ ಜನರ ಬುದ್ಧಿಶಕ್ತಿಗಳ ಹೋಲಿಕೆಗೆಂದು ಆರಿಸಿಕೊಂಡ ಮಾಪಕದ ಮೇಲೆ ಸಂಸ್ಕೃತಿಯ ಪ್ರಭಾವವೇ ಇಲ್ಲವೆನ್ನುವ ಆಧಾರ ಕಲ್ಪನೆಯಿಂದ ಹೊರಟ ಸಂಶೋಧನೆ ಕಂಡುಬಂದ

ವ್ಯತ್ಯಾಸಗಳಿಗೆ ಅನುವಂಶಿಕವಾದ ಮಾತುಗಳಲ್ಲಿ ವಿವರಣೆ ಕೊಡುವುದೊಂದೇ ಗತಿ, ತನ್ನ ತೊಳಸು ಬಳಸಿನ (Maze) ಮೇಲೆ ಸಂಸ್ಕೃತಿಯ ಪ್ರಭಾವವೇ ಇಲ್ಲವೆಂದು ನಂಬಿದ್ದ ಪೋರ್ಟಿಯಸ್[18] ಅಮೆರಿಕದ ಬಿಳಿಯ ಹಾಗೂ ಆಸ್ಟ್ರೇಲಿಯಾದ ಕಾಡುಜನರ ನಡುವೆ ಕಂಡ ವ್ಯತ್ಯಾಸಕ್ಕೆ ವಿವರಣೆ ಕೊಡುವಾಗ ಅನುವಂಶಿಕವಾಗಿ ಬರುವ ಬುದ್ಧಿ ಶಕ್ತಿಯ ಮಾತುಗಳನ್ನು ಉಪಯೋಗಿಸುವುದು ಅನಿವಾರ್ಯವಾಯಿತು. ಆ ತರಹದ ನಂಬಿಕೆಯನ್ನಿಟ್ಟುಕೊಳ್ಳದೇ ಅವರು ಹೊರಟಿದ್ದರೆ ಕಂಡ ವ್ಯತ್ಯಾಸಕ್ಕೆ ಬೇರೆ ವಿವರಣೆ ಕೊಡುತ್ತಿದ್ದರೋ ಏನೋ. ಅವರಂತಹದೇ ಆಧಾರ ಕಲ್ಪನೆಯನ್ನಿಟ್ಟುಕೊಂಡು ಹೊರಟ ಪಿಂಟ್‌ನರ್[19] ಅದೇ ದಾರಿ ತುಳಿದದ್ದನ್ನು ಈ ಮಾತುಗಳು ಸ್ಪಷ್ಟಪಡಿಸುತ್ತವೆ; 'ಅಮೆರಿಕದ ಬಿಳಿಯರ ಜೊತೆ ಹೋಲಿಸಿ ನೋಡಿದಾಗ ನಿಗ್ರೋ ಜನ ಕೀಳೆಂಬುದನ್ನು ನನ್ನ ಬುದ್ಧಿ ಮಾಪಕಗಳು ಖಚಿತಪಡಿಸುತ್ತವೆ. ಅಮೆರಿಕದ ಇಂಡಿಯನ್ನರ ಬಗೆಗೂ ಈ ಮಾತು ವಾಸ್ತವ'. ಒಬ್ಬ ನೀಗ್ರೋವಿಗೂ ಇನ್ನೊಬ್ಬ ನೀಗ್ರೋವಿಗೂ ಕಂಡುಬರುವ ವ್ಯತ್ಯಾಸಕ್ಕೆ ಕಾರಣ ಅವರ ಮೈಯೊಳಗೆ ಹರಿಯುವ ಬಿಳಿಯ ರಕ್ತದ ಪ್ರಮಾಣವೇ ಸರಿ ಎಂದು ನಿರ್ಧರಿಸಿದ ಪಿಂಟ್‌ನರ್ ಹೇಳಿದರು: 'ಬಿಳಿಯ ರಕ್ತ ಹೆಚ್ಚಿದಷ್ಟೂ ನೀಗ್ರೋವಿನ ಬುದ್ಧಿಶಕ್ತಿ ಹೆಚ್ಚು. ಹುಟ್ಟಿದಾಗಲೇ ನಿಷ್ಕರ್ಷೆಯಾಗುವ ಗುಣ, ವ್ಯಕ್ತಿಯ ಬುದ್ಧಿಮಟ್ಟ.'

ಶಬ್ದಪ್ರಧಾನವಾದ ಮಾಪಕಗಳು ಸಮಾಜದ ಕೆಲವು ಗುಂಪುಗಳಿಗೆ ಸುಲಭವಾಗಿದ್ದು ಉಳಿದವರಿಗೆ ಅನ್ಯಾಯವಾಗಬಹುದೆಂದು ಮನವರಿಕೆಯಾದಾಗ ಶಾಬ್ದಿಕವಲ್ಲದ ಬುದ್ಧಿ ಮಾಪಕಗಳ ರಚನೆಯ ಕೆಲಸ ಶುರುವಾಯಿತು. ಬುದ್ಧಿಮಾಪಕದಲ್ಲಿರಬಹುದಾದ ಶಬ್ದದ ಅಗತ್ಯವನ್ನು ತೆಗೆದು ಹಾಕಿ ಶಾಬ್ದಿಕ ಸಮಸ್ಯೆಗಳಿಗೆ ಬದಲು ಕಣ್ಣಿನ ಕೈಯಿನ ಚಳಕ ಬೇಕಾದವುಗಳನ್ನು ಹಾಕಿದರೆ ಸಾಕು, ಬುದ್ಧಿಮಾಪಕ ಸಾರ್ವತ್ರಿಕ ಉಪಯೋಗಕ್ಕೆ ಯೋಗ್ಯವೆನ್ನುವ ನಂಬಿಕೆಯೇ ಇಂತಹ ಪ್ರಯತ್ನಗಳ ಕೆಳಗಿರುವ ಆಧಾರ ಕಲ್ಪನೆ.

ವ್ಯಕ್ತಿ ರೂಢಿಸಿಕೊಳ್ಳುವ ಎಷ್ಟು ದಕ್ಷತೆಗಳ ಮೇಲೂ ಅವರ ಪರಿಸರದ ಪ್ರಭಾವವಿದೆಯೆನ್ನುವುದು ಮನದಟ್ಟಾದದ್ದು ಅನಂತರ. ಅದಕ್ಕೆ ಸಾರ್ವತ್ರಿಕ ಉಪಯೋಗಕ್ಕೆ ಬರುವಂತಹ ಬುದ್ಧಿಮಾಪಕವನ್ನು ರಚಿಸಲು ನಡೆದ ಪ್ರಯತ್ನಗಳ ಲೆಕ್ಕ ಎಷ್ಟೋ. ಭಿನ್ನ ಸಮಾಜಗಳಲ್ಲಿನ ಜನಸಾಮಾನ್ಯವಾದ ಅನುಭವಗಳ ತ್ರಪಶೀಲು ಪಟ್ಟಿ ಹಾಕಿ ಅವುಗಳ ಆಧಾರದ ಮೇಲೆ ರಚಿಸಿದ ಬುದ್ಧಿಮಾಪಕವೂ ಅಪೂರ್ಣಕ ವೆನಿಸಿತು. ಪರಿಸರ ತಿದ್ದಿದ ದಕ್ಷತೆಯೇ ಇಲ್ಲವಾದಾಗ ಸಂಸ್ಕೃತಿ ಮುಟ್ಟದ ಪರಿಶುದ್ಧ ಮಾಪಕವೂ ಒಂದು ಕನಸು. ಬಿಶ್‌ವಲ್ ಹೇಳಿದ ಹಾಗೆ 'ಮನುಷ್ಯನ ಬುದ್ಧಿಶಕ್ತಿ ಪರಿಸರದಿಂದ ನಿಷ್ಕರ್ಷೆಯಾಗುವ ಒಂದು ಗುಣ. ಆದ್ದರಿಂದಲೇ ಪರಿಸರದ ನೆರಳು

ಬೀಳದ ಬುದ್ಧಿ ಮಾಪಕದ ಮಾತು ಅಸಂಬದ್ಧ.' ಬ್ರೂನರ್[20] ಹೇಳಿರುವದರ ಅರ್ಥವೂ ಅದೇ; 'ಸಂಸ್ಕೃತಿ ಮುಟ್ಟದ್ದನ್ನು ಬುದ್ಧಿಯೂ ಮುಟ್ಟುವುದಿಲ್ಲ.

ಅಂತೂ ಆ ಕಾಲದಲ್ಲಿ ನಡೆದ ಪ್ರಯತ್ನಗಳಿಂದ ಹುಟ್ಟಿದ ಮಾಪಕಗಳಲ್ಲಿ ಹೆಸರಾದವು ನಾಲ್ಕು : ಗುಡ್ಎನಫ್ ಅವರ 'ಮನುಷ್ಯಾಕಾರ ರಚನೆ' ; ಲೇಟರಿನ 'ಅಂತರರಾಷ್ಟ್ರೀಯ ಕೌಶಲ ಮಾಪಕ': ಕಟೆಲ್ ಅವರ 'ಸಂಸ್ಕೃತಿ ಸ್ವತಂತ್ರ ಮಾಪಕ'; ರೇವನ್ ಅವರ 'ಅನುಕ್ರಮಿಕ ಮಾತೃಕೆ'. ಗುಡ್ಎನಫ್ ತಮ್ಮ ಮಾಪಕವನ್ನು 1920ರ ಹೊತ್ತಿಗೆ ಹೊರತಂದಾಗ ಅದು ಪರಿಸರದ ಪ್ರಭಾವದಿಂದ ಮುಕ್ತವೆನ್ನುವ ವಿಶ್ವಾಸ ಆಕೆಗಿತ್ತು. ಎಂದೇ ಜನ ಜನದ ನಡುವೆ ಕಂಡು ಬಂದ ವ್ಯತ್ಯಾಸಕ್ಕೆ ಆಕೆ ಆನುವಂಶೀಯತೆಯ ಮಾತುಗಳಲ್ಲಿ ವಿವರಣೆ ಕೊಟ್ಟಿದ್ದು. ವರ್ಷಗಳು ಕಳೆದ ಹಾಗೆ, ಮನುಷ್ಯಾಕಾರ ರಚನೆಯು ತಳಕ್ಕಿರುವ ದಕ್ಷತೆಗೂ ಪರಿಸರಜನ್ಯ ಅನುಭವಗಳಿಗೂ ಇರುವ ನಿಕಟ ಸಂಬಂಧ ಆಕೆಗೆ ಮನವರಿಕೆಯಾಯಿತು. ಆಕೆಯ ವಿಚಾರಗಳಲ್ಲಿ ಆದ ಪರಿವರ್ತನೆಗೆ, ಆಕೆಯ ಸತ್ಯಾನ್ವೇಷಣೆಯ ಬುದ್ಧಿಗೆ, 1950ರ ಈ ಮಾತು ಸಾಕ್ಷಿ : 'ಒಬ್ಬನ ಬುದ್ಧಿಶಕ್ತಿ, ಕಲಾನೈಪುಣ್ಯ, ವೈಯಕ್ತಿಕ ಹಾಗೂ ಸಾಮಾಜಿಕ ವರ್ತನೆ — ಅಳೆಯಬಹುದಾದ ಯಾವುದೇ ಆಗಲಿ, ಸಂಸ್ಕೃತಿಯ ಪ್ರಭಾವದಿಂದ ಮುಕ್ತವಾದ ಮಾಪಕವೆನ್ನುವುದು ಕೈಗೆ ಸಿಕ್ಕಿದ ವಸ್ತು. ಶಾಬ್ದಿಕವಲ್ಲದ ಮಾಪಕ ಜಾಗತಿಕವಾಗಿ ಸಾಧುವೆನ್ನುವುದು ಸರಳ ಮನಸ್ಸಿನ ಒಂದು ಭ್ರಾಂತಿ.'[21]

ಅಮೆರಿಕಕ್ಕೆ ವಲಸೆ ಬಂದ ಮಕ್ಕಳ ಬಗೆಗೆ ಹಿಂದೆ ತಾನು ಹೇಳಿದ್ದು ತಪ್ಪೆಂದು ಬಹಿರಂಗವಾಗಿ ಸಾರಿದ ಆಕೆ ಅವರ ಕ್ಷಮೆ ಬೇಡಿದ್ದಾಳೆ.

ಈ ಮಾತುಗಳನ್ನು ಉಳಿದ ಮೂರು ಮಾಪಕಗಳಿಗೂ ಅನ್ವಯಿಸಿ ಹೇಳ ಬಹುದು. ಸಂಸ್ಕೃತಿಯೊಂದರಲ್ಲಿ ಬೇರೂರಿದ ಮಾಪಕಕ್ಕೂ ಸಂಸ್ಕೃತಿ ಸ್ವತಂತ್ರವೆಂದು ಹೇಳಲಾದ ಮಾಪಕಕ್ಕೂ ಇರುವ ವ್ಯತ್ಯಾಸ ಪ್ರಮಾಣದಲ್ಲಿ ಮಾತ್ರ. ಬಿರ್ಶಲ್[22] ಮತ್ತು ಅನಸ್ತಾಸಿ ಮತ್ತೆ ಮತ್ತೆ ಹೇಳಿರುವ ಹಾಗೆ 'ಯಾವ ಸಮಾಜಗಳಲ್ಲಿ ಚಿತ್ರ ಗಳೂ ಅಮೂರ್ತ ಕಲೆಯೂ ಬಳಕೆಯಲ್ಲಿರುತ್ತವೋ ಆ ಸಮಾಜಗಳ ಜನಕ್ಕೆ ಅಂತಹ ಸಮಸ್ಯೆಗಳನ್ನೊಳಗೊಂಡ ಮಾಪಗಳ ನಿರ್ವಹಣೆ ಸುಲಭ; ಉಳಿದವರಿಗೆ ಕಷ್ಟ.'

ವಸ್ತು ಪ್ರಪಂಚವನ್ನು ಪ್ರತಿರೂಪಿಸುವ ಚಿತ್ರಕಲೆಯನ್ನೇ ತಿಳಿಯದ ಅಥವಾ ನಿಷೇಧಿಸುವ ಕೆಲವು ಸಂಸ್ಕೃತಿಗಳು ಇವೊತ್ತಿಗೂ ಕಾಣಸಿಗುತ್ತವೆ. ಅಂತಹ ಸಮಾಜಗಳಲ್ಲಿ, ದಿನಬಳಕೆಯ ವಸ್ತುವಿನ ಅಂಗವಾದ ಅಮೂರ್ತ ಚಿತ್ರ ಅರ್ಥರಹಿತ ವಾಗಿ ಕಂಡರೆ ಆಶ್ಚರ್ಯವಿಲ್ಲ. ವಸ್ತುವೊಂದನ್ನು ಪ್ರತಿರೂಪಿಸುವ ಚಿತ್ರ ಯಾವುದೇ ಆಗಲಿ, ಅದರಲ್ಲಿ ಅರ್ಥಗ್ರಹಣಕ್ಕೆ ಅನುಕೂಲವಾಗುವಂತಹ ಕೆಲವು ಸೂಚನೆಗಳಿರು

ತ್ತವೆ. ಆ ಸೂಚನೆಗಳಿಗೆ ಗಮನ ಕೊಡುವುದೂ, ವಸ್ತು ಯಾವುದಿರಬಹುದೆಂದು ಅನುಮಾನಿಸುವುದೂ ಕಲಿಕೆಯ ವಿಷಯ. ಜೊತೆಗೆ ಕಲಿಕೆ ಸಾಧ್ಯವಾಗುವ ಸಂದರ್ಭಕ್ಕೂ ಪರೀಕ್ಷೆಯ ಸನ್ನಿವೇಶಕ್ಕೂ ಇರಬಹುದಾದ ಅಂತರ: ಪಾಶ್ಚಾತ್ಯ ದೇಶಗಳಲ್ಲಿ ಕಲಿಯುವುದೂ ಶಾಲೆಯಲ್ಲಿ. ಪರೀಕ್ಷೆಗೆ ಕೂಡುವುದೂ ಶಾಲೆಯಲ್ಲಿ. ಬದುಕೇ ಪಾಠಶಾಲೆಯಾಗಿರುವ ಸಮಾಜಗಳಲ್ಲಿ ಪರೀಕ್ಷೆಯ ಸನ್ನಿವೇಶ ಕೃತಕ ಎಂದೇ ಆತಂಕಕ್ಕೆ ಕಾರಣ.

ಭಿನ್ನ ಸಂಸ್ಕೃತಿಗಳ ಅಭ್ಯಾಸ ಬೆಳೆಯಬೇಕಾದರೆ ಸಂಸ್ಕೃತಿಯ ಪ್ರಭಾವದಿಂದ ಮುಕ್ತವಾದ ಮಾಪಕಗಳ ಮಾತು ಮರೆಯುವುದು ಅಗತ್ಯ. ಅಷ್ಟೇ ಅಲ್ಲ, ಈ ತರಹದ ಸಂಶೋಧನೆಗಳಿಗೆ ಸಂಸ್ಕೃತಿ ಬದ್ಧವೆಂದು ಖಚಿತವಾದ ಮಾಪಕಗಳನ್ನು ಉಪಯೋಗಿಸುವುದು ಲಾಭದಾಯಕವೆಂದು ವಾದಿಸುವ ಮನೋವಿಜ್ಞಾನಿಗಳೂ ಇದ್ದಾರೆ. ದಕ್ಷತೆಗಳಿಗೂ ಅವುಗಳನ್ನು ಉತ್ತೇಜಿಸುವ ಸಂದರ್ಭಗಳಿಗೂ ಇರುವ ಕಾರ್ಯಕಾರಣ ಸಂಬಂಧಗಳು ಸ್ಪಷ್ಟವಾಗುವುದು ಇಂತಹ ಮಾಪಕಗಳ ಬಳಕೆಯಿಂದ ಅನ್ನುವ ಅವರ ವಾದದಲ್ಲಿ ಅರ್ಥವಿಲ್ಲದೇ ಇಲ್ಲ. ವ್ಯತ್ಯಾಸವೆಂದು ಗಣಿಸಿದ ಎರಡು ಸಂಸ್ಕೃತಿಗಳನ್ನು ಹೋಲಿಸಿ ನೋಡುವಾಗ ದಕ್ಷತೆಗಳ ಸ್ವರೂಪ ನಿರ್ಧಾರ ಮಾಡುವ ಅಸ್ಥಿರಾಂಶಗಳ ವ್ಯಾಪ್ತಿ ಹೆಚ್ಚಿದಷ್ಟೂ ನಿರ್ದಿಷ್ಟವಾದ ತೀರ್ಮಾನಗಳಿಗೆ ಬರುವುದು ಸಾಧ್ಯ. ಜೊತೆಗೆ, ಒಂದು ಪರಿಸರದಲ್ಲಿ ಯಾವುದಾದರೂ ದಕ್ಷತೆಯ ಬೆಳವಣಿಗೆ ಸಾಲದೆನ್ನಿಸಿದಾಗ ಅದಕ್ಕೆ ಕಾರಣಭೂತವಾದ ಇತಿಮಿತಿಗಳನ್ನು ಗುರುತಿಸಿ ಅದು ಕುದುರಿಕೊಳ್ಳುವದಕ್ಕೆ ಅಗತ್ಯವಾದ ಪರಿಹಾರಕ್ರಮಗಳನ್ನು ನಿಯೋಜಿಸುವುದೂ ಸಾಧ್ಯ.

ಭಿನ್ನ ಸಂಸ್ಕೃತಿಗಳ ಅಭ್ಯಾಸಕ್ಕೆ ಪಾಶ್ಚಾತ್ಯ ದೇಶಗಳಲ್ಲಿ ಬಳಕೆಯಲ್ಲಿರುವ ಮಾಪಕಗಳನ್ನು ಉಪಯೋಗಿಸುವುದು ಯುಕ್ತವೇ ? ಅಭ್ಯಾಸದ ಗುರಿ 'ಕುಲಕುಲಗಳ ವ್ಯತ್ಯಾಸಗಳಿಗಾಗಿ ತಡಕಾಡುವುದಲ್ಲದೇ ಪರಿಸರ ಪರಿವರ್ತನೆಯಿಂದ ದಕ್ಷತೆಯ ಮೇಲೆ ಆಗುವ ಪರಿಣಾಮವನ್ನು ಕಂಡುಹಿಡಿಯುವುದಾದಾಗ'. ಇಂತಹ ಮಾಪಕಗಳ ಉಪಯೋಗ ಧರ್ಮವೆನ್ನುವುದು ವರ್ನನ್[23] ಅವರ ನಿಲುವು. ಪಾಶ್ಚಾತ್ಯ ದೇಶಗಳ ಸಂಪತ್ತೂ ಯಂತ್ರಕಲಾಶಾಸ್ತ್ರಜ್ಞಾನವೂ ಪ್ರತಿಯೊಂದು ಹಿಂದುಳಿದ ದೇಶದ ಕನಸಾಗಿರುವಾಗ ಅಲ್ಲಿ ಹುಟ್ಟಿದ ಮಾಪಕಗಳನ್ನು ಬಳಸುವುದರಿಂದ ಹೆಚ್ಚಿನ ಲಾಭವುಂಟು. ಪಾಶ್ಚಾತ್ಯ ದೇಶಗಳ ಇವೊತ್ತಿನ ಸ್ಥಾನಮಾನಕ್ಕೆ ಆ ಜನರಲ್ಲಿರುವ ವಿಶಿಷ್ಟ ದಕ್ಷತೆಗಳು ಬಹುಮಟ್ಟಿಗೆ ಕಾರಣ. ಒಬ್ಬ ವ್ಯಕ್ತಿಯಲ್ಲಿ ಇರಬಹುದಾದ ಆ ದಕ್ಷತೆಗಳ ಮಟ್ಟವೇನು ಎಂದು ನಿರ್ಧರಿಸುವುದೇ ಮಾಪಕದ ಕೆಲಸ. ಹಿಂದುಳಿದ ದೇಶವೊಂದು ಪಾಶ್ಚಾತ್ಯ ದೇಶಗಳ ಮಟ್ಟಕ್ಕೆ ಬರುವ ಮೊದಲು ಅದರ ಪ್ರಜೆಗಳಲ್ಲಿ

ಆ ದಕ್ಷತೆಗಳು ಯಾವ ಕಾರಣಗಳಿಂದಾಗಿ ಬೆಳೆದಿಲ್ಲ, ಏನು ಮಾಡಿದರೆ ಅವು ಉಚ್ಚ ಮಟ್ಟಕ್ಕೆ ಬೆಳೆದಾವು ಎಂದು ಕೇಳಿಕೊಳ್ಳುವುದು ಆಗತ್ಯ.

ವರ್ನನ್ ಅವರ ನಿಲುವು ಒಂಬ್ರಡೇನ್[24] ಹಾಗೂ ಬಿಶವಲ್ ಅವರ ನಿಲುವಿನಿಂದ ಬೇರೆಯಲ್ಲ. ಪರಿಸರದ ವರ್ತನೆಯಿಂದ ವರ್ತನೆಯ ಪರಿವರ್ತನೆ ಎಷ್ಟರ ಮಟ್ಟಿಗೆ ಸಾಧ್ಯವೆನ್ನುವ ಪ್ರಶ್ನೆ ಈ ಮೂರು ಸಂಶೋಧಕರದ್ದೂ. 'ನನ್ನ ಸಂಶೋಧನೆಗಳ ಹಿಂದಿರುವ ಕಾರ್ಯೋದ್ಯುಕ್ತ ಉದ್ದೇಶ ಅತಿ ಸರಳವಾದದ್ದು : ಸಾಂಪ್ರದಾಯಿಕವಾದ ತಮ್ಮ ವಾತಾವರಣದಲ್ಲಿ ಬೆಳೆದು ಬಂದಿರುವ ಈ ಕಪ್ಪು ಜನ ಬಿಳಿಯರ ವಾತಾವರಣಕ್ಕೆ ಎಷ್ಟರಮಟ್ಟಿಗೆ ಹೊಂದಿಕೊಳ್ಳಬಲ್ಲರು, ಯಾವ ಘಟ್ಟದಲ್ಲಿ ಬಿಳಿಯರ ಮಟ್ಟ ಮುಟ್ಟುತ್ತಾರೆ ಅನ್ನುವದರ ನಿರ್ಧಾರ.' ಒಂಬ್ರಡೇನ್ ಅವರು ಕೇಳಿಕೊಂಡಿದ್ದನ್ನೇ ಬಿಶವಲ್ ಕೂಡ ಕೇಳಿಕೊಂಡಿದ್ದಾರೆ: 'ಈ ಜನರ (ಆಫ್ರಿಕದ ಜನರ) ವರ್ತನೆ ಎಷ್ಟರಮಟ್ಟಿಗೆ ಬದಲಾಗಬಲ್ಲದು ? ಇವರ ಮನೋವ್ಯಾಪಾರಗಳ ಮೇಲೆ ಪ್ರಭಾವ ಹೊಂದಿರುವ ಪರಿಸರದ ಅಂಶಗಳು ಯಾವುವು ? ಅವುಗಳ ಕ್ರಮವನ್ನೂ ಗಾತ್ರವನ್ನೂ ಹತೋಟಿಗೆ ತಂದು ಪರಿವರ್ತನೆಗಿರುವ ಇತಿಮಿತಿಯನ್ನು ಸ್ಥಾಪಿಸುವುದು ಸಾಧ್ಯವೇ ?'

ಇಪ್ಪತ್ತನೇ ಶತಮಾನದ ವಿಶಿಷ್ಟ ಸಂದರ್ಭವೊಂದರಲ್ಲಿ ಪಾಶ್ಚಾತ್ಯ ದೇಶಗಳ ಮಾಪಕಗಳು ಹೆಚ್ಚಿನ ಉಪಯೋಗಕ್ಕೆ ಬಂದಿವೆ. ಹಿಂದೆಂದೂ ಕಂಡರಿಯದ ಸಂಖ್ಯೆಯಲ್ಲಿ ಜನ ತಮ್ಮ ಸಾಂಸ್ಕೃತಿಕ ಪರಿಸರವನ್ನೂ ಹುಟ್ಟಿದ ನೆಲವನ್ನೂ ಬಿಟ್ಟು ಬೇರೆ ದೇಶಕ್ಕೆ ಹೊಸ ಬದುಕಿಗೆ ಹೋಗಿರುವುದು ಈ ಶತಮಾನದ ವಿಶೇಷ. ಏಷ್ಯಾ ಅಥವಾ ಆಫ್ರಿಕದಿಂದ ಇಂಗ್ಲೆಂಡಿಗೋ ಕೆನಡಾಕ್ಕೋ ಅಥವಾ ಅಮೆರಿಕಕ್ಕೋ ಹೋಗಿ ನೆಲಸುವಾಗ ಅವರು ವಿದ್ಯಾಭ್ಯಾಸದ ಅನುಕೂಲತೆಗಳಿಗಾಗಿ, ಕೆಲಸಕ್ಕಾಗಿ, ಆ ನೆಲದವರ ಜೊತೆ ಸ್ಪರ್ಧೆ ಹೂಡುತ್ತಾರೆ. ಯಜಮಾನ ದೇಶ ಯಾವ ಯಾವ ದಕ್ಷತೆಗಳಿಗೆ ಬೆಲೆ ಕೊಟ್ಟಿದೆಯೋ ಅವನ್ನು ಆದಷ್ಟು ಬೇಗ ತಮ್ಮದಾಗಿಸಿ ಕೊಂಡರೇ ವಲಸೆ ಹೋದ ಜನ ಬಾಳಿಯಾರು, ನೆಮ್ಮದಿಯಲ್ಲಿ ಬದುಕಿಯಾರು. ಸಾಂಪ್ರದಯಕವಾಗದ ತಮ್ಮ ಕಲಿಕೆಯಲ್ಲಿ, ಕಲಿಕೆಯ ಕ್ರಮದಲ್ಲಿ, ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳುವುದು ಇಂತಹ ಜನರ ಮೊವಲ ಕೆಲಸವಾಗುವುದು ಸಹಜ. ಆ ದೇಶದ ಮಾಪಕಗಳನ್ನು ಹೊಸದಾಗಿ ಬಂದವರ ಮೇಲೆ ಉಪಯೋಗಿಸುವದರಿಂದ ಅವರಲ್ಲಿ ಸದ್ಯಕ್ಕಿರುವ ದಕ್ಷತೆಗಳು ಯಾವುವು, ಅವುಗಳ ಮಟ್ಟವೇನು, ಎಂದು ತಿಳಿದುಕೊಳ್ಳುವುದು ಸಾಧ್ಯವಾಗುತ್ತದೆ. ಅಷ್ಟೇ ಅಲ್ಲದೇ ಹಲವಾರು ವರ್ಷಗಳುದ್ದದ ಸಂಶೋಧನೆಗಳನ್ನು ಕೈಗೊಳ್ಳುವದರಿಂದ ಆ ಜನದ ದಕ್ಷತೆಗಳಲ್ಲಿ ಆಗುವ ಪರಿವರ್ತನೆಗಳೂ ಅವಕ್ಕೆ ಕಾರಣವಾಗಿರುವ ಯಜಮಾನ ಪರಿಸರದ ಅಂಶಗಳೂ ಸ್ಪಷ್ಟವಾಗುವ ಸಾಧ್ಯತೆ ಇರುತ್ತದೆ.

ಅಮೆರಿಕಕ್ಕೆ ವಲಸೆ ಹೋದ ಜನದ ಬಗೆಗೆ ಹಲವಾರು ಸಂಶೋಧನೆಗಳು ನಡೆದಿವೆ. ಮೊದ ಮೊದಲು, ಸಂಶೋದಕರಿಗೆ, ತಾವಿಟ್ಟುಕೊಂಡಿರುವ ಆಧಾರ ಕಲ್ಪನೆಗಳಿಗೂ ತಾವು ಕೊನೆಗೆ ಕೊಡುತ್ತಿದ್ದ ವಿವರಣೆಗೂ ಇದ್ದ ಸಂಬಂಧ ಸ್ಪಷ್ಟ ವಾಗಿರಲಿಲ್ಲ. ಉದಾಹರಣೆಗೆ, ವಲಸೆ ಬಂದ ಜನ ಅವರ ದೇಶಗಳ ಪ್ರತಿನಿಧಿಗಳೆನ್ನುವ ನಂಬಿಕೆ; ಅದನ್ನೇ ಆಧಾರವಾಗಿಟ್ಟುಕೊಂಟು ಇಡೀ ಇಟಾಲಿಯನ್ನರ ಬಗೆಗೆ ಅಥವಾ ಪೋಲಿಶ್ ಜನದ ಬಗೆಗೆ ಹೇಳಿದ ಮಾತುಗಳು. ಒಂದು ಮಾದರಿಯಿಂದ ಹೊರಟು ಇಡೀ ಜನದ ಬಗೆಗೆ ಸತ್ಯಗಳನ್ನು ನಮೂದಿಸುವಾಗ ಎಚ್ಚರಿಕೆ ವಹಿಸಬೇಕೆನ್ನುವ ಮಾತು ಆಗಲೇ ಬಂದಿದೆ. ಪರಕೀಯರ ಬಗೆಗೆ ಇಂತಹ ಒಟ್ಟು ಮಾತು ಹೇಳುವ ಮೊದಲು ಇನ್ನೂ ಹೆಚ್ಚಿನ ಎಚ್ಚರಿಕೆ ಇರಬೇಕೆಂಬುದು ಮೊದಲಿನ ಈ ಸಂಶೋಧಕರಿಗೆ ಹೊಳೆದ ಹಾಗೇ ಕಾಣುವುದಿಲ್ಲ.

ವಲಸೆ ಹೋಗುವ ಮಂದಿಯಲ್ಲಿ ಎಲ್ಲರಿಗೂ ಇರದ ಒಂದು ಕಸುವು, ಎಲ್ಲೇ ಆಗಲಿ ಗೆದ್ದೇ ಗೆಲ್ಲುತ್ತೇವೆನ್ನುವ ಒಂದು ಛಲ ಕಂಡುಬರುತ್ತವೆನ್ನುವುದು ಕೆಲವು ಸಮಾಜಶಾಸ್ತ್ರಜ್ಞರ ವಾದ. ಈ ವಾದ ಸಾರ್ವಕಾಲಿಕ ಸತ್ಯವೆಂದು ಪರಿಗಣಿಸುವುದು ತಪ್ಪು. ತಮ್ಮ ಸ್ವಂತದ ಪರಿಸರದಲ್ಲಿ ಯಶಸ್ಸು ಗಳಿಸಿ ಸುಖ ಸಮಾಧಾನಗಳನ್ನು ಕಂಡುಂಡವರಿಗೆ ಬೇರೆ ದೇಶಕ್ಕೆ ಹೋಗುವ ಅಗತ್ಯವಿಲ್ಲ ಅನ್ನುವ ವಾದವೂ ಅಷ್ಟೇ ಸಮಂಜಸ.

ವಲಸೆ ಬಂದ ಜನದಲ್ಲಿ ಅವರ ದೇಶದ ಎಲ್ಲಾ ವರ್ಗಗಳ ಸೂಕ್ತ ಪ್ರಾತಿನಿಧ್ಯ ವಿದೆಯೆಂದು ಹೇಳುವುದು ತಪ್ಪು. ಆರ್ಥಿಕ ಪರಿಸ್ಥಿತಿಯೇ ಕಾರಣವಾಗಿ, ಒಂದು ದೇಶದ ವಿದ್ಯಾವಂತರೂ ಹಲವಾರು ಕ್ಷೇತ್ರಗಳಲ್ಲಿ ವಿಶೇಷ ತರಬೇತು ಪಡೆದವರೂ ವಲಸೆ ಹೋಗುವ ಯೋಚನೆ ಮಾಡಿದರೆ ಇನ್ನೊಂದು ದೇಶದ ಅವಿದ್ಯಾವಂತ ನಿರುದ್ಯೋಗಿಗಳು ಅದೇ ಯೋಚನೆ ಮಾಡುವುದು ಸಾಧ್ಯ. ಈ ಮಾತು ಸಮಂಜಸ ವಾದರೆ, ಅಮೆರಿಕಕ್ಕೆ ವಲಸೆ ಬಂದ ಭಿನ್ನ ಜನಗಳ ದಕ್ಷತೆಗಳನ್ನು ಅವರು ತುಲನ ಯೋಗ್ಯ ಮಾದರಿಗಳೆಂದುಕೊಂಡು, ಹೋಲಿಸುವುದು ಶಾಸ್ತ್ರಸಮ್ಮತವಲ್ಲ. ಅಥವಾ ಆ ಜನರು ಅವರವರ ದೇಶಗಳ ಪ್ರತಿನಿಧಿಗಳೆಂದು ಭಾವಿಸಿ ಆ ದೇಶಗಳ ನಡುವಿಗಿದೆ ಯೆಂದು ನಿರ್ಧರಿಸಿದ ವ್ಯತ್ಯಾಸಗಳ ಬಗೆಗೆ ಒಟ್ಟು ಮಾತಾಡುವುದು ಅಕ್ಷಮ್ಯವೇ ಸರಿ. ಒಂದು ಸಣ್ಣ ಉದಾಹರಣೆಯಿಂದ ಈ ಮಾತಿನ ಯುಕ್ತತೆ ಸ್ಪಷ್ಟವಾದೀತು : 1977ರಲ್ಲಿ ಇಂಗ್ಲೆಂಡಿನ ಕೌಂಟಿಗಳಲ್ಲೊಂದಾದ ಹಾರ್ಟ್‌ಫೈಡ್‌ಶೈರಿಗೆ 7ರಿಂದ 11 ವಯಸ್ಸಿನವರೆಗಿದ್ದ ಮಕ್ಕಳನ್ನು ಕಟ್ಟಿಕೊಂಡು ಬಂದ ಭಾರತದ ಜನರ ಲೆಕ್ಕ ದಾಖಲಾಯಿತು. ಅದುವರೆಗೂ ವಲಸೆ ಬಂದು ಆ ಕೌಂಟಿಯಲ್ಲಿ ನೆಲಸಿದ್ದವರಲ್ಲಿ ಶೇಕಡಾ 60ರಷ್ಟು ಮಂದಿ ಪಂಜಾಬಿನಿಂದ ಬಂದಿದ್ದರು. ಭಾರತದ ಎಷ್ಟೋ

ಭಾಗಗಳಿಂದ ಒಂದು ಸಂಸಾರವೂ ಬಂದು ನೆಲಸಿರಲಿಲ್ಲ. ಕಣ್ಣಿಗೆ ಬಿದ್ದವರನ್ನೇ ಇಡೀ ಭಾರತದ ಮಕ್ಕಳ ದಕ್ಷತೆಗಳ ಬಗೆಗೆ ಒಟ್ಟು ಮಾತಾಡುವುದು ತಪ್ಪೆಂದು ಒತ್ತಿ ಹೇಳಬೇಕಾಗಿಲ್ಲ. ವಿಧಾನಶಾಸ್ತ್ರದ ಅಷ್ಟೂ ಸಮಸ್ಯೆಗಳು ಕಂಡು ಬರುವುದು ನೀಗ್ರೋ ಜನದ ಬುದ್ಧಿಶಕ್ತಿಗೆ ಸಂಬಂಧಪಟ್ಟ ಹಾಗೆ ನಡೆದಿರುವ ನೂರಾರು ಸಂಶೋಧನೆಗಳಲ್ಲಿ. ಅವುಗಳ ಕಡೆಗೆ ಗಮನ ಕೊಡುವುದು ಅಗತ್ಯ.

ಆ ಸಂಶೋಧನೆಗಳ ಸಾರಾಂಶವನ್ನೂ ಅವುಗಳ ಬಗೆಗೆ ಮಿಕ್ಕ ಸಂಶೋದಕರು ಎತ್ತಿರುವ ಆಕ್ಷೇಪಣೆಗಳನ್ನೂ ಡ್ರೆಗರ್ ಮತ್ತು ಮಿಲರ್[25] ಕೂಡಿ ಬರೆದಿರುವ ಗ್ರಂಥದಲ್ಲಿ ಹಾಗೂ ಶ್ಯೂಪಿ[26] ಅವರ ಬರಹಗಳಲ್ಲಿ ಕಾಣಬಹುದು. ನೀಗ್ರೋ ಜನದ ಬುದ್ಧಿಶಕ್ತಿಗೆ ಸಂಬಂಧಿಸಿದ ಹಾಗೆ ನಡೆದ ಸಂಶೋಧನೆಗಳ ಎರಡು ಮುಖ್ಯ ನಿಶ್ಚಯಗಳು ಇವು: 1. ಅವರ ಬುದ್ಧಿಯ ಮಟ್ಟ ಬಿಳಿಯರದಕ್ಕಿಂತ ಒಂದು ವಿಚಲನೆಯಷ್ಟು (Standard Deviation) ಅಥವಾ 15 ಅಂಕೆಗಳಷ್ಟು ಕೆಳಗೆ. 2. ಚಿಕ್ಕ ಮಕ್ಕಳಲ್ಲಿ ಕಾಣುವ ಕೊರೆಗಿಂತ ಹೆಚ್ಚು ಕೊರೆ ಕಾಣುವುದು ತರುಣರಲ್ಲಿ ಹಾಗೂ ವಯಸ್ಕರಲ್ಲಿ. ಮೇಲೆ ಹೇಳಿದ ಗ್ರಂಥಗಳ ಜೊತೆಗೆ ಕೋಲ್‌ಮನ್[27] ಅವರ ಸಂಶೋಧನೆ ಕೊಟ್ಟ ತೀರ್ಮಾನವನ್ನೂ ನೋಡಬಹುದು: ಸಮಾನ ಪರಿಸರಗಳಿದ್ದಾಗಲೂ ನೀಗ್ರೋಗಳ ಬುದ್ಧಿಮಟ್ಟ ಅಮೆರಿಕದ ಇಂಡಿಯನ್ನರ ಬುದ್ಧಿಮಟ್ಟದ ಕೆಳಗೆ; ಇಂಡಿಯನರದ್ದು ಬಿಳಿಯ ಜನದ ಬುದ್ಧಿಮಟ್ಟದ ಕೆಳಗೆ.

ಸಾಮಾಜಿಕ ಹಾಗೂ ಆರ್ಥಿಕ ಪರಿಸರಗಳ ಹತ್ತು ಹನ್ನೆರಡು ಅಸ್ಥಿರಗಳಿಗೆ ಬೆಲೆ ಕಟ್ಟಿ ಸಮಾನವೆಂದು ಪರಿಗಣಿಸಲಾದ ಬಿಳಿಯರ, ಇಂಡಿಯನರ ಮತ್ತು ನೀಗ್ರೋಗಳ ಮೂರು ಗುಂಪುಗಳನ್ನು ಹೋಲಿಸುವುದು ಕೋಲ್‌ಮನ್ ಅನುಸರಿಸಿದ ವಿಧಾನ. ಪರಿಸರದ ಸೂಚಕಗಳಾಗಿ ಮನೆಯಲ್ಲಿರುವ ಪುಸ್ತಕಗಳ ಸಂಖ್ಯೆ, ಸಂಸ್ಕೃತಿವರ್ಧಕ ಸೌಕರ್ಯಗಳು, ಕುಟುಂಬದ ಭದ್ರತೆ, ತಾಯ್ನುಡಿಯಲ್ಲದ ಭಾಷೆಗಳ ಜೊತೆಗಿರುವ ಸಂಪರ್ಕ, ಮಕ್ಕಳಿಗಿರುವ ವಿದ್ಯಾನುಕೂಲತೆ, ಹೆತ್ತವರ ವಿದ್ಯೆಯ ಮಟ್ಟ, ಮಕ್ಕಳ ಭವಿಷ್ಯದ ಬಗೆಗೆ ಹೆತ್ತವರಿಗಿರುವ ಆಸ್ಥೆ, ಶಾಲೆಗಳಲ್ಲಿ ಮಕ್ಕಳು ಹೇಗೆ ಕಲಿಯುತ್ತಿದ್ದಾರೆ ಅನ್ನುವದರ ಬಗೆಗೆ ಅವರಿಗಿರುವ ಆಸಕ್ತಿ, ಉಪಾಧ್ಯಾಯರು ಕೊಡುವ ಮನೆಗೆಲಸದ ಮೇಲೆ ಮಕ್ಕಳು ಕಳೆಯುವ ಹೊತ್ತು, ಮಕ್ಕಳಿಗೇ ತಮ್ಮ ಬಗೆಗಿರುವ ಕಲ್ಪನೆ ಇತ್ಯಾದಿ ಅಂಶಗಳ ಅಳತೆ ಮಾಡಿ ಗುಂಪುಗಳ ಸಮಾನತೆಯನ್ನು ಸ್ಥಾಪಿಸುವ ಪ್ರಯತ್ನ ಮಾಡಿದ್ದು ಕೋಲ್‌ಮನ್ ಅವರ ಹೆಚ್ಚಳ. ಮಕ್ಕಳ ಕಲಿಕೆಯ ಮೇಲೆ ಪ್ರಭಾವವಿರುವ ಅಸ್ಥಿರಗಳು ಇವು ಅನ್ನುವ ವಿಶ್ವಾಸವೇ ಅವರ ಸಂಶೋಧನೆಯ ಪಾಯ.

ನೀಗ್ರೋ, ಇಂಡಿಯನರು ಹಾಗೂ ಬಿಳಿಯರ ಬುದ್ಧಿಶಕ್ತಿಗಳಲ್ಲಿ ಕಂಡು ಬರುವ ವ್ಯತ್ಯಾಸಗಳು ಅನುವಂಶಿಕ ವಾದವೆನ್ನುವುದು ಜೆನ್‌ಸನ್[28] ಅವರ ಸಿದ್ಧಾಂತ. ಅದಕ್ಕೆ ತಳಹದಿಯಿರುವುದು ಶ್ಯೂವಿ ಅವರ ಗ್ರಂಥದಲ್ಲಿ ಹಾಗೂ ಕೋಲ್‌ಮನ್ ಅವರು ನಡೆಸಿದ ಸಂಶೋಧನೆಯಲ್ಲಿ. ಈ ಮೂರು ಗುಂಪುಗಳ ನಡುವೆ ಕಂಡು ಬರುವ ವ್ಯತ್ಯಾಸಕ್ಕೆ ಪರಿಸರದ ಮಾತುಗಳಲ್ಲಿ ವಿವರಣೆ ಕೊಡಬಹುದಾದರೂ ಅದು ಅಸಮರ್ಪಕವೆನ್ನುವುದು ಜೆನ್‌ಸನ್‌ರ ವಾದ.

ಕಲಿಕೆಯ ಮೇಲೆ ಪ್ರಭಾವ ಹೊಂದಿವೆಯೆಂದು ಪರಿಗಣಿಸಲಾದ ಅಷ್ಟೂ ಅಂಶಗಳ ಲೆಕ್ಕ ಮಾಡಿದಾಗ ಒಂದೊಂದು ಅಂಶದ ದೃಷ್ಟಿಯಿಂದಲೂ ಇಂಡಿಯನರು ನೀಗ್ರೋಗಳ ಕೆಳಗಿದ್ದಾರೆ. ಆದರೂ ನೀಗ್ರೋಗಳ ಬುದ್ಧಿಮಟ್ಟ ಇಂಡಿಯನರದ ಕ್ಕಿಂತ ಅರ್ಧ ವಿಚಲನೆಯಷ್ಟು ಅಥವಾ 7.5 ಅಂಕೆಗಳಷ್ಟು ಕೆಳಗಿರುವದನ್ನು ಅನುವಂಶಿಕವಲ್ಲದ ಮಾತುಗಳಲ್ಲಿ ವ್ಯಾಖ್ಯಾನ ಮಾಡುವುದು ಸಾಧ್ಯವಾಗಲಾರದು ಅನ್ನುವುದು ಜೆನ್‌ಸನ್ನರ ಮತ.

ಜೆನ್‌ಸನ್ನರ ನಿಲುವಿನ ಹಿಂದೆ ಎರಡು ಆಧಾರ ಕಲ್ಪನೆಗಳನ್ನು ಕಾಣಬಹುದು : 1. ಒಬ್ಬ ವ್ಯಕ್ತಿಯ ಸಾಂಸ್ಕೃತಿಕ ಪರಿಸರದಂತಹ ಸಂಕೀರ್ಣ ಮೊತ್ತವನ್ನು ಹತ್ತು ಹನ್ನೆರಡು ಅಸ್ಥಿರಗಳ ಮೊತ್ತವೆಂದು ಪರಿಗಣಿಸಬಹುದು. 2. ಎರಡು ಜನರ ಅನನುಕೂಲ ಪರಿಸ್ಥಿತಿಗಳನ್ನು ಹೋಲಿಸುವುದು ಸಾಧ್ಯ: ನೀಗ್ರೋ ಹಾಗೂ ಇಂಡಿಯನರ ಅನನುಕೂಲತೆಗಳು ಭಿನ್ನವಾಗಿದ್ದರೂ ಅವುಗಳ ಅಭಿವ್ಯಕ್ತಿಯ ದಿಕ್ಕು ಒಂದೇ.

ಸುತ್ತ ಹತ್ತೂ ಕಡೆಗಿರುವ ಬಿಳಿಯ ಪರಿಸರದಲ್ಲಿ ವರ್ಣೀಯನಾಗಿ ಬದುಕುವ ದಕ್ಕೆ ಸಂಬಂಧಪಟ್ಟ ಹಾಗೆ ಒಂದು ಲೆಕ್ಕ ಇರಬೇಕೆನ್ನುವುದು ಕೋಲ್‌ಮನ್ನಿಗಾಗಲೀ ಜೆನ್‌ಸನ್ನಿಗಾಗಲೀ ಹೊಳೆದ ಹಾಗೆ ಕಾಣುವುದಿಲ್ಲ. ಹಂಟ್[29] ಅವರ ಮಾತನ್ನು ಮರೆಯವದಾದರೂ ಹೇಗೆ: 'ಗುಲಾಮಗಿರಿಯಲ್ಲಿ ಒಂದು ಶತಮಾನ ಕಳೆದ ಅಮೆರಿಕದ ಕಪ್ಪು ಜನ ಅಂತರ್ಯುದ್ಧದ ಅನಂತರ ಒಂದು ಶತಮಾನವನ್ನು ಸಂಪ್ರದಾಯವೆನ್ನುವ ಸೆರೆಯಲ್ಲಿ ಕಳೆದಿದ್ದಾರೆ.' ಅಂತಹ ಇತಿಹಾಸದ ನೀಗ್ರೋ ಜನವನ್ನು ಬಿಳಿಯ ಅಮೆರಿಕನ್ನರ ಜೊತೆಗೆ ಹೋಲಿಸುವುದು ತರವೇ ಅನ್ನುವುದು ಹಂಟ್ ಅವರ ಪ್ರಶ್ನೆ. ಮೇಲುನೋಟಕ್ಕೆ ಕಾಣುವ ಒಂದಿಷ್ಟು ಅಸ್ಥಿರಗಳನ್ನೇ ಆಧಾರವಾಗಿಟ್ಟುಕೊಂಡು ಭಿನ್ನ ಇತಿಹಾಸಗಳಿರುವ ನೀಗ್ರೋ ಜನರನ್ನು ಇಂಡಿಯನರ ಜೊತೆಗಿಟ್ಟು ನೋಡಿರುವುದು ತಪ್ಪು ಎಂದು ಡಾಲುಚ್[30] ಅವರು ಕೋಲ್‌ಮನ್ ಬಗೆಗೆ ಆಕ್ಷೇಪಿಸಿದ್ದಾರೆ. ಅದು ಹೋಗಲಿ ಅಂದರೂ, ಇಂಡಿಯನರ ಇವೊತ್ತಿನ

ಪರಿಸ್ಥಿತಿ, ಸಮಾಜ ಸಂಘಟನೆ ಹಾಗೂ ಬಿಳಿಯ ಮಕ್ಕಳೇ ಅಧಿಕ ಸಂಖ್ಯೆಯಲ್ಲಿರುವ ಶಾಲೆಗಳಿಗೆ ಅವರ ಮಕ್ಕಳೂ ಹೋಗಿಬರುವದರ ಕಡೆಗೆ ಆ ಇಬ್ಬರು ಸಂಶೋಧಕರು ಗಮನ ಕೊಡದೇ ಹೋದದ್ದು ಒಂದು ದೊಡ್ಡ ಕೊರತೆ.

ಕೋಲ್‌ಮನ್ ವಿಷಯ ಸಂಗ್ರಹಣ ಮಾಡಿರುವ ರೀತಿಯ ಬಗೆಗೂ ಆಕ್ಷೇಪಣೆ ಸಾಧ್ಯ; ಅವರು ಕಳಿಸಿಕೊಟ್ಟ ಪ್ರಶ್ನಾವಳಿಗೆ ಕೆಲವೊಂದು ಪ್ರಾಂತಗಳಿಂದ ಅರ್ಧ ಕ್ಕಿಂತಲೂ ಕಡಿಮೆ ಜನ ಉತ್ತರ ಕೊಟ್ಟಿದ್ದು ಒಂದು. ಜನ ಕೊಟ್ಟ ಉತ್ತರಗಳನ್ನು ತುಂಬಿದವರು ಶಾಲೆಗಳ ಉಪಾಧ್ಯಾಯರು ಹಾಗೂ ಮೇಲ್ವಿಚಾರಕರು— ಈ ತರಹದ ಕೆಲಸದಲ್ಲಿ ಅನುಭವವಿದ್ದವರು, ಅನುಭವವಿಲ್ಲದವರು. ಪರಿಸರದ ಹಲವಾರು ಅಂಶಗಳಿಗೆ ಬೆಲೆ ಕಟ್ಟುವ ಮೊದಲು ಕೇಳಬೇಕಾಗಿದ್ದ ಸೂಕ್ಷ್ಮ ಪ್ರಶ್ನೆ ಗಳನ್ನು ಹೇಗೆ ಕೇಳಿದರು, ಅವರು ಹೇಗೆ ನಡೆದುಕೊಂಡರು, ಅನ್ನುವದರ ಬಗೆಗೆ ಮಾಹಿತಿ ಕೋಲ್‌ಮನ್ ಅವರ ಗ್ರಂಥದಲ್ಲಿಲ್ಲ. ಅಮೆರಿಕದ ಕಪ್ಪು ಜನರ ಪರಿಸರ ವಿದ್ಯಾನುಕೂಲತೆಯ ದೃಷ್ಟಿಯಿಂದ ಬಿಳಿಯರದ್ದಕ್ಕೆ ಸಮವೆಂದು ನಿರ್ಧರಿಸಿದಾಗ ಸಂಶೋಧಕರಿಗಿದ್ದ ಪೂರ್ವಗ್ರಹದ ಲೆಕ್ಕ ಬೇಡವೇ ಎಂದು ಕ್ರೋ[31] ಒಂದು ಕಡೆ ಕೇಳಿದ್ದಾರೆ. ಇಂತಹ ನ್ಯೂನತಗಳನ್ನುಳ್ಳ ಕೋಲ್‌ಮನ್ ಅವರ ಸಂಶೋಧನೆ ಯನ್ನು ಆಧಾರವಾಗಿಟ್ಟುಕೊಂಡು ಮುಂದುವರಿದ ಜೆನ್‌ಸನ್ ಅವರ ನಿರ್ಣಯಗಳಿಗೆ ಎಂತಹ ಬೆಲೆ ಕಟ್ಟಬಹುದು ಅನ್ನುವುದು ದೊಡ್ಡ ಪ್ರಶ್ನೆ.

ಇನ್ನು ಶ್ಯೂವಿ ಅವರ ಸಮೀಕ್ಷೆಯ ವಿಚಾರ: ಅವರು ಪಟ್ಟಿ ಹಾಕಿರುವ ಅಷ್ಟೂ ಸಂಶೋಧನೆಗಳ ವಿಧಾನ ಒಂದೇ—ನೀಗ್ರೋಗಳ ಗುಂಪೊಂದನ್ನು, ಸಮಾನ ಪರಿಸರವೆನ್ನುವ ವಿಶ್ವಾಸದ ಬಲದ ಮೇಲೆ, ಬಿಳಿಯರ ಗುಂಪೊಂದರ ಜೊತೆಗೆ ಹೋಲಿಸುವುದು. ಸಾಂಗತ್ಯವಿರುವ ನೂರಾರು ಸಂಶೋಧನೆಗಳಿವೆ ಅಂದ ಮಾತ್ರಕ್ಕೇ ಎರಡು ಗುಂಪುಗಳ ಬುದ್ಧಿಶಕ್ತಿಗಳ ನಡುವೆ ಕಂಡು ಬಂದ ವ್ಯತ್ಯಾಸಕ್ಕೆ ಆನುವಂಶಿಕ ವಿವರಣೆ ಕೊಡುವ ಶ್ಯೂವಿ ಅವರನ್ನು ಡ್ರೆಗರ್ ಮತ್ತು ಮಿಲರ್ ಅಲ್ಲದೇ ವರ್ನನ್[32] ಕೂಡ ಖಂಡಿಸಿದ್ದಾರೆ. ನೀಗ್ರೋ ಮತ್ತು ಬಿಳಿಯ ಜನರನ್ನು ಹೋಲಿಸಿ ನೋಡುವಾಗ ವ್ಯಕ್ತಿಗೆ ಸಮಾಜದಲ್ಲಿರಬಹುದಾದ ಸ್ಥಾನ ಅಥವಾ ಸಂಪಾದನೆ ಯನ್ನು ಗಮನಕ್ಕೆ ತೆಗೆದುಕೊಂಡರೆ ಸಾಲದು, ವರ್ಗಭೇದಗಳ ಜೊತೆಗೆ ವರ್ಣಭೇದ ಗಳಿವೆ ಅನ್ನುವ ವಿಚಾರವನ್ನೂ ಗಮನದಲ್ಲಿಟ್ಟುಕೊಳ್ಳುವುದು ಅಗತ್ಯ. ಒಬ್ಬ ನೀಗ್ರೋವಿನ ಸಂಪಾದನೆ ಬಿಳಿಯನೊಬ್ಬನ ಸಂಪಾದನೆಗೆ ಸಮನಾಗಿದ್ದರೂ ಅವನಿಗೆ ಬಿಳಿಯನ ಬದುಕು ಸಾಧ್ಯವಿಲ್ಲ. ಔದ್ಯೋಗಿಕ ಅವಕಾಶಗಳು ಎರಡೂ ಗುಂಪು

ಗಳಿಗೆ ಸಮಾನವಾಗುವವರೆಗೂ ಸಮಾನ ಪರಿಸರದ ನೀಗ್ರೋ ಹಾಗೂ ಬಿಳಿಯ ಗುಂಪುಗಳು ಸಾಧ್ಯವೇ ಇಲ್ಲ, ವಿಧಾನಶಾಸ್ತ್ರದ ಈ ಬೃಹತ್ ಸಮಸ್ಯೆಗೆ ಪರಿಹಾರವೇ ಇಲ್ಲವೆಂದು ಬ್ರೌನ್[33] ಅವರು 1944ರಲ್ಲೇ ಹೇಳಿದ ಮಾತನ್ನು ಜೆನ್‌ಸನ್ ಆಗಲೀ ಕೋಲ್‌ಮನ್ ಆಗಲೀ ಮರೆತದ್ದಾದರೂ ಹೇಗೆ ? ಇಷ್ಟರ ಜೊತೆಗೆ, ಸಮಾಜದಲ್ಲಿನ ಅಲ್ಪಸಂಖ್ಯಾತರಲ್ಲಿ ತಾನೂ ಒಬ್ಬ ಅನ್ನುವ ತಿಳುವಳಿಕೆ ವ್ಯಕ್ತಿಯೊಬ್ಬನ ಕಾರ್ಯ ಪ್ರೇರಣೆಯ ಮೇಲೆ ಹೊಂದಿರಬಹುದಾದ ಪ್ರಭಾವವನ್ನು ಗಮನಕ್ಕೆ ತಂದು ಕೊಂಡಾಗ ನಮ್ಮ ಸಮಸ್ಯೆ ಎಂತಹ ಅಗಾಧ ಪ್ರಮಾಣದ್ದು ಅನ್ನುವುದು ಮನವರಿಕೆ ಯಾದೀತು.

ಸಾಂಸ್ಕೃತಿಕ ಪರಿಸರವೆನ್ನುವದಕ್ಕೆ ಮೇಲೆ ಹೇಳಿದ ಸಂಶೋಧನೆಗಳು ಕೊಟ್ಟಿ ರುವ ಅರ್ಥ ಸಂಕುಚಿತವೆನ್ನುವದನ್ನು ಮರೆತರೂ, ಪರಿಸರದ ಬೆಲೆ ಕಟ್ಟುವದಕ್ಕೆ ಸಾಮಾನ್ಯವಾಗಿ ಆರಿಸಿಕೊಳ್ಳುವ ಅಂಶಗಳ ಬಗೆಗೇ ಒಂದು ಸಮಸ್ಯೆ ಇದೆ. ವ್ಯಕ್ತಿಯೊಬ್ಬನ ಸಾಮಾಜಿಕ ಸ್ಥಾನವನ್ನು ನಿರ್ಧರಿಸಿ ಅವನನ್ನು ಮಧ್ಯಮವರ್ಗದವ ನೆಂದೋ ಉಚ್ಚವರ್ಗದವನೆಂದೋ ಪರಿಗಣಿಸುವದ್ದಕ್ಕಾಗಿ ಸಂಪಾದನೆಯನ್ನು ಎಲ್ಲೋ ಒಂದು ಕಡೆ ತುಂಡರಿಸುವ ಸಂಪ್ರದಾಯ ನೀಗ್ರೋ ಜನಕ್ಕೆ ಸಂಬಂಧಪಟ್ಟ ಹಾಗೆ ಯುಕ್ತವಲ್ಲ. ಮಧ್ಯಮ ವರ್ಗದ ನೀಗ್ರೋಗಳ ಸಂಪಾದನೆ ಅದೇ ವರ್ಗಕ್ಕೆ ಸೇರಿದ ಬಿಳಿಯರ ಸಂಪಾದನೆಗಿಂತ ಕೆಳಮಟ್ಟದಲ್ಲಿರುವುದು ಎಲ್ಲರಿಗೂ ತಿಳಿದ ವಿಷಯ. ಹೆತ್ತವರ ವಿದ್ಯಾಭ್ಯಾಸದ ಮಟ್ಟವನ್ನು ಸರಿಸಮವೆನ್ನುವಾಗಲೂ ಇದೇ ಬಗೆಯ ಸಮಸ್ಯೆ : ಎಲ್ಲ ಅನುಕೂಲತೆಗಳೂ ಹೇರಳವಾಗಿರುವ ಬಿಳಿಯ ಮಕ್ಕಳ ಶಾಲೆಯಲ್ಲಿ ಹತ್ತು ವರ್ಷಗಳನ್ನು ಕಳೆಯುವುದೂ ಬಹುಮಟ್ಟಿಗೆ ನೀಗ್ರೋ ಮಕ್ಕಳೇ ಇರುವ ಶಾಲೆಗಳಲ್ಲಿ ಹತ್ತು ವರ್ಷಗಳನ್ನು ಕಳೆಯುವುದೂ ಸಮಾನವಾದ ಅನುಭವ ಗಳೆಂದು ಹೇಳುವುದು ಸರಿಯೇ ?

ಒಬ್ಬ ನೀಗ್ರೋ ಹುಡುಗ ಬಿಳಿಯ ಮಕ್ಕಳ ಶಾಲೆಗೆ ಹೋಗಿ ಬಂದ ಮಾತ್ರಕ್ಕೇ ಅವನ ಪರಿಸರ ಅದೇ ಶಾಲೆಯ ಬಿಳಿಯ ಹುಡುಗನ ಪರಿಸರಕ್ಕೆ ಸಮವೆನ್ನುವುದು ತಪ್ಪು. ಶಾಲೆಯ ಗಂಟೆ ಹೊಡೆದ ಮೇಲೆ ನೀಗ್ರೋ ಹುಡುಗ ಹಿಂದಿರುಗುವುದು ತನ್ನ ಎಂದಿನ ವಾತಾವರಣಕ್ಕೆ, ತನ್ನಂತೇ ಇರುವ ಮಿಕ್ಕ ಹುಡುಗರ ಬಡ ಪರಿಸರಕ್ಕೆ. ಶಾಲೆಗೆ ಹೋಗಿ ಬಂದದ್ದರಿಂದ ಅವನ ಪ್ರಪಂಚ ಕೊಂಚಮಟ್ಟಿಗೆ ಹಿಗ್ಗುವುದು ನಿಜವಾದರೂ ಅದೇ ಕಾರಣವಾಗಿ ಅವನಿಗೆ ಮೊದಲು ಮನವರಿಕೆಯಾಗುವುದು ಕೀಳುವರ್ಗದ ತನ್ನ ಸದಸ್ಯತ್ವ. ಕಲಿಕೆಗೆ ಅಗತ್ಯವಾದ ಉತ್ಸಾಹವನ್ನು ಅವನ ವರ್ಗದ ಪರಿಸ್ಥಿತಿ ಕುಗ್ಗಿಸುವ ಹಾಗೇ ಅವನ ಅಸ್ಮಿತೆಯ ಮನವರಿಕೆಯೂ ಕುಗ್ಗಿಸದೇ ಅನ್ನುವುದು ಸಮಂಜಸವಾದೊಂದು ಪ್ರಶ್ನೆ. ವಿದ್ಯಾಭ್ಯಾಸದ ಅನಂತರದ ವಾಸ್ತವ

ಪ್ರಪಂಚದಲ್ಲಿ ತಾನು ಮೇಲೇರುವದಕ್ಕೆ ಇರುವ ಅವಕಾಶ ಕಡಿಮೆಯೆನ್ನುವ ತಿಳುವಳಿಕೆ ಅವನ ಕಾರ್ಯ ಪ್ರೇರಣೆಯ ಮೇಲೆ, ಅವನ ಕಲಿಕೆಯ ಮೇಲೆ ಪರಿಣಾಮ ಹೊಂದಿರುವುದು ಅನಿವಾರ್ಯ. ಉಳಿದವರ ದೃಷ್ಟಿಯಲ್ಲಿ ದುರಹಂಕಾರದ ಸೂಚಕಗಳಾಗಿ ಕಾಣಬಹುದಾದ ಆಸೆಗಳನ್ನು ಅವನು ತಾನೇ ಅದುಮಿಡುವುದನ್ನು ಕಲಿಯುತ್ತಾನೆ. ಚಿಕ್ಕ ಮಕ್ಕಳ ಬುದ್ಧಿಶಕ್ತಿಯ ಮಟ್ಟಕ್ಕಿಂತ ತರುಣರ ಹಾಗೂ ವಯಸ್ಕರ ಬುದ್ಧಿ ಮಟ್ಟ ಕೆಳಗಿರುವದಕ್ಕೆ ಅವನ ಇಂತಹ ಹಿಂಜರಿಕೆ ಕಾರಣವಾಗಿರುವುದು ಸಾಧ್ಯ.

ನೀಗ್ರೋ ಮಕ್ಕಳನ್ನು ಬಿಳಿಯ ಮಕ್ಕಳ ಜೊತೆಗೆ ಹೋಲಿಸುವಾಗ ಕಂಡು ಬರುವ ಸಮಸ್ಯೆಗಳೇ ಇಂಗ್ಲಿಷ್ ಮಕ್ಕಳ ಜೊತೆಗೆ ಭಾರತದ ಮಕ್ಕಳನ್ನು ಹೋಲಿಸುವಾಗಲೂ ಕಂಡು ಬರುತ್ತವೆ. ನೀಗ್ರೋ ಮಕ್ಕಳೇ ಹೆಚ್ಚಾಗಿರುವ ಶಾಲೆಗಳಲ್ಲಿ ಕಂಡುಬರುವ ಅನುಭವ ದಾರಿದ್ರ್ಯ ಭಾರತದ ಬಹುಪಾಲು ಶಾಲೆಗಳಲ್ಲೂ ಬದುಕು ಹಗುರವಾಗುವುದಕ್ಕೆ ಬೇಕಾದ ಅನುಕೂಲತೆಗಳ ದೃಷ್ಟಿಯಿಂದ ಮಾತ್ರವಲ್ಲ, ಜ್ಞಾನಾರ್ಜನೆಗೆ ಆಗತ್ಯವಾದ ಅವಕಾಶಗಳ ದೃಷ್ಟಿಯಿಂದಲೂ. ಭಾರತದ ಒಬ್ಬ ವೈದ್ಯನ ಅಥವಾ ಉಪಾಧ್ಯಾಯನ ಮನೆ ಇಂಗ್ಲೆಂಡಿನ ಒಬ್ಬ ವೈದ್ಯನ ಅಥವಾ ಉಪಾಧ್ಯಾಯನ ಮನೆಗೆ ಸಮನಲ್ಲ. ಭಾರತದ ಒಬ್ಬ ಕೈ ದುಡಿಮೆಯ ಕೆಲಸಗಾರನ ಹಾಗೂ ತರಪೇತಾದ ಕೆಲಸಗಾರನ ಬದುಕಿನ ವೈಖರಿಗಳ ನಡುವಿಗಿರುವ ಅಂತರಕ್ಕಿಂತ ಹೆಚ್ಚು ಅಂತರ ಇಂಗ್ಲೆಂಡಿನ ಅದೇ ತರಹದ ಇಂಗ್ಲೆಂಡಿನ ಇಬ್ಬರ ಬದುಕುಗಳ ನಡುವೆ. ಸಮಾಜದ ಅಂತಸ್ತುಗಳೆನ್ನುವ ಏಣಿ ಹತ್ತಿದ ಹಾಗೆ ಜನದ ಬುದ್ಧಿಶಕ್ತಿಯ ಮಟ್ಟವೂ ಏರುವುದು ಪಾಶ್ಚಾತ್ಯ ದೇಶಗಳಲ್ಲಿ ಕಂಡುಬರುವ ಸಂಗತಿ. ಈ ಮಾತು ಮುಂದುವರಿಯದ ದೇಶಗಳಲ್ಲಿ ಸಾಧುವಲ್ಲವೆನ್ನುವ ಈಚಿನ ನಿರ್ಣಯಕ್ಕೆ ಇದು ಕಾರಣ.

ಭಿನ್ನ ಸಂಸ್ಕೃತಿಗಳ ಅಭ್ಯಾಸದ ವಿಧಾನ ಹಿಂದೆ ತುಳಿದ ದಾರಿಯಿಂದ ಬೇರೆ ದಿಕ್ಕಿಗೆ ಹೊರಳಿದ್ದಕ್ಕೆ ಇಂತಹ ಅಭ್ಯಾಸಗಳಿಗೆ ಅಂಟಿರುವ ಸಮಸ್ಯೆಗಳ ಅರಿವೇ ಕಾರಣ. ಸಾಂಪ್ರದಾಯಿಕವಾದ ಸಂಶೋಧನೆ ಎರಡು ಸಂಸ್ಕೃತಿಗಳನ್ನು ಹೋಲಿಸಿ ನೋಡುವ ಕೆಲಸಕ್ಕೆ ಪ್ರಾಧಾನ್ಯ ಕೊಡುತ್ತಿತ್ತು. ಈಚಿನ ಸಂಶೋಧಕರ ದೃಷ್ಟಿಯಲ್ಲಿ ಈ ತರಹದ ಸಂಶೋಧನೆಗಳ ಪ್ರಯೋಜನ ಕಡಿಮೆ. ಬದಲು, ಬದಲಾಗುವ ಪರಿಸರ ವ್ಯಕ್ತಿಯ ದಕ್ಷತೆಗಳ ಮೇಲೆ ಎಂತಹ ಪ್ರಭಾವ ಹೊಂದಿದೆ, ಪರಿಸರವನ್ನು

ಹತೋಟಿಗೆ ತರುವುದರ ಮೂಲಕ ವ್ಯಕ್ತಿಯ ದಕ್ಷತೆ ಅಪೇಕ್ಷಿತವಾದ ವೃದ್ಧಿ ಪಡೆಯುವಂತೆ ಮಾಡುವುದು ಎಷ್ಟರಮಟ್ಟಿಗೆ ಸಾಧ್ಯ–ಈ ಬಗೆಯ ಪ್ರಶ್ನೆಗಳಿಗೆ ಉತ್ತರ ಕೊಡುವುದು ತಮ್ಮ ಜವಾಬ್ದಾರಿಯೆಂದು ಈಚಿನ ಸಂಶೋಧಕರು ಒಪ್ಪಿಕೊಂಡಿದ್ದಾರೆ.

ಅಡಿ ಟಿಪ್ಪಣಿಗಳು

1. FRIJDA, N. and JAHODA, G, (1966), On the scope and methods of cross-cultural research. *International Journal of Psychology*, Vol. 1, 110–127.
2. PRICE-WILLIAMS, D. R. (1961), A study concerning concepts of conservation of quantities among Primitive children. *Acta Psychological*, Vol. 18, 297–305
3. DOOB (1960), *Becoming More Civilised*. Yale University Press, New Haven.
4. BRUNER, J. S. (1965), The Growth of Mind, *American Paychologist*, 20, 1007–1017.
5. HOLTZMAN, W. H. (1968), Cross-cultural studies in Psychology, *International Journal in Psychology*, Vol. 3. No. 2, 83–91.
6. SEAGALL, M. H.,CAMPBELL, D. I. and KERSKOVITS, M. J. (1963), Cultural differences in the perception of geometric illusions, *Science*, Vol. 139, 769-771.
7. ANASTASI, A and FOLEY, J. P. (1949), *Differentia, Psychology*. Macmillan, New york.

8. WHITING, J.W.M. (1954), The Cross-cultural Method. In G. Lindzey (Ed.) *Handbook of Social Psychology*, Vol. 1, Addison Wesley. Cambridge.

9. STRODTBECK, F. (1964), Consideration of meta-method in cross-cultural studies. *American Anthropologist,* Vol. 66, 223–229.

10. GOLDSCHMIDT, W.R. (1966), *Comparative Functionalism :* An essay in Anthropological theory, University of California Press, Berkeley.

11. KLUCKHOHN, C. (1953), Universal categories of culture. In Kroeber, AL. (Ed.), *Anthropology Today*, University of Chicago Press, Chiccago.

12. BERRIEN ? F. R. (1967), Methodological and related problems in cross-cultural research, *International Journal of Psychology*, Vol. 2, 33–43.

13. VERNON, P. E. (1964), *Personality Assessment*—A Critical Survey. Methuen, London.

14. HUNT, J. McV. (1961), *Intelligence and Experience*. Ronald Press, New York.

15. FERGUSON, G. A. (1956), On transfer and the abilities of man. *Canadian Journal of Psychology*, Vol, 10, 121–131.

16. GREENFIELD, P. M. and BRUNER, J. S. (1966), Culture and cognitive growth. *International Journal of Psychology*, Vol. 1, No. 2, 89–107.

17. BERRY, J. W. (1969), On cross-cultural comparability, *International Journal of Psychology*. Vol. 4, 119–128.

18. PORTEUS, S. D. (1931), *The Psychology of a Primitive People*, Longmans, New York.

19. PINTNER (1931), *Intelligence Testing : Methods and Results.* Henry Holt, New York.

20. BRUNER ? J. S. (1965), The Growth of Mind, *American Psychologist*, 20, 1007–1017.

21. GOODENOUGH, F. L. and HARRIS, D. B. (1950), Studies in the psychology of children's drawings, 1928–1949, Psychological Bulletin, 47, 369–433.

22. BIESHEUVEL, S. (1949), Psychological tests and their application to non-European peoples. In Jeffrey (Ed.) *The Yearbook of Education*, 87–126. Evan Brothers, London.

23. VERNON, P. E. (1965), Environmental handicaps and intellectual development, part 1, *British Journal of Educational Psychology*, Vol. 35, 1–22.

24. OMBREDANE, A. (1957), Etude du problems psychologique pose par les Noirs Congolais. Review de I'Universite de Bruxelles.

25. DREGER, R. M. and MILLER, K. S. (1968), Comparative psychological studies of Negroes and Whites in the United States : 1959–1965. *Psychological Bulletin*, (Monograph Supplement 70. No. 3, Part 2).

26. SHUEY, A. M. (1966), *The Testing of Negro Intelligence.* (2nd Ed.), Social Science Press, New York.

27. COLEMAN, J. S. (1966), et al, *Equality of Educational Opportunity.* U.S. Department of Health, Education and Welfare. Govt. Printing Office, Washington.

28. JENSEN, A. R. (1969), How much can we boost I.Q. and scholastic achievement ? *Harvard Educational Review*, Vol. 39, No. 1, 1–123.

29. HUNT, J. McV. (1969), Has compensatory education failed? Has it been attempted? *Harvard Educational Review*, Vol, 39, No. 2, 278–300.

30. DEUTSCH, M. (1969), Happenings on the way back to the Forum : Social Science, I.Q. and Race Revisited. Harvard Educational Review, Vol. 39, No. 3, 523–557.

31. CROW, J. F. (1969), Genetic Theories and Influences. *Harvard Educational Review*, Vol. 39, No. 2, 301–309.

32. VERNON, P. E. (1969), *Intelligence and Cultural Environment,* Methuen, London.

33. BROWN, F. (1944), An experimental and critical study of the intelligence of Negro and White Kindergarten children. *Journal of Genetic Psychology,* Vol. 65, 161–175.

ಅಧ್ಯಾಯ ಎರಡು

ಕಾರ್ಯ ನಿರ್ವಹಣೆ ಮತ್ತು ಪರಿಸರ

ಬುದ್ಧಿಯ ಬೆಳವಣಿಗೆಯ ಮೇಲೆ ಪ್ರಭಾವ ಹೊಂದಿರುವ ಆಹಾರದ ಪುಷ್ಟಿ ಪೋಷಕ ಗುಣ, ಶಿಶುಪಾಲನೆಯ ಕ್ರಮ, ಹೆತ್ತವರ ಬುದ್ಧಿ ಮಟ್ಟ ಹಾಗೂ ಮನೆಯ ವಾತಾವರಣದಂತಹ ಕೆಲವೊಂದು ಅಂಶಗಳು ಪ್ರಸಿದ್ಧವಾಗಿವೆ. ಬುದ್ಧಿಯ ಬೆಳವಣಿಗೆಗೂ ಇವಕ್ಕೂ ಕಾರ್ಯಕಾರಣವಾದೊಂದು ಸಂಬಂಧವಿದೆಯೆಂದೂ ಇವಕ್ಕೆ ಅಂತಸ್ಥಾಂಶಗಳೆನ್ನುವ ಹೆಸರು ಕೊಡಬಹುದೆನ್ನುವ ಬಿಶವಲ್[1] ಅವರ ಸೂಚನೆಯನ್ನು ನಾವು ಒಪ್ಪಿಕೊಳ್ಳಬಹುದು. ಬುದ್ಧಿಯ ಬೆಳವಣಿಗೆಯ ಮೇಲೆ ನೇರವಾದ ಪ್ರಭಾವ ಹೊಂದಿರದ ಕೆಲವೊಂದು ಅಂಶಗಳನ್ನು ಗುರುತಿಸಿ ಅವಕ್ಕೆ ಬಾಹ್ಯಸ್ಥಾಂಶಗಳೆನ್ನುವ ಹೆಸರು ಕೊಟ್ಟದ್ದೂ ಬಿಶವಲ್ ಅವಶ್ಯ. ಪರೀಕ್ಷೆಗೆ ಕೂರುವವನ ಹಾಗೂ ಪರೀಕ್ಷಕನ ಸಂಬಂಧ, ಪರೀಕ್ಷೆಯನ್ನು ಕೊಡುವ ಕ್ರಮ, ಒಡ್ಡಿದ ಸಮಸ್ಯೆಗಳಿಂದ ಪರೀಕ್ಷೆಗೆ ಕೂತವನಲ್ಲಿ ಜಾಗೃತವಾಗುವ ಪ್ರತಿವರ್ತನೆಯ ಪ್ರವೃತ್ತಿ—ಇವೇ ಮುಖ್ಯವಾದ ಬಾಹ್ಯಸ್ಥಾಂಶಗಳು. ಇವಕ್ಕೂ ಪರೀಕ್ಷೆಗೆ ಕೂತವನು ಪರೀಕ್ಷೆಯ ಸಂದರ್ಭಕ್ಕೆ ತರುವ ಮೂಲ ದಕ್ಷತೆಗೂ ಕಾರ್ಯಕಾರಣ ಸಂಬಂಧವಿಲ್ಲವೆನ್ನುವ ಬಿಶವಲ್ ಅವರ ವಾದವನ್ನೂ ನಾವು ಒಪ್ಪಬಹುದು.

ಈ ಎರಡು ಬಗೆಯ ಅಂಶಗಳ ನಡುವೆ ನಿಗದಿಯಾದ ಗೆರೆಯೆಳೆಯುವುದು ತಪ್ಪೆಂದು ವರ್ನನ್[2] ಅವರು ತೋರಿಸಿಕೊಟ್ಟಿದ್ದಾರೆ. ಬುದ್ಧಿಮಾಪಕದಲ್ಲಿನ

ಯಾವುದೋ ಒಂದು ವಸ್ತು ಅಥವಾ ಮಾಪಕದ ಅಂಗವಾದ ಕಾರ್ಯ ಭಿನ್ನ ಸಂಸ್ಕೃತಿಗಳಲ್ಲಿ ಬೇರೆ ಬೇರೆ ಅರ್ಥವನ್ನು ಹೊಂದಿರುವುದು ಸಾಧ್ಯ. ಈ ಅರ್ಥ ವ್ಯತ್ಯಾಸ ಕಾರ್ಯನಿರ್ವಹಣೆಯು ಸಂದರ್ಭದ ಮೇಲೆ ಪ್ರಭಾವ ಹೊಂದಿರುವಂತೆ ಸಮಸ್ಯೆಯ ಪರಿಹಾರಕ್ಕೆ ಅಗತ್ಯವಾದ ಕೌಶಲದ ಬೆಳವಣಿಗೆಯ ಮೇಲೂ ಪ್ರಭಾವ ಹೊಂದಿರುತ್ತದೆ. ಉದಾಹರಣೆಗೆ, ಮನುಷ್ಯನ ಚಿತ್ರ ಬರೆಯುವುದರ ಬಗೆಗೆ ಅರಬ್ಬಿ ಸಮಾಜದಲ್ಲಿರುವ ಬಹಿಷ್ಕಾರವೇ ಕಾರಣವಾಗಿ ಮನಸ್ಸು ಬೆಳೆಸಿಕೊಂಡಿರುವ ಹಿಂಜರಿಕೆ ಚಿತ್ರಪ್ರಧಾನವಾದ ಸಮಸ್ಯೆಯ ಪರಿಹಾರ ಕಾರ್ಯದ ಮೇಲಲ್ಲದೇ ಆ ತರಹದ ಕೆಲಸಕ್ಕೆ ಅಗತ್ಯವಾದ ಕೌಶಲವನ್ನೂ ಮೊಟಕು ಮಾಡಿರುತ್ತದೆ. ಪರೀಕ್ಷೆಯ ಸಂದರ್ಭದಲ್ಲಿ ಕಂಡು ಬಂದ ಹಿಂಜರಿಕೆ ಬಾಹ್ಯಸ್ಥವಾದ ಅಂಶ, ನಿಜ. ಆದರ ಜೊತೆಗೇ, ಅದು ಮನಸ್ಸನ್ನು ತಿದ್ದುತ್ತ ಬಂದು ಕೌಶಲದ ಜೊತೆಗೆ ಕಾರ್ಯಕಾರಣ ಸಂಬಂಧವನ್ನು ಹೊಂದಿರುವ ಅಂತಸ್ಥವಾದ ಅಂಶವೂ ಹೌದು. ಹೀಗಾಗಿ, ಈ ಎರಡು ತರಹದ ಅಂಶಗಳ ನಡುವಿಗಿರುವ ವ್ಯತ್ಯಾಸವನ್ನು ಸಾರ್ವತ್ರಿಕವಾದೊಂದು ಸತ್ಯವೆಂದು ಪರಿಗಣಿಸಬಾರದು ಅನ್ನುವ ವರ್ನನ್ ಅವರ ಮಾತನ್ನೂ ನಾವು ಒಪ್ಪಿಕೊಳ್ಳಬಹುದು.

ಕಾರ್ಯನಿರ್ವಹಣೆಯ ಮೇಲೆ ಪ್ರಭಾವ ಹೊಂದಿರುವ ಅಂಶಗಳನ್ನು ಎರಡು ಗುಂಪಾಗಿ ವಿಂಗಡಿಸುವ ಕೆಲಸದಿಂದ ಪ್ರಯೋಜನವುಂಟು. ಪರೀಕ್ಷೆಯ ಸಂದರ್ಭದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ ಬಾಹ್ಯಸ್ಥವಾದ ಅಂಶಗಳ ಪ್ರಭಾವವನ್ನು, ಸಂಪೂರ್ಣವಾಗಿ ಅಳಿಸಿ ಹಾಕುವುದು ಸಾಧ್ಯವಾಗದೇ ಇದ್ದರೂ, ಕಡಿಮೆ ಮಾಡ ಬಹುದು. ಇದರಿಂದ ಪರೀಕ್ಷೆಗೆ ಕೂತವನು ತನ್ನ ಪರಮಾವಧಿ ನಿರ್ವಹಣೆಯನ್ನು ಕೊಡುವಂತೆ ಮಾಡುವುದು ಸಾಧ್ಯ. ಅದೇ, ಅಂತಸ್ಥವಾದ ಅಂಶಗಳ ಪ್ರಭಾವವನ್ನು ತೊಡೆದು ಹಾಕುವದಕ್ಕೆ ವರ್ಷಗಳುದ್ದದ ಸಮಾಜ ಸುಧಾರಣೆಯ ಯೋಜನೆ ಬೇಕಾದೀತು. ಪರಿಸರದಲ್ಲಿ ಆಮೂಲಾಗ್ರವಾದ ಪರಿವರ್ತನೆಯಾಗದೇ ಅಂತಸ್ಥವಾದ ಅಂಶಗಳ ಪ್ರಭಾವವನ್ನು ಕಡಿಮೆ ಮಾಡುವುದಾಗಲೀ ಹೆಚ್ಚಿಸುವದಾಗಲೀ ಸಾಧ್ಯವಾಗದು.

ಎರಡು ಗುಂಪುಗಳ ಜನ ಬುದ್ಧಿ ಪರೀಕ್ಷೆಯ ಒಂದು ಸಂದರ್ಭದಲ್ಲಿ ತಮ್ಮ ಪರಮಾವಧಿ ನಿರ್ವಹಣೆಯನ್ನು ಕೊಡುತ್ತಿದ್ದಾರೆನ್ನುವುದು ಸಂಶೋಧಕನ ಆಧಾರ ಕಲ್ಪನೆಗಳಲ್ಲೊಂದು. ಒಂದೇ ಸಾಂಸ್ಕೃತಿಕ ಪರಿಸರದಲ್ಲಿ ಹುಟ್ಟಿ ಬೆಳೆದ ಎರಡು ಗುಂಪುಗಳ ಬಗೆಗೆ ಈ ನಂಬಿಕೆ ಸಾಧುವಾದದ್ದು. ಬುದ್ಧಿಮಾಪಕದ ಅಂಗವಾಗಿರುವ ಸಮಸ್ಯೆಗಳ ಸಾಂಗತ್ಯ ಅಷ್ಟರಿಗೂ ಒಂದೇ ಸಮನಾಗಿರುವುದೂ ಅವರೆಲ್ಲರ ಮೇಲೆ ಪರೀಕ್ಷಕನಿಗಿರಬಹುದಾದ ಪ್ರಭಾವ ಸಮನಾಗಿರುವುದೂ ಸಾಧ್ಯ. ಭಿನ್ನ ಸಂಸ್ಕೃತಿಗಳ

ಜನರ ಗುಂಪುಗಳಿಗೆ ಸಂಬಂಧಪಟ್ಟ ಹಾಗೆ ಈ ತರಹದ ಆಧಾರ ಕಲ್ಪನೆ ತರವಲ್ಲ. ಉದಾಹರಣೆಗೆ, ಒಬ್ಬ ಬಿಳಿಯ ಯುವಕನ ಮೇಲೂ ಒಬ್ಬ ನೀಗ್ರೋ ಯುವಕನ ಮೇಲೂ ಬಿಳಿಯ ಪರೀಕ್ಷಕನಿಗಿರುವ ಪರಿಣಾಮ ಒಂದೇ ಅಲ್ಲ, ನೀಗ್ರೋ ಯುವಕ ಬುದ್ಧಿ ಪರೀಕ್ಷೆಯ ಸಂದರ್ಭದಲ್ಲಿ ತೋರುವ ಮನೋಭಾವ ಬಿಳಿಯರ ಬಗೆಗೆ ನೀಗ್ರೋ ಜನಕ್ಕಿರುವ ಮನೋಭಾವವೆನ್ನುವ ಮೊತ್ತದ ಒಂದು ಅಂಶ. ಶತಮಾನ ಕ್ಕಿಂತಲೂ ಹೆಚ್ಚಿನ ಕಾಲಾವಧಿಯಲ್ಲಿ ಘನಿಸಿದ ಅಂತಹ ಮನೋಭಾವದ ಪರಿಣಾಮವೇನು ಎಂದು ಕೇಳಿಕೊಂಡಾಗ ನೀಗ್ರೋ ಹಾಗೂ ಬಿಳಿಯ ಜನಗಳ ಸಂಬಂಧದ ಇತಿಹಾಸವನ್ನು ಗಣನೆಗೆ ತೆಗೆದುಕೊಳ್ಳಬೇಕು. ಪರಂಪರೆಯಿಂದ ಅನುಭವವಾದ ಆಶಾಭಂಗ, ದ್ವೇಷ ಮತ್ತು ಸಿನಿಕತನಗಳ ಮಿಶ್ರಣವಾದ ಮನೋ ಭಾವ ಸದ್ಯದ ಕಾರ್ಯನಿರ್ವಹಣೆಯನ್ನಲ್ಲದೇ ಅದರ ಬುಡಕ್ಕಿರುವ ಕೌಶಲ ಸಂಘಟನೆಯನ್ನೇ ತಟ್ಟಿರುತ್ತದೆ.

ಈ ಸಂದರ್ಭದಲ್ಲಿ ಬ್ರಾಸಿಯಲ್[3] ಹೀಗೆ ಕೇಳಿದ್ದಾರೆ : 'ಬಿಳಿಯ ಪರೀಕ್ಷಕನ ಧ್ವನಿ, ವರ್ತನೆ ಹಾಗೂ ಅಂಗ ಚೇಷ್ಟೆಗಳು ನೀಗ್ರೋ ಯುವಕನಲ್ಲಿ ಬೇಸರ ಹುಟ್ಟಿಸಿ ಅವನು ಪ್ರಯತ್ನ ಮಾಡುವದನ್ನೇ ನಿಲ್ಲಿಸುತ್ತಾನೆ. ವಾಸ್ತವವಾದ ಈ ಮನೋಭಾವ ದಿನ ಕಳೆದ ಹಾಗೆ ಘನಿಸುತ್ತಿದೆ. ಸರ್ಕಾರದ ಹಣ ಪಡೆದ ಬಿಳಿಯ ಸಂಶೋಧಕರು ಕಪ್ಪು ಮಕ್ಕಳ ಬುದ್ಧಿ ಪರೀಕ್ಷೆ ಮಾಡಿ ತಮ್ಮ ಮಕ್ಕಳನ್ನು ಹಾರ್ವರ್ಡಿಗೆ ಕಳಿಸುವದಕ್ಕೆ ದಾರಿ ಮಾಡಿಕೊಳ್ಳುತ್ತಿರುವಾಗ, ಅದರ ಬಗೆಗೆ ವರದಿ ಕಪ್ಪು ಜನ ಓದುವ ಪತ್ರಿಕೆ ಗಳಲ್ಲಿ ಪ್ರಕಟವಾಗುತ್ತಿರುವಾಗ, ಕಪ್ಪು ಜನರ ಯಥಾರ್ಥ ಪರೀಕ್ಷೆ ಹೇಗೆ ತಾನೆ ಸಾಧ್ಯ ? ಕಪ್ಪು ಜನರನ್ನಾಳುವುದಕ್ಕೆ ಬಿಳಿಯ ಜನ ಬಳಸುವ ಸಾಧನ ಬುದ್ಧಿಮಾಪಕ ವೆಂದು ಪತ್ರಿಕೆಗಳು ಹೇಳುವಾಗ ಅದನ್ನೋದಿದ ನೀಗ್ರೋ ಯುವಕನ ಜೊತೆಗೆ ಬಿಳಿಯ ಪರೀಕ್ಷ ಎಂತಹ ಸಂಬಂಧವನ್ನು ಸಾಧಿಸಬಲ್ಲ ?' ನೀಗ್ರೋ ಯುವಕರ ಮಾತು ಮರೆತರೂ, ಸಣ್ಣ ನೀಗ್ರೋ ಮಕ್ಕಳ ಶಾಬ್ದಿಕ ವರ್ತನೆ ಬಿಳಿಯ ಪರೀಕ್ಷಕರ ಎದುರಲ್ಲಿ ಹಿಂಜರಿಯುವದರ ಕಡೆಗೆ ಪಾಸಮಾನಿಕ್ ಮತ್ತು ನಾಬ್ಲಾಕ್[4] ನಮ್ಮ ಗಮನ ಸೆಳೆದಿದ್ದಾರೆ.

ಬ್ರಾಸಿಯಲ್ ಸೂಚಿಸಿರುವಂತಹ ಉತ್ಕಟ ಮನೋಭಾವದ್ವೇಷ ತಿರಸ್ಕಾರಗಳ ಮಿಶ್ರಣವಾದ ಮನೋಭಾವ—ಇಂತಹ ಎಲ್ಲ ಪರೀಕ್ಷಾ ಸಂದರ್ಭಗಳಲ್ಲೂ ಸಾಮಾನ್ಯ ವೆಂದಲ್ಲ. ತನ್ನಂತವನಲ್ಲದ ಪರೀಕ್ಷಕನ ಎದುರು ಕೂತವನ ಮನಸ್ಸಿನಲ್ಲಿ ಎಂತೆಂತ ಹದೋ ನಿರೀಕ್ಷೆಗಳಿರುವದಂತೂ ಸಹಜ. ಒಂದು ದೃಷ್ಟಿಯಿಂದ ನೋಡಿದಾಗ ಪ್ರತಿಯೊಂದು ಪರೀಕ್ಷಾ ಸಂದರ್ಭವೂ ಕೃತಕವಾದ ಸನ್ನಿವೇಶ, ವಿಧ್ಯುಕ್ತ ಕ್ರಿಯೆ ಗಳಂತಹ ವರ್ತನೆಗಳು ಅದರ ಮುಖ್ಯ ಲಕ್ಷಣ. ಪಾತ್ರಧಾರಿಯಾದ ಪರೀಕ್ಷಕ

ಆಡುವ ಮಾತು, ಆಡುವ ನಾಟಕ ಪಾಶ್ಚಾತ್ಯದೇಶಗಳು ಮಕ್ಕಳಿಗೆ ಚಿಕ್ಕಂದಿನಿಂದಲೂ ಪರಿಚಿತವಾದ ವಿಷಯ. ಅದೇ ಭಾರತದ ಬಹುಪಾಲು ಮಕ್ಕಳಿಗೆ ಇಂತಹ ಸನ್ನಿವೇಶಗಳು ಅವರ ದಿನನಿತ್ಯದ ಬದುಕಿನಿಂದ ದೂರ ಎಂದೇ ಪಾತ್ರ ವಹಿಸುವ ದಾಗಲೀ ಅಥವಾ ಇನ್ನೊಬ್ಬರು ಪಾತ್ರಧಾರಿಯಾಗಿ ಮಾಡಿದ್ದಕ್ಕೆ ಉಚಿತ ಪರಿವರ್ತನೆಯನ್ನು ಕೊಡುವದಾಗಲೀ ಸುಲಭವಲ್ಲ. ಪರೀಕ್ಷಕ ಇಂಗ್ಲಿಷಿನವನಾಗಿ ಇಂಗ್ಲಿಷ್ ಮಾತಾಡುತ್ತ ಎದುರಿಗೆ ಕೂಡುವುದು ಕನಸಲ್ಲೂ ಕಾಣದಂತಹ ಘಟನೆ. ಇವೊತ್ತು ಕೂಡಾ, ಭಾರತದ ಅಥವಾ ಪಾಕೀಸ್ತಾನದ ಸಾಮಾನ್ಯನ ದೃಷ್ಟಿಯಲ್ಲಿ ಇಂಗ್ಲಿಷ್ ಭಾಷೆಯನ್ನು ಇಂಗ್ಲಿಷಿನವನ ಹಾಗೆ ತಡೆಬಡೆಯಿಲ್ಲದೇ ಮಾತಾಡುವವನು ವಿದ್ಯಾವಂತ. ಇಂತಹ ವಿದ್ಯಾವಂತನ ಎದುರು ಕೂತವನ ಮನಸ್ಸಿನಲ್ಲಿ ತುಂಬಿ ಬರುವ ಗೌರವ ಮಾತು ಕಸಿಯುವಂತಹ ನಮ್ರತೆಗೆ ಎಡೆಗೂಡುವದರಲ್ಲಿ ಆಶ್ಚರ್ಯವಿಲ್ಲ. ಇಂತಹ ಸಂದರ್ಭಕ್ಕೆ ಸಿಕ್ಕ ಒಂದು ಮಗುವಿನ ಕಾರ್ಯ ನಿರ್ವಹಣೆ ಪರಮಾವಧಿಯದಲ್ಲ. ಈ ತರಹದ ವರ್ತನೆ ಭಾರತಕ್ಕೇ ಸೀಮಿತವಾದದಲ್ಲ. ಇತ್ತೀಚಿನವರೆಗೂ ಬ್ರಿಟಿಷರು ಆಳುತ್ತಿದ್ದ ಎಲ್ಲ ದೇಶಗಳಲ್ಲೂ ಇಂತಹದ ನಮ್ರ ಸ್ವಭಾವ ಸಾಮಾನ್ಯವಾಗಿ ಕಂಡುಬಂದಿರುವುದು ತಿಳಿದ ವಿಷಯ. ಇಂಗ್ಲಿಷ್ ಪರೀಕ್ಷಕನ ಪರಿಕೀಯತೆ. ಅವನ ಇಂಗ್ಲಿಷಿನ ಉಪಯೋಗ ಕಪ್ಪು ಹಾಗೂ ಕಂದು ಜನರಿರುವ ಕಾಡಿನಲ್ಲಿ ಪರೀಕ್ಷೆಗೆ ಕೂತವನ ವರ್ತನೆಯನ್ನು ವಿಕೃತಗೊಳಿಸುತ್ತವೆ. ಉದಾಹರಣೆಗೆ, ಕೆನಡಿ ಅವರು ನಡೆಸಿದ ಒಂದು ಸಂಶೋಧನೆಯನ್ನು ನೋಡಬಹುದು. ಪರೀಕ್ಷಕನ ಹಾಗೂ ಪರೀಕ್ಷೆಗೆ ಕೂತವನ ನಡುವಿಗಿರುವ ಒಮ್ಮತದ ಸಂಬಂಧಕ್ಕೂ ಮಕ್ಕಳ ಬುದ್ಧಿಮಟ್ಟಕ್ಕೂ ಇರುವ ಸಂಬಂಧವನ್ನು ಸಂಶೋಧಿಸುವದೇ ಅವರ ಉದ್ದೇಶವಾಗಿತ್ತು. ಪರೀಕ್ಷಕರಲ್ಲಿ ಹಾಗೂ ಪರೀಕ್ಷೆಗೆ ಕೂತವರಲ್ಲಿ ನೀಗ್ರೋಗಳೂ ಬಿಳಿಯರೂ ಇದ್ದದ್ದು ಈ ಸಂಶೋಧನೆಯ ವೈಶಿಷ್ಟ್ಯ. ಎರಡೂ ಗುಂಪುಗಳ ಕೆಲವೊಂದು ಮಕ್ಕಳಿಗೆ ಮೊದಲು ಪರೀಕ್ಷೆ ಮಾಡಿದವರು ಬಿಳಿಯರು, ಮಕ್ಕಳು ಮತ್ತು ಪರೀಕ್ಷಕರು ಒಂದೇ ಬಣ್ಣದವರಾದಾಗ ಮಕ್ಕಳ ಬುದ್ಧಿಮಟ್ಟ ಸರಾಸರಿ 6 ಅಂಶಗಳಷ್ಟು ಹೆಚ್ಚಾಗಿದ್ದದ್ದು ಕಂಡುಬಂತು.

ಪರೀಕ್ಷಕನ ಮೈಬಣ್ಣ ಹಾಗೂ ಅವನು ಉಪಯೋಗಿಸುವ ಭಾಷೆ ಪರೀಕ್ಷೆಗೆ ಕೂತವನ ಮೇಲೆ ಎಂತಹ ಪರಿಣಾಮಗಳನ್ನು ಹೊಂದಿದೆಯೆನ್ನುವದನ್ನು ಇತರ ಸಂಶೋಧಕರೂ ಅಭ್ಯಾಸ ಮಾಡಿದ್ದಾರೆ. ಈ ದಿಕ್ಕಿನಲ್ಲಿ ಕಾಟ್ಸ್ ಮಾಡಿದ ಪ್ರಯತ್ನ ಸ್ತುತ್ಯವಾದದ್ದು. ಒಬ್ಬ ವ್ಯಕ್ತಿ ಕೈಗೊಳ್ಳುವ ಕಾರ್ಯದಲ್ಲಿ ಜಯಪ್ರದನಾಗುವದಕ್ಕೆ ಮಾಡುವ ಪ್ರಯತ್ನ, ಅವನೊಳಗಿರುವ ಉದ್ದೇಶಕ್ಕೂ, ಯಶಸ್ವಿನ ಸಂಭವ ಸಾಧ್ಯತೆಯ ಬಗೆಗೆ ಅವನಂದುಕೊಂಡಿರುವದಕ್ಕೂ ಅನುಸಾರಿ ಸಂಬಂಧ ಹೊಂದಿದೆ ಅನ್ನುವ ಆಧಾರ ಕಲ್ಪನೆಯಿಂದ ಹೊರಟವರು ಕಾಟ್ಸ್. ಕೆಲವು ನೀಗ್ರೋ

ಯುವಕರಿಗೆ ಅಂಕಿ–ಚಿಹ್ನೆಗಳ ಸಮಸ್ಯೆ ಕೊಟ್ಟು ಅವರ ಕಾರ್ಯ ನಿರ್ವಹಣೆಯನ್ನು ಬೇರೊಂದು ಕಾಲೇಜಿನ ಬಿಳಿಯ ಯುವಕರ ಕಾರ್ಯ ನಿರ್ವಹಣೆಯ ಜೊತೆಗೆ ಹೋಲಿಸುವುದಾಗಿ ತಿಳಿಸಿದರು. ನೀಗ್ರೋ ಯುವಕರನ್ನು ಮೂರು ಗುಂಪಾಗಿ ವಿಂಗಡಿಸಿ, ಒಂದು ಗುಂಪಿಗೆ ಅವರೇನು ಮಾಡಿದರೂ ಬಿಳಿಯ ಯುವಕರ ಮಟ್ಟಕ್ಕೆ ಬರುವುದು ಅಸಾಧ್ಯವೆಂದೂ, ಇನ್ನೊಂದು ಗುಂಪಿಗೆ ಅವರ ನಿರ್ವಹಣೆ ಬಿಳಿಯ ಯುವಕರ ನಿರ್ವಹಣೆಯ ಮಟ್ಟಕ್ಕೆ ಬರುವುದು ಸಾಧ್ಯವೆಂದೂ, ಮೂರನೇ ಗುಂಪಿಗೆ ಅವರ ನಿರ್ವಹಣೆ ಬಿಳಿಯರದಕ್ಕಿಂತ ಉತ್ತಮತರವಾಗಬಹುದೆಂದೂ ತಿಳಿಸಿದರು. ಅರ್ಧ ಜನಕ್ಕೆ ನೀಗ್ರೋ ಪರೀಕ್ಷಕರೂ ಇನ್ನರ್ಧ ಜನಕ್ಕೆ ಬಿಳಿಯ ಪರೀಕ್ಷಕರೂ ಪರೀಕ್ಷೆ ಕೊಟ್ಟರು. ಜಯಪ್ರದವಾಗುವ ಸಂಭವ ಕಡಿಮೆಯೆಂದುಕೊಂಡಿದ್ದ ಮೊದಲನೇ ಗುಂಪು ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದು ನೀಗ್ರೋ ಪರೀಕ್ಷಕರ ಸಮ್ಮುಖದಲ್ಲಿ ಸೋಲು ಮನೋಭಾವದಿಂದ ಕೆಲಸ ಶುರು ಮಾಡಿದವರು ಬಿಳಿಯ ಪರೀಕ್ಷಕರೆದುರು ಇನ್ನಷ್ಟು ಸೋತರು. ತಾವು ಬಿಳಿಯರಿಗಿಂತ ಉತ್ತಮವಾಗಿ ಕೆಲಸ ಮಾಡುತ್ತೇವೆಂದು ನಂಬಿದ್ದವರಿಗೆ ಪರೀಕ್ಷಕನ ಮೈ ಬಣ್ಣ ಅಸಂಗತವಾಗಿತ್ತು. ಜಯಪ್ರದವಾಗುವುದಕ್ಕೆ ತಮಗಿದ್ದ ಸಾಧ್ಯತೆಯ ಕಡೆಗೆ ಅವರು ಗಮನ ಹರಿಸದೇ ಪರೀಕ್ಷೆಯ ಸಂದರ್ಭವನ್ನು ತಮ್ಮ ಸಾಹಸ ಬುದ್ಧಿಗೆ ಕೊಟ್ಟ ಆಹ್ವಾನವೆಂದುಕೊಂಡರು. ನೀಗ್ರೋ ಹಾಗೂ ಬಿಳಿಯ ಯುವಕರಲ್ಲಿ ಬಾಹ್ಯಸ್ಥವಾಗಿರುವ ಉತ್ತೇಜಿನಕ್ಕಿರುವ ಅಗತ್ಯದಲ್ಲಿ ವ್ಯತ್ಯಾಸವಿದೆಯೆಂದು ಪ್ರಮಾಣಪೂರ್ವಕವಾಗಿ ತೋರಿಸಿಕೊಟ್ಟಿದ್ದು ಈ ಸಂಸೋಧನೆಯ ಹೆಚ್ಚಳ.

ಮಕ್ಕಳ ಕಾರ್ಯ ನಿರ್ವಹಣೆಯ ಮಟ್ಟ ಹೊರಗಿನವರ ಅಂದರೆ ಬಾಹ್ಯಸ್ಥದಾಗಿರುವ ಅಪೇಕ್ಷೆಗೆ ಅನುಸಾರಿಯಾಗಿರುವ ಸಂದರ್ಭದಲ್ಲಿ ಈ ತರಹದ ಸಂಶೋಧನೆ ಮುಖ್ಯವಾಗುವುದು. ಭಾರತದ ಮಕ್ಕಳ ಸಾಧನೆ ಬಹುಮಟ್ಟಿಗೆ ಅಪ್ಪಅಮ್ಮಂದಿರ ನಿರೀಕ್ಷೆಯ ಪ್ರತಿಫಲನ. ಸಮಾಜ ಅಪೇಕ್ಷಿಸುವ ಮಟ್ಟ ಮುಟ್ಟುವುದೇ ಬದುಕಿನ ಏಕೈಕ ಉದ್ದೇಶವಾಗಿಬಿಡುವಷ್ಟು ಒತ್ತಾಯ.

ಶಾಬ್ದಿಕವಲ್ಲದ ಬುದ್ಧಿಮಾಪಕಗಳನ್ನು ಉಪಯೋಗಿಸಿದಾಗಲೂ ಪರೀಕ್ಷಕನ ಪರೀಕ್ಷೆಗೆ ಕೂತವನ ನಡುವೆ ಮಾತು ಅನಗತ್ಯವಲ್ಲ. ಅಪ್ಪಣೆ ಕೊಡುವುದಕ್ಕೆ ಪರೀಕ್ಷಕ ಉಪಯೋಗಿಸುವ ಭಾಷೆ ಅವನ ಮೈ ಬಣ್ಣದಷ್ಟೇ ಮುಖ್ಯ–ಪರೀಕ್ಷೆಗೆ ಕೂತವನ ಕಾರ್ಯ ನಿರ್ವಹಣೆಯ ಮೇಲೆ ಪ್ರಭಾವ ಹೊಂದಿರುವಂತಹದು. ಪರೀಕ್ಷೆಯ ಸಂದರ್ಭದಲ್ಲಿ ಮಾತು ಉಪಯೋಗಿಸದೇ ಕೇವಲ ಭಾವಾಭಿನಯಗಳ ಮೂಲಕ ಅಪ್ಪಣೆ ಕೊಡುವ ಪ್ರಯತ್ನವನ್ನೂ ಸಂಶೋಧಕರು ಮಾಡಿರುವುದುಂಟು. ಅಂತಹ ಪರೀಕ್ಷೆಗಳು ಪತ್ತ ಕೃತಕವಾಗಿ ಅರ್ಥಹೀನವಾದದ್ದು ಆಶ್ಚರ್ಯದ ವಿಷಯವಲ್ಲ.

ಸಂಕೀರ್ಣವಾದ ಸಮಸ್ಯೆಗಳಿಗೆ ಭಾವಾಭಿನಯದ ಮೂಲಕ ಅಪ್ಪಣೆ ಕೊಡುವುದು ಕಷ್ಟ. ಅಪ್ಪಣೆಯನ್ನು ಇಂಗ್ಲೀಷಿನಿಂದ ನೆಲದ ಭಾಷೆಗೆ ತರ್ಜುಮೆ ಮಾಡಿ ನೋಡುವುದೂ ನಡೆದಿದೆ. ಸಮಾನಾರ್ಥವೆಂದು ಬಳಸಿದ ಮಾತಿಗೆ ಸ್ಥಳೀಯವಾದ ವಿಶೇಷಾರ್ಥವಿದ್ದು ಪರೀಕ್ಷೆಗೆ ಕೂತವನ ಮನಸ್ಸಿನಲ್ಲಿ ಅಪೇಕ್ಷಿತವಲ್ಲದ, ಅನಿರೀಕ್ಷಿತ ವಾದ, ಸಂಬಂಧ ಕಲ್ಪನೆಯಾಗಿ ಗೊಂದಲಕ್ಕೆ ಕಾರಣವಾಗಿರುವ ಸನ್ನಿವೇಶಗಳೂ ಹೇರಳವಾಗಿವೆ.

ಭಾಷೆಯ ಈ ಸಮಸ್ಯೆಗೆ ಪರಿಹಾರ ದುಬಾಸಿಯೊಬ್ಬನ ಉಪಯೋಗದಲ್ಲಿ ಎಂದು ಮೊದಲ ನೋಟಕ್ಕೆ ಅನ್ನಿಸಬಹುದು. ಪರೀಕ್ಷೆಗೆ ಕೂತವನ ಬುಡಕಟ್ಟಿಗೇ ಸೇರಿದ ಒಬ್ಬ ವ್ಯಕ್ತಿ ಪರೀಕ್ಷೆಯ ಸಂದರ್ಭದಲ್ಲಿದ್ದರೆ ಅದು ತನ್ನದೇ ಆದ ಸಮಸ್ಯೆ ಗಳಿಗೆ ಕಾರಣವಾಗುತ್ತದೆ. ಸಂಶೋಧನೆಯಲ್ಲಿ ಹೊಸ ಅಸ್ಥಿರಾಂಶವೊಂದು ತಲೆಹಾಕಿ ಕೊನೆಯ ತೀರ್ಮಾನಗಳ ಯಥಾರ್ಥತೆಯ ಪ್ರಶ್ನೆ ಏಳುತ್ತದೆ. ಭಿನ್ನ ಸಂಸ್ಕೃತಿಗಳ ಎರಡು ಗುಂಪುಗಳನ್ನು ಹೋಲಿಸಿ ನೋಡುವಾಗ ದುಬಾಸಿಯೊಬ್ಬನ ಉಪಯೋಗ ಅಸಾಧುವೆಂದು ಬಿಡಿಸಿ ಹೇಳಬೇಕಾಗಿಲ್ಲ. ಸಾಮಾನ್ಯವಾಗಿ ದುಬಾಸಿಯಾದವನು ಸಮಾಜದ ಗಣ್ಯ ವ್ಯಕ್ತಿಗಳಲ್ಲೊಬ್ಬ. ಕಾರ್ಖಾನೆಯ ಪರಿಸರದಲ್ಲಿ ಪರೀಕ್ಷೆ ನಡೆಯು ವಾಗ ಕೆಲಸಗಾರರ ಮೇಲ್ವಿಚಾರಕನೇ ದುಬಾಸಿ; ಶಾಲೆಯ ಮಕ್ಕಳು ಪರೀಕ್ಷೆಗೆ ಬಂದಾಗ ಉಪಾಧ್ಯಾಯ ದುಬಾಸಿ. ಕೆಲಸಗಾರರೇ ಆಗಲಿ, ಮಕ್ಕಳೇ ಆಗಲಿ. ಅವರ ದೃಷ್ಟಿಯಲ್ಲಿ ದೊಡ್ಡವನೆನಿಸಿಕೊಂಡವನು ಪರೀಕ್ಷೆಯಲ್ಲಿ ಅವರು ಮಾಡುವದನ್ನು ನೋಡುತ್ತ ಕೂತಾಗ ಹಿಂಜರಿಯುವುದು ಸಹಜ. ಅಧಿಕಾರ ವರ್ಗದ ಪ್ರತಿನಿಧಿ ಯಾಗಿರುವ ದುಬಾಸಿ ತಮ್ಮ ಬಗೆಗೆ ಏನು ಚಿಂತಿಸುತ್ತಿದ್ದಾನೋ ಅನ್ನುವ ಆತಂಕ. ದುಬಾಸಿಯ ಉಪಯೋಗದಲ್ಲಿ ಇನ್ನೂ ಒಂದು ಸಮಸ್ಯೆ ಇದೆ: ಆತ ಮಾಡಬೇಕಾದ ಕೆಲಸವಷ್ಟನ್ನೇ ಮಾಡಿ ನಿರಾಸಕ್ತಿಯಿಂದ ಇರುವುದು ಅಪರೂಪ. ಉದ್ದೇಶಪಿಲ್ಲದೆ ಹೋದರೂ, ಅನಗತ್ಯವಾದ ಒಂದು ಮಾತನ್ನಾಡಿ ಅಥವಾ ಭಾವಾಭಿನಯದ ಮೂಲಕ ಕಾರ್ಯ ನಿರ್ವಹಣೆಯ ಬಗೆಗೆ ಟೀಕೆ ಮಾಡುವುದು ಸಾಮಾನ್ಯ ವಿಷಯ. ಇಂತಹ ದೋಷ ಹೊಕ್ಕ ಸಂಶೋಧನೆಯ ತೀರ್ಮಾನ ಅಶುದ್ಧ.

ಪರೀಕ್ಷೆಗೆ ಕೂತವನು ತರುವ ಅನುಭವಗಳಿಗೂ ಪರೀಕ್ಷಕ ಒಡ್ಡುವ ಸಮಸ್ಯೆಗಳಿಗೂ ಇರುವ ಸಾಂಗತ್ಯಕ್ಕೆ ಅನುಸಾರಿಯಾಗಿ ಅವನ ಕಾರ್ಯಪ್ರೇರಣೆಯ ಪ್ರಮಾಣ. ಪರೀಕ್ಷೆಯ ಉದ್ದೇಶ ಅವನಿಗೆ ಸ್ಪಷ್ಟವಾಗದೇ ಹೋದಾಗ ಅದು ಅವನಿಗೆ ಹುಡುಗಾಟವಾಗಿ ಕಾಣುವುದು ಸಾಧ್ಯ. ಹೀಗಾದಾಗ ಅವನ ಕಾರ್ಯ ಪ್ರೇರಣೆಯ ಮಟ್ಟ ಕೆಳಗಿಳಿಯುವುದು ಅನಿವಾರ್ಯ. ಅನುಭವಕ್ಕೂ ಸಮಸ್ಯೆಗೂ ನಡುವೆ ಇರಬೇಕಾದ ಸಾಂಗತ್ಯದ ಮಾತು ಶಾಬ್ದಿಕ ಸಮಸ್ಯೆಗಳ ಸಂದರ್ಭದಲ್ಲಿ ಅತಿ

ಮುಖ್ಯವಾದದ್ದು. ಪಾಶ್ಚಾತ್ಯ ದೇಶಗಳ ಎಷ್ಟೋ ಶಾಬ್ದಿಕ ಬುದ್ಧಿ ಮಾಪಕಗಳಲ್ಲಿರುವ ಸಮಸ್ಯೆಗಳು ಬೇರೆ ಜನರಿಗೆ ಅರ್ಥಹೀನವಾಗಿ ಕಂಡಿವೆ. ಆ ಸಮಸ್ಯೆಗಳ ಬದಲು, ಅದೇ ಕೌಶಲಪನ್ನು ಪರೀಕ್ಷಿಸುವ ಹಾಗೂ ಪರೀಕ್ಷೆಗೆ ಕೂತವನ ಪರಿಸರಕ್ಕೆ ಹೊಂದಿಕೊಂಡಂತಹ ಸಮಸ್ಯೆಗಳನ್ನು ಸೃಷ್ಟಿಸುವುದು ಸುಲಭವಲ್ಲ. ಉದಾಹರಣೆಗೆ, ಕೆಂಟಕಿಯ ಗುಡ್ಡನಾಡಿನ ಅನಕ್ಷರಸ್ಥರನ್ನು ಪರೀಕ್ಷೆ ಮಾಡುವಾಗ ಪ್ರೆಸ್ಸಿ[6] ಅವರಿಗಾದ ಅನುಭವವನ್ನು ನೋಡಬಹುದು :

ಸ್ಟಾನ್‌ಫರ್ಡ್–ಬೀನೇ ಅವರ ಮಾಪಕದ ಅಮೆರಿಕಾ ಪಾಠಾಂತರವನ್ನು ಬಳಸುತ್ತಿದ್ದ ಪರೀಕ್ಷಕ ಕೇಳಿದ : 'ಅಂಗಡಿಗೆ ಹೋಗಿ ನೀನು ಆರು ಸೆಂಟುಗಳ ಮಿಠಾಯಿ ಕೊಂಡು ಅಂಗಡಿಯವನಿಗೆ ಹತ್ತು ಸೆಂಟಿನ ಬಿಲ್ಲೆ ಕೊಟ್ಟಾಗ ಅವನು ಚಿಲ್ಲರೆಯೆಷ್ಟು ?' ಹುಡುಗ ಉತ್ತರ ಕೊಟ್ಟ : 'ನನ್ನ ಹತ್ತಿರ ಹತ್ತು ಸೆಂಟು ಎಂದೂ ಇದ್ದದ್ದಿಲ್ಲ ; ಅದೂ ಅಲ್ಲದೆ, ಮಿಠಾಯಿ ಮಾಡುವವಳು ನನ್ನ ಅಮ್ಮ.' ಪರೀಕ್ಷಕ ಅಷ್ಟಕ್ಕೇ ಬಿಡಲಿಲ್ಲ : 'ಮೇವಿಗೆಂದು ನೀನು ಹತ್ತು ಹಸುಗಳನ್ನು ಅಟ್ಟಿಕೊಂಡು ಹೋದಾಗ ಆರು ಹಸುಗಳು ತಲೆ ತಪ್ಪಿಸಿಕೊಂಡರೆ ನೀನು ಮನೆಗೆಷ್ಟು ಹಸುಗಳನ್ನು ಕರೆದುಕೊಂಡು ಬರುತ್ತೀ ?' ಹುಡುಗ ಹೇಳಿದ : 'ನಮ್ಮ ಹತ್ತಿರ ಹತ್ತು ಹಸುಗಳಿಲ್ಲ. ಇದ್ದವೆಂದುಕೊಂಡರೂ ಆರು ಹಸುಗಳು ತಪ್ಪಿಸಿಕೊಂಡಾಗ ನಾನು ಮನೆಗೇ ಹಿಂದಿರುಗುತ್ತಿರಲಿಲ್ಲ.' ಕಟ್ಟ ಕಡೆಯ ಪ್ರಯತ್ನ ಮಾಡಿದ ಪರೀಕ್ಷಕ ಕೇಳಿದ : 'ಒಂದು ತರಗತಿಯ ಹತ್ತು ಮಕ್ಕಳಲ್ಲಿ ಆರಕ್ಕೆ ದಡಾರ ಬಂದಾಗ ತರಗತಿಯಲ್ಲಿ ಉಳಿದವರೆಷ್ಟು ?' ಹುಡುಗ ಉತ್ತರ ಕೊಟ್ಟ : 'ಒಬ್ಬನೂ ಇರಲಾರ–ಎಲ್ಲರಿಗೂ ಅಂಟುಜಾಡ್ಯದ ಹೆದರಿಕೆ ತಾನೇ ?' ಅಂತೂ, ಹತ್ತರಿಂದ ಆರನ್ನು ಕಳೆದು ಉತ್ತರ ಕೊಡುವುದು ಹುಡುಗನಿಗೆ ತಿಳಿದಿದೆಯೋ ಅನ್ನುವದನ್ನು ಕಂಡುಹಿಡಿಯುವ ಪ್ರಯತ್ನ ವ್ಯರ್ಥವಾಯಿತು.

ಪರೀಕ್ಷೆಗೆ ಶಾಬ್ದಿಕವಲ್ಲದ ಮಾಪಕವನ್ನು ಉಪಯೋಗಿಸಿದಾಗಲೂ ಸಾಂಗತ್ಯದ ಆವಶ್ಯಕತೆಯನ್ನು ಮರೆಯುವಂತಿಲ್ಲ. ಕೆಲವೊಂದು ಸಂದರ್ಭಗಳಲ್ಲಿ ಪಾಶ್ಚಾತ್ಯ ದೇಶದ ಸಮಸ್ಯೆಯೊಂದರ ಉಚಿತ ರೂಪಾಂತರ ಸಾಧ್ಯವೆನ್ನುವದಕ್ಕೆ, ನೈಜೀರಿಯಾದ ಟೀವ್ ಬುಡಕಟ್ಟಿಗಿರುವ ಗಾತ್ರ ಸ್ಥಾಯಿತ್ವದ ಭಾವನೆಯನ್ನು ಅಭ್ಯಾಸ ಮಾಡಿದ ಪ್ರೈಸ್ ವಿಲಿಯಮ್ಸ್[7] ಅವರ ಸಂಶೋಧನೆಯೇ ಸಾಕ್ಷಿ. ಅಖಂಡವಾದ ಹಾಗೂ ವಿಚ್ಛಿನ್ನವಾದ ಮೊತ್ತಗಳ ನಿದರ್ಶನಕ್ಕೆ ಅವರು ಮಣ್ಣನ್ನೂ ಬೀಜಗಳನ್ನೂ ಉಪಯೋಗಿಸಿದಾಗ ಜನಕ್ಕೆ ಒಡ್ಡಿದ ಸಮಸ್ಯೆ ಅರ್ಥವಾಗಿ ಪರಿಹರಿಸುವ ಕುತೂಹಲ ಮೂಡಿತು. ಈ ತರಹದ ಯಶಸ್ವೀ ರೂಪಾಂತರ ಎಲ್ಲ ಸಂದರ್ಭಗಳಲ್ಲೂ ಸಾಧ್ಯವಾಗುವುದಿಲ್ಲ. ರಾಟೆಯೆಳೆಯುವ ಗಂಡಸರ ಚಿತ್ರಕ್ಕೆ ಬದಲು ಬಾವಿಯಿಂದ ನೀರು

ಸೇದುವ ಹೆಂಗಸರ ಚಿತ್ರ ; ಹೆಗಲ ಕೋಲು ಹೊತ್ತ ಗಂಡಸರ ಚಿತ್ರಕ್ಕೆ ಬದಲು ತಲೆಗೆ ಹೊರೆಯಿಟ್ಟ ಹೆಂಗಸರ ಚಿತ್ರ—ಸಾಂಸ್ಕೃತಿಕವಾಗಿ ಸುಸಂಗತವಾಗಿದೆಯೆಂದು ಸಮಸ್ಯೆಗಳಲ್ಲಿ ಮಾಡಿದ ಬದಲಾವಣೆಗಳು ಸಾಧುವೆನಿಸಿದರೂ ಪ್ರಯತ್ನ ವ್ಯರ್ಥವಾಯಿತು. ದಕ್ಷಿಣ ಆಫ್ರಿಕದ ಆ ಜನಕ್ಕೆ ಕೊಟ್ಟ ಗುಡಿಸಿಲುಗಳ, ಪಾತ್ರೆಗಳ ಹಾಗೂ ವಾದ್ಯಗಳ ಚಿತ್ರ; ಅಸಂಬದ್ಧತೆಯನ್ನು ಗುರುತಿಸುವ ಕೌಶಲದ ಅಳತೆಗಾಗಿ ದಿಬ್ಬದ ನೆತ್ತಿಯ ಕಡೆಗೆ ಹರಿಯುವ ನದಿಯ ಚಿತ್ರ ಅಥವಾ ಹಸುವಿನ ಬೆನ್ನಿಗೆ ಹಿಂಬಾಲಿಸುವ ಕತ್ತೆ ಮರಿಯ ಚಿತ್ರ—ಸಾಂಸ್ಕೃತಿಕವಾಗಿ ಉಚಿತವಾಗಿದ್ದರೂ ಚಿತ್ರಕಲೆಯನ್ನೇ ಕಂಡರಿಯದ ಜನಕ್ಕೆ ಪ್ರತಿರೂಪಿಸಿದ್ದ ವಸ್ತುಗಳ ಗುರುತು ಸಿಗದೇ ಹೋಗಿ ಪ್ರಯತ್ನ ನಿಷ್ಫಲವಾಯಿತು.

ಆಫ್ರಿಕದ ನಾಡಿಗರಿಗೆ ಛಾಯಾಚಿತ್ರವನ್ನು ಆಧಾರವಾಗಿಟ್ಟುಕೊಂಡು ತ್ರಿಪರಿಮಾಣದ ವಸ್ತುವೊಂದನ್ನು ಕಲ್ಪಿಸಿಕೊಳ್ಳುವ ಕೆಲಸ ಕಷ್ಟವೆಂದು ಮೊದಲು ತೋರಿಸಿಕೊಟ್ಟವರು ಬಿಶ್‌ಪಲ್[8] ಛಾಯಾ ಚಿತ್ರದ ಮಾದರಿಯಲ್ಲಿ ಅಡಕವಾಗಿರುವ ಅಂಗಗಳ ಪೃಥಕ್ಕರಣ ಸ್ವಾಧ್ಯವಾಗದೇ ಅವರಿಗೆ ವಸ್ತುಸಂಘಟನೆಯ ಕೆಲಸ ಅಸಾಧ್ಯವಾಯಿತು. ಸಂಶೋಧಕ ಅಮೂರ್ತ ಪದ್ಧತಿಯ ಚಿತ್ರಗಳನ್ನು ಉಪಯೋಗಿಸಿದಾಗಲೂ ಇದೇ ಬಗೆಯ ಸಮಸ್ಯೆ ತಲೆದೋರಿತು. ಮೊದಲಿಗೆ ಅಂತಹ ಚಿತ್ರಗಳಿಗೆ ಸಾಂಗತ್ಯವಿಲ್ಲದ್ದು; ಜೊತೆಗೆ ಆ ನಮೂನೆಗಳು ಕಾಗದದ ಮೇಲೆ ಕಂಡಿದ್ದು; ಜನ ದಿನನಿತ್ಯದ ಉಪಯೋಗಿಸುವ ವಸ್ತುಗಳ ಮೇಲೆ ಅಲಂಕಾರವಾಗಿ ಮಾತ್ರ ಪರಿಚಯವಿದ್ದ ನಮೂನೆ ಒಮ್ಮೆಗೇ ವಸ್ತುಗಳಿಂದ ಎದ್ದು ಬಂದು ಕಣ್ಣೆದುರಿಗೆ ನಿಂತಾಗ ಅದರ ಅರ್ಥ ಇಂಗಿತು.

ಸಂಶೋಧಕ ಒಡ್ಡುವ ಸಮಸ್ಯೆಗೆ ಎಂತಹದೊ ಅಸಂಬಂದ್ಧವಾದ ಪರಿಹಾರ ಕೊಟ್ಟು ಕೈ ಕಟ್ಟಿಕೊಂಡು ಕೂತುಬಿಡುವುದು ಹಿಂದುಳಿದ ಜನಗಳಲ್ಲಿ ಸಾಮಾನ್ಯ. ಕೋಸ್ ಇಟ್ಟಿಗೆಗಳಂತಹ (Kohes Blocks) ಅಮೂರ್ತ ಪದ್ಧತಿಯ ನಮೂನೆಗಳುಳ್ಳ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಈ ಮಾತು ಇನ್ನಷ್ಟು ಸತ್ಯ. ಪರೀಕ್ಷಕ ಕೊಟ್ಟಅಪ್ಪಣೆ ಎಳ್ಳಷ್ಟೂ ಅರ್ಥವಾಗದೇ ವ್ಯಕ್ತಿ ತನಗನ್ನಿಸಿದ ಯಾವುದೋ ಕೆಲಸವನ್ನು ಮಾಡಹೊರಡುವುದು ಒಂದು ಕಾರಣವಾಗಿರಬಹುದು. ದ್ವಿಪರಿಮಾಣದ ಚಿತ್ರದ ಆಧಾರದಿಂದ ತ್ರಿಪರಿಮಾಣದ ನಮೂನೆ ಕಟ್ಟುವಾಗಂತಲೂ ವ್ಯಕ್ತಿಯ ಪ್ರಯತ್ನಕ್ಕೂ ಇಟ್ಟುಕೊಳ್ಳಬೇಕಾದ ಗುರಿಗೂ ಸಂಬಂಧವೇ ಇಲ್ಲದ್ದು ಸಾಮಾನ್ಯವಾಗಿ ಕಾಣುವ ವಿಷಯ. ಪರಿಹಾರ ಸಮರ್ಪಕವೆನಿಸಿದಾಗಲೂ, ಉದ್ದೇಶಿತವಾದ ನಮೂನೆಯಿಂದ 45,90 ಅಥವಾ 180 ಡಿಗ್ರಿಗಳ ಸ್ಥಳ ವಿನ್ಯಾಸ ಪಲ್ಲಟ; ಇಟ್ಟಿಗೆಗಳನ್ನು ಒಂದು ಕೈಯಿಂದಲೋ ಅಥವಾ ಎರಡನ್ನು ಒಟ್ಟೊಟ್ಟಿಗೆ ಎರಡು ಕೈಗಳಿಂದ

ಇಟ್ಟು ನೋಡುವ ಕ್ರಮ; ಕೈಗೆತ್ತಿಕೊಂಡ ಇಟ್ಟಿಗೆ ನಮೂನೆಯ ದೃಷ್ಟಿಯಿಂದ ಅಸಮರ್ಪಕವೆಂದು ನಿಶ್ಚಯಿಸದಾಗಲೂ ಬದಲು ಎತ್ತಿಕೊಳ್ಳುವುದು ಮೊದಲ ತರಹದ ಇನ್ನೊಂದನ್ನು; ನಮೂನೆಗೆ ಬೇಕಾದ ಇಟ್ಟಿಗೆಗಳ ನಡುವೆ ಪರಸ್ಪರ ಸ್ಥಾನ ಸಂಬಂಧವಿದೆಯೆನ್ನುವದನ್ನು ನಿರ್ಲಕ್ಷಿಸಿ ಉಂಡೆ ತೋಚಿಕೆಯ ಆಧಾರದ ಮೇಲೇ ನಡೆಸುವ ಪ್ರಯತ್ನ ; ನೀಡಿದ ಉತ್ತರ ಸರಿಯಲ್ಲವೆಂದು ಹೇಳಿದಾಗಲೂ ಯಾಕೆಂದು ಕಾಣದ ಅಸಹಾಯಕತೆ—ಪರೀಕ್ಷೆಯ ಸಮಯದಲ್ಲಿ ಹಿಂದುಳಿದ ಜನಕ್ಕೆ ಸಾಮಾನ್ಯವಾದ ವರ್ತನೆ.

ಯಾವುದೇ ಬುದ್ಧಿಮಾಪಕವಾಗಲಿ, ಅದನ್ನು ಒಂದು ಬಾರಿ ಮಾತ್ರಾ ಉಪಯೋಗಿಸಿ ಅದು ಕೊಡುವ ಅಳತೆಯನ್ನು ಭಿನ್ನ ಸಂಸ್ಕೃತಿಗಳ ಸಂದರ್ಭದಲ್ಲಿ ಉಪಯೋಗಿಸುವುದು ತಪ್ಪೆಂದು ಹೇಳುವ ಮನೋವಿಜ್ಞಾನಿಗಳಿದ್ದಾರೆ (ಆರ್ಟರ್[9] ಓಂಬ್ರೆಡೇನ್,[10] ಶ್ವಾರ್ಟ್ಸ್[11]) ಮೊದಲ ಸಂದರ್ಭವನ್ನು ಪಾಠಪ್ರವಚನೆಗೆ ಉಪಯೋಗಿಸುವುದು ಉಚಿತವೆನ್ನುವುದು ಅವರ ವಾದ. ಪರೀಕ್ಷೆಯ ಮೊದಲ ಸಂದರ್ಭವನ್ನು ಸರಳ ಮನಸ್ಸಿನ ವ್ಯಕ್ತಿ ಸೂಕ್ತ ಪ್ರತಿವರ್ತನೆಯನ್ನು ಕಲಿಯಲೆಂದು ಉಪಯೋಗಿಸಿದಾಗ ಅವನ ಕಾರ್ಯ ನಿರ್ವಹಣೆ ಮತ್ತೆ ಪರೀಕ್ಷೆಕೊಟ್ಟಾಗ ಉತ್ತಮವಾಗುವುದರಲ್ಲಿ ಸಂದೇಹವಿಲ್ಲ. ಹಿಂದುಳಿದ ಜನದ ಬುದ್ಧಿ ಪರೀಕ್ಷೆ ಮಾಡುವಾಗ ಎರಡನೆಯ ಅಥವಾ ಮೂರನೆಯ ಪರೀಕ್ಷೆ ಕೊಡುವ ಅಳತೆಯನ್ನು ಆಧಾರವಾಗಿಟ್ಟುಕೊಳ್ಳಬೇಕೆಂದು ಜೆನ್‌ಸನ್ ಹೇಳಿದ್ದಾರೆ; 'ಪ್ರತಿಕೂಲ ಪರಿಸರದ ಮಕ್ಕಳು ತಮ್ಮ ಪರಮಾವಧಿ ನಿರ್ವಹಣೆ ಕೊಡಬೇಕಾದರೆ ಕೊನೆಯ ಪಕ್ಷ ಎರಡು ಪರೀಕ್ಷೆಗಳಾದರೂ ಅಗತ್ಯ. ಮೊದಲನೆಯ ಪರೀಕ್ಷೆ ಅಭ್ಯಾಸಕ್ಕೆ ಪರೀಕ್ಷಕನ ಪರಿಚಯ ಮಾಡಿಕೊಳ್ಳುವದಕ್ಕೆ ಮಗುವೊಂದಕ್ಕೆ ಪರೀಕ್ಷೆಯ ಮೊದಲ ಅನುಭವ ಇದಾದಾಗ, ಪ್ರತಿಕೂಲ ಪರಿಸರದಿಂದ ಅದು ಬಂದಿರುವಾಗ, ಪರೀಕ್ಷಕನ ಕುಲ ಬೇರೆಯಾಗಿದ್ದಾಗ, ಮೊದಲ ಸಲಕ್ಕೇ ಬಂದ ಅಳತೆಯಲ್ಲಿ ನನಗೆ ವಿಶ್ವಾಸ ಕಡಿಮೆ.'

ಪರೀಕ್ಷೆ ಕೊಡುವ ಕ್ರಮದಲ್ಲಿ ಈ ತರಹದ ಬದಲಾವಣೆಗಳು ಸಾಧ್ಯವೇ ಅಲ್ಲವೇ ಅನ್ನುವುದು ಸಂಶೋಧನದ ಮೂಲೋದ್ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆ. ಹಿಂದುಳಿದ ಜನ, ಕಲಿಕೆಯೇ ಕಾರಣವಾಗಿ ಅಥವಾ ಅಭ್ಯಾಸ ಕಾರಣವಾಗಿ, ತಮ್ಮ ವರ್ತನೆಯಲ್ಲಿ ಎಷ್ಟರ ಮಟ್ಟಿಗೆ ಪರಿವರ್ತನೆಯನ್ನು ಸಾಧಿಸುತ್ತಾರೆ ಅನ್ನುವದನ್ನು ಕಂಡುಹಿಡಿಯುವುದೇ ಉದ್ದೇಶವಾದಾಗ ಈ ತರಹದ ಬದಲಾವಣೆಗಳಿಗೆ ಅಡ್ಡಿಯಿಲ್ಲ. ಮತ್ತೆ ಮತ್ತೆ ಅದೇ ಪರೀಕ್ಷೆಯನ್ನು ಕೊಟ್ಟು ನಾಡಿಗ ಕ್ರಮಕ್ರಮವಾಗಿ ತನ್ನ ಯುಕ್ತಿಯನ್ನು ಹೇಗೆ ಬದಲಾಯಿಸಿಕೊಳ್ಳುತ್ತಾನೆ ಅನ್ನುವದರ ಅಭ್ಯಾಸ ಮಾಡಬಹುದು. ಕೊಟ್ಟ ಅಪ್ಪಣೆಗಳನ್ನು ಅವನು ಎಷ್ಟರ ಮಟ್ಟಿಗೆ ಪರಿಪಾಲಿಸು

ತ್ತಾನೆ, ಹಿಡಿದ ಕೆಲಸವನ್ನು ಬಿಡದೇ ಮಾಡುವ ಛಲವಿದೆಯೇ, ಸಮಸ್ಯೆಯಲ್ಲಿ ಅವನ ಗಮನ ಕೇಂದ್ರೀಕೃತವಾಗಿದೆಯೇ – ಕಲಿಕೆ ಯಶಸ್ವಿಯಾಗಲು ಕಲಿಯುವನಿಗೆ ಅಗತ್ಯವಾದ ಈ ಗುಣಗಳು ಅವನಲ್ಲಿವೆಯೇ ಅನ್ನುವದನ್ನು ನೋಡಬಹುದು.

ಸಂಶೋಧನೆಯ ಉದ್ದೇಶ ಭಿನ್ನ ಸಂಸ್ಕೃತಿಗಳ ಹೋಲಿಕೆಯಾದಾಗ ಈ ತರಹದ ಬದಲಾವಣೆಗಳನ್ನು ಮಾಡುವುದು ಶಾಸ್ತ್ರ ಸಮ್ಮತವಲ್ಲ. ವ್ಯತ್ಯಸ್ಥವಾದ ಜನರ ವರ್ತನೆಗಳಲ್ಲಿ ಕಂಡುಬರುವ ಭೇದಗಳಿಗೆ ಪರಿಸರದ ಘಾತುಗಳಲ್ಲಿ ವಿವರಣೆ ಕೊಡುವ ಉದ್ದೇಶವಿದ್ದಾಗಲೂ ಈ ತರಹದ ಬದಲಾವಣೆಗಳು ಸಾಧುವಲ್ಲ. ಬದಲಾವಣೆ ಮಾಡದೇ ಹೋದಾಗ, ಒಂದು ಗುಂಪು ತನ್ನ ಪರಮಾವಧಿ ಕಾರ್ಯ ನಿರ್ವಹಣೆಯನ್ನು ಕೊಡುತ್ತಿರುವುದೂ ಇನ್ನೊಂದು ತನಗೆ ಸಾಧ್ಯವಾದದ್ದಕ್ಕಿಂತ ಕೆಳಮಟ್ಟದಲ್ಲಿ ಕೆಲಸ ಮಾಡುತ್ತಿರುವುದೂ ನಿಜ. ಹೀಗಾಗಿ, ಸಂಶೋಧನೆಯ ತೀರ್ಮಾನಗಳಿಗೆ ಬೆಲೆಯಿರದೇ ಹೋಗುವ ಸಂಭವವಿದೆ. ಬದಲಾವಣೆ ಮಾಡಿದರೂ ತಪ್ಪು, ಮಾಡದೇ ಹೋದರೆ ಒಂದು ಗುಂಪಿಗೆ ಅನ್ಯಾಯ–ಒಟ್ಟಿನಲ್ಲಿ, ಎರಡು ಗುಂಪುಗಳನ್ನು ಭಿನ್ನ ಸಂಸ್ಕೃತಿಗಳ ಸಂದರ್ಭದಲ್ಲಿ ಹೋಲಿಸಿ ನೋಡುವ ಸಂಶೋಧಕರ ಪಾಡು ಕಷ್ಟ.

ವ್ಯಕ್ತಿಯೇ ಆಗಲಿ ಅಥವಾ ಒಂದು ಗುಂಪೇ ಆಗಲಿ, ಪರಮಾವಧಿ ಕಾರ್ಯ ನಿರ್ವಹಣೆ ಕೊಡುವದಕ್ಕೆ ಕಾರಣವಾಗುವ ಪ್ರೇರಕ ಶಕ್ತಿ ಸ್ಪರ್ಧೆಯ ಬುದ್ಧಿ. ಈ ಪೈಪೋಟಿ ಉಳಿದವರ ಜೊತೆಗೆ ಹೂಡಿದ್ದಾಗಿರಬಹುದು ಅಥವಾ ವ್ಯಕ್ತಿಯ ಹಿಂದಿನ ಕಾರ್ಯ ನಿರ್ವಹಣೆಯ ವಿರುದ್ಧ ಹೂಡಿದ್ದಾಗಿರಬಹುದು. ಶಾಬ್ದಿಕವಲ್ಲದ ಎಷ್ಟೋ ಮಾಪಕಗಳಲ್ಲಿರುವ ಸಮಸ್ಯೆಗೆ ಪರಿಹಾರವನ್ನೊದಗಿಸುವದಕ್ಕೆ ನಿಗದಿಯಾದ ಕಾಲಾವಧಿ ಯಿರುವುದು ಸಾಮಾನ್ಯ. ಕಾಲಾವಧಿಗೆ ಮೊದಲೇ ಸಮಸ್ಯೆಯನ್ನು ಪರಿಹರಿಸಿದರೆ ಬೋನಸ್ ಅಂಕೆಗಳನ್ನು ಅಥವಾ ಬಕ್ಷೀಸನ್ನು ಕೊಡುವ ವ್ಯವಸ್ಥೆ ಇರುತ್ತದೆ. 'ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮಾಡು'–ಪರೀಕ್ಷಕನ ಮಾತು ಕೇಳಿ ಕೆಲಸ ಶುರು ಮಾಡುವವನ ವರ್ತನೆ ಬೇರೆ ಬೇರೆ ಸಾಂಸ್ಕೃತಿಕ ಪರಿಸರಗಳಲ್ಲಿ ಬೇರೆ ಬೇರೆ. ಸಮಾಜದಲ್ಲಿ ಚುರುಕಾಗಿ ಮಾಡಿದ ಕೆಲಸಕ್ಕೆ ಮರ್ಯಾದೆಯೇನು ಅನ್ನುವದನ್ನು ವ್ಯಕ್ತಿಯ ವರ್ತನೆ ಅನುಸರಿಸುತ್ತದೆ. ಸಾಮಾನ್ಯವಾಗಿ, ಪಾಶ್ಚಾತ್ಯ ದೇಶಗಳಲ್ಲಿ ಚುರುಕಾಗಿ ಮಾಡಿದ ಕೆಲಸಕ್ಕೆ ಹೆಚ್ಚು ಪ್ರಾಶಸ್ತ್ಯ; ಚುರುಕಾದ ಹುಡುಗನಿಗೆ ಹೆಚ್ಚು ಮರ್ಯಾದೆ. ಮನುಷ್ಯನ ಬುದ್ಧಿಯೆನ್ನುವ ಮೊತ್ತದ ಒಂದು ಮುಖ್ಯ ಅಂಗ ವೇಗವೆನ್ನುವ ನಂಬಿಕೆಯಿರುವ ಸಮಾಜಗಳಲ್ಲಿ ಚುರುಕಾಗಿ ಕೆಲಸ ಮಾಡ ಬೇಕೆಂಬುದು ಚಿಕ್ಕಂದಿನಿಂದ ರೂಢಿಯಾದ ಗುರಿ. ಇಂತಹ ಅಪೇಕ್ಷೆ, ವೇಗದ ಮೇಲಿರುವ ಇಂತಹ ಒತ್ತಾಯ, ಸಾರ್ವತ್ರಿಕವೆನ್ನುವ ನಂಬಿಕೆ ತಪ್ಪು.

ಕೆಲವೊಂದು ಸಮಾಜಗಳಲ್ಲಿನ ಸಂಪ್ರದಾಯ ಚುರುಕು ಬುದ್ಧಿಗೆ ಬೆಲೆಯೇ ಕೊಡುವುದಿಲ್ಲವೆಂದರೆ ಆಶ್ಚರ್ಯವಾಗುವುದು. ಇಂತಹ ಪರಿಸರದಲ್ಲಿ ಬೆಳೆದ ವ್ಯಕ್ತಿ ಪರೀಕ್ಷಕನ ಮಾತಿಗೆ ಕಿವಿ ಕೊಡದೇ ಕೊಟ್ಟ ಕೆಲಸವನ್ನು ನಿಧಾನವಾಗಿ ಅಚ್ಚುಕಟ್ಟಾಗಿ ಮಾಡುವದುಂಟು. ಕ್ಲೈನ್‌ಬರ್ಗ್[12] ವಿವರಿಸಿರುವ ಯಕೀಮಾ ಇಂಡಿಯನರ ವರ್ತನೆಯನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು :

ಆ ಸಂಶೋಧನೆಗಳಲ್ಲಿ ಉಪಯೋಗಿಸಿದ್ದು ಕೈಚಳಕದ ಒಂದು ಮಾಪಕ. ಪರೀಕ್ಷೆಗೆ ಕೂತವನು ಗಳಿಸಿದ ಅಂಕ ಕೆಲಸ ಮಾಡಲು ತೆಗೆದುಕೊಂಡ ಅವಧಿಗೂ ಮಾಡಿದ ತಪ್ಪುಗಳಿಗೂ ಅನುಸಾರವಾಗಿತ್ತು. ಪರೀಕ್ಷಕನ 'ಬೇಗ ಬೇಗ ಕೆಲಸ ಮಾಡು' ಅನ್ನುವ ಮಾತನ್ನು ಸಂಪೂರ್ಣವಾಗಿ ಮರೆತು ಕೆಲಸವನ್ನು ನಿಧಾನವಾಗಿ ಆದರೂ ಹುಷಾರಾಗಿ ಯಕೀಮಾ ಇಂಡಿಯನರು ಮಾಡಿದರು. ಬಿಳಿಯರಿಗೆ ಹೋಲಿಸಿ ನೋಡಿದಾಗ ಅವರ ಗತಿ ಮಂದತರವಾಗಿದ್ದರೂ ಅವರ ಕೆಲಸದಲ್ಲಿ ಬಿಳಿಯರು ಮಾಡಿದಷ್ಟು ತಪ್ಪಿರಲಿಲ್ಲ. ತಮ್ಮ ಸಂಶೋಧನೆ ಎತ್ತಿ ಹಿಡಿದದ್ದಕ್ಕೆ, ಯಕೀಮಾ ಸಮಾಜ ಚುರುಕಾಗಿ ಮಾಡಿದ ಕೆಲಸಕ್ಕಿಂತ ಚೊಕ್ಕವಾಗಿ ತಪ್ಪಿಲ್ಲದೆ ಮಾಡಿದ ಕೆಲಸಕ್ಕೆ ಹೆಚ್ಚಿನ ಮನ್ನಣೆ ಕೊಡುವುದೇ ಕಾರಣವೆಂದು ಕ್ಲೈನ್‌ಬರ್ಗ್ ಹೇಳಿದ್ದಾರೆ.

ಬ್ರಿಟನ್ನಿಗೆ ವಲಸೆಬಂದ ಭಾರತದ ಮಕ್ಕಳ ಬಗೆಗೂ ಈ ಮಾತು ಅನ್ವಯಿಸುವುದೆನ್ನುವುದು ವಿಚಾರ ಮಾಡಿದಾಗ ಹೊಳೆದೀತು. ಸಾಂಪ್ರದಾಯಿಕವಾಗಿರುವ ಎಲ್ಲ ಸಮಾಜಗಳಲ್ಲೂ ವೇಗಕ್ಕಿಂತ ಅಚ್ಚುಕಟ್ಟಿಗೆ ಹೆಚ್ಚು ಗೌರವವಿರುವದನ್ನು ಅನೇಕ ಸಮಾಜ ಶಾಸ್ತ್ರಜ್ಞರು ಗಮನಿಸಿರುವುದು ವಾಸ್ತವ ಸಂಗತಿ.

ಪರೀಕ್ಷೆಯ ಸಂದರ್ಭದ ಬಗೆಗಿರುವ ಮನೋಭಾವಕ್ಕೂ ಸಾಂಸ್ಕೃತಿಕ ಪರಿಸರವೇ ಕಾರಣವೆಂದು ಮೀಡ್[13] ಹೇಳಿದ್ದಾರೆ. ಸಮೋವಾದ ಮಕ್ಕಳಿಗೆ ಚೆಂಡು-ಹೊಲದ ಸಮಸ್ಯೆ ಕೊಟ್ಟಾಗ, ಅವರು ಮಾಡಬೇಕಾಗಿದ್ದದ್ದು ಹೊಲವೊಂದರಲ್ಲಿ ಕಳೆದುಹೋದ ಚೆಂಡೊಂದನ್ನು ಹುಡುಕುವದಕ್ಕೆ ಹಿಡಿಯುವ ದಾರಿಯನ್ನು ಗುರುತಿಸುವ ಕೆಲಸ. ಸಮೋವಾದ ಮಕ್ಕಳು ಚೆಂದದ ನಮೂನೆಗಳನ್ನು ಕಾಗದದ ತುಂಬ ರಚಿಸುವದಕ್ಕೆ ಆ ಅವಕಾಶವನ್ನು ಉಪಯೋಗಿಸಿದರೇ ಹೊರತು ಚೆಂಡು ಹುಡುಕುವ ಪ್ರಯತ್ನವನ್ನೇ ಮಾಡಲಿಲ್ಲ. ಖಾಲಿ ಹೊಲದ ಸೂಚಕವಾಗಿದ್ದ ಬಿಳಿ ಕಾಗದ ಕಂಡಾಗ ಅವರಲ್ಲಿ ಹುಟ್ಟಿದ್ದು ಕಲಾ ರಚನೆಯ ಉತ್ಸಾಹ.

ಇನ್ನೊಬ್ಬ ವ್ಯಕ್ತಿಯ ವಿರುದ್ಧ ಪೈಪೋಟಿ ಹೂಡುವುದು ಅನಾಗರಿಕತೆಯ ಲಕ್ಷಣವೆಂದು ನಂಬುವ ನಾಗರಿಕ ಸಮಾಜಗಳೂ ಇವೆ. ಹೋಪಿ ಇಂಡಿಯನ್ ಮಕ್ಕಳ ತರಗತಿಯೊಂದಕ್ಕೆ ಪರೀಕ್ಷೆ ಕೊಟ್ಟಾಗ ಅಷ್ಟು ಮಕ್ಕಳೂ ಬರೆದು ಮುಗಿಸುವ

ತನಕ ಆಗಲೇ ಬರೆದು ಮುಗಿಸಿದ್ದ ಯಾವ ಮಗುವೂ ಮುಂಧೆ ಬರಲಿಲ್ಲ. ಜೊತೆ ಗಾರರಿಗೆ ಉತ್ತರ ತಿಳಿಯದೇ ಇರುವಾಗ ತನಗೆ ತಿಳಿದಿದೆಯೆಂದು ಕೈಯೆತ್ತುವುದು ಮುನ್ನುಗ್ಗುವುದು ಅಸಭ್ಯವೆನ್ನುವ ನಂಬಿಕೆ ಡಕೋಟಾ ಇಂಡಿಯನರಲಿ. ಖಂಡಿತ ವಾಗಿ ಉತ್ತರ ಗೊತ್ತಿದ್ದರೇ ಬಾಯಿ ಬಿಡಬೇಕೆನ್ನುವುದೂ ಅವರ ಇನ್ನೊಂದು ಮನೋಭಾವ. ಬೀನೇ ಅಂತಹ ಮಾಪಕದಲ್ಲಿ ಆ ಮಕ್ಕಳು ಅಂದಾಜಿನ ಉತ್ತರ ಹೇಳುವದನ್ನೇ ಬಿಟ್ಟುಕೊಟ್ಟರೆ ಅವರ ಅಂಕಗಳ ಗತಿಯೇನು ?

ಆಸ್ಟ್ರೇಲಿಯಾದ ಕಾಡುಜನ ಪರೀಕ್ಷೆಯ ಸಂದರ್ಭವೊಂದರಲ್ಲಿ ಹೇಗೆ ನಡೆದು ಕೊಂಡರು ಅನ್ನುವದನ್ನು ಪೋರ್ಟಿಯಸ್[14] ವಿವರಿಸಿದ್ದಾರೆ. ತೊಳಸು ಬಳಸಿನಿಂದ ತಪ್ಪಿಸಿಕೊಂಡು ಹೊರಬರುವದಕ್ಕೆ ತುಳಿಯುವ ದಾರಿಯನ್ನು ಗುರುತಿಸುವುದೇ ಮಾಡಬೇಕಾಗಿದ್ದ ಕೆಲಸ, ಸ್ವಂತವಾಗಿ ಮಾಡಬೇಕಾಗಿದ್ದ ಕೆಲಸವನ್ನು ಒಬ್ಬೊಬ್ಬನೂ ಬುಡಕಟ್ಟಿನ ಹಿರಿಯರ ಹತ್ತಿರ ತೆಗೆದುಕೊಂಡು ಹೋದ ಎದುರಿಗೆ ಬಂದ ಸಮಸ್ಯೆಗೆ ಒಟ್ಟಿಗೆ ಕೂತು ಸಾಮೂಹಿಕವಾದ ಉತ್ತರ ಕಂಡುಹಿಡಿಯುವುದು ಆ ಜನರ ಸಂಪ್ರದಾಯಿಕವಾಗಿದ್ದು, ಅವರಿವರ ನೆರವಿಲ್ಲದೇ ಕೆಲಸ ಮಾಡಬೇಕೆನ್ನುವ ಪರೀಕ್ಷಕನ ನಿರ್ಬಂಧ ಅವರಿಗೆ ಅರ್ಥವಾಗಲಿಲ್ಲವೆಂದು ಪೋರ್ಟಿಯಸ್ ಬರೆದಿದ್ದಾರೆ. ಇಂತಹ ಸಮಾಜಗಳಲ್ಲಿ ಚುರುಕಾಗಿ ಕೆಲಸ ಮಾಡಿ ಬಕ್ಷೀಸು ಪಡೆಯುವುದು ತಾನೇ ಹೇಗೆ?

ಮುವ್ವತ್ತು ನಲವತ್ತು ವರ್ಷಗಳ ಹಿಂದೆ ಸರ್ವಸಾಮಾನ್ಯವಾಗಿ ಕಂಡುಬರುತ್ತಿದ್ದ ಇಂತಹ ಮನೋಭಾವ ಇವೊತ್ತಿನ ಸಮಾಜಗಳಲ್ಲಿ ಕಾಣುವುದು ಅಪರೂಪವೆನ್ನುವುದೇನೋ ವಾಸ್ತವ. ಪಾಶ್ಚಾತ್ಯ ದೇಶಗಳಲ್ಲಿರುವಂತಹ ಶಾಲೆಗಳು ಇವೊತ್ತಿನ ಪ್ರಪಂಚದ ಪ್ರತಿಮೂಲೆಯಲ್ಲೂ ಸ್ಥಾಪಿತವಾಗಿದ್ದು, ಮಕ್ಕಳು ವ್ಯವಸ್ಥಿತ ರೂಪದಲ್ಲಿ ವಿದ್ಯಾಭ್ಯಾಸ ಪಡೆಯುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಹೀಗಾಗಿ, ಬಾಹ್ಯಸ್ಥ ಅಂಶಗಳ ಪ್ರಭಾವ ಎಷ್ಟೋ ಕಡಿಮೆಯಾಗಿರುವುದು ನಿಜವಾದರೂ ಅದು ನಿರ್ಮೂಲವಾಗಿದೆ ಅನ್ನುವುದು ತಪ್ಪು.

ಭಾರತದಿಂದ ಅದೇ ತಾನೇ ಬ್ರಿಟನ್ನಿಗೆ ಬಂದಿದ್ದ ಮಕ್ಕಳನ್ನೂ ಭಾರತದಲ್ಲೇ ಇದ್ದ ಕೆಲವು ಮಕ್ಕಳನ್ನು ನಾನು ಒಂದಿಷ್ಟು ವರ್ಷಗಳ ಹಿಂದೆ ಪರೀಕ್ಷಿಸುವ ಅಗತ್ಯ ಬಿದ್ದಾಗ, ನನಗೆ ಕಣ್ಣಿಗೆ ಕಟ್ಟಿದ್ದು ಆ ಮಕ್ಕಳ ಹಿಂಜರಿಕೆಯ ಸ್ವಭಾವ. ತಾವು ಮಾಡಿದ ಕೆಲಸವನ್ನು ಹೆಜ್ಜೆ ಹೆಜ್ಜೆಗೂ ನನಗೊಪ್ಪಿಸಿ, ನನ್ನ ಮುಖದಲ್ಲಿ ಏನು ವ್ಯಕ್ತವಾಗುತ್ತಿದೆ ಅನ್ನುವದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದ ಆ ಮಕ್ಕಳ ಚಿತ್ರ ಅಚ್ಚೊತ್ತಿದ ಹಾಗಿದೆ. ಶಿಲಾಮುಖಿಯಾದ ನಾನು. ಮೆಚ್ಚುಗೆಯನ್ನಾಗಲೀ ಅತೃಪ್ತಿಯನ್ನಾಗಲೀ ತೋರಿಸದೇ ಕೂತಾಗ, ತಾವು ಮಾಡಿದ್ದ ಕೆಲಸ

ಸಮರ್ಪಕವಾಗಿದ್ದರೂ ಅದನ್ನು ಅಳಿಸಿ ಹಾಕಿ ಮತ್ತೆ ಶುರು ಮಾಡುತ್ತಿದ್ದ ಅವರನ್ನು ನಾನು ಮರೆಯಲಾರೆ. ಇಟ್ಟಿಗೆಗಳಿಂದ ನಮೂನೆ ಸಾಧಿಸುವ ಹಾಗೂ ವಸ್ತುಗಳ ಸ್ತೋಟ್ಟುಗೂಡಿಸುವ ಎರಡು ಕೆಲಸಗಳಲ್ಲಿ 58 ಮಕ್ಕಳು, ಒಟ್ಟು ಸೇರಿ, ಕೇವಲ 41 ಬಕ್ಷೀಸು ಅಂಕಗಳಿಸಿದ್ದಕ್ಕೆ ಕಾರಣ ಅವರ ಅಧೈರ್ಯದ ಮನೋಭಾವ. ಸಣ್ಣ ಮಕ್ಕಳ ಸ್ವ-ವಿಮರ್ಶೆಯ ಬುದ್ಧಿ ಅಷ್ಟಾಗಿ ಬೆಳೆದಿರುವದಿಲ್ಲ ಅನ್ನುವುದು ನಿಜವಾದರೂ ಭಾರತದ ಮಕ್ಕಳು ತಾವು ಮಾಡಿದ ಕೆಲಸವನ್ನು ಮೆಚ್ಚುವುದು ಬಿಡುವುದು ಹತ್ತಿರ ವಿರುವ ದೊಡ್ಡವರ ಕಣ್ಣಿನ ಮೂಲಕ. ಈ ಮಾತು ಮನೆಗೂ ಶಾಲೆಗೂ ಅನ್ವಯಿಸುವಂತಹದು. ಜೊತೆಗೆ, ಬೇಗ ಬೇಗ ಮಾಡುವದಕ್ಕಿಂತ ಕೆಲಸವನ್ನು ಅಚ್ಚುಗಟ್ಟಾಗಿ ಮಾಡುವದರಲ್ಲಿದ್ದ ಆ ಮಕ್ಕಳ ಆಸೆ.

ಶಾಲೆಗೆ ಹೋಗುವ ಮಗು ಪರೀಕ್ಷೆಯ ಸಂದರ್ಭಗಳಲ್ಲಿ ಸಹಾಯಕವಾಗುವ ಕೆಲವೊಂದು ವಿಷಯಗಳನ್ನು ಕಲಿಯುವದರ ಜೊತೆಗೆ ತಕ್ಕ ಮನೋಭಾವವನ್ನೂ ರೂಢಿಸಿಕೊಳ್ಳುವದರ ಕಡೆಗೆ ಡೂಬ್[15] ನಮ್ಮ ಗಮನ ಸೆಳೆದಿದ್ದಾರೆ. ಕೌಶಲಗಳ ಬೆಳವಣಿಗೆಗಳಿಗೆ ಪೋಷಕವಾದ ಅನುಭವಗಳಲ್ಲದೇ, ಅಪ್ಪಣೆಗಳಿಗೆ ಗಮನ ಕೊಡುವ ಅಭ್ಯಾಸವೂ ಪರಿಚಯವಿಲ್ಲದ ದೊಡ್ಡವರು ಇದ್ದಾಗಲೂ ತನ್ನ ಕೆಲಸ ತಾನು ಮಾಡುವುದನ್ನು ಕಲಿಯುವುದೂ ಮಗುವಿನದಾಗುತ್ತದೆ. ಶಾಲೆಗೆ ಹೋಗಿ ಬರುವ ಮಕ್ಕಳನ್ನು ಒಂದು ಸಂಶೋಧನೆಗೆ ಉಪಯೋಗಿಸಿದಾಗ ಬಾಹ್ಯಸ್ಥವಾದ ಅಂಶಗಳ ಪ್ರಭಾವ ಸ್ವಾಭಾವಿಕವಾಗಿಯೇ ಕಡಿಮೆಯಾಗುತ್ತದೆ. ಆದರೂ, ಅಂತಸ್ಥವಾದ ಅಂಶಗಳ ದೃಷ್ಟಿಯಿಂದ ಸರಿಸಮನಾದ ಎರಡು ಗುಂಪುಗಳನ್ನು ಆರಿಸಿಕೊಳ್ಳುವುದು ಎಷ್ಟು ಕಷ್ಟವೋ, ಬಾಹ್ಯಸ್ಥ ಅಂಶಗಳು ಒಂದೇ ಪ್ರಮಾಣದ ಪ್ರಭಾವ ಹೊಂದಿರು ವಂತೆ ಮಾಡುವುದೂ ಅಷ್ಟೇ ಕಷ್ಟ.

ಈ ಎಲ್ಲ ಮಾತುಗಳ ಸಾರಾಂಶ ಇಷ್ಟು: ಎರಡು ಗುಂಪುಗಳನ್ನು ಹೋಲಿಸಿ ನೋಡುವ ಸಾಂಪ್ರದಾಯಿಕ ಮಾದರಿಯ ಸಂಶೋಧನೆ ವ್ಯಕ್ತಿಯ ಬುದ್ಧಿ ಶಕ್ತಿಯ ಮೇಲೆ ಪರಿಸರಕ್ಕೆ ಹಾಗೂ ಆನುವಂಶೀಯತೆಗೆ ಇರಬಹುದಾದ ಪ್ರಭಾವದ ಬಗೆಗೆ ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳಲು ಅಸಮರ್ಥ. ಅಂತಸ್ಥ ಹಾಗೂ ಬಾಹ್ಯಸ್ಥ ಅಂಶಗಳನ್ನು ವಶಕ್ಕೆ ತೆಗೆದುಕೊಳ್ಳುವುದು ಸಾಧ್ಯವಾಗುವತನಕ ಈ ತರಹದ ಪ್ರಶ್ನೆಗಳನ್ನು ಕೇಳಲೇಬಾರದೇನೋ.

ಹಾಗೆಂದ ಮಾತ್ರಕ್ಕೇ ಮನುಷ್ಯನ ಬುದ್ಧಿಶಕ್ತಿಯಲ್ಲಿ ವಂಶಪಾರಂಪರ್ಯವಾದ ಅಂಶವೇ ಇಲ್ಲವೆಂದಲ್ಲ. ವ್ಯಕ್ತಿ ವ್ಯಕ್ತಿಯ ಮಧ್ಯೆ, ಜನ ಜನಗಳ ಮಧ್ಯೆ ನಾವು ಕಾಣುವ ವ್ಯತ್ಯಾಸಕ್ಕೆ ಹುಟ್ಟಿನಿಂದ ಬಂದ ಒಂದಂಶದ ಪ್ರಭಾವವಿದೆ ಅನ್ನುವದನ್ನು ಬಿಡಿಸಿ ಹೇಳಬೇಕಾಗಿಲ್ಲ. ಆನುವಂಶೀಯತೆಯ ಮುಖ್ಯತೆ ಎಲ್ಲ ಮನೋವಿಜ್ಞಾನಿ

ಗಳಿಗೂ ತಿಳಿದ ವಿಷಯ. ಪರಿಸರ ವಾದಕ್ಕೆ ಸಂಪೂರ್ಣವಾಗಿ ಶರಣಾದ ಮನೋವಿಜ್ಞಾನಿಯೂ ಈ ಮಾತನ್ನು ಒಪ್ಪದೇ ವಿಧಿಯಿಲ್ಲ. ಎರಡು ಕುಲಗಳ ಮಧ್ಯೆ ಕಂಡುಬರುವ ವ್ಯತ್ಯಾಸಕ್ಕೆ ವಂಶಪಾರಂಪರ್ಯವಾಗಿ ಬಂದದ್ದು ಮಾತ್ರಾ ಕಾರಣವೆನ್ನುವ ನಿಲುವನ್ನು ಪ್ರಶ್ನಿಸುವುದೇ ಈ ಎರಡು ಅಧ್ಯಾಯಗಳ ಉದ್ದೇಶ. ಅಂತಹ ನಿಲುವನ್ನು ಸಮರ್ಥಿಸುವದಕ್ಕೆ ಆಗತ್ಯವಾದ ಶಾಸ್ತ್ರಸಮ್ಮತ ಪ್ರಮಾಣ ಸದ್ಯಕ್ಕಂತೂ ಇಲ್ಲವೆಂದು ತೋರಿಸಿಕೊಡುವುದೂ, ಸಾಂಪ್ರದಾಯಿಕವಾಗಿ ಬಂದ ಎರಡು ಗುಂಪುಗಳ ಹೋಲಿಕೆಯ ವಿಧಾನ ಅಸಮರ್ಪಕವೆಂದು ತೋರಿಸಿಕೊಡುವುದೂ ನಾನಿಟ್ಟುಕೊಂಡಿದ್ದ ಉದ್ದೇಶ.

ಭಿನ್ನ ಸಂಸ್ಕೃತಿಗಳ ಅಭ್ಯಾಸದ ವಿಧಾನ ಶಾಸ್ತ್ರದ ಸಮಸ್ಯೆಗಳಿಗೆ ಸದ್ಯಕ್ಕಂತೂ ಪರಿಹಾರವಿಲ್ಲ.* ಪರಿಹಾರವಿರಲೇಬೇಕು ಎಂದು ಚಂಡಿ ಹಿಡಿದು ಕೂತರೆ, ಜಾನ್ ಸ್ಟೂಅರ್ಟ್ ಮಿಲ್ ಅವರ ನೂರೈವತ್ತು ವರ್ಷಗಳ ಹಿಂದಿನ ವಿವೇಕವನ್ನು ಅಲ್ಲಗಳೆದ ಹಾಗೆ: 'ಮನುಷ್ಯನ ಮನಸ್ಸಿನ ಮೇಲೆ ಪ್ರಭಾವ ಬೀರುವ ಸಾಮಾಜಿಕ ಹಾಗೂ ನೈತಿಕ ಅಂಶಗಳ ವಿವೇಚನೆಯಿಂದ ತಪ್ಪಿಸಿಕೊಳ್ಳುವದಕ್ಕೆ ಹಿಡಿಯುವ ಹಗ್ಗದ ಹಾದಿಗಳಲ್ಲಿ ಅತಿ ಅಗ್ಗವಾದದ್ದು, ನಡತೆ ಹಾಗೂ ಸ್ವಭಾವಗಳಲ್ಲಿರುವ ವ್ಯತ್ಯಾಸಗಳು ಅನುವಂಶಿಕವಾದದ್ದೆಂದು ಬಿಡುವುದು'[16]. ಪರಿಹಾರವಿದ್ದೇ ಇರಬೇಕು ಅನ್ನುವ ಹಟ ಸತ್ಯದ ಬಗೆಗಿರುವ ಗಾಢಾನುಶಕ್ತಿಯ ಸೋಗಿನಲ್ಲಿ ಸ್ವಂತದ ಪೂರ್ವಗ್ರಹಗಳಿಗೆ ದಾರಿ ಮಾಡಿಕೊಟ್ಟ ಹಾಗೆ.

ಕ್ರೋಬರ್ ಹೇಳಿದ್ದನ್ನು ಯಾವ ಸಂಶೋಧಕನೂ ಮರೆಯಬಾರದು : 'ಒಂದು ಕುಲದ ಜನ ಇನ್ನೊಂದಕ್ಕಿಂತ ಸ್ವಭಾವಸಿದ್ಧವಾಗಿಯೇ ಶ್ರೇಷ್ಠ ಅಥವಾ ಕೀಳು ಅನ್ನುವದನ್ನು ಸಾಧಿಸುವುದು ಕಷ್ಟ ; ಆದರೂ ನಮ್ಮ ಕುಲ ಎಲ್ಲಕ್ಕಿಂತ ಶ್ರೇಷ್ಠವಾದದ್ದು ಎಂದು ತೋರಿಸಿಕೊಡುವುದು ತುಂಬ ಸುಲಭ.

ಅಡಿ ಟಿಪ್ಪಣಿಗಳು

1. BIESHEUVEL, S. (1949), Psychological tests and their application to Non-European peoples. In JEFFREY (Ed.) *The Yearbook of Education* 87-126. Evan Brothers, London.

2. VERNON, P. E. (1969), *Intelligence and Cultural Environment*, Methuen, London.

3. BRAZIEL, W. F. (1969), A letter from the South. *Harvard Educational Review*, Vol. 39, No. 2, 348-356.

4. PASSAMANICK, B. and KNOBLOCK, H. (1955), Early language behaviour in Negro children and the testing of intelligence. *Journal of Abnormal and Social Psychology*, Vol. 50, 401-402.

5. CANADY, H. G. (1936), The effect of 'rapport' on the I.Q. A new approach to the problem of racial •psychology. *Journal of Negro Education*, Vol. 5, 209-219.

6. PRESSEY, S. L. and ROBINSON, F. P. (1933), *Psychology and the New Education*, Harper and Bros. New York.

7. PRICE-WILLIAMS, D. R. (1961), A study concerning concepts of conservation of quantities among primitive children, *Acta Psychologica*, Vol. 18, 297-305.

8. BIESHEUVEL, S. (1949), Psychological tests and their application to Non-European peoples. In JEFFREY (Ed.) *The Yearbook of Education*, 87-126, Evan Brothers, London.

9. ORTAR, C. R. (1960), Improving test validity by coaching. *Educational Research*, Vol. 2, 3, 137-142.

10. Ombredane, A. (1951), Principes pour une etude psychologique des noire du Congo Belge. *L'annee Psychologique*, 50, 521-547.

11. SCHWARTZ, P. A. (1963), Adapting tests to cultural setting. *Educational and Psychological Measurement*, Vol. 23, 675-686.

12. KLINEBERG, O. (1958), *Race and Psychology*. UNESCO, Paris.

13. MEAD, M. (1943), *Coming-of-age in Samoa*, Penguin Book Limited, London.

14. PORTEUS, S. D. (1931), *The Psychology of a Primitive People*, Longmans, New York.

15. DOOB (1960), *Becoming More Civilised*, Yale. Uns. Press, New Haren.

16. MILL, J. S.—See KLINEGERG, O. (1958), *Race and Psychology*, UNESCO, Paris.

ಅಧ್ಯಾಯ ಮೂರು

ದಕ್ಷತೆ ಮತ್ತು ಪರಿಸರ

ಸಾಂಸ್ಕೃತಿಕವಾಗಿ ಯಾವ ದಕ್ಷತೆಗಳು ಯಥಾರ್ಥವಾದುವೋ. ಅವಕ್ಕೆ ಮಾತ್ರ ಬೆಳವಣಿಗೆಯ ಸಾಧ್ಯತೆ. ಮಗು ಬೆಳೆದ ಹಾಗೆ ಬೆಳೆಯುವ ಈ ದಕ್ಷತೆಗಳ ಮುಖ್ಯ ಗುಣ ಔಚಿತ್ಯ. ಅದೇ ಕಾರಣದಿಂದ ಅವಕ್ಕೆ ಮತ್ತೆ ಮತ್ತೆ ಉಪಯೋಗಿಸುವದಕ್ಕೆ ಒದಗುವ ಅವಕಾಶ. ಅವು ಎಷ್ಟರಮಟ್ಟಿಗೆ ಪಾಠವಾಗುತ್ತವೆಯೋ ಅಷ್ಟರ ಮಟ್ಟಿಗೆ ಅವಕ್ಕೆ ಬರುವ ಸರ್ವಸಾಧ್ಯತೆಯ ಗುಣ. ಒಂದು ಸಮಾಜದ ಗಂಡು ಮಕ್ಕಳಿಗೂ ಹೆಣ್ಣು ಮಕ್ಕಳಿಗೂ ಆ ದಕ್ಷತೆಗಳ ದೃಷ್ಟಿಯಿಂದ ಕಂಡುಬರುವ ಅಂತರದ ಹಿಂದಿರುವುದೂ ಪರಿಸರದ ಕೈವಾಡವೇ.

ಅರಬ್ಬೀ ಸಮಾಜಗಳಲ್ಲಿ ವಸ್ತು ಪ್ರತಿರೂಪವಾದ ಚಿತ್ರಕಲೆಯ ಬಗೆಗಿರುವ ಬಹಿಷ್ಕಾರದ ಮಾತು ಆಗಲೇ ಬಂದಿದೆ. ಅಂತಹ ಸಮಾಜಗಳಲ್ಲಿ ಈ ತರಹದ ಕೌಶಲ. ಬೆಳೆಯುವದಕ್ಕೆ ಪರಿಸರ ಉತ್ತೇಜನ ಕೊಡುವುದಿಲ್ಲ. ಎಂದೇ. ಗುಡ್ ಎನಫ್ಬಿನ ಮನುಷ್ಯಾಕಾರ ರಚನೆಯ ಮಾಪಕದಲ್ಲಿ ಬೆಡವಿನ್ ಬುಡಕಟ್ಟಿನ ದೊಡ್ಡವರೂ ಮಕ್ಕಳೂ ಸಾಧಿಸಿದ ಸರಾಸರಿ ಅಂಕ 53 (ಡೆನಿಸ್[1]). ಸಾಮಾನ್ಯವಾಗಿ, ಚಿತ್ರಕಲೆ ರೂಢಿಯಲ್ಲಿರುವ ಸಮಾಜದ ಸರಾಸರಿ 100 ಎಂದು ನೆನಪು ಮಾಡಿಕೊಂಡಾಗ ಈ ಜನದ ಚಿತ್ರರಚನಾ ಕೌಶಲ ಎಷ್ಟು ಕುಂಠಿತವಾಗಿದೆ ಅನ್ನುವುದು

ಮಾನದಟ್ಟಾಗುವುದು. ಮನುಷ್ಯನ ಮುಖ ಬರೆಯುವಾಗ ಕಣ್ಣು ಮೂಗುಗಳನ್ನೇ ಮರೆಯುತ್ತಿದ್ದ ಬೆಡವಿನ್ ಜನಕ್ಕೆ ಮರಳುಗಾಡಿನ ವಿವರಗಳ ಬಗೆಗೆ ಮಾತ್ರ ಹದ್ದುಗಣ್ಣು.

ಒಂದು ಸಮಾಜದಲ್ಲಿರುವ ಅಷ್ಟೂ ಮಂದಿಯ ದಕ್ಷತೆಯನ್ನು ಅವರ ಪರಿಸರ ಹೇಗೆ ರೂಪಿಸಬಲ್ಲುದು ಅನ್ನುವುದಕ್ಕೆ ಇದೊಂದು ಉತ್ತಮ ನಿದರ್ಶನ. ಅದೇ, ಒಂದು ಪರಿಸರ ಕೆಲವರಲ್ಲಿ ದಕ್ಷತೆ ಬೆಳೆಯುವುದಕ್ಕೂ ಇನ್ನೂ ಕೆಲವರಲ್ಲಿ ಅದೇ ದಕ್ಷತೆ ಮೊಟಕಾಗುವುದಕ್ಕೂ ಹೇಗೆ ಕಾರಣವಾಗಬಹುದು ಅನ್ನುವದನ್ನು ಡೆನಿಕ್[2] ಕೊಟ್ಟಿರುವ ಇನ್ನೊಂದು ನಿದರ್ಶನದಲ್ಲಿ ನೋಡಬಹುದು. ಹೋಪಿ ಬುಡಕಟ್ಟಿಗೆ ಸೇರಿದ ಇಂಡಿಯನ್ನರಲ್ಲಿ, ಮಡಕೆಗಳಿಗೆ ಬಣ್ಣ ಬಳಿಯುವುದೂ ವಿಧ್ಯುಕ್ತ ಕ್ರಿಯೆಗಳಿಗೆ ಉಪಯೋಗಿಸುವ ವಸ್ತುಗಳಿಗೆ ಅಲಂಕಾರ ಮಾಡುವುದೂ ಗಂಡಸರಿಗೆ ಮೀಸಲಾದ ಕೆಲಸ. ಅದಕ್ಕೆ ಬೇಕಾದ ದಕ್ಷತೆ ಬೆಳೆಸಿಕೊಂಡ ಗಂಡು ಹುಡುಗನಿಗೆ ದೊಡ್ಡವರ ಮೆಚ್ಚುಗೆ. ಎಂದೇ, ವರ್ಗ ಸಾಧ್ಯತೆ ಬರುವವರೆಗೂ ಈ ದಕ್ಷತೆಯನ್ನು ಬೆಳೆಸಿಕೊಳ್ಳುವ ಅವಕಾಶ ಹೋಪಿ ಹುಡುಗರಿಗೆ.

ಮನುಷ್ಯಾಕಾರ ರಚನೆಯ ಕೆಲಸದಲ್ಲಿ ಹೋಪಿ ಹುಡುಗರ ಸರಾಸರಿ ಅಂಕ 116.6, ಹೆಣ್ಣು ಮಕ್ಕಳ ಸರಾಸರಿ 99.5. ಹುಡುಗರಲ್ಲಿ, ಹುಡುಗಿಯರಲ್ಲಿ ವ್ಯತ್ಯಸ್ತವಾಗಿ ಬೆಳೆಯುವ ದಕ್ಷತೆಯನ್ನು ಗುರುತಿಸಿದ ಡೆನಿಸ್ ಎರಡು ವರ್ಷಗಳಾದ ಮೇಲೆ ಅದೇ ಹುಡುಗ ಹುಡುಗಿಯರನ್ನು ಮತ್ತೆ ಪರೀಕ್ಷೆ ಮಾಡಿದರು. ಅವರಿಬ್ಬರ ನಡುವಿಗಿದ್ದ ವ್ಯತ್ಯಾಸ ಈ ಅವಧಿಯಲ್ಲಿ ಇನ್ನಷ್ಟು ಬೆಳೆದಿದ್ದಕ್ಕೆ ಕಾರಣ ಪರಿಸರ ಗಂಡುಮಕ್ಕಳಿಗೆ ಕೊಟ್ಟ ಉತ್ತೇಜನ ಎಂದು ಡೆನಿಕ್ ಹೇಳಿದ್ದಾರೆ.

ಕರ್ನಾಟಕದ ಹುಡುಗ ಹುಡುಗಿಯರ ನಡುವೆ ತಾವು ಕಂಡ ವ್ಯತ್ಯಾಸಕ್ಕೆ ಕಾಮತ್[3] ಅವರು ಇದೇ ತರಪದ ವಿವರಣೆ ಕೊಟ್ಟಿರುವದನ್ನು ತಾವು ನೋಡಬಹುದು. ಮಕ್ಕಳ ಬುದ್ಧಿ ಪರೀಕ್ಷೆಗೆ ಅವರು ಉಪಯೋಗಿಸಿದ್ದು ಸ್ಟಾನ್‌ಫರ್ಡ್ ಬೀನೇ ಮಾಪಕದ ರೂಪಾಂತರ. ಹುಡುಗರ ಸರಾಸರಿ ಅಂಕ ಹುಡುಗಿಯರದಕ್ಕಿಂತ ಹೆಚ್ಚಾಗಿದ್ದದ್ದಕ್ಕೆ ಕಾಮತ್ ಅವರು ಭಾರತದ ಸಂಸ್ಕೃತಿ ಗಂಡು ಮಕ್ಕಳ ವಿದ್ಯಾಭ್ಯಾಸಕ್ಕೆ—ಅದರಲ್ಲೂ ಶಾಬ್ದಿಕವಾದ ಕಲಿಕೆಗೆ—ಹೆಚ್ಚು ಬೆಲೆ ಕಟ್ಟುವದನ್ನು ಕಾರಣವಾಗಿ ಹೇಳಿದ್ದಾರೆ, ನಲವತ್ತು ವರ್ಷಗಳ ಹಿಂದಿನ ಅವರ ಮಾತು ಇವೊತ್ತಿಗೂ ವಾಸ್ತವವಾದದ್ದರ ಬಗೆಗೆ ಭಿನ್ನಾಭಿಪ್ರಾಯವಿರಲಾರದು. ಒಂದು ಸಮಾಜದ ಹೆಣ್ಣು ಮಕ್ಕಳ ದಕ್ಷತೆ ಗಂಡು ಮಕ್ಕಳ ದಕ್ಷತೆಗಿಂತ ಉತ್ತಮವಾಗಿರುವ ಮಾರಿಸ್‌ಬೀ ಅವರ ಸಂಯೋಗ ಪಂಕ್ತಿಯೆನ್ನುವ ಮಾಪಕವನ್ನು ಉಪಯೋಗಿಸಿದಾಗ

ಹೆಣ್ಣು ಮಕ್ಕಳ ಸರಾಸರಿ ಅಂಕ ಗಂಡುಮಕ್ಕಳ ಸರಾಸರಿಗಿಂತ ಹೆಚ್ಚಾಗಿದ್ದದ್ದು ಆಫ್ರಿಕದ ಬುಡಕಟ್ಟೊಂದರಲ್ಲಿ. ಆಕಾರ, ಗಾತ್ರ ಹಾಗೂ ಬಣ್ಣಗಳ ದೃಷ್ಟಿಯಿಂದ ವ್ಯತ್ಯಸ್ತವಾದ ಮಣಿಗಳನ್ನು ಪೋಣಿಸುವ ಕೆಲಸದಲ್ಲಿ ಹೆಣ್ಣು ಮಕ್ಕಳು ತೋರಿಸಿದ ಹೆಚ್ಚಿನ ದಕ್ಷತೆಗೆ ಕಾರಣ ಆ ಸಮಾಜ ಅವರಿಗೆ ಕಲ್ಪಿಸಿಕೊಟ್ಟ ಅವಕಾಶವಾಗಿತ್ತು. ಎಂದೇ, ವರ್ಗಸಾಧ್ಯತೆಯು ಹುಟ್ಟಿ ಮುಟ್ಟಿದ್ದ ಅವರ ದಕ್ಷತೆ ಪರೀಕ್ಷೆಯ ಸಮಯ ದಲ್ಲಿ ಅವರಿಗೆ ನೆರವಾಯಿತು.

ಪರಿಸರಕ್ಕೂ ದಕ್ಷತೆಯೊಂದರ ಬೆಳವಣಿಗೆಗೂ ಇರುವ ಸಂಬಂಧಕ್ಕೆ ಸ್ಟ್ರಾಸ್[5] ಅವರು ಸಿಲೋನಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಕೊಟ್ಟ ಪರೀಕ್ಷೆಯನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಕ್ಯಾಲಿಫೋರ್ನಿಯಾದ ಮಾನಸಿಕ ಪ್ರಬುದ್ಧತೆಯೆನ್ನುವ ಮಾಪಕದ ಶಾಬ್ದಿಕ ಭಾಗದಲ್ಲಿ ಸಿಲೋನಿನ ವಿದ್ಯಾರ್ಥಿಗಳು ಅಮೆರಿಕದ ವಿದ್ಯಾರ್ಥಿಗಳಿಗಿಂತಲೂ ಉತ್ತಮವಾಗಿ ಮಾಡಿದರೂ, ಕೈಚಳಕದ ಭಾಗದಲ್ಲಿ ತುಂಬ ಕೆಳಗೆ ಬಿದ್ದರು. ಸಿಲೋನಿನ ಹದಿನಾರು ಉಪಸಂಸ್ಕೃತಿಗಳ ಸದಸ್ಯರಲ್ಲಿ ಹದಿನಾಲ್ಕು ಉಪ ಸಂಸ್ಕೃತಿಗಳ ಬಗೆಗೆ ಈ ತರಹದ ವ್ಯತ್ಯಾಸ ನಿಜವಾಗಿತ್ತು. ಭಾರತದಲ್ಲಿ ಹೇಗೋ ಹಾಗೆ ಸಿಲೋನಿನಲ್ಲಿ ಕೂಡಾ ಮೇಲಿನ ವರ್ಗಗಳಿಗೆ ವಾಕ್ಚಾತುರ್ಯ ಪಾಂಡಿತ್ಯಗಳೆಂದರೆ ತುಂಬ ಮರ್ಯಾದೆ, ಕೈಕೊಳೆಯಾಗುವ ಕೆಲಸವೆಂದರೆ ತಿರಸ್ಕಾರ. ಎರಡೂ ದೇಶಗಳ ವಿದ್ಯಾಭ್ಯಾಸ ಪದ್ಧತಿಯಲ್ಲಿ ಬಾಯಿಪಾಠಕ್ಕೆ, ಜ್ಞಾಪಕಶಕ್ತಿಗೆ, ಅದರ ಪ್ರದರ್ಶನಕ್ಕೆ ಪುರಸ್ಕಾರ. ಅಂತಹದಕ್ಕೆ ಬೇಕಾದ ದಕ್ಷತೆಯನ್ನು ಪರೀಕ್ಷಿಸುವ ಮಾಪಕದಲ್ಲಿ ಸಿಲೋನಿನ ವಿದ್ಯಾರ್ಥಿಗಳು ಅಮೆರಿಕದ ವಿದ್ಯಾರ್ಥಿಗಳಿಗಿಂತ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದು ಆಶ್ಚರ್ಯವಲ್ಲ.

ದಕ್ಷತೆಯ ಬೆಳವಣಿಗೆಗೆ ಅಗತ್ಯವಾದ ಬೆಂಬಲ ಶಾಲೆಗಳಲ್ಲಿ ಮಾತ್ರ ಸಿಕ್ಕುವ ಸಮಾಜಗಳನ್ನು ನೋಡಿದಾಗ ಪರಿಸರದ ಕೈವಾಡ ಎಷ್ಟರಮಟ್ಟಿಗೆ ಅನ್ನುವುದು ಮನದಟ್ಟಾಗುವುದು. ಶಾಲೆ ಕೊಡುವ ಬೆಂಬಲ ನಿಂತಾಗ ದಕ್ಷತೆಯ ಬೆಳವಣಿಗೆಯೂ ನಿಂತುಹೋಗುವುದಕ್ಕೆ ನಿದರ್ಶನ ಗೋರ್ಡನ್[6] ಅವರ ಅಭ್ಯಾಸದಲ್ಲಿದೆ. ಆರನೇ ವರ್ಷಕ್ಕೆ ಶಾಲೆಗೆ ಹೋಗುವುದನ್ನು ಬಿಟ್ಟುಕೊಟ್ಟ ಜಿಪ್ಸಿ ಮಕ್ಕಳ ಶಾಬ್ದಿಕ ದಕ್ಷತೆ ಬೆಳೆಯದೇ ಹೋದರೂ, ಕೈ ಚಳಕಕ್ಕೆ ಸಂಬಂಧಿಸಿದ ದಕ್ಷತೆ, ಅವರ ಬದುಕು ಕೊಡುತ್ತ ಹೋದ ಉತ್ತೇಜನವೇ ಕಾರಣವಾಗಿ, ಬೆಳೆಯುತ್ತ ಹೋಯಿತು. ಇದೇ ತರಹದ ಇನ್ನೊಂದು ಬ್ರೂನರ್ ಮತ್ತು ಗೋಲ್ಡ್‌ಫೀಲ್ಡ್[7] ಅವರು ನಡೆಸಿದ ಸಂಶೋಧನೆ : ವೊಲೋಫ್ ಬುಡಕಟ್ಟಿನ ಮೂರು ಗುಂಪು ಮಕ್ಕಳಿಗೆ ಅವರು ಕೊಟ್ಟಿದ್ದು ಪಿಯಾಜೇ ಹೇಳಿರುವಂತಹ ವಸ್ತು ಸ್ಥಾಯಿತ್ವದ ಸಮಸ್ಯೆ. ಮೊದಲನೇ ಗುಂಪಿನ ಮಕ್ಕಳ ವಿದ್ಯಾಭ್ಯಾಸ ನಡೆಯುತ್ತಿದ್ದದ್ದು ನಗರದಲ್ಲಿ; ಎರಡನೇ

ಗುಂಪಿಗೆ ಹಳ್ಳಿಗಾಡಿನ ಅಲ್ಪಸ್ವಲ್ಪ ವಿದ್ಯಾಭ್ಯಾಸ: ಮೂರನೇ ಗುಂಪಿನ ಮಕ್ಕಳು ಶಾಲೆಗೇ ಹೋಗಿರದವರು. 6 ರಿಂದ 9 ವಯಸ್ಸಿನ ಮೂರು ಗುಂಪುಗಳ ಮಕ್ಕಳಲ್ಲಿ ಕಂಡುಬಂದ ವ್ಯತ್ಯಾಸ ಅತ್ಯಲ್ಪ ಪ್ರಮಾಣದ್ದಾಗಿತ್ತು. ವಯಸ್ಸಾದ ಹಾಗೆ, ಶಾಲೆಗೆ ಹೋಗಿ ಬರುತ್ತಿದ್ದ ಮಕ್ಕಳ ದಕ್ಷತೆ ಬೆಳೆಯದೇ ಹೋದದನ್ನೂ ಕಂಡ ಸಂಶೋಧಕರು ದಕ್ಷತೆಗೂ ಪರಿಸರ ಕೊಡುವ ಅಥವಾ ಕೊಡದ ಉತ್ತೇಜನಕ್ಕೂ ಇರುವ ಸಂಬಂಧದ ಬಗೆಗೆ ಗಮನ ಸೆಳೆದಿದ್ದಾರೆ.

ಚಿಕ್ಕ ವಯಸ್ಸಿಗೇ ಶಾಲೆ ಸುರು ಮಾಡುವುದೂ ಶಾಲೆಗೆ ತಪ್ಪದೇ ಹೋಗಿ ಬರುವುದೂ ದಕ್ಷತೆಯ ದೃಷ್ಟಿಯಿಂದ ಅದೆಷ್ಟು ಮುಖ್ಯ ಅನ್ನುವದನ್ನು ರಾಮ್ ಪಾಲ್[8] ಅವರು ದಕ್ಷಿಣ ಆಫ್ರಿಕದ ಇಂಡಿಯನ್ ಮಕ್ಕಳ ಸಂದರ್ಭದಲ್ಲಿ ಎತ್ತಿ ಹಿಡಿದಿದ್ದಾರೆ. ತರಗತಿಗಳ ಹಾಗೂ ತರಪೇತು ಪಡೆದ ಅಧ್ಯಾಪಕರ ಅಭಾವವೇ ಕಾರಣವಾಗಿ, ಪ್ರತಿ ವರ್ಷ, ಸುಮಾರು ಹತ್ತು ಸಾವಿರದಷ್ಟು ಇಂಡಿಯನ್ ಮಕ್ಕಳಿಗೆ ಆರನೇ ವರ್ಷಕ್ಕೆ ವಿದ್ಯಾಭ್ಯಾಸ ಸುರು ಮಾಡಲಾಗುವುದಿಲ್ಲ. ಕೆಲವು ಮಕ್ಕಳು ಹತ್ತು ವರ್ಷ ವಯಸ್ಸಾದರೂ ಶಾಲೆಗೆ ಹೋಗುವದನ್ನು ಕಾಯುತ್ತ ಕೂತಿರಬೇಕಾದ ಪ್ರಸಂಗಗಳೂ ಇವೆ. ಸಮಾನ ಹಂತಗಳಿಲ್ಲಿದ್ದರೂ ಬೇರೆ ಬೇರೆ ವಯಸ್ಸಿಗೆ ಅಕ್ಷರಾಭ್ಯಾಸ ಸುರು ಮಾಡಿದ 1700 ಮಕ್ಕಳ ಅಭ್ಯಾಸ ರಾಮ್‌ಪಾಲ್ ಮಾಡಿದ್ದು. ಮಕ್ಕಳ ಮನೆಗಳಲ್ಲಿನ ಸಾಮಾಜಿಕ ಹಾಗೂ ಆರ್ಥಿಕ ಪರಿಸರಕ್ಕೆ ಬೆಲೆ ಕಟ್ಟುವದರ ಜೊತೆಗೆ, ಇಂಗ್ಲಿಷ್ ಭಾಷೆಯನ್ನು ಉಪಯೋಗಿಸುವದಕ್ಕೆ ಶಾಲೆಯ ಹೊರಗೆ ಆ ಮಕ್ಕಳಿಗಿದ್ದ ಅವಕಾಶವನ್ನೂ ಗಣನೆಗೆ ತೆಗೆದುಕೊಂಡಿದ್ದು ಈ ಸಂಶೋಧನೆಯ ವಿಶೇಷ. ಮಕ್ಕಳ ವಯಸ್ಸನ್ನೂ ಕಲಿಕೆಯ ಪರಿಸರವನ್ನೂ ನಿಯತವಾಗಿಟ್ಟುಕೊಳ್ಳುವದರ ಮೂಲಕ ಶಾಲೆಯ ಪ್ರಭಾವವನ್ನು ಅಳೆಯುವುದೂ, ಶಾಲೆಯಲ್ಲಿ ಕಳೆದ ಕಾಲವನ್ನೂ ಕಲಿಕೆಯ ಪರಿಸರವನ್ನೂ ನಿಯತವಾಗಿಟ್ಟುಕೊಳ್ಳುವದರ ಮೂಲಕ ಸ್ವಾಭಾವಿಕವಾದ ವಿಕಸನೆಯನ್ನು ಅಳೆಯುವುದೂ ರಾಮ್‌ಪಾಲರಿಗೆ ಸಾಧ್ಯವಾಯಿತು.

ರಾಮ್‌ಪಾಲ್ ಅವರು ಕೊಡುವ ನಿರ್ಣಯಗಳು ಎರಡು: ಮಕ್ಕಳ ಮಾನಸಿಕ ಬೆಳವಣಿಗೆಗೂ ಶಾಲೆಯ ಪರಿಸರಕ್ಕೂ ಇರುವ ನಿಕಟ ಸಂಬಂಧವಿದೆಯೆನ್ನುವದು ಒಂದು; ಒಂದು ವರ್ಷ ತಡವಾಗಿ ಶಾಲೆ ಸುರು ಮಾಡುವದರಿಂದ ಮಗುವಿನ ಬುದ್ಧಿ ಮಟ್ಟ 5 ಅಂಕಗಳಷ್ಟು ಕೆಳಗಿಳಿಯುತ್ತದೆ ಅನ್ನುವುದು ಇನ್ನೊಂದು.

ಅಕ್ಷರಾಭ್ಯಾಸ ತಡವಾಗಿ ಸುರುವಾಗುವುದಕ್ಕೂ ಮಗುವಿನ ಬುದ್ಧಿಮಟ್ಟ ಇಳಿಯುವದಕ್ಕೂ ಇರುವ ಸಂಬಂಧವನ್ನು ಕ್ಲಿಂಗಲ್ ಹಾಫರ್[9] ಗುರುತಿಸಿದ್ದಾರೆ. ಟಾನ್ಜಾನಿಯಾದಲ್ಲಿರುವ ಏಷ್ಯನ್ ಮಕ್ಕಳ ಗುಂಪಿನ ಜೊತೆಗೆ ಅದೇ ನಾಡಿನ ಮಕ್ಕಳ

ಗುಂಪನ್ನೂ ಅಭ್ಯಾಸ ಮಾಡಿದ ಅವರು ಪಿಷ್ಯನ್ ಮಕ್ಕಳು ಹೆಚ್ಚು ಬುದ್ಧಿವಂತರಾಗಿ ಕಂಡದ್ದಕ್ಕೆ ಅವು ಚಿಕ್ಕ ವಯಸ್ಸಿಗೇ ಅಕ್ಷರಾಭ್ಯಾಸ ಆರಂಭಿಸುವುದು ಕಾರಣವೆಂದಿದ್ದಾರೆ.

ಕಡೆಯ ಉದಾಹರಣೆಯಾಗಿ ಮೆಕ್‌ಫೈ[10] ಅವರ 1961ರ ಸಂಶೋಧನೆಯನ್ನು ನೋಡಬಹುದು. ವೆಕ್ಸ್ಲರಿನ ಬುದ್ಧಿಮಾಪಕದ ಆರು ಸಮಸ್ಯೆಗಳ ಜೊತೆಗೆ ಪೈಗಲ್ ಅವರ ವಿಂಗಡಣೆಯ ಕೆಲಸವನ್ನೂ ಸೇರಿಸಿ ಆಫ್ರಿಕದ ಯಂತ್ರಕಲಾಶಾಲೆಯ ಮಕ್ಕಳಿಗೆ ಕೊಟ್ಟಾಗ ಏನಾಯಿತು, ನೋಡೋಣ. ವೆಕ್ಸ್ಲರಿನ ಸಮಸ್ಯೆಗಳಲ್ಲಿ ಕೋಸ್ ಇಟ್ಟಿಗೆಗಳ ಸಮಸ್ಯೆಗಳೂ ಒಂದಾಗಿತ್ತು. ಮೊದಲ ಪರೀಕ್ಷೆಗೆ ಕೂತ ಮಕ್ಕಳನ್ನು ಮತ್ತೊಮ್ಮೆ, ಇನ್ನೆರಡು ವರ್ಷಗಳಾದ ಮೇಲೆ, ಪರೀಕ್ಷೆಗೆ ಗುರಿಪಡಿಸಿದಾಗ ಹೆಚ್ಚಿನ ಬೆಳವಣಿಗೆ ಕಂಡದ್ದು ಆ ಸಮಸ್ಯೆಗೆ ಸಂಬಂಧಪಟ್ಟಂತಹ ದಕ್ಷತೆಯಲ್ಲಿ, ಹಾಗೂ ನಮೂನೆಗಳಿಗಿದ್ದ ಜ್ಞಾಪಕ ಶಕ್ತಿಯಲ್ಲಿ. ಕಳೆದೆರಡು ವರ್ಷಗಳಲ್ಲಿ ಹುಡುಗರು ವಸ್ತುಗಳ ಅಭ್ಯಾಸ ಮಾಡಿದ್ದೂ ಚುರುಕಾಗಿ ಕೆಲಸ ಮಾಡುವದನ್ನು ಕಲಿತದ್ದೂ ದಕ್ಷತೆಗಳ ಅಭಿವೃದ್ಧಿಗೆ ಕಾರಣವೆಂದು ಮೆಕಫೈ ಹೇಳಿರುವುದು ಗಮನಾರ್ಹ. ಅಂದರೆ, ಮೊದಲ ಸಲ ಕಂಡುಬಂದ ಬಡತನಕ್ಕೆ ಅನುಭವವಿಲ್ಲದ್ದು ಕಾರಣವೇ ಹೊರತು ಎಳೆತನಕ್ಕೇ ಬಡಿದ ಯಾವ ದೌರ್ಬಲ್ಯವಲ್ಲ ಅನ್ನುವದು ಈ ಸಂಶೋಧನೆಯಿಂದ ಸ್ಪಷ್ಟವಾಯಿತು. ಅಗತ್ಯವಾದ ಅನುಭವಗಳಿಗೆ ಶಾಲೆಯಲ್ಲಿ ಅವಕಾಶ ಕಲ್ಪಿಸಿಕೊಡುವದರ ಮೂಲಕ ಮಕ್ಕಳಲ್ಲಿರಬಹುದಾದ ಕೊರತೆಯನ್ನು ತುಂಬಬಹುದೆನ್ನುವದನ್ನು ಸಪ್ರಮಾಣವಾಗಿ ತೋರಿಸಿದ್ದು ಈ ಸಂಶೋಧನೆಯ ವಿಶೇಷ.

ಮಕ್ಕಳ ಮಾನಸಿಕ ಬೆಳವಣಿಗೆಗೆ ಶಾಲೆ ಸಾಧ್ಯವಾಗಿಸುವ ಕಲಿಕೆ ಅಗತ್ಯವೆನ್ನುವದನ್ನೂ, ಹೆಚ್ಚಿನ ಕಲಿಕೆಯಿಂದ ಹೆಚ್ಚಿನ ಬೆಳವಣಿಗೆ ಅನ್ನುವದನ್ನೂ, ಇವೊತ್ತಿನ ಬಹುಪಾಲು ಮನೋವಿಜ್ಞಾನಿಗಳು ಒಪ್ಪಿಯಾರು. ಅಷ್ಟಾದರೂ, ಒಂದು ವಿದ್ಯಾಭ್ಯಾಸ ಕ್ರಮಕ್ಕಿಂತ ಇನ್ನೊಂದು ಹೆಚ್ಚು ಉತ್ತಮ ಅಥವಾ ಕೀಳು ಎಂದು ಸಾಧಿಸುವುದು ಮೊದಲ ನೋಟಕ್ಕೆ ಅನ್ನಿಸುವಷ್ಟು ಸುಲಭವಲ್ಲ. ಬಹುಶಃ. ಒಂದೇ ಪರಿಸರದ ಎರಡು ವಿದ್ಯಾಭ್ಯಾಸ ಕ್ರಮಗಳನ್ನು ಹೋಲಿಸಿ ನೋಡುವ ಸಂಶೋಧನಾ ಸಂಪ್ರದಾಯವೇ ಅಸಮರ್ಪಕವೇನೋ. ಬೇರೆ ಬೇರೆ ಸಾಂಸ್ಕೃತಿಕ ಮೌಲ್ಯಗಳನ್ನು ತಾವು ಸ್ಥಾಪಿಸುವಾಗ ವಿದ್ಯಾಭ್ಯಾಸ ಪದ್ಧತಿಗಳ ಮೂಲಕ ಸಾಧಿಸಲು ಪ್ರಯತ್ನಿಸುವ ವ್ಯತ್ಯಸ್ತ ಪರಿಸರಗಳ ಕಡೆಗೆ ಸಂಶೋಧಕರು ಗಮನ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತೇನೋ.

1960ರ ಅನಂತರದಲ್ಲಿ ವೆಸ್ಟ್ ಇಂಡೀಸ್, ಭಾರತ ಹಾಗೂ ಪಾಕಿಸ್ತಾನಗಳಿಂದ ಬ್ರಿಟನ್ನಿಗೆ ಅಧಿಕ ಸಂಖ್ಯೆಯಲ್ಲಿ ವಲಸೆ ಬಂದ ಮಕ್ಕಳ ಸಂದರ್ಭ ಸಂಶೋಧ

ನೆಯ ದೃಷ್ಟಿಯಿಂದ ಒಂದು ಸದಾವಕಾಶ. ತಮ್ಮ ದೇಶಗಳಲ್ಲಿ ಶಾಲೆಗೆ ಹೋಗುತ್ತಿದ್ದ ಆ ಮಕ್ಕಳು ಬ್ರಿಟನ್ನಿಗೆ ಬಂದಾಗ ಬ್ರಿಟನ್ನಿನ ಶಾಲೆಗಳಿಗೆ ಹೋಗುತ್ತಾರೆ. ವರ್ಷಗಳುದ್ದದ ಒಂದು ಸಂಶೋಧನೆಗೆ ಆ ಮಕ್ಕಳನ್ನು ಗುರಿ ಮಾಡಿ ಯಾವ ದಕ್ಷತೆಗೆ ಯಾವ ವಿದ್ಯಾಭ್ಯಾಸ ಕ್ರಮ ಅನುಕೂಲ ಅನ್ನುವದನ್ನು ನಿರ್ಧಾರ ಮಾಡುವುದು ಸಾಧ್ಯ.

ಭಾರತದ ವಿದ್ಯಾಭ್ಯಾಸ ಕ್ರಮಕ್ಕೂ ಬ್ರಿಟನ್ನಿನ ವಿಭ್ಯಾಭ್ಯಾಸ ಕ್ರಮಕ್ಕೂ ಇರುವಷ್ಟು ವ್ಯತ್ಯಾಸವನ್ನು ಬೇರೆ ಯಾವುದಾದರೂ ಎರಡರ ನಡುವೆ ಕಾಣುವುದು ಕಷ್ಟ ಸಾಧ್ಯ. ಭಾರತದ ಬಹು ಭಾಗಗಳಲ್ಲಿ ಇವೊತ್ತಿಗೂ 60–70 ಮಕ್ಕಳಿರುವ ತರಗತಿಗಳನ್ನು ಪ್ರೈಮರಿ ಹಾಗೂ ಸೆಕಂಡರಿ ಹಂತಗಳಲ್ಲಿ ಕಾಣಬಹುದು. ನೂರು ನೂರಿಪ್ಪತ್ತು ವಿದ್ಯಾರ್ಥಿಗಳು ತುಂಬಿರುವ ಕಾಲೇಜು ತರಗತಿಗಳಲ್ಲಿ ಅಧ್ಯಾಪಕ ಧ್ವನಿವರ್ಧಕವನ್ನು ಬಳಸುವುದೂ ಕಾಣಸಿಗುವ ವಿಷಯ. ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿ ಸ್ವಾನುಭವದ ಮೂಲಕ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವುದಾಗಲೀ ಸ್ವಪ್ರಯತ್ನದಿಂದ ಜ್ಞಾನಾರ್ಜನೆ ಮಾಡುವದಾಗಲೀ ಹೇಗೆ ತಾನೇ ಸಾಧ್ಯ? ವಸ್ತುಸ್ಥಿತಿಯ ಸತ್ಯಾಂಶಗಳನ್ನು ಕಲಿಸುವವನಿಂದ ಕಲಿಯುವವನಿಗೆ ರವಾನಿಸುವದೊಂದೇ ಇಂತಹ ವಿದ್ಯಾಭ್ಯಾಸ ಕ್ರಮದ ಉದ್ದೇಶವಾದರೆ ಆಶ್ಚರ್ಯವಲ್ಲ. ಉರು ಹಚ್ಚುವದಕ್ಕೂ, ಜ್ಞಾಪಕಶಕ್ತಿ ಹೆಚ್ಚಿದ್ದವನು ಉರು ಹಚ್ಚಿದ್ದನ್ನು ಪರೀಕ್ಷೆಯ ಸಂದರ್ಭದಲ್ಲಿ ತೋರಿಸಿಕೊಳ್ಳುವುದಕ್ಕೂ ಇಂತಹ ಸನ್ನಿವೇಶ ಪ್ರೋತ್ಸಾಹ ಕೊಡುವುದು ಅನಿವಾರ್ಯ. ಜೊತೆಗೆ, ಪ್ರತಿವರ್ಷದ ಕೊನೆಗೂ ಒಂದು ಪರೀಕ್ಷೆಯಿದ್ದು ತೇರ್ಗಡೆಯಾಗದವನು ಅದೇ ತರಗತಿಯಲ್ಲಿ ಮತ್ತೆ ಇನ್ನೊಂದು ವರ್ಷದವರೆಗೆ ಉಳಿದು ಮೊದಲು ಕಲಿತದ್ದನ್ನು ಇನ್ನೊಮ್ಮೆ ಕಲಿಯುವುದು ಭಾರತದ ಶಾಲೆಗಳಲ್ಲಿನ ಇನ್ನೊಂದು ಮುಖ್ಯರಾದ ಅಂಶ. ಹೀಗಾಗಿ, ಕೆಲವು ಶಾಲೆಗಳಲ್ಲಿ ಪೆದ್ದ 'ಮಾನೀಟರಿ'ಗೂ ಜಾಣ ಹುಡುಗನಿಗೂ ಹಲವಾರು ವರ್ಷಗಳ ವ್ಯತ್ಯಾಸವಿರುವದು ಸಂಭವನೀಯ.

ಭಾರತದ ಹಾಗೂ ಬ್ರಿಟನ್ನಿನ ವಿದ್ಯಾಭ್ಯಾಸ ವ್ಯವಸ್ಥೆಗಳಲ್ಲಿ ಇನ್ನೂ ಒಂದು ಮುಖ್ಯ ವ್ಯತ್ಯಾಸವಿದೆ: ತರಗತಿಯಲ್ಲಿರುವ ವಿದ್ಯಾರ್ಥಿಗಳು ಹೇಗೆ ನಡೆದುಕೊಳ್ಳುವದು, ಹೇಗೆ ನಡೆದುಗೊಳ್ಳಬೇಕು ಅನ್ನುವದರ ಬಗೆಗ ದೊಡ್ಡವರಿಗಿರುವ ಅಪೇಕ್ಷೆಯಲ್ಲಿನ ವ್ಯತ್ಯಾಸ. ಅನಗತ್ಯವಾದ ಮಾತು, ಚಲನವಲನೆಗಳು ಕಡಿಮೆಯಾಗದೇ ಭಾರತದ ದೊಡ್ಡ ತರಗತಿಯಲ್ಲಿ ಪಾಠ ಪ್ರವಚನ ಸಾಧ್ಯವಾಗದು. ಎದುರಿಗಿರುವ ಪುಸ್ತಕಗಳಲ್ಲಿ ಮುಖ ಬಚ್ಚಿಟ್ಟ ಮೂಕ ವಿದ್ಯಾರ್ಥಿಗಳ ಸಾಲು ಅಧ್ಯಾಪಕನ ಮನಸ್ಸಿನಲ್ಲಿ ಅಳಿಯದೇ ಉಳಿಯುವ ಚಿತ್ರ. ಬ್ರಿಟನ್ನಿನ ಸಾಮಾನ್ಯವಾದುದೊಂದು ಶಾಲೆ

ಯಲ್ಲಿ ಹುಡುಗರಿಗಿರುವ ಸ್ವಾತಂತ್ರ್ಯ, ಎದುರು ವಾದಿಸುವ ಧೈರ್ಯ ಹಾಗೂ ಅದಕ್ಕೆ ಅಧ್ಯಾಪಕ ಕೊಡುವ ಅವಕಾಶ ಭಾರತದ ಸನ್ನಿವೇಶದಲ್ಲಿ ಅಚಿಂತ್ಯ. ಅಧ್ಯಾಪಕನ ಅಧಿಕಾರ ಭಂಗವಾಗದೇ ಇರುವುದು ಭಾರತದ ಶಾಲೆಗಳಲ್ಲಿನ ಮೂಲೋದ್ದೇಶವಾಗಿರುವತನಕ ಬ್ರಿಟನ್ನಿನಲ್ಲಿ ಕಂಡುಬರುವ ವ್ಯವಸ್ಥೆ ಸಾಧ್ಯವಾಗದು.

ಇಂತಹ ಹಿನ್ನೆಲೆಯಿಂದ ಬಂದ ಭಾರತದ ವಿದ್ಯಾರ್ಥಿಗಳ ದಕ್ಷತೆಗಳಲ್ಲಿ ಬ್ರಿಟನ್ನಿಗೆ ಬಂದ ಮೇಲೆ ಕಾಣುವ ಬದಲಾವಣೆಗೆ ಬ್ರಿಟನ್ನಿನ ಶಾಲೆಗಳೇ ಕಾರಣವೆಂದರೆ ತಪ್ಪಾಗಲಾರದು. ವಲಸೆ ಬಂದ ತಂದೆ ತಾಯಿಗಳ ದಿನನಿತ್ಯದ ಬದುಕು, ಮನೆಯ ಪರಿಸರ ಸಾರ್ಥಕವಾಗಿ ಬದಲಾಗಲು ವರ್ಷಗಳೇ ಬೇಕು ಅನ್ನುವದನ್ನು ಗಮನದಲ್ಲಿಟ್ಟುಕೊಂಡಾಗ ಶಾಲೆಯ ಪ್ರಭಾವ ಎಷ್ಟು ಮುಖ್ಯ ಅನ್ನುವುದು ಮನದಟ್ಟಾಗದೇ ಹೋಗದು. ಯಾವ ದೇಶವೇ ಆಗಲಿ, ವಲಸೆ ಹೋಗುವ ಎಲ್ಲರ ಬಗೆಗೂ ಈ ಮಾತು ವಾಸ್ತವವೇನೋ. ಭಾರತದಿಂದ, ಪಾಕಿಸ್ತಾನದಿಂದ ಬ್ರಿಟನ್ನಿಗೆ ಬಂದವರ ಬಗೆಗೆ ಈ ಮಾತು ಕಣ್ಣಿಗೆ ಹೊಡೆಯುವಷ್ಟು ಮಟ್ಟಿಗೆ ದಿಟ. ಅವರು ಬರುವಾಗ ತರುವ ಮೌಲ್ಯ ಸಂಘಟಣೆಯಲ್ಲಿ, ಆಧಾರಭೂತವಾದ ನಂಬಿಕೆಗಳಲ್ಲಿ ಬದಲಾವಣೆ ಆಗುವುದಕ್ಕೆ ಹಲವಾರು ತಲೆಮಾರುಗಳೇ ಅಗತ್ಯವೆನ್ನುವುದು ಸಮಾಜಶಾಸ್ತ್ರಜ್ಞರ ಅಭಿಪ್ರಾಯ. ತಮ್ಮ ಮಕ್ಕಳು ಅಭಿವೃದ್ಧಿಗೆ ಬರಬೇಕೆನ್ನುವ ಆಸೆ ಉತ್ಕಟವಾಗಿದ್ದರೂ ತಂದೆ ತಾಯಿಗಳು ಇಂಗ್ಲಿಷ್ ಮಾತಾಡುವುದೂ ಇಂಗ್ಲಿಷ್ ಭಾಷೆಯನ್ನು ಕಲಿಯುವ ಪ್ರಯತ್ನ ಮಾಡುವುದೂ ಕಡಿಮೆ. ಹೀಗಾಗಿ, ಮಕ್ಕಳ ದಕ್ಷತೆಗಳಲ್ಲಿ ಕಂಡುಬರುವ ಬದಲಾವಣೆಗಳಿಗೆ ಮನೆಯ ಪರಿಸರಕ್ಕಿರುವ ಪ್ರಭಾವ ಸೊನ್ನೆಯೆನ್ನಬಹುದು.

ವಲಸೆ ಬಂದವರ ಒಟ್ಟು ಪರಿಸರದಲ್ಲಿ ಆಗುವ ಬದಲಾವಣೆಗೂ ದಕ್ಷತೆಗಳಲ್ಲಿ ಕಂಡುಬರುವ ಪರಿವರ್ತನೆಗೂ ಸಂಬಂಧ ಸ್ಥಾಪಿಸುವ ಸಂಶೋಧನೆಗಳು ಹಿಂದೆಯೇ ನಡೆದವು. 1924ರ ಹೊತ್ತಿಗೇ ಫೇನ್‌ಗೋಲ್ಡ್[11] ನಡೆಸಿದ ಸಂಶೋಧನೆ ಒಂದು ಉತ್ತಮ ಉದಾಹರಣೆ. ಅಮೆರಿಕದ ಸೈನ್ಯಕ್ಕೆ ಸೇರಿದ ಅಮೆರಿಕನ್ನರ ಹಾಗೂ ಪೋಲೆಂಡಿಂದ ಇಟಲಿಯಿಂದ ವಲಸೆ ಬಂದ ಜನರ ಮನೋವ್ಯಾಪಾರಗಳಲ್ಲಿ ಕಂಡಬಂದ ವ್ಯತ್ಯಾಸ ಎರಡು ವರ್ಷಗಳಷ್ಟು ; ಅದೇ ಅವರ ಮಕ್ಕಳ ಮನೋವ್ಯಾಪಾರಗಳಲ್ಲಿದ್ದ ವ್ಯತ್ಯಾಸ 9 ತಿಂಗಳಷ್ಟು. ಶಾಲೆಗಳು ಅಷ್ಟು ಮಕ್ಕಳಿಗೆ ಒದಗಿಸಿದ ಸಮಾನಾನುಭವಗಳು, ಒಂದೇ ಒಂದು ತಲೆಮಾರಿನಷ್ಟು ಕಾಲಾವಧಿಯಲ್ಲಿ, ವ್ಯತ್ಯಾಸವನ್ನು ಅರ್ಧದಷ್ಟು ತುಂಡರಿಸಿತ್ತೆನ್ನುವುದು ಗಮನಾರ್ಹವಾದ ವಿಷಯ. .

ಆರ್ಥರ್[12] ಅವರ ಸಂಶೋಧನೆಯೂ ಇದೇ ಜಾತಿಯದು. ಫಿನ್‌ಲೆಂಡ್ ರಷ್ಯಾ ಹಾಗೂ ದಕ್ಷಿಣ ಯೂರೋಪಿನಿಂದ ಅಮೆರಿಕಕ್ಕೆ ಬಂದ 92 ಜೊತೆ ಒಡಹುಟ್ಟಿದವರ ಬುದ್ಧಿಮಟ್ಟವನ್ನಳೆದಾಗ, ದೊಡ್ಡ ಮಕ್ಕಳ ಸರಾಸರಿ 99 ರಷ್ಟು, ಒಡಹುಟ್ಟಿದವರಲ್ಲಿ ಚಿಕ್ಕವರಿಗೆ ಸಾಧ್ಯವಾಗಿದ್ದ ಇಂಗ್ಲಿಷ್ ಭಾಷೆಯ ಜೊತೆಗಿನ ಹೆಚ್ಚು ಪರಿಚಯವನ್ನು ಗಣನೆಗೆ ತೆಗೆದುಕೊಂಡ ಮೇಲೂ ಕಂಡುಬಂದ ವ್ಯತ್ಯಾಸ ಸಾರ್ಥಕವಾಗಿತ್ತು. ಹುಟ್ಟಿಂದಲೇ ಚಿಕ್ಕವರು ಒಡಹುಟ್ಟಿದವರಿಗಿಂತ ಹೆಚ್ಚು ಬುದ್ಧಿವಂತರಾಗಿದ್ದರೆನ್ನುವ ಆರ್ಥರ್ ಅವರ ವಾದವನ್ನು ನಾವು ಒಪ್ಪುವ ಕಾರಣವಿಲ್ಲ. ಅಮೆರಿಕದ ಬದುಕಿಗೆ ಹೆಚ್ಚು ಹತ್ತಿರವಾಗಿದ್ದ ಮಾತುಗಳಲ್ಲಿ ಹಾಗೂ ಅಮೆರಿಕದ ಸಂಸ್ಕೃತಿಗೆ ಒಪ್ಪಿಕೊಂಡು ಬದುಕುವುದಕ್ಕೆ ಚಿಕ್ಕ ಮಕ್ಕಳಿಗೆ ಇದ್ದ ಹೆಚ್ಚಿನ ಅವಕಾಶದ ಮಾತುಗಳಲ್ಲಿ ವಿವರಣೆ ಕೊಡುವುದು ಉಚಿತ.

ಪರಿಸರದಲ್ಲಾಗುವ ಬದಲಾವಣೆಯ ಪ್ರಭಾವಕ್ಕೆ ಸಂಬಂಧಪಟ್ಟ ಹಾಗೆ ತುಂಬ ಕೆಲಸ ಮಾಡಿರುವ ಸಂಶೋಧಕ ಕ್ಲೈನ್‌ಬರ್ಗ್. ಅಮೆರಿಕದ ದಕ್ಷಿಣ ಪ್ರಾಂತಗಳಲ್ಲಿದ್ದ ನೀಗ್ರೋ ಜನದ ಬುದ್ಧಿಮಟ್ಟಕ್ಕಿಂತ ಹೆಚ್ಚಿನ ಮಟ್ಟ ನ್ಯೂಯಾರ್ಕ್, ಲಾಸ್ ಏಂಜಲಿಸ್ ಹಾಗೂ ವಾಷಿಂಗ್‌ಟನ್ನಿನ ನೀಗ್ರೋಗಳಲ್ಲಿ ಕಂಡುಬಂದದ್ದಕ್ಕೆ ಕಾರಣ, ಉತ್ತರ ಪ್ರಾಂತಗಳಲ್ಲಿದ್ದ ಉತ್ತಮ ಪರಿಸರವಾಗಲೀ ವಿದ್ಯಾಭ್ಯಾಸಕ್ಕಿದ್ದ ಹೆಚ್ಚಿನ ಅವಕಾಶಗಳಾಗಲೀ ಕಾರಣವಲ್ಲ. ಅಲ್ಲಿಯ ನೀಗ್ರೋ ಜನ ಹುಟ್ಟಿಂದಲೇ ಹೆಚ್ಚು ಬುದ್ಧಿವಂತರೆನ್ನುವುದೇ ಕಾರಣವೆಂದು ಜನಸಾಮಾನ್ಯರು ಸಾಧಿಸುತ್ತಿದ್ದ 1930ರ ಕಾಲ. ದಕ್ಷಿಣದ ಪ್ರಾಂತಗಳಿಂದ ಉತ್ತರಾಭಿಮುಖವಾಗಿ ಬಂದದ್ದೇ ಈ ಮಾತಿನ ಸತ್ಯಕ್ಕೆ ಸಾಕ್ಷಿಯೆಂದು ಸಂಶೋಧಕರು ಸಾರುತ್ತಿದ್ದ ಕಾಲದಲ್ಲಿ ಕ್ಲೈನ್‌ಬರ್ಗ್ ಮಾಡಿದ ಕೆಲಸಕ್ಕೆ ಹೆಚ್ಚಿನ ಬೆಲೆ. ಜನ ಉತ್ತರಕ್ಕೆ ವಲಸೆ ಹೋಗುವುದು ಯಾಕೆ ಅನ್ನುವದನ್ನು ಶಾಸ್ತ್ರೋಕ್ತವಾಗಿ ಅಭ್ಯಾಸ ಮಾಡಿದ ಕ್ಲೈನ್‌ಬರ್ಗ್ ಹಲವಾರು ಕಾರಣಗಳನ್ನು ಕಂಡುಕೊಂಡರು. ಮಕ್ಕಳಿಗೆ ವಿದ್ಯಾಭ್ಯಾಸದ ದೃಷ್ಟಿಯಿಂದ ಹೆಚ್ಚಿನ ಅನುಕೂಲತೆ, ತಮಗೆ ಒಳ್ಳೆಯ ಕೆಲಸ ಸಿಗುವ ಸಂಭವ, ದಕ್ಷಿಣದ ಪ್ರಾಂತಗಳಲ್ಲಿದ್ದ ನಿರುದ್ಯೋಗದ ಮಟ್ಟ, ನ್ಯೂಯಾರ್ಕ್ ವಾಷಿಂಗ್‌ಟನ್ನಿನಲ್ಲಿ ಇದ್ದ ನೆಂಟರು, ಸ್ನೇಹಿತರು, ಇವತ್ತೋ ನಾಳೆಯೋ ಪೋಲೀಸಿನವರು ದಸ್ತಗಿರಿ ಮಾಡಬಹುದೆನ್ನುವ ಕೆಲವರ ಹೆದರಿಕೆ-ಹತ್ತಾರು ಕಾರಣಗಳಿದ್ದದ್ದನ್ನು ಸಂಶೋಧಕರು ಎತ್ತಿ ಹಿಡಿದರು. ಉತ್ತರದ ಪ್ರಾಂತಗಳಿಗೆ ವಲಸೆ ಹೋದದ್ದಕ್ಕೆ ಕೆಲವು ನೀಗ್ರೋ ಜನಕ್ಕಿದ್ದ ಹೆಚ್ಚಿನ ಬುದ್ಧಿ ಅನ್ನುವ ಮಾತು ಪೊಳ್ಳು ಎಂದು ಪ್ರಮಾಣಪೂರ್ವಕವಾಗಿ ಸಾಧಿಸಿದರು.

1930–35ರಲ್ಲಿ ಜನಪ್ರಿಯವಾಗಿದ್ದ ಇನ್ನೊಂದು ನಂಬಿಕೆಯನ್ನೂ ಕ್ಲೈನ್‌ಬರ್ಗ್ ಪರೀಕ್ಷೆಗೆ ಗುರಿಪಡಿಸಿದರು, ದಕ್ಷಿಣದ ಪ್ರಾಂತಗಳಿಂದ ಉತ್ತರಕ್ಕೆ ಬಂದ

ಮಕ್ಕಳ ಬುದ್ಧಿ ಮಟ್ಟ ದಕ್ಷಿಣದಲ್ಲೇ ಉಳಿದ ಮಕ್ಕಳ ಬುದ್ಧಿಮಟ್ಟಕ್ಕಿಂತ ಹೆಚ್ಚಿನ್ನುವ ನಂಬಿಕೆಗೆ ಸಂಶೋಧನೆಯಲ್ಲಿ ಆಧಾರ ಕಂಡುಬರಲಿಲ್ಲ. ಉತ್ತರದ ಪ್ರಾಂತಗಳಿಗೆ ಬಂದ 562 ನೀಗ್ರೋ ಮಕ್ಕಳ ದಾಖಲೆಗಳನ್ನು ಪರೀಕ್ಷೆ ಮಾಡಿದಾಗ ಅವರು ದಕ್ಷಿಣದ ನೀಗ್ರೋ ಮಕ್ಕಳ ಉಚಿತ ಪ್ರತಿನಿಧಿಗಳಾಗಿದದ್ದು ಕಂಡುಬಂತು.

12 ವಯಸ್ಸಿನ ಸುಮಾರು 3000 ಮಕ್ಕಳ ಬುದ್ಧಿಮಟ್ಟವನ್ನಳೆದಾಗ ಅದಕ್ಕೂ ನ್ಯೂಯಾರ್ಕಿನಲ್ಲಿ ಅವರಿದ್ದ ಅವಧಿಗೂ ಅನುಸಾರಿ ಸಂಬಂಧವಿದ್ದದ್ದು ಕಂಡುಬಂತು. ಕಾಲಾವಧಿಯ ದೃಷ್ಟಿಯಿಂದ ಮಕ್ಕಳನ್ನು ವಿಂಗಡಿಸುವಾಗ ಅವರ ವಯಸ್ಸಿಗೆ, ಲಿಂಗ ಭೇದಕ್ಕೆ, ಆರ್ಥಿಕ–ಸಾಮಾಜಿಕ ಪರಿಸರಗಳಿಗೆ ಗಮನ ಕೊಟ್ಟಿದ್ದಲ್ಲದೇ ಮಕ್ಕಳನ್ನು ಅದದೇ ಶಾಲೆಗಳಿಂದ ಹೋಲಿಕೆಗೆ ಆರಿಸಿಕೊಂಡಿದ್ದು ಈ ಸಂಶೋಧನೆಯ ಹೆಚ್ಚಳ. ಕ್ಲೈನ್‌ಬರ್ಗ್ ಅವರ ಸಂಶೋಧನೆಯಲ್ಲಿ ಕಂಡು ಬಂದ ಕೆಲವು ಮುಖ್ಯ ಮಾನಗಳನ್ನು ಕೆಳಗಿನ ಎರಡು ತಃಖ್ತೆಗಳಲ್ಲಿ ನೋಡಬಹುದು :

ಒಂದು

ರಾಷ್ಟ್ರೀಯ ಬುದ್ಧಿಮಾಪಕ			ಸ್ಟಾನ್‌ಫರ್ಡ್–ಬೀನೇ		
ನ್ಯೂಯಾರ್ಕ್‌ನಲ್ಲಿ ಕಳೆದಿದ್ದ ಕಾಲ-ವರ್ಷಗಳಲ್ಲಿ	ಮಕ್ಕಳ ಸಂಖ್ಯೆ	ಸರಾಸರಿ ಅಂಕ	ನ್ಯೂಯಾರ್ಕ್‌ನಲ್ಲಿ ಕಳೆದಿದ್ದ ಕಾಲ-ವರ್ಷಗಳಲ್ಲಿ	ಮಕ್ಕಳ ಸಂಖ್ಯೆ	ಸರಾಸರಿ ಅಂಕ
1–2	150	72	<1	42	81.4
3–4	125	76	1–2	40	84.2
5–6	136	84	2–3	40	84.5
7–8	112	90	3–4	47	85.5
<8	157	94	<4	47	87.4
ಅಲ್ಲೇ ಹುಟ್ಟಿದವು	1017	92	ಅಲ್ಲೇ ಹುಟ್ಟಿದವು	99	87.3

ಎರಡು

ಮಿನಸೋಟಾ ಫಾರ್ಮ್ ಬೋರ್ಡ್		
ನ್ಯೂಯಾರ್ಕ್‌ನಲ್ಲಿ ಕಳೆದ ಕಾಲ-ವರ್ಷಗಳಲ್ಲಿ	ಮಕ್ಕಳ ಸಂಖ್ಯೆ	ಮಧ್ಯಸ್ಥ ಅಂಕ
1-2	27	39
3-4	25	36.67
5-6	30	31.88
7-8	23	37.5
9-10	25	37.5
<10	41	37.5
ಅಲ್ಲೇ ಹುಟ್ಟಿದವು	223	41.61

ಪಿಂಟ್ನರ್-ಪ್ಯಾಟರ್ಸನ್ ಮಾಪಕ		
ನ್ಯೂಯಾರ್ಕ್‌ನಲ್ಲಿ ಕಳೆದ ಕಾಲ-ವರ್ಷಗಳಲ್ಲಿ	ಮಕ್ಕಳ ಸಂಖ್ಯೆ	ಸರಾಸರಿ ಅಂಕ
<2	20	142.5
2-5	20	139.8
<5	20	152.1
ಅಲ್ಲೇ ಹುಟ್ಟಿದವು	50	164.1

ಶಾಬ್ದಿಕ ಸಮಸ್ಯೆಗಳೇ ಪ್ರಧಾನವಾಗಿರುವ ರಾಷ್ಟ್ರೀಯ ಬುದ್ಧಿ ಮಾಪಕದಲ್ಲಿ ಮಕ್ಕಳು ಗಳಿಸಿದ ಅಂಕ, ಅವರು ನ್ಯೂಯಾರ್ಕಿನಲ್ಲಿ ಇದ್ದ ಕಾಲಾವಧಿ ಹೆಚ್ಚಿದ ಹಾಗೆ, ಹೆಚ್ಚುವದನ್ನು ನೋಡಬಹುದು. ಕೈ ಚಳಕ ಮುಖ್ಯವಾದ ಪಿಂಟ್ನರ್—ಪ್ಯಾಟರ್ಸನ್ ಮಾಪಕದಲ್ಲಿ ಗಳಿಸಿದ ಅಂಕಗಳಲ್ಲೂ ಗಮನಾರ್ಹವಾದ ವ್ಯತ್ಯಾಸ ಇದೆ. ಉಳಿದೆರಡು ಮಾಪಕಗಳಲ್ಲಿ ಕಾಣುವ ವ್ಯತ್ಯಾಸದ ದಿಕ್ಕು ನಿರೀಕ್ಷಿತವಾಗಿದ್ದರೂ ಅದರ ಗಾತ್ರ ಸಣ್ಣದು.

ಇಷ್ಟೇ ಗಮನಾರ್ಹವಾದ ಇನ್ನೊಂದು ಸಂಶೋಧನೆಯನ್ನು ನಡೆಸಿದವರೂ ಕ್ಲೈನ್‌ಬರ್ಗ್ ಅವರೇ. ಈ ಸಂಶೋಧನೆಯಲ್ಲಿ ಅಭ್ಯಾಸಕ್ಕೆ ತಿಗೆದುಕೊಂಡ ವಿಷಯ ನೀಗ್ರೋಗಳ ಹಾಗೂ ಇಂಡಿಯನ್ನರ ಕಾರ್ಯ ನಿರ್ವಹಣೆಯ ವಿಧಾನ. ವ್ಯತ್ಯಸ್ತವಾದ ಪರಿಸರಗಳಲ್ಲಿರುವ ಒಂದೇ ಕುಲದ ಜನ ಹೇಗೆ, ತಮ್ಮ ಪರಿಸರಕ್ಕೆ

ಅನುವಾಗುವಂತೆ, ತಮ್ಮ ಕಾರ್ಯ ನಿರ್ವಹಣೆಯ ಕ್ರಮವನ್ನು ಬದಲಾಯಿಸಿಕೊಳ್ಳು ತ್ತಾರೆ ಅನ್ನುವದಕ್ಕೆ ಪ್ರಮಾಣ ಈ ಸಂಶೋಧನೆಯಲ್ಲಿದೆ. ನ್ಯೂಯಾರ್ಕಿನ ನೀಗ್ರೋ ಜನ ವೆಸ್ಟ್ ವರ್ಜಿನಿಯಾದ ನೀಗ್ರೋ ಜನಕ್ಕಿಂತ, ಹಾಸ್ಕೆಲ್ ಇನ್‌ಸ್ಟಿಟ್ಯೂಟಿನ ಇಂಡಿಯನ್ನರು ವಾಷಿಂಗ್‌ಟನ್ನಿನಲ್ಲಿ ಕಾದಿರಿಸಿರುವ ನೆಲದಲ್ಲಿ ಬದುಕಿದ್ದ ಯಕೀಮಾ ಇಂಡಿಯನ್ನರಿಗಿಂತ, ಹೆಚ್ಚು ಚುರುಕಾಗಿ ಕೆಲಸ ಮಾಡುವುವದಕ್ಕೆ ಪರಿಸರದ ಪ್ರಭಾವವೇ ಕಾರಣವೆನ್ನುವ ಕ್ಲೈನ್‌ಬರ್ಗ್ ಅವರ ವಾದವನ್ನು ಅಲ್ಲಗಳೆಯುವುದು ಕಷ್ಟ.

ಪರಿಸರಗಳ ನಡುವೆಗಿರುವ ವ್ಯಾತ್ಯಾಸ ಕಡಿಮೆಯಾದಾಗ ಜನರ ಬುದ್ಧಿ ಪೂರ್ವಕ ವರ್ತನೆಗಳ ನಡುವೆಗಿರುವ ವ್ಯತ್ಯಾಸವೂ ಕಡಿಮೆ ಅನ್ನುವ ಕ್ಲೈನ್‌ಬರ್ಗ್ ಅವರ ಸಿದ್ಧಾಂತಕ್ಕೆ ಬೆಂಬಲವನ್ನು ಕೊಡುವ ಹಲವಾರು ಸಂಶೋಧನೆಗಳಿವೆ. ಅವುಗಳಲ್ಲಿ ಮುಖ್ಯವಾದ ಮೂರನ್ನು ಹೆಸರಿಸಿದರೆ ಸಾಕು. ಲಾಂಗ್ [13] ಅವರು ವಾಷಿಂಗ್‌ಟನ್ನಿನಲ್ಲಿ ನಡೆಸಿದ ಸಂಶೋಧನೆ, ಕ್ಲೈನ್‌ಬರ್ಗ್ ಅವರ ಅಭ್ಯಾಸವನ್ನು ಫಿಲಿಡೆಲ್ಫಿಯಾದ ಸಂದರ್ಭದಲ್ಲಿ ಪುನರಾವರ್ತಿಸಿದ ಲೀ[14] ಅವರ ಸಂಶೋಧನೆ ಹಾಗೂ ಮೆಕಾರ್ಡ್ [15] ಅವರು ಮಾಡಿದ ಕೆಲಸಗಳೇ ಈ ಮೂರು.

ಈ ಎಲ್ಲ ಸಂಶೋಧನೆಗಳು ಸಾಧಿಸಿದ್ದನ್ನು ಒಟ್ಟು ಮಾತುಗಳಲ್ಲಿ ಹೇಳುವುದಾದರೆ ಉತ್ತರ ಅಮೆರಿಕದ ಪ್ರಗತಿಪರ ಪರಿಸರದಲ್ಲಿದ್ದು ಪ್ರತ್ಯೇಕವಲ್ಲದ ಶಾಲೆಗಳಿಗೆ ಹೋಗಿಬರುವ ನೀಗ್ರೋ ಮಕ್ಕಳು ದಕ್ಷಿಣದ ಸಂಕುಚಿತ ಪ್ರತಿಗಾಮಿ ಪರಿಸರದಲ್ಲಿರುವ ನೀಗ್ರೋ ಮಕ್ಕಳಿಗಿಂತ ಹೆಚ್ಚು ಅಂಕಗಳನ್ನು ಬುದ್ಧಿ ಪರೀಕ್ಷೆಯಲ್ಲಿ ಗಳಿಸುತ್ತಾರೆ,

ನೀಗ್ರೋಗಳ ಬಗೆಗೆ ದಿಟವಾದ ಈ ನಿರ್ಣಯ ಇಂಡಿಯನ್ನರ ಬಗೆಗೂ ಉಚಿತ ವೆಂದು ತೋರಿಸುವ ಸಂಶೋಧನೆಗಳಿವೆ. ಬಿಳಿಯ ಅಮೆರಿಕನ್ ಮನೆಗಳಲ್ಲಿ ಸಾಕು ಮಕ್ಕಳಾಗಿದ್ದ ಇಂಡಿಯನ್ನರ ಬುದ್ಧಿಮಟ್ಟ 102 ಇದ್ದರೂ, ಉಳಿದ ಇಂಡಿಯನ್ ಮಕ್ಕಳ ಬುದ್ಧಿಮಟ್ಟ 81 ಎಂದು ತೋರಿಸಿದವರು ಗಾರ್ತ್[16]. ಬುದ್ಧಿವಂತರಾಗಿ ಕಾಣುವಂತಹ ಮಕ್ಕಳನ್ನು ಮಾತ್ರ ಆರಿಸಿಕೊಂಡು ಸಾಕುವ ಜನರ ಮನೋಭಾವವನ್ನು ಗಾರ್ತ್ ಮರೆಯಲಿಲ್ಲ. ಸಾಕು ಮಕ್ಕಳ ಒಡ ಹುಟ್ಟಿದವರ ಬುದ್ಧಿಮಟ್ಟ ಕೇವಲ 87.5 ರಷ್ಟು ಇದ್ದದ್ದನ್ನು ಸಂಶೋಧಕರು ತೋರಿಸಿಕೊಟ್ಟದ್ದರಿಂದಲೇ ಈ ಈ ಸಂಶೋಧನೆಗೆ ಬೆಲೆ. ಸಾಕು ಮಕ್ಕಳಿಗೂ ಅವರ ಒಡಹುಟ್ಟಿದವರಿಗೂ ಇದ್ದ ವ ತ್ಯಾಸಕ್ಕೆ ಪರಿಸರ ಭೇದವೊಂದೇ ಕಾರಣವೆಂದರೆ ತಪ್ಪು—ಒಡಹುಟ್ಟಿದವರ ಬುದ್ಧಿ ಮಟ್ಟದಲ್ಲಿ ವ್ಯತ್ಯಾಸವಿರುವುದು ಎಲ್ಲರಿಗೂ ತಿಳಿದ ವಿಷಯ ಆದರೂ ಗಾರ್ತ್ ಅವರು ನಡೆಸಿದ್ದ ಈ ಸಂಶೋಧನೆಗೆ ಒಂದು ಮೈಲಿಗಲ್ಲು.

ಪರಿಸರದ ಬದಲಾವಣೆಗಿರುವ ಪ್ರಭಾವವನ್ನು ಅತಿ ಮನೋಜ್ಞವಾಗಿ ತೋರಿಸಿಕೊಡುವ ನಿದರ್ಶನ ರೋಪರ್[17] ಅವರ ಅಭ್ಯಾಸದಲ್ಲಿ ನಾವು ಕಾಣ ಬಹುದು. ಒಸಾಜೋ ಇಂಡಿಯನ್ನರಿಗೆಂದು ಮುಡಿಪಾಗಿಟ್ಟ ನೆಲದಲ್ಲಿ ಖನಿಜ ತೈಲ ಪತ್ತೆಯಾಗಿ ಆ ಜನದ ಆರ್ಥಿಕ ಪರಿಸ್ಥಿತಿ ಗುರುತು ಸಿಕ್ಕದ ಹಾಗೆ ಬದಲಾ ಯಿತು, ಮಕ್ಕಳ ವಿದ್ಯಾಭ್ಯಾಸಕ್ಕೆ ಇದ್ದ ಅನುಕೂಲತೆಯೂ ಹೆಚ್ಚಿತು. ಶಾಬ್ದಿಕ ಮಾಪಕದ ಪ್ರಕಾರ ಅವರ ಬುದ್ಧಿಮಟ್ಟ 100ರಷ್ಟು ಶಾಬ್ದಿಕವಲ್ಲದ ಮಾಪಕದ ಅವರು ಬುದ್ಧಿಮಟ್ಟ 104ರಷ್ಟು ಇದ್ದದ್ದು ವಿಶೇಷದ ಸಂಗತಿ. ಬಿಳಿಯ ಅಮೆರಿಕನ್ ಮಕ್ಕಳ ಬುದ್ಧಿಮಟ್ಟಕ್ಕೆ ಸರಿಸಮಾನವಾದ ಬುದ್ಧಿಮಟ್ಟ ಇದು. ಸಾಮಾನ್ಯವಾಗಿ ಇಂಡಿಯನ್ ಮಕ್ಕಳ ಬುದ್ಧಿಮಟ್ಟ ಬಿಳಿಯ ಮಕ್ಕಳ ಸರಾಸರಿಗಿಂತ ಅರ್ಧ ವಿಚಲನೆ ಯಷ್ಟು, ಅಥವಾ 7.5 ಅಂಕಗಳಷ್ಟು, ಕೆಳಗಿರುವದನ್ನು ನೆನೆದಾಗ ಪರಿಸರದ ಪರಿ ವರ್ತನೆಯಿಂದ ಸಾಧ್ಯವಾಗುವ ವೃದ್ಧಿ ಮನದಟ್ಟಾಗುವುದು.

ಇಸ್ರೇಲಿನ ಕೆಬ್ಬುಟ್ಸಿಮ್ನಿಗೆ ಆದರ ಪ್ರಗತಿಪರ ಪರಿಸರಕ್ಕೆ ಪೌರಾತ್ಯ ದೇಶ ಗಳಿಂದ ಬಂದ ಮಕ್ಕಳ ಬುದ್ಧಿಮಟ್ಟ ಏರಿದ್ದನ್ನ ಬ್ಲೂಮ್[18] ಅವರು ಗುರುತಿಸಿ ದ್ದಾರೆ. ಇದೇ ಜಾತಿಯ ಫರ್‌ಸ್ಟೈನ್ ಮತ್ತು ಶಲೋಮ್[19] ಅವರ ಇನ್ನೊಂದು ಸಂಶೋಧನೆಯಲ್ಲಿ ಇಸ್ರೇಲಿಗೆ ವಲಸೆ ಬಂದ ಪೌರಾತ್ಯ ದೇಶಗಳ ಮಕ್ಕಳ ಅಂಕೆ ರೇವನ್ ಅವರೆ ಅನುಕ್ರಮಿಕ ಮಾತೃಕೆಯಂತಹ ಮಾತೃಕೆಯಲ್ಲೂ ಹೆಚ್ಚಾದದ್ದನ್ನು ನಾವು ನೋಡಬಹುದು. 'ಸಾಂಸ್ಕೃತಿಕ ಪರಿಸರಕ್ಕೆ ಅಷ್ಟಾಗಿ ಸಿಕ್ಕದ ಕಟಲಿನ ಮಾಪಕದಲ್ಲಿ ರೇವನ್ ಅವರ ಮಾತೃಕೆಯಲ್ಲಿ ಅಂಕ ವೃದ್ಧಿಯಾದದ್ದನ್ನು ತೋರಿಸಿ ಕೊಡುವ ಸಂಶೋಧನೆಗಳೇ ಇಲ್ಲ.'—ಜೆನ್‌ಸನ್[20] ಅವರ ಘೋಷಣೆಯನ್ನು ಸುಳ್ಳಾಗಿಸುವದಕ್ಕೆ ಮೇಲಿನ ಸಂಶೋಧನೆ ಸಾಕು.

ಬ್ರಿಟನ್ನಿಗೆ ವಲಸೆ ಬಂದ ಮಕ್ಕಳಿಗೆ ಸಂಬಂಧಪಟ್ಟಹಾಗೆ ನಡೆದ ಸಂಶೋಧನೆ ಗಳೂ ಇವೆ. 1966ರಲ್ಲಿ ಲಂಡನ್ ನಗರದ ವಿದ್ಯಾಧಿಕಾರಿಗಳು[21] ನಡೆಸಿದ ಅಭ್ಯಾಸ ಇಂತಹುವಗಳಲ್ಲಿ ಒಂದು. ಇದ್ದ ಮಕ್ಕಳಲ್ಲಿ ಮೂರರಲ್ಲೊಂದಕ್ಕಿಂತ ಹೆಚ್ಚು 'ವಲಸೆ ಬಂದ' ಮಕ್ಕಳಿದ್ದ 57 ಪ್ರೈಮರಿ ಶಾಲೆಗಳೇ ಈ ಅಭ್ಯಾಸದ ವಸ್ತು. 'ವಲಸೆ ಬಂದ' ಮಗುವೆಂದರೆ ಯಾವುದು ಅನ್ನುವದಕ್ಕೆ ಉಪಯೋಗಿಸಿದ ಲಕ್ಷಣ ಸಿದ್ಧಾಂತ ಎಜುಕೇಶನ್ ಮತ್ತು ಸೈನ್ಸನ್ನಿನ ಇಲಾಖೆ ಕೊಟ್ಟಿದ್ದು:

1. ಬ್ರಿಟನ್ನಿನಲ್ಲಿ ಹುಟ್ಟಿ ಬೆಳೆಯದ ತಮ್ಮ ತಂದೆ ತಾಯಿಗಳನ್ನು ಅಥವಾ ಮೇಲ್ವಿಚಾರಕರನ್ನು ಕೂಡಲು ಬಂದ ಹೊರ ದೇಶಗಳಲ್ಲಿ ಹುಟ್ಟಿದ ಮಕ್ಕಳು ;

2. ಬ್ರಿಟನ್ನಿನಲ್ಲಿ ಹುಟ್ಟಿ ಬೆಳೆಯದ ತಮ್ಮ ತಂದೆ ತಾಯಂದಿರ ಅಥವಾ ಮೇಲ್ವಿಚಾರಕದ ಜೊತೆಗೇ ವಲಸೆ ಬಂದ ಹೊರದೇಶಗಳಲ್ಲಿ ಹುಟ್ಟಿದ ಮಕ್ಕಳು ;

3. ಬ್ರಿಟನ್ನಿಗೆ ವಲಸೆ ಬಂದ ಮೇಲೆ ಹತ್ತು ವರ್ಷಕ್ಕಿಂತ ಕಡಿಮೆ ಕಾಲ ಕಳೆದಿರುವ ಜನಕ್ಕೆ ಹುಟ್ಟಿದ ಮಕ್ಕಳು.

ಉತ್ತರ ಹಾಗೂ ದಕ್ಷಿಣ ಐರ್‌ಲೆಂಡಿಂದ ಬಂದ ಮಕ್ಕಳನ್ನು 'ವಲಸೆ ಬಂದ' ಮಕ್ಕಳೆಂದು ಈ ಸಂಶೋಧನೆ ಪರಿಗಣಿಸಲಿಲ್ಲ.

ಲಂಡನ್ನಿನ ವಿದ್ಯಾಧಿಕಾರಿಗಳು ನಡೆಸಿದ ಅಭ್ಯಾಸಕ್ಕೆ ಒಳಗಾದ ಇಂತಹ ಮಕ್ಕಳ ಸಂಖ್ಯೆ 1038. ಆ ಮಕ್ಕಳ ವಯಸ್ಸು 11ರಿಂದ 12ರೊಳಗಿದ್ದು ಸೆಕೆಂಡರಿ ಶಾಲೆಗಳಿಗೆ ವರ್ಗವಾಗುವ ಘಟ್ಟ ಮುಟ್ಟಿದ್ದವರಲ್ಲಿ ಕೆಲವರು ಇಂಗ್ಲಿಷ್ ಶಾಲೆಯಲ್ಲಿ 6 ತಿಂಗಳಷ್ಟನ್ನೂ ಕೆಲವರು 7 ವರ್ಷಗಳನ್ನೂ ಕಳೆದಿದ್ದರು. ಲಂಡನ್ನಿನ ಅಷ್ಟೂ ಶಾಲೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಕಾಣುವದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ವೆಸ್ಟ್ ಇಂಡಿಯನ್ ಮಕ್ಕಳಿದ್ದದ್ದನ್ನೂ, ಸಮಪ್ರಮಾಣದ ಭಾರತದ ಅಥವಾ ಪಾಕಿಸ್ತಾನದ ಮಕ್ಕಳಿದ್ದದ್ದನ್ನು ಸಂಶೋಧಕರು ಗುರುತಿಸಿದ್ದನ್ನು ನಾವು ಕಾಣಬಹುದು.

ಮಕ್ಕಳಿಗೆ ಕೊಟ್ಟಿದ್ದು ಶಾಬ್ದಿಕವಾದೊಂದು ಮಾಪಕ, ಇಂಗ್ಲಿಷ್ ಹಾಗೂ ಗಣಿತದ ಪರೀಕ್ಷೆಗಳು. ಸಂಶೋಧನೆಗೆ ಗುರಿಪಡಿಸಿದ ಮಕ್ಕಳು ಗಳಿಸಿದ ಅಂಕಗಳನ್ನು ನೆಲದ, ಅಂದರೆ ವಲಸೆ ಬಂದವರೆಂದು ಪರಿಗಣಿಸಲಾಗದ, ಮಕ್ಕಳ ಅಂಕಗಳ ಜೊತೆಗೆ ಹೋಲಿಸಿ ನೋಡಿದ್ದು ಈ ಶಂಶೋಧನೆಯ ಹೆಚ್ಚಳ. ಬ್ರಿಟನ್ನಿನಲ್ಲಿ ಹೆಚ್ಚು ಕಾಲ ಕಳೆದಿದ್ದ ಮಕ್ಕಳ ಅಂಕ ಹೊಸದಾಗಿ ಬಂದವರ ಅಂಕಕ್ಕಿಂತ ಉತ್ತಮವಾಗಿದ್ದದ್ದನ್ನು ಈ ಅಭ್ಯಾಸ ಎತ್ತಿಹಿಡಿಯಿತು. ಬ್ರಿಟನ್ನಿನಲ್ಲೇ ಅಕ್ಷರಾಭ್ಯಾಸ ಶುರು ಮಾಡಿದ್ದ ಮಕ್ಕಳ ಅಂಕಕ್ಕೂ ನೆಲದ ಮಕ್ಕಳ ಅಂಕಕ್ಕೂ ಸಾರ್ಥಕವಾದ ವ್ಯತ್ಯಾಸ ಕಂಡುಬರಲಿಲ್ಲ,

ಶಾಬ್ದಿಕ ಮಾಪಕದಲ್ಲಿ ವಲಸೆ ಬಂದ ಈ ಮಕ್ಕಳು ಗಳಿಸಿದ ಅಂಕಗಳನ್ನು ವರ್ನನ್[22] ಅವರು ಭಾಗಲಬ್ಧಗಳಾಗಿ ಪರಿವರ್ತಿಸಿ, ವೆಸ್ಟ್ ಇಂಡಿಯನ್ ಮಕ್ಕಳ ಬುದ್ಧಿಮಟ್ಟ 82 ಎಂದೂ ಭಾರತದ ಅಥವಾ ಪಾಕೀಸ್ತಾನದ ಮಕ್ಕಳ ಬುದ್ಧಿಮಟ್ಟ 87 ಎಂದೂ ಹೇಳಿದ್ದಾರೆ. ಬ್ರಿಟನ್ನಿನ ಶಾಲೆಗಳಲ್ಲಿ ಎರಡು ವರ್ಷಗಳಷ್ಟು ಕಾಲ ಕಳೆದಿದ್ದ ಮಕ್ಕಳ ಸರಾಸರಿ 76 ಇದ್ದದ್ದಕ್ಕೂ ಆರು ಏಳು ವರ್ಷಗಳಷ್ಟು ಕಾಲ ಕಳೆ

ದಿದ್ದ ಮಕ್ಕಳ ಸರಾಸರಿ 91 ಇದ್ದದ್ದಕ್ಕೂ ಪರಿಸರವೇ ಕಾರಣವೆಂದು ವರ್ನನ್ ಹೇಳಿದ್ದಾರೆ.

ಲಂಡನ್ನಿನ ವಿದ್ಯಾಧಿಕಾರಿಗಳು ಸಂಶೋಧನೆಯ ಪ್ರಕಟಿಸಿದ ವರದಿಯಲ್ಲಿ ಒಂದು ಭಾಗ ಈ ಮಕ್ಕಳು ವಲಸೆ ಬಂದಾಗ ಕಲಿತಿದ್ದ ಇಂಗ್ಲಿಷ್ ಭಾಷೆಯ ಮಟ್ಟದ ಬಗೆಗಿದ್ದರೂ ಆ ಮಕ್ಕಳಲ್ಲಿದ್ದಿರಬಹುದಾದ ಇತರ ಕೊರತೆಗಳ ಬಗೆಗೆ ಮಾತೇ ಇಲ್ಲ. ಶಾಬ್ದಿಕವಲ್ಲದ ದಕ್ಷತೆಗಳಿಗೂ ಶಾಲೆಯ ಪರಿಸರಕ್ಕೂ ಇರಬಹುದಾದ ಸಂಬಂಧದ ಚರ್ಚೆ ಇಲ್ಲ. ಇಷ್ಟಾದರೂ, ಈ ಸಂಶೋಧನೆ ಮಾಡಿದ ಉಪಕಾರ ದೊಡ್ಡದು.

ವಲಸೆ ಬಂದ ಮಕ್ಕಳಿಗೆ ಸಂಬಂಧಿಸಿದ ಹಾಗಿರುವ ಸಂಶೋಧನೆಗಳಲ್ಲಿ ಹೆಸರಿಸ ಬಹುದಾದ ಇನ್ನೊಂದು ಮೆಕ್‌ಫೈ ಮತ್ತು ಥಾಮಸನ್ ಅವರು 1970ರಲ್ಲಿ ನಡೆಸಿದ ಅಭ್ಯಾಸ. ಚಿಕಿತ್ಸೆಗೆಂದು ಮಾರ್ಗದರ್ಶನ ಸಂಸ್ಥೆಗಳಿಗೆ ಶಾಲೆಗಳಿಂದ ಕಳಿಸಲ್ಪಟ್ಟ 61 ವೆಸ್ಟ್ ಇಂಡಿಯನ್ ಮಕ್ಕಳು ವೆಕ್ಸ್‌ಲರಿನ ಬುದ್ಧಿಮಾಪಕದಲ್ಲಿ ಹಾಗೂ ಶೆನೆಲಿನ ಪದಶ್ರೇಣಿಯಲ್ಲಿ ಗಳಿಸಿದ ಅಂಕಗಳನ್ನು ಪರೀಕ್ಷಿಸಿದ ಸಂಶೋಧಕರು ಅದೇ ಸಂಸ್ಥೆಗೆ ಬಂದ 61 ಇಂಗ್ಲಿಷ್ ಮಕ್ಕಳ ಅಂಕಗಳ ಜೊತೆಗಿಟ್ಟು ನೋಡಿದರು. ವೆಸ್ಟ್ ಇಂಡಿಯನ್ ಮಕ್ಕಳನ್ನು, ಬ್ರಿಟನ್ನಿನಲ್ಲೇ ಹುಟ್ಟಿದವು, ಐದು ವರ್ಷದ ಹಿಂದೆ ಬಂದವು, ಐದು ವರ್ಷದ ಈಚೆಗೆ ಬಂದವು ಅನ್ನುವ ಮೂರು ಗುಂಪುಗಳಾಗಿ ವಿಂಗಡಿಸಿ ನೋಡಿದ್ದು ಈ ಸಂಶೋಧನೆಯ ವಿಧಾನ.

ಈ ಸಂಶೋಧನೆಯಲ್ಲಿ ಎದ್ದು ಕಾಣುವ ವಿಷಯ, ಇಂಗ್ಲಿಷ್ ಮತ್ತು ವೆಸ್ಟ್ ಇಂಡಿಯನ್ ಮಕ್ಕಳು ಗಳಿಸಿದ ಅಂಕಗಳಲ್ಲಿರುವ ಸಾಮ್ಯ. ವೆಕ್ಸ್‌ಲರಿನ ಮಾಪಕದ ಪ್ರತಿಯೊಂದು ಸಮಸ್ಯೆಯಲ್ಲೂ ಇಂಗ್ಲಿಷ್ ಮಕ್ಕಳು ವೆಸ್ಟ್ ಇಂಡಿಯನ್ ಮಕ್ಕಳಿಗಿಂತ ಹೆಚ್ಚು ಅಂಕಗಳಿಸಿದರೂ, ಸಾರ್ಥಕ ವ್ಯತ್ಯಾಸ ಕಂಡುಬಂದದ್ದು ಶಾಬ್ದಿಕ ಭಾಗದ ಪದಜ್ಞಾನದಲ್ಲಿ ಹಾಗೂ ಕೈಚಳಕದ ನಾಲ್ಕು ಸಮಸ್ಯೆಗಳಲ್ಲಿ. ಶಾಬ್ದಿಕ ಭಾಗದಿಂದ ಲೆಕ್ಕ ಹಾಕಿದ ಬುದ್ಧಿಮಟ್ಟ ಶಾಬ್ದಿಕವಲ್ಲದ ಭಾಗ ಕೊಟ್ಟ ಬುದ್ಧಿಮಟ್ಟಕ್ಕಿಂತ ಕೆಳಗಿದ್ದದ್ದು ಎರಡು ಗುಂಪುಗಳಿಗೂ ನಿಜವಾಗಿತ್ತು. ಶನೆಲಿನ ಪದಶ್ರೇಣಿಯಲ್ಲಿ ಗಳಿಸಿದ ಅಂಕ ಎರಡು ಗುಂಪಿಗೂ ಸರಾಸರಿಗಿಂತ ಕೆಳಗಿದ್ದದ್ದು ಇನ್ನೊಂದು, ಲೆಕ್ಕದ ಹಾಗೂ ಇಂಗ್ಲೀಷಿನ ಪರೀಕ್ಷೆಯಲ್ಲಿ, ಪರಿಸರದ ಜೊತೆ ಹೊಂದಾಣಿಕೆ ಇಲ್ಲದ ಮಕ್ಕಳು, ಸಾಮಾನ್ಯವಾಗಿ, ಚೆನ್ನಾಗಿ ಮಾಡುವುದಿಲ್ಲ ಅನ್ನುವುದು ಈ ಮಕ್ಕಳಿಗೆ ಸಂಬಂಧಿಸಿದ ಹಾಗೆ ವಾಸ್ತವವಾಗಿತ್ತು.

ಒಟ್ಟಿನಲ್ಲಿ, ವೆಸ್ಟ್ ಇಂಡಿಯನ್ ಮಕ್ಕಳ ಕಾರ್ಯ ನಿರ್ವಹಣೆಯ ನಮೂನೆ ಇಂಗ್ಲಿಷ್ ಮಕ್ಕಳದರ ನಮೂನೆಗಿಂತ ಭಿನ್ನವಾಗಿರದೆ, ಎರಡು ಗುಂಪುಗಳಿಗೂ

ಸಾಮಾನ್ಯವಾಗಿದ್ದ ತಪ್ಪು ಹೊಂದಾಣಿಕೆಯ ಸೂಚಕವಾಗಿತ್ತು. ಪರಿಸರದ ಪ್ರಭಾವ ಎರಡು ಗುಂಪುಗಳ ಮೇಲೂ ಹೇಗೆ ಒಂದೇ ಆಗಿರುವುದು ಇದರಿಂದ ತಿಳಿಯುವು ದೆನ್ನುವ ಸಂಶೋಧಕರು ವೆಸ್ಟ್ ಇಂಡಿಯನ್ ಮಕ್ಕಳಲ್ಲೇ ಕಂಡುಬಂದ ವ್ಯತ್ಯಾಸಕ್ಕೂ ಪರಿಸರದ ಮಾತುಗಳಲ್ಲಿ ಅರ್ಥ ಹೇಳಿದ್ದಾರೆ. ಮೊದಲು ಬಂದ ಮಕ್ಕಳು ಅನಂತರ ಬಂದವರಿಗಿಂತ ಪರಿಸರ ಜ್ಞಾನ, ಪದಜ್ಞಾನ ಹಾಗೂ ವಸ್ತು ಸಂಘಟನೆಗಳ ಕೆಲಸ ಗಳಲ್ಲಿ ಹೆಚ್ಚು ಅಂಕ ಗಳಿಸಿದ್ದರ ಕಡೆಗೆ ನಮ್ಮ ಗಮನ ಸೆಳೆದಿದ್ದಾರೆ.

ವಲಸೆ ಬಂದ ಮಕ್ಕಳಿಗೆ, ಇಂಗ್ಲಿಷ್ ಭಾಷೆಯ ಮೇಲೆ ಸಾಕಷ್ಟು ಹಿಡಿತವಿ ಲ್ಲದೇ ಶಾಬ್ದಿಕವಾದ ಕೌಶಲಗಳು ಕುಂಠಿತವಾಗಿರಬಹುದು ಅನ್ನುವುದು ತತ್‌ಕ್ಷಣಕ್ಕೇ ಹೊಳೆಯುವ ಸಂಗತಿ. ವಲಸೆ ಬಂದ ಮಕ್ಕಳ ಪರಿಸರವೇ ಕಾರಣವಾಗಿ ಕೈಚಳಕದ ಕೌಶಲಗಳೂ ಮೊಟಕಾಗಿರಬಹುದು ಅನ್ನುವುದು ಮನದಟ್ಟಾಗುವುದಕ್ಕೆ ಕೊಂಚ ಕಾಲ ಹಿಡಿದೀತು. ಪೌರಾತ್ಯ ದೇಶದ ಮಕ್ಕಳ ಇಂತಹ ಕೌಶಲಗಳು ಬೆಳೆಯದೇ ಇರುವ ಸಂಭವದ ಕಡೆಗೆ ವರ್ನನ್ ನಮ್ಮ ಗಮನ ಸೆಳೆದಿರುವದನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳುವುದು ಉಚಿತ.

ಇಂಗ್ಲಿಷ್ ಭಾಷೆಯಲ್ಲಿ ಹೆಚ್ಚಿನ ತರಪೇತನ್ನು ಕೊಡುವುದು ಎಷ್ಟು ಅಗತ್ಯವೋ ಅಷ್ಟೇ ಅಗತ್ಯ ಕೈ ಚಳಕದ ಕೆಲಸಗಳಲ್ಲೂ ಇದೆ ಅನ್ನುವದನ್ನು ಮೆಕ್‌ಫೈ ಮತ್ತು ಥಾಮ್‌ಸನ್ ಗುರುತಿಸಿರುವುದು ವಲಸೆ ಬಂದ ಮಕ್ಕಳ ದೃಷ್ಟಿಯಿಂದ ಒಳ್ಳೆಯದು. ಆದರೂ, ಅವರ ಸಂಶೋಧನೆಗೆ ಆನುವಂಶೀಯತೆ–ಪರಿಸರದ ಬಗೆಗೆ ನಾವು ಕೇಳ ಬಹುದಾದ ಮುಖ್ಯ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡುವುದಿಲ್ಲ ಅನ್ನುವುದನ್ನು ನಾವು ಗಮನಿಸುವುದು ಒಳ್ಳೆಯದು. ಲಿಂಗಭೇದ ಹಾಗೂ ವಯಸ್ಸುಗಳ ದೃಷ್ಟಿಯಿಂದ ಸಮಾನವಾದ ಗುಂಪುಗಳನ್ನು ಪರೀಕ್ಷೆಗೆ ಗುರಿಪಡಿಸುವ ಪ್ರಯತ್ನ ಈ ಸಂಶೋಧನೆಯಲ್ಲಿದ್ದರೂ, ಆರ್ಥಿಕ–ಸಾಮಾಜಿಕ ದೃಷ್ಟಿಯಿಂದ ಸಮಾನವಾದ ಗುಂಪು ಗಳು ಇವು ಎಂದು ಸಾಧಿಸುವುದು ಕಷ್ಟ. ಮನೆಯ ಪರಿಸರದ ಬಗೆಗೆ ಮಾತೇ ಇಲ್ಲದೇ ಚಿಕ್ಕ ವಯಸ್ಸಿಗೇ ಬ್ರಿಟನ್ನಿಗೆ ಬಂದ ವೆಸ್ಟ್ ಇಂಡಿಯನ್ ಮಕ್ಕಳು ಹೆಚ್ಚು ಬುದ್ಧಿವಂತರಾಗಿ ಕಂಡು ಬಂದದ್ದಕ್ಕೇನು ಕಾರಣ ಅನ್ನುವ ಪ್ರಶ್ನೆಗೆ ಪರಿಸರದ ಮಾತು ಗಳಲ್ಲೇ ಉತ್ತರ ಕೊಡುವುದು ಅಸಮ್ಮತವೆನಿಸುವುದು. ಜೊತೆಗೆ ಐದರಿಂದ ಹದಿನೈದರವರೆಗಿನ ಮಕ್ಕಳ ಬುದ್ಧಿ ಅಳೆಯುವದಕ್ಕೆ ವೆಕ್ಸ್‌ಲರಿನ ಮಾಪಕವನ್ನು ಉಪಯೋಗಿಸಿದ್ದು ಈ ಸಂಶೋಧನೆಯ ಇನ್ನೊಂದು ಕೊರತೆ. ಆ ಹತ್ತು ವರ್ಷಗಳ ವ್ಯಾಪ್ತಿಯ ಎರಡೂ ಅಂಚುಗಳಲ್ಲಿ ವೆಕ್ಸ್‌ಲರಿನ ಮಾಪಕ ಕೊಡುವ ಅಳತೆಯಲ್ಲಿ ಪ್ರಸ್ತೆ ಸಲ್ಲ ಅನ್ನುವುದು ಹಲವು ಮನೋವಿಜ್ಞಾನಿಗಳ ಅಭಿಪ್ರಾಯ. ಬಾಹ್ಯಸ್ಥ

ವಾದ ಅಂಶಗಳ ಪ್ರಭಾವವನ್ನು ಗಮನಕ್ಕೆ ತೆಗೆದುಕೊಳ್ಳದೇ ಹೋದದ್ದು ಈ ಸಂಶೋಧನೆಯ ಇನ್ನೂ ಒಂದು ದೊಡ್ಡ ಕೊರತೆ.

ಮೇಲು ನೋಟಕ್ಕೆ ಸಮರ್ಪಕವೆನಿಸುವ ಒಂದು ಸಂಶೋಧನೆ ಕೊಡುವ ತೀರ್ಮಾನಗಳ ಬಗೆಗೆ, ಸೂಕ್ಷ್ಮ ವಿಮರ್ಶೆಗೆ ಅವನ್ನು ಗುರಿಪಡಿಸಿದಾಗ, ಹೇಗೆ ಸಂದೇಹಗಳು ಹುಟ್ಟುತ್ತವೆ ಅನ್ನುವದನ್ನು ತೋರಿಸಿಕೊಡುವದಕ್ಕೇ ಮೆಕ್‌ಫೈ ಮತ್ತು ಥಾಮ್‌ಸನ್ ಅವರ ಸಂಶೋಧನೆಯನ್ನು ಇಷ್ಟು ದೀರ್ಘವಾಗಿ ಚರ್ಚಿಸಿದ್ದು ಪರಿಸರ–ಆನುವಂಶೀಯತೆಗಳ ಪ್ರಭಾವವನ್ನು ಇದಮಿತ್ಥಂ ಅನ್ನುವ ಹಾಗೆ ಅಳೆದು ತೀರ್ಮಾನಗಳನ್ನು ಹೇಳುವದರಲ್ಲಿರುವ ಕಷ್ಟ ಸ್ಪಷ್ಟವಾಗಿಸುವುದೇ ನನ್ನ ಉದ್ದೇಶ.

ಒಂದು ಗುಂಪಿನ ಪರಿಸರದಲ್ಲಿ ಆಗುವ ಬದಲಾವಣೆಗಳಿಗೂ ದಕ್ಷತೆಗಳಲ್ಲಾಗುವ ಬದಲಾವಣೆಗಳಿಗೂ ಇರುವ ಕಾರ್ಯಕಾರಣ ಸಂಬಂಧದ ಪ್ರಸ್ತಾಪವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಎರಡು ಗುಂಪುಗಳ ಪರಿಸರ ಸರಿಸಮವಾಗುತ್ತ ಬಂದ ಹಾಗೆ ಆ ಗುಂಪುಗಳ ದಕ್ಷತೆಗಳಲ್ಲಿ ಮೊದಲಿಗೆ ಕಂಡ ವ್ಯತ್ಯಾಸ ಹೇಗೆ ಕಡಿಮೆಯಾಗುತ್ತದೆ ಅನ್ನುವದಕ್ಕೆ ಪ್ರಮಾಣ ಒದಗಿಸಿಯಾಗಿದೆ.

ಬ್ರಿಟನ್ನಿಗೆ ವಲಸೆ ಬಂದ ಭಾರತದ ಮಕ್ಕಳ ಸಂಬಂಧದಲ್ಲಿ ಈ ವಿಚಾರಗಳು ಮುಖ್ಯ. ತುಲನಯೋಗ್ಯವೆಂದು ಆರಿಸಿಕೊಂಡ ಮಕ್ಕಳ ಪರಿಸರಗಳ ಬಗೆಗೆ ಎಚ್ಚರಿಕೆ ವಹಿಸಿ, ಬಾಹ್ಯಸ್ಥವಾದ ಅಂಶಗಳ ಪ್ರಭಾವವನ್ನು ಕಡಿಮೆ ಮಾಡುವಂತೆ ನೋಡಿಕೊಂಡಾಗ ದಕ್ಷತೆಗಳಲ್ಲಾಗುವ ಬದಲಾವಣೆಗಳಿಗೆ ಚೋದಕವಾದ ಪರಿಸರದ ಅಂಶಗಳನ್ನು ಗುರುತಿಸುವುದು ಸಾಧ್ಯ ಎಂದು ತೋರಿಸಿಕೊಡಲಾಗಿದೆ.

ಭಾರತದ ಮಕ್ಕಳಲ್ಲಿ ಪರಿಸರ ಪರಿವರ್ತನೆಯಿಂದ ಸಾಧ್ಯವಾಗುವ ಬದಲಾವಣೆಗಳೇ ನನ್ನ ಸಂಶೋಧನೆಯ ವಿಷಯ.

ಅಡಿ ಟಿಪ್ಪಣಿಗಳು :

1. DENNIS, W. (1960), The human figure drawings of Bedouins. *Journal of Social Psychology*, 52, 209–219.

2. DENNIS, W. (1942), The performance of Hopi Indian children on the Goodenough Draw-a-man test. *Journal of Comparative Psychology*, 34, 341-348.

3. KAMAT, V. V. (1939), Sex differences among Indian children. *British Journal of Educational Psychology*, 9, 251–256.

4. IRVINE, S. H. (1966), Towards a rationale for testing attainments and abilities in Africa. *British Journal of Educational Psychology*, 36, 24–32.

5. STRALISS, M. A. (1954), Subcultural variations in Ceylonese mental abitity : A study in national character. *Journal of Social Psychology*, 39, 129–141.

6. GORDON, H. (1923), *Mental and Scholastic Tests among Retarded Children*. London : H.M.S.O., Board of Education Pamphlet, 44.

7. GREENFIELD, P. M. and BRUNER, J. S. (1966), Culture and cognitive growth. *International Journal of Psychology*, Vol. 1, No. 2, 89–107.

8. RAMPHAL, C. (1962), *A study of three current problems of Indian Education*, University of Natal : Ph.D. Thesis; (Unpublished).

9. KLINGELHOFER, E. L. (1967), Performance of Tanzania Secondary school pupils on Raven's Standard Progressive Matrices Test. *Journal of Social Psychology*, 72, 205–215.

10. MACFIE, J. (1961), The effect of education on African performance on a group of intelligence tests. *British Journal of Educational Psychology*, 31, 3, 232–240.

11. FEINGOLD, G. A. (1924), Intelligence of the first generation of immigrant groups, *Journal of Educational Psychology*, 15, 65–82.

12. ARTHUR, G. (1926), The relation of I.Q. to 3/8osition in family. *Journal of Educational Psychology*, 17, 541–55C.

13. LONG, H. H. (1934), The intelligence of coloured elementary pupils in Washington. *Journal of Negro Education*, 34, 205–222.

14. LEE, E. S. (1951), Negro intelligence and selective migration : a Philadelphia test of the KI ineberg hypothesis. *American Social Review*, 56, 227–233.

15. MCCORD, W. M. and DEMEARTH, N. J. (1958), Negro versus White intellgence : A continuing controversy. *Harvard Educational Revies*, 28, 120–135.

16. GARTH, T. R. (1935), A study of the foster Indian child in the White home. *Psychological Bulletin*, Vol. 32, 708–709.

17. ROHRER, J. H. (1942), The test intelligence of Osage Indians. Journal of Social Psychology, 16, 99–105.

18. BLOOM, B. S. (1969), Letter to the Editor. *Harvard Educational Review*, 39, 419–421.

19. FEURSTEIN, R. and SHALOM, H. (1967), Problems of assessment and evaluation of the mentally retarded and culturally deprived child and adoloscent. Paper presented at the First Congress of the International Association for the Scientific study of Mental deficiency, Montoellier, France.

20. JENSEN, A. R. (1969), How much can we boost I.Q. and scholastic achievement ? *Harvard Educational Review*, Vol. 39, No. 1, 1–123.

21. INNER LONDON EDUCATION AUTHORITY, (1966), *The Education of Immigrant Pupils in Primary Schools*, I.L.E.A. Report 959, London.

22. VERNON, P. E. (1969), *Intelligence and Cultural Environment*, Methuen, London.

ಅಧ್ಯಾಯ ನಾಲ್ಕು

ಅನುಮಾನಗಳು

ಭಾರತದ ಉಪಖಂಡದಿಂದ ವಲಸೆ ಬಂದು ಬ್ರಿಟನ್ನಿನ ಪ್ರಾಂತಗಳಲ್ಲಿ ಒಂದಾದ ಹಾರ್ಟ್‌ಫರ್ಡ್ ಶೈರಿನಲ್ಲಿ ನೆಲಸಿದ ಮಕ್ಕಳ ಎರಡು ಗುಂಪುಗಳ ಹೋಲಿಕೆಯೇ ಈ ಸಂಶೋಧನೆಯ ವಸ್ತು. ಒಂದು ಗುಂಪಲ್ಲಿ ಈಚೆಗೆ ಬಂದ ಮಕ್ಕಳು : ಇನ್ನೊಂದು ಗುಂಪಲ್ಲಿ ಹಿಂದೆ ಬಂದ ಮಕ್ಕಳು. ಎರಡನೇ ಗುಂಪಲ್ಲಿ ಬ್ರಿಟನ್ನಿನಲ್ಲೇ ಹುಟ್ಟಿದ ಕೆಲವು ಮಕ್ಕಳೂ ಇದ್ದವು.

ಸಾಂಪ್ರದಾಯಿಕವಾದ ತಮ್ಮ ಪರಿಸರವನ್ನು ಬಿಟ್ಟು ಹೆಚ್ಚು ಸಂಪದ್ಭರಿತ ವಾಗಿಯೂ ಉತ್ತೇಜಕವಾಗಿಯೂ ಇರುವ ಬೇರೆ ಒಂದು ಪರಿಸರಕ್ಕೆ ಬಂದು ನೆಲಸಿದಾಗ ಜನರ ವರ್ತನೆಯ ಮೇಲೆ ಆಗುವ ಪರಿಣಾಮಗಳನ್ನು ಆಗಲೇ ನೋಡಿಯಾಗಿದೆ. ವಲಸೆ ಹೋದವರು ಬುದ್ಧಿಮಾಪಕದ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸುವ ಸಂಶೋಧನೆಗಳ ಪ್ರಸ್ತಾಪವಾಗಿದೆ.

ಈ ಸಂಶೋಧನೆಗಳ ಆಧಾರದ ಮೇಲೆ, ಭಾರತದಿಂದ ವಲಸೆ ಬಂದ ಮಕ್ಕಳಿಗೆ ಸಂಬಂಧಿಸಿದ ಹಾಗೆ, ಕೆಲವು ಅನುಮಾನಗಳನ್ನು ಪ್ರತಿಪಾದಿಸಬಹುದು :

1. ಭಾರತದ ಉಪಖಂಡದಿಂದ ವಲಸೆ ಬಂದು ಬ್ರಿಟನ್ನಿನಲ್ಲಿ ಒಂದಿಷ್ಟು ಕಾಲ ನೆಲಸಿದ ಮಕ್ಕಳು ಬುದ್ಧಿಮಾಪಕವೊಂದರಲ್ಲಿ ಗಳಿಸುವ ಸರಾಸರಿ ಅಂಕ, ಅವಕ್ಕೆ ಸರಿಸಮವಾಗಿದ್ದು ಭಾರತದಲ್ಲೇ ಉಳಿದ ಮಕ್ಕಳ ಸರಾಸರಿಗಿಂತ ಹೆಚ್ಚಾಗಿರುತ್ತದೆ.

ಜೊತೆಗೆ,

2. ಭಾರತದಿಂದ ಬಂದ ಸರಿಸಮವಾದ ಎರಡು ಗುಂಪುಗಳಲ್ಲಿ, ಮೊದಲು ಬಂದ ಮಕ್ಕಳ ಸರಾಸರಿ ಅಂಕ, ಆ ಮೇಲೆ ಬಂದ ಮಕ್ಕಳ ಸರಾಸರಿಗಿಂತ ಹೆಚ್ಚಾಗಿರುತ್ತದೆ.

ಬ್ರಿಟನ್ನಿನ ಪರಿಸರದ ಪ್ರಭಾವಕ್ಕೆ ಹೆಚ್ಚು ಒಳಗಾದದ್ದೇ ಮೊದಲು ಬಂದ ಮಕ್ಕಳ ಹೆಚ್ಚುಗಾರಿಕೆಗೆ ಕಾರಣವಾಗಿರುವುದು ನಿಜವಾದರೆ, ಈಚೆಗೆ ಬಂದ ಮಕ್ಕಳು ಹೆಚ್ಚು ಹೆಚ್ಚು ಕಾಲ ಕಳೆದ ಹಾಗೆ ಅವರ ಕಾರ್ಯ ನಿರ್ವಹಣೆಯಲ್ಲಿ ಅಭಿವೃದ್ಧಿ ಕಂಡುಬರುವುದೂ ಸಹಜ :

3. ಬ್ರಿಟನ್ನಿಗೆ ವಲಸೆ ಬಂದ ಮಕ್ಕಳ ಬುದ್ಧಿ ಪರೀಕ್ಷೆ–ಪುನರ್ ಪರೀಕ್ಷೆಗಳ ನಡುವೆ ಸಾಕಷ್ಟು ಕಾಲ ಸಂದಿದ್ದರೆ ಪುನರ್ ಪರೀಕ್ಷೆಯಲ್ಲಿ ಮಕ್ಕಳು ಗಳಿಸುವ ಸರಾಸರಿ ಅಂಕ ಮೊದಲ ಪರೀಕ್ಷೆಯಲ್ಲಿ ಗಳಿಸಿದ ಸರಾಸರಿಗಿಂತ ಹೆಚ್ಚಾಗಿರುತ್ತದೆ.

ವಲಸೆ ಬಂದ ಮಕ್ಕಳಲ್ಲಿ ಕಂಡುಬರುವ ಬದಲಾವಣೆಗಳಿಗೆ ಮನೆಯ ಪರಿಸರದಲ್ಲಾಗಿರಬಹುದಾದ ಪರಿವರ್ತನೆಗಿಂತ ವಿದ್ಯಾಭ್ಯಾಸ ಕ್ರಮದಲ್ಲಾದ ಬದಲಾವಣೆಯೇ ಹೆಚ್ಚು ಕಾರಣಭೂತವೆನ್ನುವ ವಾದವನ್ನು ಹಿಂದೆಯೇ ಮಂಡಿಸಲಾಗಿದೆ. ಮನೆಯ ಪರಿಸರದಲ್ಲಿನ ಬದಲಾವಣೆ ಗೌಣ, ಮಕ್ಕಳ ದಕ್ಷತೆಗಳ ಮೇಲೆ ಅದಕ್ಕಿರಬಹುದಾದ ಪ್ರಭಾವ ಸೊನ್ನೆಯೆನ್ನುವ ವಾದ ಯಥಾರ್ಥವಾಗಿದ್ದರೆ, ಬ್ರಿಟನ್ನಿನಲ್ಲಿ ಹುಟ್ಟಿದ ಮಾತ್ರಕ್ಕೇ ಭಾರತದ ಮಕ್ಕಳು ಹೆಚ್ಚು ಬುದ್ಧಿವಂತರಾಗಿರುವ ಕಾರಣವಿಲ್ಲ. ಶಾಲೆಗಳಿಗೆ ಹೋಗುವ ಮೊದಲ 5 ವರ್ಷಗಳನ್ನು ಬ್ರಿಟನ್ನಿನಲ್ಲಿ ಕಳೆದಿದ್ದರಿಂದ ಬುದ್ಧಿಯ ಬೆಳವಣಿಗೆಗೆ ಸಿಕ್ಕ ಉತ್ತೇಜನ ಲೆಕ್ಕಕ್ಕೇ ಬಾರದ್ದು ಅನ್ನುವ ಮಾತು ಸತ್ಯವಾಗಬೇಕು. ಬ್ರಿಟನ್ನಿನ ಶಾಲೆಗಳಲ್ಲಿ ಇಂತಹ ಮಕ್ಕಳು ಕಳೆದ ವರ್ಷಗಳ ಲೆಕ್ಕ ಮುಖ್ಯವೇ ಹೊರತು ಬ್ರಿಟನ್ನಿನಲ್ಲಿ ಕಳೆದ ವರ್ಷಗಳ ಲೆಕ್ಕವಲ್ಲ.

ಈ ಬಗೆಯ ಯೋಚನೆಯಿಂದ ಹುಟ್ಟಿದ ಅನುಮಾನ :

4. ವಲಸೆ ಬಂದ ಮಕ್ಕಳ ಎರಡು ಗುಂಪುಗಳು ಸರಿಸಮವಾಗಿದ್ದಾಗ, ಬ್ರಿಟನ್ನಿನ ಶಾಲೆಗಳಲ್ಲಿ ಅವು ಕಳೆದ ಕಾಲ ಸಮನಾಗಿ

ದ್ದಾಗ, ಬ್ರಿಟನ್ನಿನಲ್ಲೇ ಹುಟ್ಟಿದ ಮಕ್ಕಳ ಸರಾಸರಿಗೂ ಆಮೇಲೆ ಬಂದವರ ಸರಾಸರಿಗೂ ನಡುವೆ ಸಾರ್ಥಕವಾದ ವ್ಯತ್ಯಾಸವಿರುವುದಿಲ್ಲ.

ಭಾರತದ ಹಾಗೂ ಬ್ರಿಟನ್ನಿನ ವಿದ್ಯಾಭ್ಯಾಸ ಕ್ರಮಗಳ ವಿಷಯ ಬಂದಾಗ, ಭಾರತದ ಶಾಲೆಗಳಲ್ಲಿ ಬಾಯಿಪಾಠಕ್ಕೆ ಶಾಬ್ದಿಕವಾದ ವಿಷಯಸಂಗ್ರಹಣ ಕಾರ್ಯಕ್ಕೆ ಹೇಗೆ ಹೆಚ್ಚಿನ ಬೆಲೆಯಿದೆ ಅನ್ನುವ ಮಾತೂ ಬಂತು. ಇದು ನಿಜವಾದರೆ, ಭಾರತದ ಮಕ್ಕಳು ನಗರಗಳಲ್ಲಿನ ಶಾಲೆಗಳಿಗೆ ಹೋದರೂ ಒಂದೇ, ಹಳ್ಳಿಗಳಲ್ಲಿನ ಶಾಲೆಗಳಿಗೆ ಹೋದರೂ ಒಂದೇ ಅಂದ ಹಾಗಾಯಿತು. ಮಕ್ಕಳಲ್ಲಿನ ಶಾಬ್ದಿಕವಲ್ಲದ ದಕ್ಷತೆಗಳು ಅಷ್ಟಾಗಿ ಬೆಳೆಯದೇ ಹೋಗುವುದು ಹಳ್ಳಿಯ ಶಾಲೆಗೂ ನಿಜ, ನಗರದ ಶಾಲೆಗೂ ನಿಜ.

ಈ ವಾದದ ಪಾಯದ ಮೇಲೆ ನಿಂತ ಅನುಮಾನ;

5. ಕೈ ಚಳಕ ಪ್ರಧಾನವಾದ ಬುದ್ಧಿ ಮಾಪಕದಲ್ಲಿ ಭಾರತದ ಪಟ್ಟಣಗಳಲ್ಲಿನ ಮಕ್ಕಳು ಗಳಿಸುವ ಸರಾಸರಿಗೂ ಹಳ್ಳಿಯ ಮಕ್ಕಳು ಗಳಿಸುವ ಸರಾಸರಿಗೂ ನಡುವೆ ಸಾರ್ಥಕವೆನಿಸುವ ವ್ಯತ್ಯಾಸವಿರುವುದಿಲ್ಲ.

ಭಾರತದ ಮಕ್ಕಳ ಬಗೆಗೆ ಆಡಿದ ಈ ಮಾತು ಉಚಿತವಾದರೆ, ಬ್ರಿಟನ್ನಿಗೆ ವಲಸೆ ಬಂದ ಮಕ್ಕಳ ವಿಷಯದಲ್ಲೂ ಇದು ದಿಟವಾಗಬೇಕು. ಈ ಬಗೆಯ ತರ್ಕ ಇನ್ನೊಂದು ಅನುಮಾನಕ್ಕೆ ಕಾರಣವಾಗುವುದು ಅನಿವಾರ್ಯ.

6. ಸರಿಸಮವೆಂದು ಪರಿಗಣಿಸಲ್ಪಟ್ಟ ವಲಸೆ ಬಂದ ಮಕ್ಕಳ ಎರಡು ಗುಂಪುಗಳು ಬ್ರಿಟನ್ನಿನ ಶಾಲೆಗಳಲ್ಲಿ ಒಂದೇ ಸಮನಾದ ಕಾಲ ಕಳೆದಿರುವಾಗ, ಭಾರತದ ಹಳ್ಳಿಯಿಂದ ಬಂದವುಗಳು ಶಾಬ್ದಿಕವಲ್ಲದ ಒಂದು ಬುದ್ಧಿಮಾಪಕದಲ್ಲಿ ಗಳಿಸುವ ಸರಾಸರಿಗೂ ನಡುವೆ ಸಾರ್ಥಕವಾದ ವ್ಯತ್ಯಾಸವಿರುವುದಿಲ್ಲ.

ಸ್ಟಾನ್‌ಫರ್ಡ್ ಬೀನೇ ಮಾಪಕದ ರೂಪಾಂತರವೊಂದನ್ನು ತಮ್ಮ ಅಧ್ಯಯನಕ್ಕೆ ಉಪಯೋಗಿಸಿದ ಕಾಮತ್ ಅವರು ಕರ್ಣಾಟಕದ ಗಂಡು ಮಕ್ಕಳ ಹೆಣ್ಣು ಮಕ್ಕಳ ನಡುವೆ ಕಂಡ ವ್ಯತ್ಯಾಸದ ಮಾತೆತ್ತಿಯಾಗಿದೆ, ಸ್ಟಾನ್‌ಫರ್ಡ್ ಬೀನೇ ಮಾಪಕ ಬಹುತೇಕ ಶಾಬ್ದಿಕ ಸಮಸ್ಯೆಗಳದ್ದು.

ಶಾಬ್ದಿಕವಾದ ದಕ್ಷತೆಗೆ ಭಾರತದ ಸಮಾಜ ಕೊಡುವಷ್ಟು ಮರ್ಯಾದೆ ಶಾಬ್ದಿಕವಲ್ಲದ ದಕ್ಷತೆಗೆ ಕೊಡುವುದಿಲ್ಲ. ಶಾಲೆಯಾಗಲೀ ಮನೆಯಾಗಲೀ ಅವುಗಳ ಬೆಳವಣಿಗೆಯ ಕಡೆಗೆ ಗಮನ ಕೊಡುವುದಿಲ್ಲ ಅನ್ನುವುದು ವಾಸ್ತವವಾದರೆ ಗಂಡು ಮಕ್ಕಳಲ್ಲಿ ಹೇಗೋ ಹಾಗೇ ಹೆಣ್ಣು ಮಕ್ಕಳಲ್ಲೂ ಈ ದಕ್ಷತೆಗಳು ಮೊಟಕಾಗಿರುತ್ತವೆ ಎಂದು ಹೇಳಿದಾಗ ಅದಕ್ಕೆ ಕೆಳಗಿನ ರೂಪ:

7. ಭಾರತದಲ್ಲಿನ ಶಾಲೆಗಳ ಮಕ್ಕಳಲ್ಲಿ, ಶಾಬ್ದಿಕವಲ್ಲದ ಬುದ್ಧಿ ಮಾಪಕಕ್ಕೆ ಸಂಬಂಧಿಸಿದ ಹಾಗೆ ಹೆಣ್ಣು ಗಂಡುಗಳ ನಡುವೆ ವ್ಯತ್ಯಾಸವಿರುವುದಿಲ್ಲ.

ಮೇಲಿನ ವಾದವನ್ನು ಬ್ರಿಟನ್ನಿಗೆ ವಲಸೆ ಬಂದ ಮಕ್ಕಳಿಗೆ ಅನ್ವಯಿಸಿದಾಗ ಹೆಣ್ಣು ಗಂಡುಗಳ ನಡುವೆ ಕ್ರಮಕ್ರಮವಾಗಿ ವ್ಯತ್ಯಾಸ ತಲೆದೋರುವದೆಂದು ಹೇಳುವುದು ಸಾಧ್ಯ. ಈ ವ್ಯತ್ಯಾಸಕ್ಕೆ ಮಕ್ಕಳ ಮನೆಯ ಪರಿಸರವಾಗಲೀ ಶಾಲೆಯಲ್ಲಿ ದೊರಕಿದ ಅನುಭವಗಳಾಗಲೀ ಕಾರಣವೆಂದಲ್ಲ. ಶಾಲೆಯಲ್ಲಿ, ಮನೆಯಲ್ಲಿ ಹೆಣ್ಣಿಗೆ ಹಾಗೂ ಗಂಡಿಗೆ ದೊರಕುವ ಅನುಭವಗಳು ಒಂದೇ ಆಗಿದ್ದು ಪ್ರತಿಪಾದಿಸಿದ ವ್ಯತ್ಯಾಸಕ್ಕೆ ಅವು ಕಾರಣವಾಗಲಾರವು. ವಿವರಣೆಗೆ, ಭಾರತ ಸಂಸ್ಕೃತಿಯ ವೈಶಿಷ್ಟ್ಯವೊಂದಕ್ಕೆ ಗಮನ ಕೊಡುವುದು ಅನಿವಾರ್ಯ. ವಿವರಣೆಯಿರುವುದು, ಶಾಲೆಯ ಅನಂತರ ಹೊತ್ತನ್ನು ಹೆಣ್ಣುಮಕ್ಕಳು ಹೇಗೆ ಕಳೆಯಬೇಕು, ಗಂಡುಮಕ್ಕಳು ಹೇಗೆ ಕಳೆಯಬೇಕು, ಅನ್ನುವದರ ಬಗೆಗೆ ಹೆತ್ತವರು ತಾಳುವ ಮನೋಭಾವದಲ್ಲಿ, ಇಟ್ಟುಕೊಂಡಿರುವ ಅಪೇಕ್ಷೆಯಲ್ಲಿ ಹಿಂದೂಗಳಾಗಲೀ, ಮುಸ್ಲಿಮರಾಗಲೀ, ಭಾರತದ ಸಂಪ್ರದಾಯದಲ್ಲಿ ಹೆಣ್ಣುಮಕ್ಕಳ ಮೇಲೆ ಹೆಚ್ಚಿನ ಕಟ್ಟುನಿಟ್ಟು; ಏನೇ ಆಗಲಿ, ಹಾಕಿದ ಗೆರೆ ದಾಟಬಾರದೆನ್ನುವ ಒತ್ತಾಯ. ಬಹುಮಟ್ಟಿಗೆ, ಮನೆಯೆನ್ನುವ ಸಣ್ಣ ರಾಜ್ಯದಲ್ಲಿ ಗಂಡಸು ದೊರೆ. ಮನೆಗೆಲಸದಲ್ಲಿ ಹೆಣ್ಣು ಮಕ್ಕಳು ನೆರವಾಗಬೇಕೆನ್ನುವ ನಿರೀಕ್ಷೆ. ಚಿಕ್ಕವಯಸ್ಸಿನವಳಾಗಿದ್ದರೂ ಒಂದು ಹೆಣ್ಣು ತನಗಿಂತ ಚಿಕ್ಕವರಾದ ತಮ್ಮ ತಂಗಿಯರ ಮೇಲ್ವಿಚಾರಣೆಯ ಜವಾಬ್ದಾರಿಯನ್ನ ಒಪ್ಪಿಕೊಳ್ಳಬೇಕೆಂಬ ಅಪೇಕ್ಷೆ. ಮನೆಯ ಹೊರಗೆ, ಬೇರೆ ಮಕ್ಕಳ ಸಹವಾಸದಲ್ಲಿ ಕಾಲ ಕಳೆಯುವದಾಗಲಿ, ಕುತೂಹಲ ಸೂಚಿಸುವ ವರ್ತನೆಗಳ ಮೂಲಕ ಹೊರಗಿನ ಪ್ರಪಂಚದ ಜ್ಞಾನ ಪಡೆದುಕೊಳ್ಳುವದಾಗಲೀ ಅಪವಾದವೆನಿಸಿಕೊಳ್ಳುವಷ್ಟು ಅಪರೂಪವಾದ ವಿಷಯುಗಳು. ಹೆಣ್ಣು ಮಕ್ಕಳು ಹೊರಗಡೆ ಹೋದಾಗಲೂ ಹೆತ್ತವರ ಹಿಡಿತ ಸಡಿಲವಾಗುವುದು ಕಡಿಮೆ; ಸ್ನೇಹಿತರ ಆಯ್ಕೆಯಲ್ಲೂ ಹೆತ್ತವರ ಅಧಿಕಾರ ಚಲಾವಣೆ.

ಇಂತಹ ದೃಷ್ಟಿಯಿಂದ ನೋಡಿದಾಗ ಬ್ರಿಟನ್ನಿನ ಹೆಣ್ಣು ಮಕ್ಕಳಿಗೆ ಸಹಜವಾದ ನಡತೆಗಳು 'ಗಂಡುಬೀರಿ' ನಡತೆಗಳಾಗಿ ಕಾಣುವುದು ಆಶ್ಚರ್ಯವಲ್ಲ; ಎಂದೇ, ಅವು ನಿಷಿದ್ಧ; ಹೇಗೆ ನಡೆದುಕೊಳ್ಳಬೇಕು, ಹೇಗೆ ನಡೆದುಕೊಳ್ಳಬಾರದು ಅನ್ನುವ ಬೋಧನೆ ವಲಸೆ ಬಂದವರ ಮನೆಗಳಲ್ಲಿ ಸರ್ವೇ ಸಾಮಾನ್ಯವಾಗಿರುವದಕ್ಕೆ ಕಾರಣ.

ಈ ಚಿತ್ರಕ್ಕೆ ಅಪವಾದವೆನಿಸುವಂತಹ ಸಂಸಾರಗಳೇ ಇಲ್ಲವೆಂದಲ್ಲ. ಇಂತಹ ಅಪವಾದಗಳನ್ನು ಬ್ರಿಟನ್ನಿಗೆ ಬಂದವರ ಮಧ್ಯೆ ಹಾಗೂ ಭಾರತದಲ್ಲೇ ಕಾಣುವುದು ಸಾಧ್ಯ. ಆದರೂ, ವಲಸೆ ಬಂದವರಲ್ಲಿ ಅನೇಕರ ಬಗೆಗೆ ಈ ಮಾತು ವಾಸ್ತವ.

ಇಂತಹ ಮನೆಗಳಲ್ಲಿ, ಗಂಡು ಮಕ್ಕಳಿಗೆ ಹೆಣ್ಣು ಮಕ್ಕಳಿಗೆ ಸಿಕ್ಕುವ ಸ್ವಾತಂತ್ರ್ಯದಲ್ಲಿ ವ್ಯತ್ಯಾಸವಿದೆ. ಶಾಲೆಯಾಚೆಗಿನ ಗಂಡು ಮಕ್ಕಳ ನಡತೆಯ ಮೇಲೆ ಹೆತ್ತವರು ಉಳಿಸಿಕೊಳ್ಳುವ ಹತೋಟಿ ಕಡಿಮೆ–ಎಷ್ಟೋ ಸಂದರ್ಭಗಳಲ್ಲಿ ದೊಡ್ಡವರು 'ಎಷ್ಟೇ ಆದರೂ ಗಂಡು ಹುಡುಗ ತಾನೇ' ಅಂದುಕೊಂಡು ಸ್ವಚ್ಛಂದ ವರ್ತನೆಗೆ ಪರೋಕ್ಷವಾದ ಉತ್ತೇಜನ ಕೊಡುವುದೂ ಉಂಟು. ನಾಳೆಯ ಬದುಕಲ್ಲಿ ಗಂಡು ಮಕ್ಕಳು ಜಯಪ್ರದವಾಗುವದಕ್ಕೆ ಈಗ ಏನು ಬೇಕು ಅನ್ನುವುದೇ ತಂದೆ ತಾಯಿಗಳ ಮುಖ್ಯ ಯೋಚನೆ. ಹೆಣ್ಣುಮಕ್ಕಳ ಭವಿಷ್ಯದ ಯೋಚನೆ ಮಾಡುವಾಗ ಪ್ರಧಾನವಾದದ್ದು ಅವರಿಗೆ ಯೋಗ್ಯ ಗಂಡುಮಕ್ಕಳು ಸಿಗಬೇಕೆನ್ನುವ ಆಸೆ. ಹೆಣ್ಣು ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡುವಾಗಲೂ ಒಂದು ಕಣ್ಣು ಅವರ ಮದುವೆಯ ಮೇಲೆ. ಉದ್ಯೋಗದ ಯೋಚನೆಯಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವವರು ವಿರಳ. ಬ್ರಿಟನ್ನಿಗೆ ವಲಸೆ ಬಂದ ಎಷ್ಟೋ ಸಂಸಾರಗಳಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಅರ್ಧಕ್ಕೇ ಬಿಟ್ಟು, ಕೆಲಸಕ್ಕೂ ಹೋಗದೇ, ಮೂಲೆಗುಂಪಾಗಿರುವ ಎಷ್ಟೋ ಹೆಣ್ಣುಮಕ್ಕಳನ್ನು ನಾನೇ ಕಂಡಿದ್ದೇನೆ. ಹೆಣ್ಣುಮಕ್ಕಳು ಕೆಲಸಕ್ಕೆ ಹೋಗುವುದು ಅನೇಕ ಮಂದಿಗೆ ಹಿಡಿಸದ ವಿಷಯ. ಎಂದೇ ಇಂತಹ ಪರಿಸ್ಥಿತಿ.

ಹೆತ್ತವರ ಇಂತಹ ಲೆಕ್ಕಾಚಾರ ಮಕ್ಕಳ ಕಲಿಕೆಯ ಮೇಲೆ, ಅವರು ಕಲಿಕೆಯ ಸಂದರ್ಭಕ್ಕೆ ತರುವ ಮನೋಭಾವದ ಮೇಲೆ ಪ್ರಭಾವ ಬೀರುವುದು ಕ್ರಮಕ್ರಮವಾಗಿ. ಅದೇ ತಾನೆ ಬ್ರಿಟನ್ನಿಗೆ ಬಂದ ಗಂಡುಮಕ್ಕಳು ಹೆಣ್ಣುಮಕ್ಕಳಷ್ಟೇ ಸಂಕೋಚದಿಂದ, ಅಧೈರ್ಯದಿಂದ ನಡೆದುಕೊಳ್ಳುವುದು ಸಹಜ. ಇಂಗ್ಲಿಷ್ ಭಾಷೆಯನ್ನು ಸರಾಗವಾಗಿ ಉಪಯೋಗಿಸುವುದು ಕಷ್ಟವಾಗಿರುವದರ ಜೊತೆಗೆ ಸುತ್ತಣ ಪರಿಸರ ವಿಚಿತ್ರವಾಗಿ ಕಾಣುವುದೂ ಈ ಮನೋಭಾವದ ಹಿಂದಿರುವ ಅಂಶಗಳು. ದಿನ ಕಳೆದ ಹಾಗೆ ಗಂಡುಮಕ್ಕಳ ಪ್ರಪಂಚ ಅರಳಿದರೂ ಹೆಣ್ಣುಮಕ್ಕಳಿಗೆ ಮೊದಲ

ವಾದ ಅಂಶಗಳ ಪ್ರಭಾವವನ್ನು ಗಮನಕ್ಕೆ ತೆಗೆದುಕೊಳ್ಳದೇ ಹೋದದ್ದು ಈ ಸಂಶೋಧನೆಯ ಇನ್ನೂ ಒಂದು ದೊಡ್ಡ ಕೊರತೆ.

ಮೇಲು ನೋಟಕ್ಕೆ ಸಮರ್ಪಕವೆನಿಸುವ ಒಂದು ಸಂಶೋಧನೆ ಕೊಡುವ ತೀರ್ಮಾನಗಳ ಬಗೆಗೆ, ಸೂಕ್ಷ್ಮ ವಿಮರ್ಶೆಗೆ ಅವನ್ನು ಗುರಿಪಡಿಸಿದಾಗ, ಹೇಗೆ ಸಂದೇಹಗಳು ಹುಟ್ಟುತ್ತವೆ ಅನ್ನುವದನ್ನು ತೋರಿಸಿಕೊಡುವದಕ್ಕೇ ಮೆಕ್‌ಫೈ ಮತ್ತು ಥಾಮ್‌ಸನ್ ಅವರ ಸಂಶೋಧನೆಯನ್ನು ಇಷ್ಟು ದೀರ್ಘವಾಗಿ ಚರ್ಚಿಸಿದ್ದು ಪರಿಸರ–ಆನುವಂಶೀಯತೆಗಳ ಪ್ರಭಾವವನ್ನು ಇದಮಿತ್ಥಂ ಅನ್ನುವ ಹಾಗೆ ಅಳೆದು ತೀರ್ಮಾನಗಳನ್ನು ಹೇಳುವದರಲ್ಲಿರುವ ಕಷ್ಟ ಸ್ಪಷ್ಟವಾಗಿಸುವುದೇ ನನ್ನ ಉದ್ದೇಶ.

ಒಂದು ಗುಂಪಿನ ಪರಿಸರದಲ್ಲಿ ಆಗುವ ಬದಲಾವಣೆಗಳಿಗೂ ದಕ್ಷತೆಗಳಲ್ಲಾಗುವ ಬದಲಾವಣೆಗಳಿಗೂ ಇರುವ ಕಾರ್ಯಕಾರಣ ಸಂಬಂಧದ ಪ್ರಸ್ತಾಪವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಎರಡು ಗುಂಪುಗಳ ಪರಿಸರ ಸರಿಸಮವಾಗುತ್ತ ಬಂದ ಹಾಗೆ ಆ ಗುಂಪುಗಳ ದಕ್ಷತೆಗಳಲ್ಲಿ ಮೊದಲಿಗೆ ಕಂಡ ವ್ಯತ್ಯಾಸ ಹೇಗೆ ಕಡಿಮೆಯಾಗುತ್ತದೆ ಅನ್ನುವದಕ್ಕೆ ಪ್ರಮಾಣ ಒದಗಿಸಿಯಾಗಿದೆ.

ಬ್ರಿಟನ್ನಿಗೆ ವಲಸೆ ಬಂದ ಭಾರತದ ಮಕ್ಕಳ ಸಂಬಂಧದಲ್ಲಿ ಈ ವಿಚಾರಗಳು ಮುಖ್ಯ. ತುಲನಯೋಗ್ಯವೆಂದು ಆರಿಸಿಕೊಂಡ ಮಕ್ಕಳ ಪರಿಸರಗಳ ಬಗೆಗೆ ಎಚ್ಚರಿಕೆ ವಹಿಸಿ, ಬಾಹ್ಯಸ್ಥವಾದ ಅಂಶಗಳ ಪ್ರಭಾವವನ್ನು ಕಡಿಮೆ ಮಾಡುವಂತೆ ನೋಡಿಕೊಂಡಾಗ ದಕ್ಷತೆಗಳಲ್ಲಾಗುವ ಬದಲಾವಣೆಗಳಿಗೆ ಚೋದಕವಾದ ಪರಿಸರದ ಅಂಶಗಳನ್ನು ಗುರುತಿಸುವುದು ಸಾಧ್ಯ ಎಂದು ತೋರಿಸಿಕೊಡಲಾಗಿದೆ.

ಭಾರತದ ಮಕ್ಕಳಲ್ಲಿ ಪರಿಸರ ಪರಿವರ್ತನೆಯಿಂದ ಸಾಧ್ಯವಾಗುವ ಬದಲಾವಣೆಗಳೇ ನನ್ನ ಸಂಶೋಧನೆಯ ವಿಷಯ.

ಅಡಿ ಟಿಪ್ಪಣಿಗಳು :

1. DENNIS, W. (1960), The human figure drawings of Bedouins. *Journal of Social Psychology*, 52, 209–219.

2. DENNIS, W. (1942), The performance of Hopi Indian children on the Goodenough Draw-a-man test. *Journal of Comparative Psychology*, 34, 341-348.

3. KAMAT, V. V. (1939), Sex differences among Indian children. *British Journal of Educational Psychology*, 9, 251–256.

4. IRVINE, S. H. (1966), Towards a rationale for testing attainments and abilities in Africa. *British Journal of Educational Psychology*, 36, 24–32.

5. STRALISS, M. A. (1954), Subcultural variations in Ceylonese mental abitity : A study in national character. *Journal of Social Psychology*, 39, 129–141.

6. GORDON, H. (1923), *Mental and Scholastic Tests among Retarded Children*. London : H.M.S.O., Board of Education Pamphlet, 44.

7. GREENFIELD, P. M. and BRUNER, J. S. (1966), Culture and cognitive growth. *International Journal of Psychology*, Vol. 1, No. 2, 89–107.

8. RAMPHAL, C. (1962), *A study of three current problems of Indian Education*, University of Natal : Ph.D. Thesis ; (Unpublished).

9. KLINGELHOFER, E. L. (1967), Performance of Tanzania Secondary school pupils on Raven's Standard Progressive Matrices Test. *Journal of Social Psychology*, 72, 205–215.

10. MACFIE, J. (1961), The effect of education on African performance on a group of intelligence tests. *British Journal of Educational Psychology*, 31, 3, 232–240.

11. FEINGOLD, G. A. (1924), Intelligence of the first generation of immigrant groups, *Journal of Educational Psychology*, 15, 65–82.

12. ARTHUR, G. (1926), The relation of I.Q. to 3/8osition in family. *Journal of Educational Psychology*, 17, 541–550.

13. LONG, H. H. (1934), The intelligence of coloured elementary pupils in Washington. *Journal of Negro Education*, 34, 205–222.

14. LEE, E. S. (1951), Negro intelligence and selective migration : a Philadelphia test of the KI ineberg hypothesis. *American Social Review*, 56, 227–233.

15. MCCORD, W. M. and DEMEARTH, N. J. (1958), Negro versus White intellgence : A continuing controversy. *Harvard Educational Revies*, 28, 120–135.

16. GARTH, T. R. (1935), A study of the foster Indian child in the White home. *Psychological Bulletin*, Vol. 32, 708–709.

17. ROHRER, J. H. (1942), The test intelligence of Osage Indians. Journal of Social Psychology, 16, 99–105.

18. BLOOM, B. S. (1969), Letter to the Editor. *Harvard Educational Review*, 39, 419–421.

19. FEURSTEIN, R. and SHALOM, H. (1967), Problems of assessment and evaluation of the mentally retarded and culturally deprived child and adoloscent. Paper presented at the First Congress of the International Association for the Scientific study of Mental deficiency, Montoellier, France.

20. JENSEN, A. R. (1969), How much can we boost I.Q. and scholastic achievement? *Harvard Educational Review*, Vol. 39, No. 1, 1–123.

21. INNER LONDON EDUCATION AUTHORITY, (1966), *The Education of Immigrant Pupils in Primary Schools*, I.L.E.A. Report 959, London.

22. VERNON, P. E. (1969), *Intelligence and Cultural Environment*, Methuen, London.

ಅಧ್ಯಾಯ ನಾಲ್ಕು

ಅನುಮಾನಗಳು

ಭಾರತದ ಉಪಖಂಡದಿಂದ ವಲಸೆ ಬಂದು ಬ್ರಿಟನ್ನಿನ ಪ್ರಾಂತಗಳಲ್ಲಿ ಒಂದಾದ ಹಾರ್ಟ್‌ಫರ್ಡ್ ಶೈರಿನಲ್ಲಿ ನೆಲಸಿದ ಮಕ್ಕಳ ಎರಡು ಗುಂಪುಗಳ ಹೋಲಿಕೆಯೇ ಈ ಸಂಶೋಧನೆಯ ವಸ್ತು. ಒಂದು ಗುಂಪಲ್ಲಿ ಈಚೆಗೆ ಬಂದ ಮಕ್ಕಳು : ಇನ್ನೊಂದು ಗುಂಪಲ್ಲಿ ಹಿಂದೆ ಬಂದ ಮಕ್ಕಳು. ಎರಡನೇ ಗುಂಪಲ್ಲಿ ಬ್ರಿಟನ್ನಿನಲ್ಲೇ ಹುಟ್ಟಿದ ಕೆಲವು ಮಕ್ಕಳೂ ಇದ್ದವು.

ಸಾಂಪ್ರದಾಯಿಕವಾದ ತಮ್ಮ ಪರಿಸರವನ್ನು ಬಿಟ್ಟು ಹೆಚ್ಚು ಸಂಪದ್ಭರಿತ ವಾಗಿಯೂ ಉತ್ತೇಜಕವಾಗಿಯೂ ಇರುವ ಬೇರೆ ಒಂದು ಪರಿಸರಕ್ಕೆ ಬಂದು ನೆಲಸಿದಾಗ ಜನರ ವರ್ತನೆಯ ಮೇಲೆ ಆಗುವ ಪರಿಣಾಮಗಳನ್ನು ಆಗಲೇ ನೋಡಿಯಾಗಿದೆ. ವಲಸೆ ಹೋದವರು ಬುದ್ಧಿಮಾಪಕದ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸುವ ಸಂಶೋಧನೆಗಳ ಪ್ರಸ್ತಾಪವಾಗಿದೆ.

ಈ ಸಂಶೋಧನೆಗಳ ಆಧಾರದ ಮೇಲೆ, ಭಾರತದಿಂದ ವಲಸೆ ಬಂದ ಮಕ್ಕಳಿಗೆ ಸಂಬಂಧಿಸಿದ ಹಾಗೆ, ಕೆಲವು ಅನುಮಾನಗಳನ್ನು ಪ್ರತಿಪಾದಿಸಬಹುದು :

1. ಭಾರತದ ಉಪಖಂಡದಿಂದ ವಲಸೆ ಬಂದು ಬ್ರಿಟನ್ನಿನಲ್ಲಿ ಒಂದಿಷ್ಟು ಕಾಲ ನೆಲಸಿದ ಮಕ್ಕಳು ಬುದ್ಧಿಮಾಪಕವೊಂದರಲ್ಲಿ ಗಳಿಸುವ ಸರಾಸರಿ ಅಂಕ, ಅವಕ್ಕೆ ಸರಿಸಮವಾಗಿದ್ದು ಭಾರತ ದಲ್ಲೇ ಉಳಿದ ಮಕ್ಕಳ ಸರಾಸರಿಗಿಂತ ಹೆಚ್ಚಾಗಿರುತ್ತದೆ.

ಜೊತೆಗೆ,

2. ಭಾರತದಿಂದ ಬಂದ ಸರಿಸಮವಾದ ಎರಡು ಗುಂಪುಗಳಲ್ಲಿ, ಮೊದಲು ಬಂದ ಮಕ್ಕಳ ಸರಾಸರಿ ಅಂಕ, ಆ ಮೇಲೆ ಬಂದ ಮಕ್ಕಳ ಸರಾಸರಿಗಿಂತ ಹೆಚ್ಚಾಗಿರುತ್ತದೆ.

ಬ್ರಿಟನ್ನಿನ ಪರಿಸರದ ಪ್ರಭಾವಕ್ಕೆ ಹೆಚ್ಚು ಒಳಗಾದದ್ದೇ ಮೊದಲು ಬಂದ ಮಕ್ಕಳ ಹೆಚ್ಚುಗಾರಿಕೆಗೆ ಕಾರಣವಾಗಿರುವುದು ನಿಜವಾದರೆ, ಈಚೆಗೆ ಬಂದ ಮಕ್ಕಳು ಹೆಚ್ಚು ಹೆಚ್ಚು ಕಾಲ ಕಳೆದ ಹಾಗೆ ಅವರ ಕಾರ್ಯ ನಿರ್ವಹಣೆಯಲ್ಲಿ ಅಭಿವೃದ್ಧಿ ಕಂಡುಬರುವುದೂ ಸಹಜ :

3. ಬ್ರಿಟನ್ನಿಗೆ ವಲಸೆ ಬಂದ ಮಕ್ಕಳ ಬುದ್ಧಿ ಪರೀಕ್ಷೆ–ಪುನರ್ ಪರೀಕ್ಷೆಗಳ ನಡುವೆ ಸಾಕಷ್ಟು ಕಾಲ ಸಂದಿದ್ದರೆ ಪುನರ್ ಪರೀಕ್ಷೆ ಯಲ್ಲಿ ಮಕ್ಕಳು ಗಳಿಸುವ ಸರಾಸರಿ ಅಂಕ ಮೊದಲ ಪರೀಕ್ಷೆಯಲ್ಲಿ ಗಳಿಸಿದ ಸರಾಸರಿಗಿಂತ ಹೆಚ್ಚಾಗಿರುತ್ತದೆ.

ವಲಸೆ ಬಂದ ಮಕ್ಕಳಲ್ಲಿ ಕಂಡುಬರುವ ಬದಲಾವಣೆಗಳಿಗೆ ಮನೆಯ ಪರಿಸರ ದಲ್ಲಾಗಿರಬಹುದಾದ ಪರಿವರ್ತನೆಗಿಂತ ವಿದ್ಯಾಭ್ಯಾಸ ಕ್ರಮದಲ್ಲಾದ ಬದಲಾ ವಣೆಯೇ ಹೆಚ್ಚು ಕಾರಣಭೂತವೆನ್ನುವ ವಾದವನ್ನು ಹಿಂದೆಯೇ ಮಂಡಿಸಲಾಗಿದೆ. ಮನೆಯ ಪರಿಸರದಲ್ಲಿನ ಬದಲಾವಣೆ ಗೌಣ, ಮಕ್ಕಳ ದಕ್ಷತೆಗಳ ಮೇಲೆ ಅದಕ್ಕಿರ ಬಹುದಾದ ಪ್ರಭಾವ ಸೊನ್ನೆಯೆನ್ನುವ ವಾದ ಯಥಾರ್ಥವಾಗಿದ್ದರೆ, ಬ್ರಿಟನ್ನಿನಲ್ಲಿ ಹುಟ್ಟಿದ ಮಾತ್ರಕ್ಕೇ ಭಾರತದ ಮಕ್ಕಳು ಹೆಚ್ಚು ಬುದ್ಧಿವಂತರಾಗಿರುವ ಕಾರಣವಿಲ್ಲ. ಶಾಲೆಗಳಿಗೆ ಹೋಗುವ ಮೊದಲ 5 ವರ್ಷಗಳನ್ನು ಬ್ರಿಟನ್ನಿನಲ್ಲಿ ಕಳೆದಿದ್ದರಿಂದ ಬುದ್ಧಿಯ ಬೆಳವಣಿಗೆಗೆ ಸಿಕ್ಕ ಉತ್ತೇಜನ ಲೆಕ್ಕಕ್ಕೇ ಬಾರದ್ದು ಅನ್ನುವ ಮಾತು ಸತ್ಯವಾಗಬೇಕು. ಬ್ರಿಟನ್ನಿನ ಶಾಲೆಗಳಲ್ಲಿ ಇಂತಹ ಮಕ್ಕಳು ಕಳೆದ ವರ್ಷಗಳ ಲೆಕ್ಕ ಮುಖ್ಯವೇ ಹೊರತು ಬ್ರಿಟನ್ನಿನಲ್ಲಿ ಕಳೆದ ವರ್ಷಗಳ ಲೆಕ್ಕವಲ್ಲ.

ಈ ಬಗೆಯ ಯೋಚನೆಯಿಂದ ಹುಟ್ಟಿದ ಅನುಮಾನ :

4. ವಲಸೆ ಬಂದ ಮಕ್ಕಳ ಎರಡು ಗುಂಪುಗಳು ಸರಿಸಮವಾಗಿ ದ್ದಾಗ, ಬ್ರಿಟನ್ನಿನ ಶಾಲೆಗಳಲ್ಲಿ ಅವು ಕಳೆದ ಕಾಲ ಸಮನಾಗಿ

ದ್ದಾಗ, ಬ್ರಿಟನ್ನಿನಲ್ಲೇ ಹುಟ್ಟಿದ ಮಕ್ಕಳ ಸರಾಸರಿಗೂ ಆಮೇಲೆ ಬಂದವರ ಸರಾಸರಿಗೂ ನಡುವೆ ಸಾರ್ಥಕವಾದ ವ್ಯತ್ಯಾಸವಿರುವುದಿಲ್ಲ.

ಭಾರತದ ಹಾಗೂ ಬ್ರಿಟನ್ನಿನ ವಿದ್ಯಾಭ್ಯಾಸ ಕ್ರಮಗಳ ವಿಷಯ ಬಂದಾಗ, ಭಾರತದ ಶಾಲೆಗಳಲ್ಲಿ ಬಾಯಿಪಾಠಕ್ಕೆ ಶಾಬ್ದಿಕವಾದ ವಿಷಯಸಂಗ್ರಹಣ ಕಾರ್ಯಕ್ಕೆ ಹೇಗೆ ಹೆಚ್ಚಿನ ಬೆಲೆಯಿದೆ ಅನ್ನುವ ಮಾತೂ ಬಂತು. ಇದು ನಿಜವಾದರೆ, ಭಾರತದ ಮಕ್ಕಳು ನಗರಗಳಲ್ಲಿನ ಶಾಲೆಗಳಿಗೆ ಹೋದರೂ ಒಂದೇ, ಹಳ್ಳಿಗಳಲ್ಲಿನ ಶಾಲೆಗಳಿಗೆ ಹೋದರೂ ಒಂದೇ ಅಂದ ಹಾಗಾಯಿತು. ಮಕ್ಕಳಲ್ಲಿನ ಶಾಬ್ದಿಕವಲ್ಲದ ದಕ್ಷತೆಗಳು ಅಷ್ಟಾಗಿ ಬೆಳೆಯದೇ ಹೋಗುವುದು ಹಳ್ಳಿಯ ಶಾಲೆಗೂ ನಿಜ, ನಗರದ ಶಾಲೆಗೂ ನಿಜ.

ಈ ವಾದದ ಪಾಯದ ಮೇಲೆ ನಿಂತ ಅನುಮಾನ;

5. ಕೈ ಚಳಕ ಪ್ರಧಾನವಾದ ಬುದ್ಧಿ ಮಾಪಕದಲ್ಲಿ ಭಾರತದ ಪಟ್ಟಣಗಳಲ್ಲಿನ ಮಕ್ಕಳು ಗಳಿಸುವ ಸರಾಸರಿಗೂ ಹಳ್ಳಿಯ ಮಕ್ಕಳು ಗಳಿಸುವ ಸರಾಸರಿಗೂ ನಡುವೆ ಸಾರ್ಥಕವೆನಿಸುವ ವ್ಯತ್ಯಾಸವಿರುವುದಿಲ್ಲ.

ಭಾರತದ ಮಕ್ಕಳ ಬಗೆಗೆ ಆಡಿದ ಈ ಮಾತು ಉಚಿತವಾದರೆ, ಬ್ರಿಟನ್ನಿಗೆ ವಲಸೆ ಬಂದ ಮಕ್ಕಳ ವಿಷಯದಲ್ಲೂ ಇದು ದಿಟವಾಗಬೇಕು. ಈ ಬಗೆಯ ತರ್ಕ ಇನ್ನೊಂದು ಅನುಮಾನಕ್ಕೆ ಕಾರಣವಾಗುವುದು ಅನಿವಾರ್ಯ.

6. ಸರಿಸಮವೆಂದು ಪರಿಗಣಿಸಲ್ಪಟ್ಟ ವಲಸೆ ಬಂದ ಮಕ್ಕಳ ಎರಡು ಗುಂಪುಗಳು ಬ್ರಿಟನ್ನಿನ ಶಾಲೆಗಳಲ್ಲಿ ಒಂದೇ ಸಮನಾದ ಕಾಲ ಕಳೆದಿರುವಾಗ, ಭಾರತದ ಹಳ್ಳಿಯಿಂದ ಬ ದವುಗಳು ಶಾಬ್ದಿಕವಲ್ಲದ ಒಂದು ಬುದ್ಧಿ ಮಾಪಕದಲ್ಲಿ ಗಳಿಸುವ ಸರಾಸರಿಗೂ ನಡುವೆ ಸಾರ್ಥಕವಾದ ವ್ಯತ್ಯಾಸವಿರುವುದಿಲ್ಲ.

ಸ್ಟಾನ್‌ಫರ್ಡ್ ಬೀನೇ ಮಾಪಕದ ರೂಪಾಂತರವೊಂದನ್ನು ತಮ್ಮ ಅಧ್ಯಯನಕ್ಕೆ ಉಪಯೋಗಿಸಿದ ಕಾಮತ್ ಅವರು ಕರ್ಣಾಟಕದ ಗಂಡು ಮಕ್ಕಳ ಹೆಣ್ಣು ಮಕ್ಕಳ ನಡುವೆ ಕಂಡ ವ್ಯತ್ಯಾಸದ ಮಾತೆತ್ತಿಯಾಗಿದೆ, ಸ್ಟಾನ್‌ಫರ್ಡ್ ಬೀನೇ ಮಾಪಕ ಬಹುತೇಕ ಶಾಬ್ದಿಕ ಸಮಸ್ಯೆಗಳದ್ದು.

ಶಾಬ್ದಿಕವಾದ ದಕ್ಷತೆಗೆ ಭಾರತದ ಸಮಾಜ ಕೊಡುವಷ್ಟು ಮರ್ಯಾದೆ ಶಾಬ್ದಿಕವಲ್ಲದ ದಕ್ಷತೆಗೆ ಕೊಡುವುದಿಲ್ಲ. ಶಾಲೆಯಾಗಲೀ ಮನೆಯಾಗಲೀ ಅವುಗಳ ಬೆಳವಣಿಗೆಯ ಕಡೆಗೆ ಗಮನ ಕೊಡುವುದಿಲ್ಲ ಅನ್ನುವುದು ವಾಸ್ತವವಾದರೆ ಗಂಡು ಮಕ್ಕಳಲ್ಲಿ ಹೇಗೋ ಹಾಗೇ ಹೆಣ್ಣು ಮಕ್ಕಳಲ್ಲೂ ಈ ದಕ್ಷತೆಗಳು ಮೊಟಕಾಗಿರುತ್ತವೆ ಎಂದು ಹೇಳಿದಾಗ ಅದಕ್ಕೆ ಕೆಳಗಿನ ರೂಪ:

7. ಭಾರತದಲ್ಲಿನ ಶಾಲೆಗಳ ಮಕ್ಕಳಲ್ಲಿ, ಶಾಬ್ದಿಕವಲ್ಲದ ಬುದ್ಧಿ ಮಾಪಕಕ್ಕೆ ಸಂಬಂಧಿಸಿದ ಹಾಗೆ ಹೆಣ್ಣು ಗಂಡುಗಳ ನಡುವೆ ವ್ಯತ್ಯಾಸವಿರುವುದಿಲ್ಲ.

ಮೇಲಿನ ವಾದವನ್ನು ಬ್ರಿಟನ್ನಿಗೆ ವಲಸೆ ಬಂದ ಮಕ್ಕಳಿಗೆ ಅನ್ವಯಿಸಿದಾಗ ಹೆಣ್ಣು ಗಂಡುಗಳ ನಡುವೆ ಕ್ರಮಕ್ರಮವಾಗಿ ವ್ಯತ್ಯಾಸ ತಲೆದೋರುವದೆಂದು ಹೇಳುವುದು ಸಾಧ್ಯ. ಈ ವ್ಯತ್ಯಾಸಕ್ಕೆ ಮಕ್ಕಳ ಮನೆಯ ಪರಿಸರವಾಗಲೀ ಶಾಲೆಯಲ್ಲಿ ದೊರಕಿದ ಅನುಭವಗಳಾಗಲೀ ಕಾರಣವೆಂದಲ್ಲ. ಶಾಲೆಯಲ್ಲಿ, ಮನೆಯಲ್ಲಿ ಹೆಣ್ಣಿಗೆ ಹಾಗೂ ಗಂಡಿಗೆ ದೊರಕುವ ಅನುಭವಗಳು ಒಂದೇ ಆಗಿದ್ದು ಪ್ರತಿಪಾದಿಸಿದ ವ್ಯತ್ಯಾಸಕ್ಕೆ ಅವು ಕಾರಣವಾಗಲಾರವು. ವಿವರಣೆಗೆ, ಭಾರತ ಸಂಸ್ಕೃತಿಯ ವೈಶಿಷ್ಟ್ಯವೊಂದಕ್ಕೆ ಗಮನ ಕೊಡುವುದು ಅನಿವಾರ್ಯ. ವಿವರಣೆಯಿರುವುದು, ಶಾಲೆಯ ಅನಂತರ ಹೊತ್ತನ್ನು ಹೆಣ್ಣುಮಕ್ಕಳು ಹೇಗೆ ಕಳೆಯಬೇಕು, ಗಂಡುಮಕ್ಕಳು ಹೇಗೆ ಕಳೆಯಬೇಕು, ಅನ್ನುವದರ ಬಗೆಗೆ ಹೆತ್ತವರು ತಾಳುವ ಮನೋಭಾವದಲ್ಲಿ, ಇಟ್ಟುಕೊಂಡಿರುವ ಅಪೇಕ್ಷೆಯಲ್ಲಿ ಹಿಂದೂಗಳಾಗಲೀ, ಮುಸ್ಲಿಮರಾಗಲೀ, ಭಾರತದ ಸಂಪ್ರದಾಯದಲ್ಲಿ ಹೆಣ್ಣುಮಕ್ಕಳ ಮೇಲೆ ಹೆಚ್ಚಿನ ಕಟ್ಟುನಿಟ್ಟು; ಏನೇ ಆಗಲಿ, ಹಾಕಿದ ಗೆರೆ ದಾಟಬಾರದೆನ್ನುವ ಒತ್ತಾಯ. ಬಹುಮಟ್ಟಿಗೆ, ಮನೆಯೆನ್ನುವ ಸಣ್ಣ ರಾಜ್ಯದಲ್ಲಿ ಗಂಡಸು ದೊರೆ. ಮನೆಗೆಲಸದಲ್ಲಿ ಹೆಣ್ಣು ಮಕ್ಕಳು ನೆರವಾಗಬೇಕೆನ್ನುವ ನಿರೀಕ್ಷೆ. ಚಿಕ್ಕವಯಸ್ಸಿನವಳಾಗಿದ್ದರೂ ಒಂದು ಹೆಣ್ಣು ತನಗಿಂತ ಚಿಕ್ಕವರಾದ ತಮ್ಮ ತಂಗಿಯರ ಮೇಲ್ವಿಚಾರಣೆಯ ಜವಾಬ್ದಾರಿಯನ್ನ ಒಪ್ಪಿಕೊಳ್ಳಬೇಕೆಂಬ ಅಪೇಕ್ಷೆ. ಮನೆಯ ಹೊರಗೆ, ಬೇರೆ ಮಕ್ಕಳ ಸಹವಾಸದಲ್ಲಿ ಕಾಲ ಕಳೆಯುವದಾಗಲಿ, ಕುತೂಹಲ ಸೂಚಿಸುವ ವರ್ತನೆಗಳ ಮೂಲಕ ಹೊರಗಿನ ಪ್ರಪಂಚದ ಜ್ಞಾನ ಪಡೆದುಕೊಳ್ಳುವದಾಗಲೀ ಅಪವಾದವೆನಿಸಿಕೊಳ್ಳುವಷ್ಟು ಅಪರೂಪವಾದ ವಿಷಯಗಳು. ಹೆಣ್ಣು ಮಕ್ಕಳು ಹೊರಗಡೆ ಹೋದಾಗಲೂ ಹೆತ್ತವರ ಹಿಡಿತ ಸಡಿಲವಾಗುವುದು ಕಡಿಮೆ; ಸ್ನೇಹಿತರ ಆಯ್ಕೆಯಲ್ಲೂ ಹೆತ್ತವರ ಅಧಿಕಾರ ಚಲಾವಣೆ.

ಇಂತಹ ಹಿನ್ನೆಲೆಯಿಂದ ನೋಡಿದಾಗ ಬ್ರಿಟನ್ನಿನ ಹೆಣ್ಣು ಮಕ್ಕಳಿಗೆ ಸಹಜವಾದ ನಡತೆಗಳು 'ಗಂಡುಬೀರಿ' ನಡತೆಗಳಾಗಿ ಕಾಣುವುದು ಆಶ್ಚರ್ಯವಲ್ಲ; ಎಂದೇ, ಆವು ನಿಷಿದ್ಧ ; ಹೇಗೆ ನಡೆದುಕೊಳ್ಳಬೇಕು, ಹೇಗೆ ನಡೆದುಕೊಳ್ಳಬಾರದು ಅನ್ನುವವರ ಜೋಧನೆ ವಲಸೆ ಬಂದವರ ಮನೆಗಳಲ್ಲಿ ಸರ್ವೇ ಸಾಮಾನ್ಯವಾಗಿರುವದಕ್ಕೆ ಕಾರಣ.

ಈ ಚಿತ್ರಕ್ಕೆ ಅಪವಾದವೆನಿಸುವಂತಹ ಸಂಸಾರಗಳೇ ಇಲ್ಲವೆಂದಲ್ಲ. ಇಂತಹ ಅಪವಾದಗಳನ್ನು ಬ್ರಿಟನ್ನಿಗೆ ಬಂದವರ ಮಧ್ಯೆ ಹಾಗೂ ಭಾರತದಲ್ಲೇ ಕಾಣುವುದು ಸಾಧ್ಯ. ಆದರೂ, ವಲಸೆ ಬಂದವರಲ್ಲಿ ಅನೇಕರ ಬಗೆಗೆ ಈ ಮಾತು ವಾಸ್ತವ.

ಇಂತಹ ಮನೆಗಳಲ್ಲಿ, ಗಂಡು ಮಕ್ಕಳಿಗೆ ಹೆಣ್ಣು ಮಕ್ಕಳಿಗೆ ಸಿಕ್ಕುವ ಸ್ವಾತಂತ್ರ್ಯದಲ್ಲಿ ವ್ಯತ್ಯಾಸವಿದೆ. ಶಾಲೆಯಾಚಿನ ಗಂಡು ಮಕ್ಕಳ ನಡತೆಯ ಮೇಲೆ ಹೆತ್ತವರು ಉಳಿಸಿಕೊಳ್ಳುವ ಹತೋಟಿ ಕಡಿಮೆ–ಎಷ್ಟೋ ಸಂದರ್ಭಗಳಲ್ಲಿ ದೊಡ್ಡವರು 'ಎಷ್ಟೇ ಆದರೂ ಗಂಡು ಹುಡುಗ ತಾನೇ' ಅಂದುಕೊಂಡು ಸ್ವಚ್ಛಂದ ವರ್ತನೆಗೆ ಪರೋಕ್ಷವಾದ ಉತ್ತೇಜನ ಕೊಡುವುದೂ ಉಂಟು. ನಾಳೆಯ ಬದುಕಲ್ಲಿ ಗಂಡು ಮಕ್ಕಳು ಜಯಪ್ರದವಾಗುವದಕ್ಕೆ ಈಗ ಏನು ಬೇಕು ಅನ್ನುವುದೇ ತಂದೆ ತಾಯಿಗಳ ಮುಖ್ಯ ಯೋಜನೆ. ಹೆಣ್ಣು ಮಕ್ಕಳ ಭವಿಷ್ಯದ ಯೋಚನೆ ಮಾಡುವಾಗ ಪ್ರಧಾನವಾದದ್ದು ಅವರಿಗೆ ಯೋಗ್ಯ ಗಂಡುಮಕ್ಕಳು ಸಿಗಬೇಕೆನ್ನುವ ಆಸೆ. ಹೆಣ್ಣು ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡುವಾಗಲೂ ಒಂದು ಕಣ್ಣು ಅವರ ಮದುವೆಯ ಮೇಲೆ. ಉದ್ಯೋಗದ ಯೋಚನೆಯಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವವರು ವಿರಳ. ಬ್ರಿಟನ್ನಿಗೆ ವಲಸೆ ಬಂದ ಎಷ್ಟೋ ಸಂಸಾರಗಳಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಅರ್ಧಕ್ಕೇ ಬಿಟ್ಟು, ಕೆಲಸಕ್ಕೂ ಹೋಗದೇ, ಮೂಲೆಗುಂಪಾಗಿರುವ ಎಷ್ಟೋ ಹೆಣ್ಣುಮಕ್ಕಳನ್ನು ನಾನೇ ಕಂಡಿದ್ದೇನೆ. ಹೆಣ್ಣುಮಕ್ಕಳು ಕೆಲಸಕ್ಕೆ ಹೋಗುವುದು ಅನೇಕ ಮಂದಿಗೆ ಹಿಡಿಸದ ವಿಷಯ. ಎಂದೇ ಇಂತಹ ಪರಿಸ್ಥಿತಿ.

ಹೆತ್ತವರ ಇಂತಹ ಲೆಕ್ಕಾಚಾರ ಮಕ್ಕಳ ಕಲಿಕೆಯ ಮೇಲೆ, ಅವರು ಕಲಿಕೆಯ ಸಂದರ್ಭಕ್ಕೆ ತರುವ ಮನೋಭಾವದ ಮೇಲೆ ಪ್ರಭಾವ ಬೀರುವುದು ಕ್ರಮಕ್ರಮವಾಗಿ. ಅದೇ ತಾನೆ ಬ್ರಿಟನ್ನಿಗೆ ಬಂದ ಗಂಡುಮಕ್ಕಳು ಹೆಣ್ಣುಮಕ್ಕಳಷ್ಟೇ ಸಂಕೋಚದಿಂದ, ಅಧೈರ್ಯದಿಂದ ನಡೆದುಕೊಳ್ಳುವುದು ಸಹಜ. ಇಂಗ್ಲಿಷ್ ಭಾಷೆಯನ್ನು ಸರಾಗವಾಗಿ ಉಪಯೋಗಿಸುವುದು ಕಷ್ಟವಾಗಿರುವದರ ಜೊತೆಗೆ ಸುತ್ತಣ ಪರಿಸರ ವಿಚಿತ್ರವಾಗಿ ಕಾಣುವುದೂ ಈ ಮನೋಭಾವದ ಹಿಂದಿರುವ ಅಂಶಗಳು. ದಿನ ಕಳೆದ ಹಾಗೆ ಗಂಡುಮಕ್ಕಳ ಪ್ರಪಂಚ ಅರಳಿದರೂ ಹೆಣ್ಣುಮಕ್ಕಳಿಗೆ ಮೊದಲ

ಬ್ರಿಟನ್ನಿನ ಸರ್ಕಾರ ಹೆಚ್ಚಿನ ನಿರ್ಬಂಧವನ್ನು ಹಾಕುವ ವದಂತಿ ಹರಡಿದ್ದೇ ಇದಕ್ಕೆ ಕಾರಣ. ಆದಷ್ಟು ಬೇಗ ಬಂದು, ಬ್ರಿಟನ್ನಿನಲ್ಲಿ ನೆಲೆಸುವ ಹಕ್ಕನ್ನು ಸ್ಥಾಪಿಸಿದರೆ ಸಾಕು, ಆಮೇಲೆ ಹೆಂಡತಿ ಮಕ್ಕಳನ್ನು ಕರೆಸಿಕೊಳ್ಳುವುದು ಸಾಧ್ಯ, ಅನ್ನುವ ಆತುಕದಲ್ಲಿ ನಾವು ಇದಕ್ಕೆ ಉಚಿತವಾದ ವಿವರಣೆಯನ್ನು ಕಾಣಬಹುದು.

ಹೀಗೆ ಬಂದು ನೆಲೆಸಿದ ~~ಸರಕಾರಗಳು~~ ಸಂಸಾರಗಳು ಬಹುಮಟ್ಟಿಗೆ ಭಾರತದಲ್ಲಿ ಬದುಕಿದ್ದ ಹಾಗೆ ಇಲ್ಲಿಯೂ ಬದುಕುತ್ತಿದ್ದವು ಅನ್ನಬಹುದು. ಯಾವುದಾದರೂ ಕ್ಷೇತ್ರದಲ್ಲಿ ವಿಶೇಷ ತರಪೇತು ಪಡೆದಿದ್ದ ಮಂದಿ ಇಲ್ಲಿಯೂ ಅಂತಹ ಕೆಲಸವನ್ನೇ ಮಾಡುತ್ತಿದ್ದು ತಂಪಾಗಿ ಬದುಕುತ್ತಿದ್ದದ್ದಕ್ಕೆ ಅವರು ನಮಗೆ ಕೊಟ್ಟ ಆತಿಥ್ಯ ಹಾಗೂ ನಿರಾಂತಕವಾದ ಉತ್ತರಗಳೇ ಸಾಕ್ಷಿ. ಈ ಮಾತಿಗೆ ಅಪವಾದವೆನಿಸುವ ವಿದ್ಯಾವಂತರೇ ಇರಲಿಲ್ಲವೆಂದಲ್ಲ. ಭಾರತದಿಂದ ಬಂದ ಕೆಲವು ಅಧ್ಯಾಪಕರಿಗೆ, ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದವರಿಗೆ, ಅದೇ ತರಹದ ಕೆಲಸಗಳು ಬ್ರಿಟನ್ನಿನಲ್ಲಿ ದಕ್ಕದೇ ಮನಸ್ಸು ವ್ಯಗ್ರವಾಗಿದ್ದುದೂ ಕಂಡು ಬಂತು. ಆದಷ್ಟು ಬೇಗ ಸ್ವದೇಶಕ್ಕೆ ಹಿಂದಿರುಗಿಬಿಡುವ ಅಥವಾ ತಮಗೆ ಅಸಾಧ್ಯವಾದದ್ದನ್ನು ತಮ್ಮ ಮಕ್ಕಳು ಸಾಧಿಸುವ ಕನಸು ಕಂಡಿದ್ದು ಇಂತಹವರಲ್ಲಿ. ಅವಿದ್ಯಾವಂತರು ಸಂರ್ದಶನದ ಸಂಬಂಧದಲ್ಲಿ ನಡೆದುಕೊಂಡದ್ದರ ರೀತಿ ಕಣ್ಣಿಗೆ ಹೊಡೆಯುವಷ್ಟು ಭಿನ್ನವಾಗಿತ್ತು. ಈ ಗುಂಪಿನಲ್ಲಿದ್ದವರು ಬಹುಮಟ್ಟಿಗೆ ರೈತರಾಗಿ, ಕೈಕೆಲಸಮಾಡಿ, ಅಂಗಡಿಯಿಟ್ಟು ಅಥವಾ ಸೈನಿಕರಾಗಿ ದುಡಿದವರು. ಅಷ್ಟೂ ರೈತರು ಬಂದಿದ್ದದ್ದು ಪಂಜಾಬಿನಿಂದ ಅಥವಾ ಕಾಶ್ಮೀರದಿಂದ. ವಿದ್ಯಾವಂತರ ನಡುವೆ ಮನೆಗೊಂದು ಸಂಸಾರದ ಕ್ರಮವಿದ್ದರೆ, ಇವರು ತಾವಿದ್ದ ಮನೆಯ ಒಂದು ಭಾಗವನ್ನೋ, ಕೋಣೆಯನ್ನೋ ಬೇರೊಬ್ಬರಿಗೆ ಬಾಡಿಗೆ ಕೊಡುವದನ್ನು ನಡೆಸಿದ್ದರು. ಎರಡು ಮೂರು ಸಂಸಾರಗಳು ಒಂದೇ ಅಡಿಗೆ ಮನೆಯನ್ನೂ ಬಚ್ಚಲನ್ನೂ ಉಪಯೋಗಿಸುತ್ತಿದ್ದದ್ದು ಕಂಡದ್ದು ಅವಿದ್ಯಾವಂತರ ನಡುವೆ. ಶಾಲೆಯ ಮುಖ್ಯೋಪಾಧ್ಯಾಯ ಕೊಟ್ಟ ವಿಳಾಸ ಒಂದಕ್ಕಿಂತ ಹೆಚ್ಚು ಸಂಸಾರಗಳ ವಿಳಾಸವಾಗಿದ್ದದ್ದು ಸಾಮಾನ್ಯವಾಗಿತ್ತು. ಈ ಜನದ ಜೊತೆ ಸಂದರ್ಶನ ನಡೆಸುವದಾಗಲೀ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಪಡೆಯುವದಾಗಲೀ ಸುಲಭದ ಮಾತಾಗಿರಲಿಲ್ಲ. ಮಕ್ಕಳ ಸರಿಯಾದ ವಯಸ್ಸಿನ ವಿವರಕ್ಕೆ ಕೆಲವೊಮ್ಮೆ ಪ್ಯಾಸ್‌ಪೋರ್ಟನ್ನು ಪರೀಕ್ಷಿಸುವ ಅಗತ್ಯವೂ ಕಾಣಬಂತು.

ಈ ಮನೆಗಳಲ್ಲಿ ಇಂಗ್ಲಿಷ್ ಭಾಷೆಯ ಬಳಕೆ ಎಳ್ಳಷ್ಟೂ ಇರಲಿಲ್ಲವೆನ್ನಬಹುದು. ಈ ಗುಂಪಿನವರಲ್ಲಿ ತರಬೇತಿ ಅಗತ್ಯವಿಲ್ಲದ ಕೈಗೆಲಸ ಮಾಡುತ್ತಿದ್ದವರೇ ಹೆಚ್ಚು. ಅವರಿಗೆ ಸಂಶೋಧನೆಯ ಬಗೆಗೆ ಕುತೂಹಲವಿರದೇ ಇದ್ದದ್ದೂ ಸ್ಪಷ್ಟವಾಗಿತ್ತು.

ಮಕ್ಕಳು ಶಾಲೆಗಳಲ್ಲಿ ಚೆನ್ನಾಗಿ ಓದಬೇಕೆನ್ನುವ ಸಾಮಾನ್ಯ ಆಸೆ ಬಿಟ್ಟರೆ, ಅವರ ವಿದ್ಯಾಭ್ಯಾಸದ ಬಗೆಗೆ ಎಂತಹ ಉತ್ಸಾಹವಿರದಿದ್ದದ್ದೂ ಸ್ಪಷ್ಟವಾಗಿತ್ತು.

ಸಂದರ್ಶಿಸಿದ 145 ಸಂಸಾರಗಳಿಂದ ಆರಿಸಿಕೊಡ ಎರಡು ಗುಂಪು ಮಕ್ಕಳ ಬಗೆಗೆ ಇಲ್ಲಿ ವಿವರಿಸಿರುವ ಸಂಶೋಧನೆ. ಒಂದು ಗುಂಪಿನ ಮಕ್ಕಳು ಪರೀಕ್ಷೆಯ ಹೊತ್ತಿಗೆ 12 ರಿಂದ 30 ತಿಂಗಳವರೆಗೆ ವಾಸಿಸಿದ್ದರೆ, ಎರಡನೇ ಗುಂಪಿನ ಮಕ್ಕಳು ಬ್ರಿಟನ್ನಿಗೆ ಬಂದದ್ದು ಐದು ವರ್ಷಗಳಿಗೂ ಹಿಂದೆ.

ಒಂದೊಂದರಲ್ಲಿ ಮಕ್ಕಳಿದ್ದ ಈ ಗುಂಪುಗಳ ವಿವರಗಳು ಅನುಬಂಧ 1ರಲ್ಲಿ ಕಾಣ ಸಿಗುತ್ತವೆ.

ಆ ವಿವರಗಳ ಸಾರಾಂಶ ಕೆಳಗಿದೆ :

	ಈಚೆಗೆ ಬಂದವರು	ಹಿಂದೆ ಬಂದವರು
ಮಕ್ಕಳ ಸಂಖ್ಯೆ	43	43
ಹುಡುಗರು	27	24
ಹುಡುಗಿಯರು	16	19
ಬ್ರಿಟನ್ನಿನಲ್ಲಿ ಹುಟ್ಟಿದವು	—	16
ಸರಾಸರಿ ವಯಸ್ಸು	10 ವರ್ಷ 0 ತಿಂಗಳು	10 ವರ್ಷ 1 ತಿಂಗಳು
ತಂದೆಗೆ ಭಾರತದಲ್ಲಿದ್ದ ಕೆಲಸ		
ರೈತರು	11	9
ಕಾರಖಾನರು	9	7
ಅಧ್ಯಾಪಕರು	5	5
ವರ್ತಕರು	6	3
ಕೈಗೆಲಸದವರು	5	3
ಸೈನಿಕರು	6	—
ತರಪೇತು ಕೆಲಸದವರು	—	14
ಸಾಗಣೆ ಕೆಲಸದವರು	1	—

ತಂದೆಯ ವಿದ್ಯಾಭ್ಯಾಸ ಮಟ್ಟ-ಸರಾಸರಿ ವರ್ಷಗಳಲ್ಲಿ	8 ವರ್ಷ 10 ತಿಂಗಳು	11 ವರ್ಷ 0 ತಿಂಗಳು
ಒಡಹುಟ್ಟಿದವರ		
ಸಂಖ್ಯೆ-ಸರಾಸರಿ	4.2	3.84
ಹುಟ್ಟಿದ ಸ್ಥಳ		
ಹಳ್ಳಿಗರು	17	18
ನಾಗರಿಕರು	26	25
ಮನೆಯ ಭಾಷೆ		
ಪಂಜಾಬಿ	29	24
ಬೇರೆಯವು	14	19
ಬ್ರಿಟನ್ನಿನಲ್ಲಿದ್ದ ಕಾಲ-ಸರಾಸರಿ ತಿಂಗಳಲ್ಲಿ	19.3 ತಿಂಗಳು	92 ತಿಂಗಳು
ಮಕ್ಕಳು ಇಂಗ್ಲಿಷ್ ಶಾಲೆಗಳಲ್ಲಿ ಇದ್ದ ಕಾಲ-ಸರಾಸರಿ	19.3 ತಿಂಗಳು	55 ತಿಂಗಳು
ಈಗ ಮನೆಯಲ್ಲಿ ಬಳಸುವ ಭಾಷೆ		
ಕೇವಲ ಇಂಗ್ಲಿಷ್	1	20
ಭಾರತದ ಭಾಷೆ ಮಾತ್ರಾ	23	9
ಎರಡೂ ಭಾಷೆಗಳು	19	14

ಸೂಕ್ಷ್ಮವಾಗಿ ಪರೀಕ್ಷಿಸದೇ ಸ್ಥೂಲವಾಗಿ ನೋಡಿದಾಗಲೂ ಈ ಎರಡು ಗುಂಪುಗಳ ನಡುವೆ ಗುಣಾವಲಂಬಿಯಾದ ವ್ಯತ್ಯಾಸವಿರುವುದು ಕಾಣುತ್ತದೆ. ಬ್ರಿಟನ್ನಿಗೆ ಹಿಂದೆ ಬಂದವರಿಗೂ ಈಚೆಗೆ ಬಂದವರಿಗೂ ಮಕ್ಕಳ ಸಂಖ್ಯೆಯ ಸರಾಸರಿಯಲ್ಲಿ ವ್ಯತ್ಯಾಸವಿದೆ. ಹಿಂದೆ ಬಂದವರ ಸಂಸಾರಗಳು ಸಣ್ಣವು; ತಂದೆಯರಿಗೆ ಹೆಚ್ಚಿನ ಮಟ್ಟದ ವ್ಯತ್ಯಾಸ; ಹೆಚ್ಚು ಮನೆಗಳಲ್ಲಿ ಇಂಗ್ಲಿಷ್ ಭಾಷೆಯ ಬಳಕೆ;

ಹೆಚ್ಚು ಮಂದಿ ತರಪೇತು ಅಗತ್ಯವಾದ ಕೆಲಸಗಳಲ್ಲಿ—ಮಕ್ಕಳ ಕಲಿಕೆಯ ಮೇಲೆ ಪ್ರಭಾವ ಹೊಂದಿವೆಯೆಂದು ಗಣಿಸಲಾದ ಪ್ರತಿಯೊಂದ ಅಂಶದಲ್ಲೂ ಹಿಂದೆ ಬಂದ ವರ ಗುಂಪು ಉತ್ತಮವಾಗಿದ್ದು, ಈ ಎರಡು ಗುಂಪುಗಳನ್ನು ಸರಿಸಮಪೆನ್ನುವುದು ತಪ್ಪು.

ಸಂಶೋಧನೆಯ ವಿಧಾನ

ಪರಿಸರದ ಪರಿವರ್ತನೆಯಿಂದ ಮಕ್ಕಳ ದಕ್ಷತೆಗಳಲ್ಲಾಗುವ ಬದಲಾವಣೆಗಳ ಅಭ್ಯಾಸಕ್ಕೆ ಆದರ್ಶವಾದದ್ದೆಂದರೆ ಒಂದು ಗುಂಪು ಮಕ್ಕಳನ್ನು ಹಲವಾರು ವರ್ಷಗಳ ವರೆಗೆ ಪರೀಕ್ಷಿಸುತ್ತ ಹೋಗುವ ವಿಧಾನವೊಂದೇ. ಬಿಶವಲ್ ಅಂತಹ ಮನೋ ವಿಜ್ಞಾನಿಗಳು ಸೂಚಿಸುವ ಈ ತರಹದ ಸಂಶೋಧನೆ ಯಾವ ಒಬ್ಬ ಸಂಶೋಧಕನೂ ಕೈಗೊಳ್ಳಲಾರ. ವಲಸೆ ಬಂದ ಮಕ್ಕಳಿಗೆ ಸಂಬಂಧವಿರುವ ಹಾಗೆ ಈ ಬಗೆಯ ಸಂಶೋಧನ ಸಾಧ್ಯವೇ ಇಲ್ಲ ಅಂದರೂ ತಪ್ಪಾಗಲಾರದು. ಬ್ರಿಟನ್ನಿನಲ್ಲಿ ಹೆಚ್ಚು ಕಾಲ ಕಳೆದಂತೆ, ಹೊಸ ಹೊಸ ಔದ್ಯೋಗಿಕ ಅವಕಾಶಗಳ ಜ್ಞಾನ ಬೆಳೆದಂತೆ, ಇದ್ದ ಮನೆಯೆತ್ತಿ ಬೇರೆ ಒಂದು ಕಡೆ ನೆಲಸುವುದು ಈ ಜನಕ್ಕೆ ಸಾಮಾನ್ಯ. ಒಂದು ಪ್ರಾಂತದಿಂದ ಇನ್ನೊಂದಕ್ಕೆ ತಂದೆ ತಾಯಿಗಳ ಜೊತೆ ಹೋಗುವ ಮಕ್ಕಳ ಶಾಲೆಯ ಪರಿಸರಗಳು ಭಿನ್ನವಾಗಿರುವುದೂ ಸಾಧ್ಯವಾಗಿ ಮೂಲದ ಆಧಾರ ಕಲ್ಪನೆಯ ಬಗೆಗೆ ಸಂದೇಹ ಹುಟ್ಟುತ್ತದೆ.

ಸಂಶೋಧನೆಗೆ ಆರಿಸಿಕೊಂಡ ಮಕ್ಕಳ ಗುಂಪುಗಳು ಸರಿಸಮವಲ್ಲದೇ ಹೋದಾಗ ಸಂಶೋಧನೆಯ ವಿಧಾನದಲ್ಲಿ ಬದಲಾವಣೆ ಮಾಡಬೇಕಾಗಿ ಬಂತು. ಒಂದೊಂದು ಗುಂಪಿಗೂ ರೂಢಿಪ್ರಮಾಣಕ್ಕೆ ಸಮಪೆನಿಸಿದ ಗುಂಪೊಂದನ್ನು ಇಟ್ಟು ಕೊಳ್ಳುವದರ ಮೂಲಕ ವಲಸೆ ಬಂದ ಮಕ್ಕಳ ಗುಂಪುಗಳನ್ನು ನೇರವಾಗಿ ಹೋಲಿಕೆ ನೋಡುವ ಕಾರಣ ಮರೆಯಾಯಿತು.

ಈಚೆಗೆ ಬಂದವರ ಗುಂಪಿಗೆ ಭಾರತದಲ್ಲೇ ಉಳಿದಿರುವ ಆದರೆ ಸರಿಸಮ ನಾಗಿರುವ ಮಕ್ಕಳು, ಹಿಂದೆ ಬಂದವರಿಗೆ ಸರಿಸಮಪೆನಿಸುವ ಇಂಗ್ಲಿಷ್ ಮಕ್ಕಳು- ವಯಸ್ಸು, ಲಿಂಗಭೇದ, ತಂದೆಯ ಕೆಲಸ ಹಾಗೂ ವಿದ್ಯಾಭ್ಯಾಸಗಳ ದೃಷ್ಟಿಯಿಂದ ರೂಢಿಪ್ರಮಾಣಕ್ಕೆ ಭಾರತದಲ್ಲಿರುವ ಮಕ್ಕಳನ್ನೂ, ಇಂಗ್ಲಿಷ್ ಮಕ್ಕಳನ್ನೂ ಆರಿಸಿ ಕೊಂಡಿದ್ದು ಮಾಡಿದ ಮುಂದಿನ ಕೆಲಸ. ವಲಸೆ ಬಂದ ಮಕ್ಕಳ ಬುದ್ಧಿಯಲ್ಲಿ ಆದ ಬದಲಾವಣೆಯನ್ನುವ ಪ್ರಯಾಣದ ಆರಂಭ ಭಾರತದ ಮಕ್ಕಳ ಕಾರ್ಯನಿರ್ವಹ ಣೆಯ ಕ್ರಮ ಹಾಗೂ ಮಟ್ಟಗಳಲ್ಲಿ, ಪ್ರಯಾಣದ ಕೊನೆಗೆ ಇಂಗ್ಲಿಷ್ ಮಕ್ಕಳ

ಕಾರ್ಯನಿರ್ವಹಣೆಯ ಕ್ರಮ ಹಾಗೂ ಮಟ್ಟಗಳು-ಸಂಶೋಧನೆಯ ವಿಧಾನಕೆ ಔಚಿತ್ಯ ಬಂದ ಹಾಗಾಯಿತು.

ಆರಿಸಿಕೊಂಡ ಎರಡೂ ಗುಂಪಿನ ಮಕ್ಕಳ ಬಗೆಗೆ ಪಟ್ಟಿ ಹಾಕಿರುವ ವಿವರಗಳನ್ನು ಸೂಕ್ಷ್ಮವಾಗಿ ನೋಡಿದಾಗ ಇನ್ನೂ ಒಂದು ವಿಶೇಷ ಕಾಣುತ್ತದೆ. ಮೇಲೆ ಹೇಳಿದ ಪರಿಸರದ ಪ್ರಧಾನ. ಅಂಶಗಳ ದೃಷ್ಟಿಯಿಂದ ಸರಿಸಮವೆನಿಸುವ ಕೆಲವು ಮಕ್ಕಳನ್ನು ಪ್ರತಿಯೊಂದು ಗುಂಪಿನಲ್ಲೂ ಆರಿಸಿಕೊಳ್ಳುವುದು ಸಾಧ್ಯ. ರೂಢಿಪ್ರಮಾಣಕ್ಕೆ ಆರಿಸಿಕೊಂಡ ಭಾರತದ ಹಾಗೂ ಇಂಗ್ಲಿಷ್ ಮಕ್ಕಳಲ್ಲೂ ಇಂತಹ ಮಕ್ಕಳಿರುವುದು ವಾಸ್ತವವಾದದ್ದರಿಂದ, ಹೋಲಿಕೆಗೆಂದು ನಾಲ್ಕು ಸರಿಸಮನಾದ ಗುಂಪುಗಳನ್ನು ಪಡೆದುಕೊಳ್ಳುವುದೂ ಸಾಧ್ಯವಾಯಿತು. ಅವುಗಳಿಗಿರುವ ವ್ಯತ್ಯಾಸ ಒಂದೇ ಪರಿಮಾಣದ್ದಾಗಿ ಕಂಡು ಬರುವ ವ್ಯತ್ಯಾಸಕ್ಕೂ ಅದಕ್ಕೂ ಕಾರ್ಯಕಾರಣ ಸಂಬಂಧವನ್ನು ಆರೋಪಿಸುವುದು ಸಾಧ್ಯವಾಯಿತು.

ಬ್ರಿಟನ್ನಿನ ಪರಿಸರದೊಂದಿಗೆ ಮಕ್ಕಳು ಹೊಂದಿರುವ ಸಂಪರ್ಕವೇ ಆ ಪರಿಮಾಣ. ಅದೇ ಈ ಸಂಶೋಧನೆಯ ಅಸ್ಥಿರ ಅಂಶ,

ಭಾರದದಲ್ಲಿರುವ ಮಕ್ಕಳಿಗೆ ಬ್ರಿಟನ್ನಿನ ಪರಿಸರದ ಜೊತೆಗೆ ಸಂಪರ್ಕವೇ ಇಲ್ಲ ; ಈಚೆಗೆ ಬಂದವರಿಗೆ ಒಂದಿಷ್ಟು ; ಹಿಂದೆ ಬಂದವರಿಗೆ ಇನ್ನಷ್ಟು ಹೆಚ್ಚು ಸಂಪರ್ಕ: ಇಂಗ್ಲಿಷ್ ಮಕ್ಕಳಿಗೆ ಅವರ ಸರ್ಕಾರಿ ವಯಸ್ಸಿನಷ್ಟು ವರ್ಷಗಳ ಸಂಪರ್ಕ. ಸೊನ್ನೆಯಿಂದ ಇಂಗ್ಲಿಷ್ ಮಕ್ಕಳ ಸರಾಸರಿ ವಯಸ್ಸಿನವರೆಗೆ ಹಬ್ಬಿರುವ ಕಾಲಧಾರೆಯಲ್ಲಿ ಎರಡು ಗಡ್ಡೆಗಳಾಗಿ ವಲಸೆ ಬಂದ ಭಾರತದ ಎರಡು ಮಕ್ಕಳ ಗುಂಪು.

ಕಾಲಪ್ರವಾಹದಲ್ಲಿ ನಿಶ್ಚಲವಾಗಿರುವಂತೆ ನಿಂತ ಈ ನಾಲ್ಕು ಗುಂಪುಗಳನ್ನು ಹೋಲಿಸುವದರ ಜೊತೆಗೆ. ಈಚೆಗೆ ಬಂದವರ ದಕ್ಷತೆಗಳೆಲ್ಲಿ, ಇನ್ನಷ್ಟು ಕಾಲವನ್ನು ಬ್ರಿಟನ್ನಿನಲ್ಲಿ ಕಳೆದಿದ್ದೇ ಕಾರಣವಾಗಿ, ಆಗಬಹುದಾದ ಪರಿವರ್ತನೆಯನ್ನು ಅಳೆಯುವ ತೀರ್ಮಾನ ಮಾಡಲಾಯಿತು. ಪರೀಕ್ಷೆ-ಪುನರ್-ಪರೀಕ್ಷೆಗಳ ಈ ಸಂಚಿಂದ ಸಂಶೋಧನೆಯನ್ನು ಬಿಶವಲ್ ಹೇಳಿದ ಆದರ್ಶದತ್ತ ಒಯ್ಯುವುದು ಸಾಧ್ಯವಾಗುವದೆನ್ನುವ ವಿಚಾರ ಮನಸ್ಸಿಗೆ ಬಂತು.

ರೂಢಿಪ್ರಮಾಣಕ್ಕೆ ಆರಿಸಿಕೊಂಡ ಮಕ್ಕಳು

ಈಚೆಗೆ ಬಂದ ಮಕ್ಕಳಲ್ಲಿ 30 ಪಂಜಾಬಿನಿಂದ, 11 ಪಾಕೀಸ್ತಾನದಿಂದ ಉಳಿದೆರಡು ಪಾಕೀಸ್ತಾನಕ್ಕೆ ಸೇರಿದ ಕಾಶ್ಮೀರದಿಂದ ಬಂದಿದ್ದರು. ಅವಕ್ಕೆ ಸರಿಸಮ

ನಾದ ಮಕ್ಕಳ ಗುಂಪನ್ನು ಭಾರತದಿಂದ ಮಾತ್ರಾ-ಆರಿಸಿಕೊಳ್ಳುವುದು ಸಾಧ್ಯ ವಾಯಿತು. ಪಾಕೀಸ್ತಾನಕ್ಕೆ ಹೋಗುವದಾಗಲೀ ಅಲ್ಲಿಯ ಮಕ್ಕಳನ್ನು ಪರೀಕ್ಷಿ ಸುವದಾಗಲೀ ಅನೇಕ ಕಾರಣಗಳಿಂದ ಸಾಧ್ಯವಾಗಲಿಲ್ಲ.

ವಲಸೆ ಬಂದ ಮಕ್ಕಳಲ್ಲಿ 26 ಪಂಜಾಬಿನಿಂದ ಬಂದಿದ್ದರಿಂದ 26 ಮಕ್ಕಳನ್ನು ಅಲ್ಲಿಂದ ಆರೆಸಿಕೊಳ್ಳುವ ನಿರ್ಧಾರ ಮಾಡಲಾಯಿತು. ಉಳಿದ ಮಕ್ಕಳು ಭಾರತದ ಬೇರೆ ಯಾವ ಭಾಗದಿಂದ ಬಂದರೂ ಆಯಿತು ಅನ್ನುವ ನಿಶ್ಚಯಕ್ಕೆ ಇದ್ದ ಆಧಾರ ಕಲ್ಪನೆ ಒಂದು : ಮಕ್ಕಳ ಚಿಂತನೆಯನ್ನು ರೂಢಿಸುವ ದೃಷ್ಟಿಯಿಂದ ಭಾರತದ ಎಲ್ಲ ಭಾಷೆಗಳೂ ಸಮ, ಒಂದು ಶ್ರೇಷ್ಠವಲ್ಲ, ಇನ್ನೊಂದು ಕಳಪೆಯಲ್ಲ. ಒಂದೇ ಭಾಷೆಯನ್ನು ಮಾತಾಡದ 17 ಮಕ್ಕಳನ್ನು ಭಾರತದ ಯಾವ ಭಾಗದಿಂದಲಾದರೂ ಆರಿಸಿಕೊಳ್ಳುವ ನಿರ್ಧಾರ ಮಾಡಲಾಯಿತು.

ಸಂಶೋಧನೆಗೆ ಭಾರತದ ಎರಡು ಕೇಂದ್ರಗಳನ್ನು ಆರಿಸಿಕೊಳ್ಳುವದರ ಹಿಂದೆ ಕಾರಣವಿತ್ತು. ಪಂಜಾಬಿನ ಚಂಡಿಘರ್ ಹೆಸರಾದ ಒಂದು ಊರು. ಅದರ ಹೊಸ ಹೊಸ ಶಾಲೆಗಳನ್ನು, ಅದನ್ನು ನಿರ್ಮಿಸುವಾಗ ಇದ್ದ ಉದ್ದೇಶವನ್ನು ಹಾಗೂ ಜನಕ್ಕೆ ಒದಗಿಸಿರುವ ಅನುಕೂಲತೆಗಳನ್ನು ನೋಡಿದಾಗ ಹಾರ್ಟ್‌ಫರ್ಡ್‌ಶೈರಿ ನಲ್ಲಿ ಲಂಡನ್ನಿನ ಜನ ಬಂದು ನೆಲೆಸಲೆಂದು ಎರಡನೇ ಮಹಾಯುದ್ಧ ಮುಗಿದ ಮೇಲೆ ಕಟ್ಟಿದ ಹೊಸ ನಗರಗಳು ಮನಸ್ಸಿಗೆ ಬರುವುದು ಅನಿವಾರ್ಯ. ಚಂಡೀ ಘಡದ ಆಸು ಪಾಸಿನ ಜನರು ಮಾತಾಡುವ ಭಾಷೆ ನೂರಕ್ಕೆ ನೂರರಷ್ಟು ಪಂಜಾಬಿ. ಆರಿಸಿಕೊಂಡ ಇನ್ನೊಂದು ಕೇಂದ್ರ ಮಂಡ್ಯ, ಹಳ್ಳಿಗೆ ಹಳ್ಳಿಯಲ್ಲದ ಪಟ್ಟಣಕ್ಕೆ ಪಟ್ಟಣವಲ್ಲದ ಮಂಡ್ಯ ತಾಲ್ಲೂಕಿನ ಮುಖ್ಯ ಪ್ರದೇಶ. ಕನ್ನಡ ಮಾತಾ ಡುವ ಜನ ಹೆಚ್ಚಿದ್ದರೂ ಮಂಡ್ಯದಲ್ಲಿ ತೆಲುಗು, ತಮಿಳು ಹಾಗೂ ಉರ್ದು ಮಾತಾ ಡುವ ಜನರಿದ್ದಾರೆ ಅನ್ನುವ ಲೆಕ್ಕಾಚಾರವೂ ಇತ್ತು. ಹೈದರಿನ ಕಾಲದಿಂದ ನೆಲೆ ಸಿರುವ ಮುಸ್ಲಿಮರು ಇರುವುದೂ ಮನಸ್ಸಿನಲ್ಲಿತ್ತು.

ಮಕ್ಕಳ ಬಗೆಗೆ ಅಗತ್ಯವಾಗಿದ್ದ ವಿವರಗಳನ್ನು ಹುಡುಕಿದ್ದು ಶಾಲೆಗಳ ದಾಖಲೆಗಳಲ್ಲಿ. ಮನೆಯಲ್ಲಿದ್ದ ಒಡಹುಟ್ಟಿದವರ ಬಗೆಗೆ ಮಾಹಿತಿ ಕೊಟ್ಟವರು ಪರೀಕ್ಷೆಗೆ ಕೂತ ಮಕ್ಕಳು.

ರೂಢಿಪ್ರಮಾಣಕ್ಕೆಂದು ಇಂಗ್ಲಿಷ್ ಮಕ್ಕಳ ಎರಡನೇ ಗುಂಪನ್ನು ಆರಿಸಿ ಕೊಳ್ಳುವಾಗಲೂ ಇದೇ ಕ್ರಮವನ್ನು ಅನುಸರಿಸಲಾಯಿತು. ಈ ಗುಂಪಿನ ಮಕ್ಕಳು ಹಾರ್ಟ್‌ಫರ್ಡ್‌ಶೈರಿನ ಶಾಲೆಗಳಲ್ಲಿದ್ದು, ವಲಸೆ ಬಂದ ಮಕ್ಕಳ ಜೊತೆಗೆ ಓದು ತ್ತಿದ್ದವರು.

ತಂದೆಯರ ಕೆಲಸದ ದೃಷ್ಟಿಯಿಂದ ಮಕ್ಕಳನ್ನು ಸರಿಗಟ್ಟುವದರ ಬಗೆಗೆ ಒಂದು ಮಾತು : ವಲಸೆ ಬಂದವರು ಭಾರತದಲ್ಲಿದ್ದಾಗ ಮಾಡುತ್ತಿದ್ದ ಕೆಲಸವನ್ನು ಆಧಾರವಾಗಿಟ್ಟುಕೊಳ್ಳಲಾಯಿತು, ಬ್ರಿಟನ್ನಿಗೆ ಬಂದ ಮೇಲೆ ತಾವು ಮಾಡುತ್ತಿದ್ದ ಕೆಲಸವನ್ನು ಮುಂದುವರಿಸಲಾಗದೇ ಕೈಗೆಟುಕಿಸಿಕ್ಕಿದ್ದನ್ನು ಎತ್ತಿಕೊಂಡವರೇ ಹೆಚ್ಚಾಗಿದ್ದು, ಮನೆ ರೂಢಿಸಿಕೊಂಡ ಸಂಪ್ರದಾಯಕ್ಕೆ, ಬದುಕಿನ ವೈಖರಿಗೆ ಈಗಲೂ ಸಾಂಕೇತಿಕವಾಗಿದ್ದದ್ದು ಅವರು ಮೊದಲು ಮಾಡುತ್ತಿದ್ದ ಕೆಲಸ.

ಇನ್ನೂ ಒಂದು ಸಣ್ಣ ವಿಷಯ : ಭಾರತದ ವರ್ತಕರು ಬ್ರಿಟನ್ನಿನ ಅಂಗಡಿಯಲ್ಲಿ ಕೆಲಸ ಮಾಡುವವರಿಗೆ, ಭಾರತದ ರೈತರು ಬ್ರಿಟನ್ನಿನ ಹೊಲ ಗೆಲಸ ಮಾಡುವವರಿಗೆ ಸರಿಸಮವೆಂದು ಪರಿಗಣಿಸಲಾಯಿತು.

ಬ್ರಿಟನ್ನಿನ ವರ್ತಕರಿಗೆ ಹಾಗೂ ರೈತರಿಗೆ ಪಂಜಾಬಿನಿಂದ ಬಂದ ವರ್ತಕರನ್ನು ಹಾಗೂ ರೈತರನ್ನು ಹೋಲಿಸುವದಾಗಲೀ ಅವರ ಬದುಕಿನ ವೈಖರಿ ಒಂದೇ ಅಂದುಕೊಳ್ಳುವಾಗಲೀ ತಪ್ಪಾಗುತ್ತಿತ್ತು. ಕೆಲಸ ಒಂದೇ ಆದರೂ ಬದುಕಿನ ವೈಖರಿಯಲ್ಲಿ ಅಜಗಜಾಂತರ.

ಅನುಬಂಧ 1 ರಲ್ಲಿ ರೂಢಿಪ್ರಮಾಣಕ್ಕೆಂದು ಆರಿಸಿಕೊಂಡ ಮಕ್ಕಳ ಬಗೆಗೆ ವಿವರಗಳಿವೆ. ಭಾರತದಲ್ಲಿ ಪರೀಕ್ಷಿಸಿದ್ದು 58 ಮಕ್ಕಳು, ಇಂಗ್ಲೆಂಡಿನಲ್ಲಿ ನೋಡಿದ್ದು 66 ಮಕ್ಕಳು. ಇವುಗಳಲ್ಲಿ ವಿಶೇಷ ವಿಶ್ಲೇಷಣೆಗೆ ಆರಿಸಿಕೊಂಡ ಪ್ರತಿಯೊಂದು ಗುಂಪಿನ 43 ಮಕ್ಕಳ ವಿವರಗಳನ್ನು ಹೀಗೆ ಪಟ್ಟಿ ಹಾಕಬಹುದು :

	ಭಾರತದ ಮಕ್ಕಳು	ಇಂಗ್ಲಿಷ್ ಮಕ್ಕಳು
ಮಕ್ಕಳ ಸಂಖ್ಯೆ	43	43
ಗಂಡು ಮಕ್ಕಳು	27	24
ಹೆಣ್ಣು ಮಕ್ಕಳು	16	19
ಸರಾಸರಿ ವಯಸ್ಸು-		
ವರ್ಷಗಳಲ್ಲಿ	10 ವರ್ಷ 2 ತಿಂಗಳು	10 ವರ್ಷ 7 ತಿಂಗಳು

ತಂದೆಯ ಕೆಲಸ		
ರೈತರು	11	9
ಕಾರಖಾನರು	9	7
ಅಧ್ಯಾಪಕರು	5	5
ವರ್ತಕರು	6	3
ಕೈಗೆಲಸದವರು	5	5
ಸೈನಿಕರು	6	—
ತರಪೇತು ಕೆಲಸದವರು	—	14
ಸಾಗಣೆ ಕೆಲಸದವರು	1	—
ತಂದೆಯ ವಿದ್ಯಾಭ್ಯಾಸದ ಮಟ್ಟ-ಸರಾಸರಿ ವರ್ಷಗಳಲ್ಲಿ	9 ವರ್ಷ 0 ತಿಂಗಳು	10 ವರ್ಷ 7 ತಿಂಗಳು
ಹುಟ್ಟಿದ ಸ್ಥಳ		
ಹಳ್ಳಿಗರು	17	9
ನಾಗರಿಕರು	26	34
ಒಡಹುಟ್ಟಿದವರ ಸಂಖ್ಯೆ-ಸರಾಸರಿ	4.5	3.2
ಇಂಗ್ಲಿಷ್ ಶಾಲೆಗಳಲ್ಲಿ ಮಕ್ಕಳಿದ್ದ ಕಾಲ-ಸರಾಸರಿ	—	5 ವರ್ಷ 6 ತಿಂಗಳು

ವಲಸೆ ಬಂದ ಎರಡೂ ಗುಂಪುಗಳ ಬಗೆಗೆ ಹಿಂದೆ ಕೊಟ್ಟ ಪಟ್ಟಿಯನ್ನು ಮೇಲಿನವರ ಜೊತೆಗೆ ಹೋಲಿಸಿ ನೋಡಿದಾಗ ಎರಡರ ನಡುವಿನ ಸಾಮ್ಯ ಮನದಟ್ಟಾಗುವುದು.

ಮಾಪಕಗಳು

ಹೊಸದೊಂದು ಸಾಂಸ್ಕೃತಿಕ ಪರಿಸರಕ್ಕೆ ಬಂದೂ ಇನ್ನೂ ಹೊಂದಿಕೊಳ್ಳದ ಮಕ್ಕಳಿಗೆ ಅನುವಾದ ಬುದ್ಧಿಮಾಪಕಗಳನ್ನು ಹುಡುಕುವದು ಸುಲಭವಲ್ಲ. ಇಂತಹ

ಮಕ್ಕಳಿಗೆ ಪಾಶ್ಚಾತ್ಯ ದೇಶಗಳಲ್ಲಿ ಬಳಕೆಯಲ್ಲಿರುವ ಮಾಪಕಗಳನ್ನು ಕೊಡುವದರಲ್ಲಿ ಒಂದು ಔಚಿತ್ಯವಿದೆ ಎಂದು ಮೊದಲನೇ ಅಧ್ಯಾಯದಲ್ಲಿ ಹೇಳಿದ ಮಾತನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಹುದು.

ಆದರೂ, ಯಾವ ಮಾಪಕಗಳು, ಶಾಬ್ದಿಕವಾದ ಮಾಪಕಗಳು ಉಚಿತವೇ ಅನ್ನುವ ಪ್ರಶ್ನೆ ಕಾಡುತ್ತದೆ. ವಲಸೆ ಬಂದ ಮಕ್ಕಳನ್ನು, ಅವರಲ್ಲಿರುವ ದಕ್ಷತೆಯ ಪರೀಕ್ಷೆಗಾಗಿ, ವಿದ್ಯಾಧಿಕಾರಿಗಳು ನನ್ನಂತಹ ಮನೋವಿಜ್ಞಾನಿಗಳ ಬಳಿ ಕಳಿಸಿದಾಗ ಅವರ ಮನಸ್ಸಿನಲ್ಲಿರುವ ಪ್ರಶ್ನೆ ಕಲಿಕೆಗೆ ಸಂಬಂಧಪಟ್ಟಿದ್ದು. ಅದೇ ನೆಲದ ಮಕ್ಕಳ ಬಗೆಗೆ ಆ ಪ್ರಶ್ನೆ ಎದ್ದಾಗ ಉತ್ತರ ಹೇಳುವುದು ಸಾಧ್ಯ, ಇಂಗ್ಲಿಷ್ ಭಾಷೆಯ ಪರಿಚಯವೇ ಇಲ್ಲದ ಮಗು ಎದುರಿಗೆ ಕೂತಾಗ ಆ ಪ್ರಶ್ನೆಗೆ ಉತ್ತರ ಕೊಡುವದು ಕಷ್ಟ. ಒಂದು ಮಗುವಿನಲ್ಲಿ ಕಲಿಯುವದಕ್ಕಿರುವ ಸಿದ್ಧತೆಯನ್ನೂ ಅಳೆಯುವದಕ್ಕೆ ಶಾಬ್ದಿಕ ಮಾಪಕಗಳು ಇತರ ಮಾಪಕಗಳಿಗಿಂತ ಹೆಚ್ಚು ಸಮರ್ಥವಾದುವು ಅನ್ನುವುದು ಎಲ್ಲರಿಗೂ ತಿಳಿದ ವಿಷಯ. ಶಾಬ್ದಿಕವಲ್ಲದ ಮಾಪಕಗಳ ಆಧಾರದ ಮೇಲೆ ಮಗು ಮುಂದೆ ಹೇಗೆ ಶಾಲೆಯಲ್ಲಿ ಕಲಿಯಬಹುದು ಅನ್ನುವ ಪ್ರಶ್ನೆಗೆ ಕೊಟ್ಟ ಉತ್ತರ ಅನೇಕ ಸಂದರ್ಭಗಳಲ್ಲಿ ಅಸಮರ್ಪಕವಾಗುವ ಸಂಭವವಿದೆ.

ಶಾಬ್ದಿಕವಲ್ಲದ ಮಾಪಕಗಳು ಮೊದಲಿಗೆ ಅಂದುಕೊಂಡಿದಷ್ಟು ಸಂಸ್ಕೃತಿ ಸ್ವತಂತ್ರವಲ್ಲವೆನ್ನುವ ಮಾತು ಬಂದಿದ. ಅಷ್ಟಾದರೂ ನನ್ನ ಸಂಶೋಧನೆಗೆ ಇಂತಹ ಮಾಪಕಗಳನ್ನು ಉಪಯೋಗಿಸುವ ತೀರ್ಮಾನಕ್ಕೆ ಬಂದದಕ್ಕೆ ಸಾಕಷ್ಟು ಕಾರಣ ವಿತ್ತು. ವಲಸೆ ಬಂದ ಮಕ್ಕಳು ಕಡೆಯ ಪಕ್ಷ ಬ್ರಿಟನ್ನಿನಲ್ಲಿ ಒಂದು ವರ್ಷದ ಅವಧಿಯನ್ನು ಕಳೆದಿದ್ದದ್ದು ವಾಸ್ತವವಾದರೂ, ಶಾಬ್ದಿಕವಾದ ಮಾಪಕಗಳಿಗೆ ಅಗತ್ಯವಾದಷ್ಟು ಇಂಗ್ಲಿಷನ್ನು ಅವರು ಕಲಿತಿರಲಾರರೆನ್ನುವ ಸಂಶಯವಿತ್ತು. ವಲಸೆ ಬಂದ ಮಕ್ಕಳ ಮನೆಗಳಲ್ಲಿ ಇಂಗ್ಲಿಷ್ ಭಾಷೆಯ ಉಪಯೋಗ ಅಷ್ಟಾಗಿ ಇಲ್ಲದೇ, ಹೊರಗಿನವರ ಜೊತೆ ಸಂಪರ್ಕದ ಬಗೆಗೆ ಹಿಂಜರಿಕೆಯಿದ್ದು, ಒಂದು ವರ್ಷದಷ್ಟರ ಅವಧಿಯಲ್ಲಿ ಇಂಗ್ಲಿಷಿನ ಪರಿಚಯವೇ ಇಲ್ಲದೇ ಬಂದು ನೆಲೆಸಿದ ಮಕ್ಕಳು ಶಾಬ್ದಿಕ ಸಮಸ್ಯೆಗಳಿಗೆ ಪರಿಹಾರ ಕೊಡುವುದು ಸಾಧ್ಯವಿಲ್ಲವೆನಿಸಿದ್ದು ಮುಖ್ಯ ಕಾರಣ. ಆ ಅವಧಿಯಲ್ಲಿ ಅವರು ಕಲಿತಿರಬಹುದಾದ ಇಂಗ್ಲಿಷಿನ ಮಟ್ಟ ದಿನನಿತ್ಯದ ವ್ಯವಹಾರಕ್ಕೆ ಸಾಕಾಗಬಹುದಾದರೂ ಪರೀಕ್ಷೆಯ ಸಂದರ್ಭಕ್ಕೆ ಸಾಲದು ಅನ್ನುವ ವಾದದಲ್ಲಿ ತಿರುಳಿದೆ.

ಅಂತೂ, ಸಂಶೋಧನೆಗೆ ಬಳಸಿದ್ದು ವೆಕ್ಸ್‌ಲರಿನ ಬುದ್ಧಿಮಾಪಕ ಹಾಗೂ ರೇವನ್ ಅವರ ಬಣ್ಣದ ಅನುಕ್ರಮಿಕ ಮಾತೃಕೆ. ವೆಕ್ಸ್‌ಲರಿನ ಮಾಪಕದಿಂದ ಆರಿಸಿ

ಕೊಂಡಿದ್ದು ಶಾಬ್ದಿಕವಲ್ಲದ ಅಷ್ಟೂ ಸಮಸ್ಯೆಗಳು ಹಾಗೂ ಶಾಬ್ದಿಕ ಭಾಗದ ಸಂಖ್ಯಾ ಸಂಬಂಧವಾದ ಸ್ಮರಣವ್ಯಾಪ್ತಿ. ಈ ಸಮಸ್ಯೆಯನ್ನು ಸೇರಿಸಿಕೊಂಡಿದ್ದಕ್ಕೆ ಅದಕ್ಕಿದೆ ಯೆಂದು ಹೇಳಲಾದ ಸಂಸ್ಕೃತಿ ಸ್ವಾತಂತ್ರ್ಯವೇ ಕಾರಣ. ಜೊತೆಗೆ, ಪರೀಕ್ಷೆ ಕೊಡು ವುದು ಸುಲಭವೆನ್ನುವ ವಾದ. ಭಾರತದ ಮಕ್ಕಳ ಪರಿಸರದಲ್ಲಿ ಜ್ಞಾಪಕ ಶಕ್ತಿಗೆ ಸಾಮಾನ್ಯವಾಗಿ ಇದ್ದೂ ಇರುವ ಮನ್ನಣೆಯ ಇನ್ನೊಂದು ಕಾರಣ.

ವೆಕ್ಸ್‌ಲರಿನ ಮಾಪಕದಲ್ಲಿನ ಉಳಿದ ಸಮಸ್ಯೆಗಳ ಬಗೆಗೆ ಅವುಗಳಿಗಿರಬಹು ದಾದ ಸಂಸ್ಕೃತಿ ಬದ್ಧತೆಯ ಸಂಬಂಧದಲ್ಲಿ ಎಂತಹ ಆಧಾರ ಕಲ್ಪನೆಯನ್ನೂ ಇಟ್ಟು ಕೊಂಡು ಹೊರಡಲಿಲ್ಲ ಅನ್ನುವದನ್ನು ಇಲ್ಲಿ ಹೇಳುವುದು ಧರ್ಮ. ಅವುಗಳ ಆಕರ್ಷಣೀಯತೆ, ಅಪ್ಪಣೆ ಕೊಡುವದಕ್ಕೆ ಹೆಚ್ಚು ಮಾತು ಬೇಕಾಗದ ಗುಣ, ಕೊಟ್ಟ ಅಪ್ಪಣೆ ಅರ್ಥವಾಗಿದೆಯೇ ಅನ್ನುವದನ್ನು ಪರೀಕ್ಷಿಸುವದಕ್ಕಿರುವ ಅವಕಾಶ ಹಾಗೂ ಚುರುಕು ಕೆಲಸಕ್ಕಿರುವ ಬೋನಸ್ ಅಂಕಗಳ ಕ್ರಮ—ಇವೇ ಅದರ ಆಯ್ಕೆಗೆ ಕಾರಣಗಳು.

ಭಿನ್ನ ಸಂಸ್ಕೃತಿಗಳ ಸಂಶೋಧನೆಗಳಲ್ಲಿ ಅನುಕ್ರಮಿಕ ಮಾತೃಕೆಗೆ ವಿಶಿಷ್ಟ ಸ್ಥಾನ ವಿದೆಯೆಂದೇ ಅದನ್ನು ಈ ಸಂಶೋಧನೆಗೂ ಉಪಯೋಗಿಸಿದ್ದು. ಆಫ್ರಿಕದ ಹಲ ವಾರು ಬುಡಕಟ್ಟುಗಳ ಬುದ್ಧಿ ಪರೀಕ್ಷೆಗೆ ಇದನ್ನು ಉಪಯೋಗಿಸಿದ್ದಾರೆ. ಭಾರತ ದಲ್ಲಿ ಇದನ್ನು ಉಪಯೋಗಿಸಿದ ನಿದರ್ಶನಗಳಿವೆ. ಅಮೂರ್ತನಾದ ನಮೂನೆಗಳ ನಡುವೆಗಿರುವ ಸಂಬಂಧವನ್ನು ಕಂಡು ಹಿಡಿಯುವುದೇ ಪರೀಕ್ಷೆಗೆ ಕೂತವನು ಮಾಡ ಬೇಕಾದ ಕೆಲಸ, ಕಲಿಕೆಯ ಪ್ರಭಾವಕ್ಕೆ ಅಷ್ಟಾಗಿ ಸಿಕ್ಕದ ಹಾಗೂ ಸ್ವಭಾವಸಿದ್ಧ ವಾದ ಬುದ್ಧಿಶಕ್ತಿಯ ಅಳತೆಗೆ ಈ ಮಾಪಕ ಶ್ರೇಷ್ಠವಾದದೆನ್ನುವ ನಂಬಿಕೆ ಬ್ರಿಟನ್ನಿನ ಮನೋವಿಜ್ಞಾನಿಗಳಲ್ಲಿ ಸರ್ವೇಸಾಮಾನ್ಯ. ಸಾಂಸ್ಕೃತಿಕ ಅಂಶಗಳಿಂದ ವಿಮುಕ್ತ ವಾದದ್ದು ಇದು ಅನ್ನುವ ನಂಬಿಕೆಯನ್ನಿಟ್ಟುಕೊಂಡಿರುವ ಮನೋವಿಜ್ಞಾನಿಗಳೇ ಹೆಚ್ಚು. ಭಿನ್ನ ಪರಿಸರಗಳ ಜನದ ಬಗೆಗೆ ನಡೆದ ಈಚಿನ ಸಂಶೋಧನೆಗಳು ಈ ನಂಬಿಕೆಗೆ ಪುಷ್ಟಿ ಕೊಟ್ಟಿಲ್ಲವೆನ್ನುವದನ್ನು ನಾವು ನೋಡಬಹುದು (ಬರ್ಕ್)[3]. ಕೆಲವು ಮನೋವಿಜ್ಞಾನಿಗಳ ದೃಷ್ಟಿಯಲ್ಲಿ ಇದು ಬುದ್ಧಿಮಾಪಕವೇ ಅಲ್ಲ, ವಿಶಿಷ್ಟ ವಾದ ಹಾಗೂ ಸ್ಥಳಸಂಬಂಧವಾದ ದಕ್ಷತೆಯೊಂದರ ಮಾಪಕ, ಅನ್ನುವದನ್ನೂ ನಾವು ಗಮನಿಸಬಹುದು (ಹಿಗಿನ್ಸ್ ಮತ್ತು ಸಿವರ್ಸ್, ಅರ್ವಿನ್[4]). ಬ್ರಿಟನ್ನಿನ ಶಾಲೆ ಗಳ ಪ್ರಭಾವಕ್ಕೆ ಭಿನ್ನ ಪ್ರಮಾಣಗಳಲ್ಲಿ ಸಿಕ್ಕ ಮಕ್ಕಳ ಪರೀಕ್ಷೆಗೆ ಈ ಮಾಪಕವನ್ನು ಉಪಯೋಗಿಸಿ ಅದರ ಸಂಸ್ಕೃತಿ ಸ್ವಾತಂತ್ರ್ಯವನ್ನು ಪರೀಕ್ಷಿಸುವ ಉದ್ದೇಶವೂ ಸಂಶೋಧನೆಯ ಹಿಂದಿತ್ತು.

ಪರೀಕ್ಷೆಗೆ ಕೂತ ಪ್ರತಿಯೊಂದು ಮಗುವಿನ ಬಗೆಗೂ ಪಡೆದುಕೊಂಡ ಇನ್ನೊಂದು ಅಳತೆ, ಮಗುವಿನ ದಕ್ಷತೆಯ ಬಗೆಗೆ ಶಾಲೆ ಹೊಂದಿದ್ದ ಅಭಿಪ್ರಾಯ, ನೆಲದ ಮಕ್ಕಳ ಬಗೆಗೆ ಶಾಲೆಯ ಅಧಿಕಾರಿ ಕ್ರಮ ಕ್ರಮವಾಗಿ ರೂಪಿಸಿಕೊಳ್ಳುವ ಅಭಿಪ್ರಾಯವನ್ನು ವಲಸೆ ಬಂದ ಮಕ್ಕಳ ಬಗೆಗಿನ ಅಭಿಪ್ರಾಯದ ಜೊತೆಗೆ ಹೋಲಿಕೆ ನೋಡುವುದೇ ನಾನಿಟ್ಟುಕೊಂಡಿದ್ದ ಉದ್ದೇಶ. ಮಗುವಿನ ದಕ್ಷತೆಯ ಅಧ್ಯಾಪಕನಾದವನು ಅಂದಾಜು ಹಾಕುವಾಗ ಅವನ ಸಾಂಸ್ಕೃತಿಕ ಹಿನ್ನೆಲೆಯ ಪ್ರಭಾವವಿರುವದರ ಬಗೆಗೆ ಅನುಮಾನವಿದ್ದರೂ, ಅದರ ದೆಸೆಯ ಬಗೆಗೆ ಯಾವ ಪೂರ್ವಾಗ್ರಹವನ್ನೂ ನಾನಿಟ್ಟುಕೊಂಡು ಹೊರಡಲಿಲ್ಲ. ಶಾಬ್ದಿಕವಲ್ಲದ ಮಾಪಕ ಕೊಡುವ ಅಳತೆಗಿಂತ ವಲಸೆ ಬಂದ ಮಕ್ಕಳ ಪರಿಚಯ ಮಾಡಿಕೊಂಡ ಅಧ್ಯಾಪಕನ ಅಂದಾಜು ಹೆಚ್ಚು ವಾಸ್ತವವಾಗಿರಬಾರದೇಕೆ ಅನ್ನುವ ಯೋಚನೆಯೂ ನನಗಿತ್ತು.

ಸರಾಸರಿ ಬುದ್ಧಿಮಟ್ಟ 100 ಎಂದು ಪರಿಗಣಿಸಿ ಮಗುವಿನ ಬುದ್ಧಿ ಮಟ್ಟಕ್ಕೆ ಸೂಕ್ತವಾದೊಂದು ಅಂಕವನ್ನು ಗುರುತಿಸಬೇಕೆನ್ನುವ ಅಪ್ಪಣೆಯನ್ನು ಅಧ್ಯಾಪಕರು ಮನ್ನಿಸಿದರೂ, ಕೆಲವರು ಬುದ್ಧಿಮಟ್ಟಕ್ಕೆ ಒಂದು ವ್ಯಾಪ್ತಿಯನ್ನು ಸೂಚಿಸಿದ್ದು ಕಂಡು ಬಂತು. ಅಂತಹ ಸಂದರ್ಭದಲ್ಲಿ ಆ ವ್ಯಾಪ್ತಿಯ ಮಧ್ಯ ಬಿಂದುವನ್ನು ಗಣನೆಗೆ ತೆಗೆದುಕೊಳ್ಳಲಾಯಿತು. ಉದಾಹರಣೆಗೆ, ಮಗುವೊಂದರ ಬುದ್ಧಿಮಟ್ಟದ ವ್ಯಾಪ್ತಿ 120 ರಿಂದ 125ರ ವರೆಗೆ ಎಂದು ಹೇಳಿದಾಗ, ನಾನು ಕೊಟ್ಟ ಅಂಕ 122.5.

ಈ ತರಹದ ಅಂದಾಜು ಹಾಕುವ ಕೆಲಸ ಅಶಾಸ್ತ್ರೀಯವೆಂದು ಕೆಲವು ಅಧ್ಯಾಪಕರು ಹಟ ಹಿಡಿದಿದ್ದೂ, ಅದೇ ತಾನೆ ತರಗತಿಗೆ ಅಧ್ಯಾಪಕ ಬಂದಿದ್ದು ಮಕ್ಕಳ ಪರಿಚಯ ಸಾಲದೇ ಹೋದದ್ದು ಕಾರಣವಾಗಿ ಆರು ಮಕ್ಕಳಿಗೆ ಇಂತಹ ಅಂದಾಜು ಇಲ್ಲ.

ಭಾರತದಲ್ಲಿ ಪರೀಕ್ಷೆಗೆ ಕೂತವರ ಬಗೆಗೆ ಇಂತಹ ಅಂದಾಜು ಸಾಧ್ಯವಾಗ ಲಿಲ್ಲ. ಅಂದಾಜು ಹಾಕುವ ಕ್ರಮವನ್ನು ಬಿಡಿಸಿ ಹೇಳಿದಾಗಲೂ ಮುಕ್ಕಾಲು ಪಾಲು ಅಧ್ಯಾಪಕರಿಗೆ ಅರ್ಥವಾಗದೇ ಹೋದದ್ದು ಒಂದು ; ಪರೀಕ್ಷೆಯ ಫಲಿತಾಂಶ ಹಾಗೂ ಮಕ್ಕಳ ಬುದ್ಧಿಮಟ್ಟಗಳಿಗೆ ವ್ಯತ್ಯಾಸವಿರಬಹುದು ಅನ್ನುವ ವಿಚಾರ ಅವರಿಗೆ ಅರ್ಥವಾಗದೇ ಹೋದದ್ದು ಇನ್ನೊಂದು. ಅಂತೂ ಪ್ರಯತ್ನ ವ್ಯರ್ಥವಾಯಿತು.

ಪರೀಕ್ಷೆ ಕೊಟ್ಟ ಕ್ರಮ

ಒಟ್ಟು ನಾನು ಪರೀಕ್ಷೆ ಮಾಡಿದ ಮಕ್ಕಳ ಸಂಖ್ಯೆ 210. ಅಷ್ಟು ಮಕ್ಕಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ನೋಡಿದ ನಾನು ಮಗುವೊಂದರ ಜೊತೆಗೆ ಕಳೆದ ಕಾಲ ಸರಾಸರಿ 45 ನಿಮಿಷಗಳು.

ವಲಸೆ ಬಂದ ಮಕ್ಕಳ ಹಾಗೂ ಇಂಗ್ಲಿಷ್ ಮಕ್ಕಳ ಪರೀಕ್ಷೆಯ ಸಂದರ್ಭದಲ್ಲಿ ಬಳಸಿದ ಭಾಷೆ ಇಂಗ್ಲಿಷ್. ಅದೇ ತಾನೆ ವಲಸೆ ಬಂದ ಮಕ್ಕಳಿಗೆ ಇಂಗ್ಲಿಷಿನಲ್ಲಿ ಕೊಟ್ಟ ಅಪ್ಪಣೆ ಅರ್ಥವಾಗುತ್ತಿತ್ತೆನ್ನುವುದು ನನಗೆ ಮನದಟ್ಟಾಗಿದ್ದರೂ ನನ್ನ ಅಭಿಪ್ರಾಯದಲ್ಲಿ ಪೂರ್ವಾಗ್ರಹತೆಯ ಸಾಧ್ಯತೆಯಿದ್ದದ್ದನ್ನು ಪರೀಕ್ಷೆಗೆ ಗುರಿಪಡಿಸಲಾಯಿತು. ಒಮ್ಮೆ ನೋಡಿದ್ದ 9 ಪಂಜಾಬೀ ಮಕ್ಕಳಿಗೆ ಮತ್ತೊಮ್ಮೆ ಅದೇ ಪರೀಕ್ಷೆಗಳನ್ನು ಕೊಟ್ಟು ವ್ಯತ್ಯಾಸವನ್ನು ಕಂಡುಹಿಡಿಯಲಾಯಿತು. ಮರು ಪರೀಕ್ಷೆಯ ಸಂದರ್ಭದಲ್ಲಿ ನಾನು ಬಳಸಿದ ಪಂಜಾಬಿ ಅರ್ಥವಾಗುತ್ತಿದೆ ಅನ್ನುವದನ್ನು ನಿಶ್ಚಯ ಮಾಡುವದಕ್ಕೆಂದು ಪಂಜಾಬೀ ಮಾತಾಡುವ ಅಧ್ಯಾಪಕರೊಬ್ಬರು ಸಾಕ್ಷಿಯಾಗಿ ಕೂತಿರುವ ಏರ್ಪಾಟು ಮಾಡಲಾಗಿತ್ತು. ಆ ಒಂಬತ್ತು ಮಕ್ಕಳಿಗೆ ಚೆನ್ನಾಗಿ ಪರಿಚಯವಿದ್ದ ಅಧ್ಯಾಪಕನ ಇರವಿಂದ ಮಕ್ಕಳ ಕಾರ್ಯನಿರ್ವಹಣೆಯ ಮೇಲೆ ಆಗಿರಬಹುದಾದ ಪರಿಣಾಮ ಅಲ್ಪ.

ಪರೀಕ್ಷೆ-ಪುನರ್ ಪರೀಕ್ಷೆಗಳಲ್ಲಿ ಕಂಡುಬಂದ ವ್ಯತ್ಯಾಸ ಸಾಮಾನ್ಯವಾಗಿ ಕಂಡುಬರುವಂತಹ ವ್ಯತ್ಯಾಸಗಳಿಂದ ಭಿನ್ನವಾಗಿರಲಿಲ್ಲ. ಇಂಗ್ಲಿಷ್ ಮಕ್ಕಳಿಗೆ ಪುನರ್ ಪರೀಕ್ಷೆ ಕೊಡುವಾಗಲೂ ಇಷ್ಟು ವ್ಯತ್ಯಾಸ ಕಂಡುಬರುವುದು ಸಾಮಾನ್ಯ. ವಿವರಗಳು ಅನುಬಂಧ 2 ರಲ್ಲಿವೆ.

ಇಂಗ್ಲಿಷಿನಲ್ಲಿ ಕೊಟ್ಟ ಅಪ್ಪಣೆ ಅರ್ಥವಾಗದೇ ಪಂಜಾಬಿಯಲ್ಲಿ ಕೊಟ್ಟದ್ದು ಹೆಚ್ಚು ಅರ್ಥವಾಗುವದಾಗಿದ್ದರೆ, ಮಕ್ಕಳ ಕಾರ್ಯ ನಿರ್ವಹಣೆಯಲ್ಲಿ ಸಾರ್ಥಕವಾದ ವ್ಯತ್ಯಾಸವಿರಬೇಕಾಗಿತ್ತು. ಆದರೆ ಅಂತಹ ವ್ಯತ್ಯಾಸ ಕಾಣಲಿಲ್ಲ. ಅವರ ಕಾರ್ಯನಿರ್ವಹಣೆಯಲ್ಲಿ, ಪಂಜಾಬಿಯಲ್ಲಿ ಅಪ್ಪಣೆ ಕೊಟ್ಟಾಗ, ಕಂಡುಬಂದ ವೃದ್ಧಿಗೆ ಅಭ್ಯಾಸ ಮಾತ್ರ ಕಾರಣವೆಂದು ನಿರ್ಧರಿಸಿ ಉಳಿದ ಮಕ್ಕಳಿಗೆ ಇಂಗ್ಲಿಷಿನಲ್ಲೇ ಅಪ್ಪಣೆ ಕೊಡುವ ಕ್ರಮವನ್ನು ಮುಂದುವರಿಸಲಾಯಿತು.

ಭಾರತದಲ್ಲಿ ಬಳಸಿದ್ದು, ಪಂಜಾಬಿ, ಕನ್ನಡ. ಮಂಡ್ಯದಲ್ಲಿ ಕಂಡ ಕೆಲವು ಮಕ್ಕಳ ಮನೆ ಮಾತು ಕನ್ನಡವಲ್ಲದಿದ್ದರೂ ಅವರು ಶಾಲೆಯಲ್ಲಿ ಕಲಿಯುತ್ತಿದ್ದದ್ದು ಕನ್ನಡ. ಸ್ನೇಹಿತರ ಜೊತೆ ಮೈದಾನದಲ್ಲಿ ಮಾತಾಡುತ್ತಿದ್ದದ್ದು ಕನ್ನಡ. ಅಂತೂ,

ಯಾವ ಮಗುವಿಗೂ ನಾನಾಡಿದ ಮಾತು ಗೊತ್ತಾಗದೇ ತೊಂದರೆಯಾದಂತೆ ಕಾಣಲಿಲ್ಲ.

ಭಾರತದಲ್ಲಿ ನಾನು ಪರೀಕ್ಷೆ ಕೊಟ್ಟಾಗ ಕಂಡದ್ದರ ಬಗೆಗೆ ಒಂದೆರಡು ಮಾತು; ಅಡೆ ತಡೆ ಇಲ್ಲದೇ, ಹಿನ್ನೆಲೆಗೆ ಗದ್ದಲವಿಲ್ಲದೇ ಇದ್ದ ಸಂದರ್ಭಗಳು ವಿರಳ. ಜೊತೆಗೆ ಏನಾಗುತ್ತಿದೆ ಅನ್ನುವದರ ಬಗೆಗೆ ಉಳಿದ ಮಕ್ಕಳಿಗಿದ್ದ ಕುತೂಹಲ. ಅಷ್ಟಾದರೂ, ಕಂಡರಿಯದ ಸಮಸ್ಯೆಗಳನ್ನು ಪರಿಹರಿಸಲು ಕೂತ ಆ ಮಕ್ಕಳು ತಮ್ಮ ಪರಮಾವಧಿ ಕಾರ್ಯ ನಿರ್ವಹಣೆಯನ್ನು ಕೊಡುತ್ತಿದ್ದರೆನ್ನುವುದು ನನ್ನ ಅಭಿಪ್ರಾಯ.

ಅಡಿ ಟಿಪ್ಪಣಿಗಳು

1. PLOWDEN Report (1957), *Children and Their Primary Schools*, H.M.S. Stationary office, Vol. 1, London.

2. DEAKIN, N. (1969), *Colour Citizenship and British Society*, Panther Modern Society, London.

3. BURKE, H. R. (1958), R. P. M. A review and critical evaluation, *Journal of Genetic Psychology*, 93, 199-228.

4. HIGGINS, C. and SIVERS C. H. (1958), A comparison of Stanford - Binet and Coloured Raven's Progressive Matrices I. Q.'s for children with low socio-economic status, *Journal of* Consulting Psychology, 22, 465-468.

ಅಧ್ಯಾಯ ಆರು

ಫಲಿತಾಂಶದ ವಿಶ್ಲೇಷಣೆ

ಟಿಪ್ಪಣಿಗಳು

1. ಹೋಲಿಕೆಗೆ ಆರಿಸಿಕೊಂಡ ಮಕ್ಕಳ ಬಗೆಗೆ :

ಭಾರತದಲ್ಲಿ ನೋಡಿದ 58 ಮಕ್ಕಳಲ್ಲಿ 43 ಮಕ್ಕಳನ್ನು ಈಚೆಗೆ ವಲಸೆ ಬಾರದ ಮಕ್ಕಳ ಜೊತೆಗೆ ಹೋಲಿಸುವದಕ್ಕೆ ಆರಿಸಿಕೊಳ್ಳಲಾಯಿತು. ಸರಿಸಮವೆಂದು ಪರಿಗಣಿಸುವದಕ್ಕೆ ಆಧಾರವಾದ ಅಂಶಗಳು: ಮಗುವಿನ ವಯಸ್ಸು, ಲಿಂಗ, ತಂದೆಯ ಕೆಲಸ, ತಂದೆಯ ವಿದ್ಯಾಭ್ಯಾಸದ ಮಟ್ಟ ಮನೆಯ ಭಾಷೆ.

ಒಂದಕ್ಕಿಂತ ಹೆಚ್ಚು ಮಕ್ಕಳು ಮೇಲಿನ ಅಂಶಗಳ ದೃಷ್ಟಿಯಿಂದ ಸರಿಸಮವಾಗುವಂತೆ ಸಿಕ್ಕಾಗ ಆಯ್ಕೆಗೆ ಆಧಾರವಾದದ್ದು ವೆಕ್ಸ್‌ಲರಿನ ಮಾಪಕ ಕೊಟ್ಟ ಬುದ್ಧಿ ಮಟ್ಟ. ಇಬ್ಬರು ಮಕ್ಕಳಲ್ಲಿ ಒಂದನ್ನು ಆರಿಸಬಂದಾಗ ಆರಿಸಿಕೊಂಡದ್ದು ಹೆಚ್ಚು ಬುದ್ಧಿಮಟ್ಟದ ಮಗುವನ್ನು.

ಪರೀಕ್ಷೆಗೆ ಕೂತ 66 ಮಕ್ಕಳಿಂದ ಇಂಗ್ಲಿಷ್ ಮಕ್ಕಳಿಂದ 43 ಮಕ್ಕಳನ್ನು ಆರಿಸಿಕೊಂಡಾಗ ಅನುಸರಿಸಿದ ಕ್ರಮವೂ ಇದೇ.

2. ಅನುಕ್ರಮಿಕ ಮಾತೃಕೆಯ ಬಗೆಗೆ

ಮಾತೃಕೆಯಲ್ಲಿ ಮಕ್ಕಳು ಗಳಿಸಿದ ಅಂಕಗಳನ್ನು ಬುದ್ಧಿಮಟ್ಟಗಳಾಗಿ ಪರಿವರ್ತಿಸುವದಕ್ಕೆ ಸ್ಪಿನ್ ಜೋನ್ಸ್ * ಸೂಚಿಸಿರುವ ಕ್ರಮವನ್ನು ಅನುಸರಿಸಲಾಯಿತು.

ಮಾತೃಕೆ ಉಪಯೋಗವಾಗುವ ಮಕ್ಕಳಿನ ವಯಸ್ಸಿನ ವ್ಯಾಪ್ತಿ 5 ರಿಂದ 11ರವರೆಗೆ ಮಾತ್ರ. ಆ ವಯಸ್ಸಿನ ಮಕ್ಕಳಿದ್ದದ್ದು 23ರಷ್ಟು.

ರೇವನ್ ಅವರು ಕೊಟ್ಟಿರುವ ವಯಸ್ಸುಗಳ ನಡುವಿಗೆ ಮಗುವೊಂದರ ವಯಸ್ಸಿದ್ದಾಗ ಅನುಸರಿಸಿದ್ದು ಉಪಸಮದ ಕ್ರಮ ಮಧ್ಯಬಿಂದುವಿನಲ್ಲಿದ್ದಾಗ ವಯಸ್ಸನ್ನು ಕೆಳಗಡಿಗೆ ತರುವ ಕ್ರಮವನ್ನನುಸರಿಸಲಾಯಿತು.

ಬ್ರಿಟನ್ನಿಗೆ ಈಚೆಗೆ ಬಂದವರು–ಭಾರತದಲ್ಲಿರುವ ಮಕ್ಕಳು

	ಈಚೆಗೆ ಬಂದವರು	ಭಾರತದ ಮಕ್ಕಳು
ಮಕ್ಕಳ ಸಂಖ್ಯೆ	43	43
ಗಂಡು ಮಕ್ಕಳು	27	27
ಹೆಣ್ಣು ಮಕ್ಕಳು	16	16
ಸರಾಸರಿ ವಯಸ್ಸು	10 ವರ್ಷ 0 ತಿಂಗಳು	10 ವರ್ಷ 2 ತಿಂಗಳು
ತಂದೆಯ ಸರಾಸರಿ ವಿದ್ಯಾಭ್ಯಾಸ	8 ವರ್ಷ 10 ತಿಂಗಳು	8 ವರ್ಷ 11 ತಿಂಗಳು
ತಂದೆಯ ಕೆಲಸ ;		
ರೈತರು	11	11
ಅಧ್ಯಾಪಕರು	5	5
ಕಾರಖಾನರು	9	9
ಸೈನಿಕರು	6	6
ವರ್ತಕರು	5	5

* JONES, H. G. (1956)

ಕೈಗೆಲಸದವರು	5	
ತರಪೇತು ಪಡೆದವರು	5	5
ಸಾಗಣೆ ಕೆಲಸದವರು	1	1
ಭಾಷೆ :		
ಪಂಜಾಬಿ	29	28
ಇತರ	14	15
ಬ್ರಿಟನ್ನಿನಲ್ಲಿ ಇದ್ದ ಕಾಲ	19.3 ತಿಂಗಳು	—

ಈ ಎರಡು ಗುಂಪುಗಳು ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಸಾರಾಂಶ ಕೆಳಗಿನ ಪಟ್ಟಿಯಲ್ಲಿದೆ :

ಫಲಿತಾಂಶ

ಮಾಪಕ	ಈಚೆಗೆ ಬಂದವರು	ಭಾರತದ ಮಕ್ಕಳು
1. ಸ್ಮರಣ ವ್ಯಾಪ್ತಿಯ ಸಮಸ್ಯೆ		
ಅಂಕಗಳ ವ್ಯಾಪ್ತಿ	4-15	5-12
ಸರಾಸರಿ	7-93	7-42
ವಿಚಲನೆ	2-30	2-04
2. ಚಿತ್ರಗಳನ್ನು ಪೂರೈಸುವ ಸಮಸ್ಯೆ		
ಅಂಕಗಳ ವ್ಯಾಪ್ತಿ	5-13	2-13
ಸರಾಸರಿ	9-02	7-63
ವಿಚಲನೆ	1-79	2-39

3. ಚಿತ್ರಗಳನ್ನು ಕ್ರಮಪಡಿಸುವ ಸಮಸ್ಯೆ		
ಅಂಕಗಳ ವ್ಯಾಪ್ತಿ	3-13	1-8
ಸರಾಸರಿ	6-72	5-12
ವಿಚಲನೆ	1-80	1-29
4. ಇಟ್ಟಿಗೆ ಜೋಡಿಸುವ ಸಮಸ್ಯೆ		
ಅಂಕಗಳ ವ್ಯಾಪ್ತಿ	4-12	4-11
ಸರಾಸರಿ	8-30	7-35
ವಿಚಲನೆ	2-00	2-09
5. ವಸ್ತುಗಳನ್ನು ಜೋಡಿಸುವ ಸಮಸ್ಯೆ		
ಅಂಕಗಳ ವ್ಯಾಪ್ತಿ	3-11	1-12
ಸರಾಸರಿ	6-81	5-51
ವಿಚಲನೆ	1-92	2-36
6. ಪಲ್ಲಟವಾದ ಚಿಹ್ನೆಗಳ ಸಮಸ್ಯೆ		
ಅಂಕಗಳ ವ್ಯಾಪ್ತಿ	4-13	2-11
ಸರಾಸರಿ	7-74	6-90
ವಿಚಲನೆ	2-44	2-58

7. ಬುದ್ಧಿಮಟ್ಟ-ವೆಕ್ಸ್‌ಲರ್		
ವ್ಯಾಪ್ತಿ	62-99	53-94
ಸರಾಸರಿ	84-23	75-70
ವಿಚಲನೆ	9-63	9-76
8. ಬುದ್ಧಿಮಟ್ಟ-ಮಾತೃಕೆ		
ವ್ಯಾಪ್ತಿ	72-112	71-105
ಸರಾಸರಿ	83-74	81-11
ವಿಚಲನೆ	10-85	8-36


ಮಕ್ಕಳ ಬುದ್ಧಿಮಟ್ಟ - ವೆಕ್ಸ್ಲರಿನ ಮಾಪಕ

ವರ್ಗಗಳು	ಆವರ್ತನ ಸಂಖ್ಯೆ ಈಚೆಗೆ ಬಂದವರು	ಶೇ.	ಆವರ್ತನ ಸಂಖೆ ಭಾರತದಲ್ಲಿರುವವರು	ಶೇ.
115-119	—	—	—	—
110-114	—	—	—	—
105-109	—	—	—	—
100-104	—	—	—	—
95-99	6	13-9	—	—
90-94	8	18-6	5	11-6
85-89	8	18-6	4	9-3
80-84	6	13-9	5	11-6
75-79	8	18-6	10	23-2
70-74	3	7-0	7	16-3
65-69	3	7-0	7	16-3
60-64	1	2-3	2	4-7
55-59	....	....	2	4-7
50-54	....	....	....	2-3
45-49	....	....	....	....

ಮಕ್ಕಳ ಬುದ್ಧಿಮಟ್ಟ - ಅನುಕ್ರಮಿಕ ಮಾತೃಕೆ

ವರ್ಗಗಳು	ಆವರ್ತನ ಸಂಖ್ಯೆ ಈಚೆಗೆ ಬಂದವರು	ಶೇ.	ಆವರ್ತನ ಸಂಖ್ಯೆ ಭಾರತದಲ್ಲಿರುವವರು	ಶೇ.
115-119	....	....	....	....
110-114	1	4-4	....	....
105-109	....	....	1	4-4
100-104	2	8-7	....	....
95-99	1	4-4	....	....
90-94	2	8-7	3	13-1
85-89	5	21-7	2	8-7
80-84	1	4-4	6	26-1
75-79	5	21-7	6	26-1
70-74	6	26-1	5	21-7
65-69	....	....	....	....

ವೆಕ್ಸೆಲರ್ ಬುದ್ಧಿಮಟ್ಟ



ಬುದ್ಧಿಮಟ್ಟ

ಈಚೆಗೆ ಬಂದವರು - ಭಾರತದಲ್ಲಿರುವವರು ಸರಾಸರಿಗಳಲ್ಲಿನ ವ್ಯತ್ಯಾಸ

ಮಾಪಕಗಳು	ಈಚೆಗೆ ಬಂದವರು-ಸರಾಸರಿ	ಭಾರತದಲ್ಲಿರುವವರು ಸರಾಸರಿ	ಟಿ. ಬೆಲೆ	ಸಾರ್ಥಕತೆಯ ಮಟ್ಟ
ಸ್ಮರಣ ವ್ಯಾಪ್ತಿ	7.93	7.42	1.071	ಸಾರ್ಥಕವಲ್ಲ
ಚಿತ್ರಗಳ ಪೂರ್ತಿಕೆ	9.08	7.63	3.016	0.005
ಚಿತ್ರಗಳ ಕ್ರಮಬದ್ಧ ಜೋಡಣೆ	6.72	5.12	4.81	0.0005
ಇಟ್ಟಿಗೆಗಳ ಜೋಡಣೆ	8.30	7.35	2.134	0.025
ವಸ್ತುಗಳ ಜೋಡಣೆ	6.81	5.51	2.27	0.025
ಪಲ್ಲಟಿತ ಚಿಹ್ನೆಗಳು	7.74	6.90	1.58	ಸಾರ್ಥಕವಲ್ಲ
ನೆಕ್ಸ್‌ಲರಿನ ಮಾಪಕ ಬುದ್ಧಿಮಟ್ಟ	84.23	75.7	3.99	0.0005
ಅನುಕ್ರಮಿಕ ಮಾತೃಕೆ-ಬುದ್ಧಿಮಟ್ಟ	83.74	81.11	<1.00	ಸಾರ್ಥಕವಲ್ಲ

ಟಿಪ್ಪಣಿಗಳು

1. ಜೊತೆ ಜೊತೆಯಾದ ಅಳತೆಗಳಲ್ಲಿ ಸರಾಸರಿಗಳ ವ್ಯತ್ಯಾಸಕ್ಕಿರುವ ಸಾರ್ಥಕತೆಯನ್ನು ನಿರ್ಧರಿಸುವುದೇ t–ಪ್ರಮಾಣದ ಬೆಲೆ. ಅದರ ಸೂತ್ರವನ್ನು ಸಂಖ್ಯಾ ಪರಿಶೀಲನ ಶಾಸ್ತ್ರದ ಯಾವುದಾದರೂ ಪಠ್ಯಪುಸ್ತಕದಲ್ಲಿ ಪಡೆಯಬಹುದು.

2. ಸಾರ್ಥಕತೆಯ ಮಟ್ಟದ ಬಗೆಗೆ ಒಂದು ಮಾತು :

ಸಾರ್ಥಕತೆಯ ಮಟ್ಟ 0.005 ಅಂದಾಗ ಆ ಮಾತಿನ ಅರ್ಥ ಇಷ್ಟು— ಇದೇ ಪ್ರಯೋಗವನ್ನು ಒಂದು ಸಾವಿರ ಸಲ ನಡೆಸಿದರೆ ಈ ತರಹದ ವ್ಯತ್ಯಾಸ

995 ಸಂದರ್ಭಗಳಲ್ಲಿ ಕಾಣುವ ಸಂಭವವಿದೆ; ಅಥವಾ. ಒದಗಿದ ಫಲಿತಾಂಶದಲ್ಲಿ ಹೆಚ್ಚಿನ ವಿಶ್ವಾಸವಿಡಬಹುದು.

ವಿವೇಚನೆ

ನಾಲ್ಕನೇ ಅಧ್ಯಾಯದಲ್ಲಿ ನಮೂದಿಸಿದ ಮೊದಲನೇ ಅನುಮಾನದ ದೃಷ್ಟಿಯಿಂದ ಈ ಫಲಿತಾಂಶಗಳನ್ನು ನೋಡಬಹುದು. ವೆಕ್ಸ್ಲವಿನ ಮಾಪಕ ಕೊಡುವ ಅಳತೆಗಳಲ್ಲಿ ಸಾರ್ಥಕವಾದ ವ್ಯತ್ಯಾಸ ಎರಡು ಗುಂಪುಗಳ ನಡುವೆ ಕಂಡರೂ, ಅನುಕ್ರಮಿಕ ಮಾತೃಕೆ ಕೊಡುವ ಅಳತೆಗಳಲ್ಲಿ ಈ ವ್ಯತ್ಯಾಸವಿಲ್ಲ, ಪರಸ್ಪರ ವಿರೋಧವಿರುವಂತೆ ಕಾಣುವ ಈ ಫಲಿತಾಂಶಗಳ ಬಗೆಗೆ ವಿವೇಚಿಸುವ ಮೊದಲು ಇನ್ನೂ ಕೆಲವು ಅಳತೆಗಳನ್ನು ಗಮನಿಸುವುದು ಅಗತ್ಯ.

ಇಟ್ಟಿಗೆಗಳನ್ನು ಹಾಗೂ ವಸ್ತುಗಳನ್ನು ಜೋಡಿಸುವ ಕೆಲಸಗಳಲ್ಲಿ ಸರಾಸರಿಗಳಲ್ಲಿರುವ ವ್ಯತ್ಯಾಸ ಅಪೇಕ್ಷಿತ ದಿಕ್ಕಿನಲ್ಲಿದ್ದರೂ ಸಾರ್ಥಕವೆನಿಸುವ ಪ್ರಮಾಣದಲ್ಲಿಲ್ಲ. (ಸಾರ್ಥಕ ವ್ಯತ್ಯಾಸದ ಮಟ್ಟ 0.01, ಕ್ಕಿಂತ ಹೆಚ್ಚಾಗಿರಬಾರದು). ಈ ಎರಡು ಕೆಲಸಗಳ ತಳಕ್ಕಿರುವ ದಕ್ಷತೆ ಸ್ಥಳ ವಿನ್ಯಾಸ ಸಂಬಂಧವಾದದ್ದು, ಬದಲಾವಣೆಗೆ, ಸುಲಭವಾಗಿ ದಕ್ಕದೇ ಹೋಗುವಂತಹದು. ಅನುಕ್ರಮಿಕ ಮಾತೃಕೆ ಬುದ್ಧಿಮಾಪಕವಲ್ಲ. ಒಂದು ವಿಶಿಷ್ಟ ದಕ್ಷತೆಯ ಅಳತೆಗೋಲು ಎಂದು ಕೆಲವರು ವಾದಿಸಿರುವದನ್ನು ಗಮನಿಸಿದಾಗ, ಈ ದೂರು ಕೆಲಸಗಳಲ್ಲೂ ಬದಲಾವಣೆ ಕಂಡುಬರುವುದಕ್ಕೆ 19 ತಿಂಗಳ ಕಾಲಾವಧಿ ಸಾಲದೇನೋ ಎನ್ನುವ ವಿಚಾರ ಏಳುವುದು.

ಆದೇ, ಚಿತ್ರಗಳನ್ನು ಪೂರೈಸುವ ಕೆಲಸದಲ್ಲಿ ಹಾಗೂ ಚಿತ್ರಗಳನ್ನು ಕ್ರಮಬದ್ಧವಾಗಿ ಜೋಡಿಸುವ ಕೆಲಸದಲ್ಲಿ ಸಾರ್ಥಕವಾದ ವ್ಯತ್ಯಾಸ ಕಂಡುಬಂದಿರುವದನ್ನು ಸಮರ್ಪಕವಾಗಿ ವಿವರಿಸಿರುವುದು ಹೇಗೆ? ಈ ಕೆಲಸಗಳನ್ನು ಮಾಡುವಾಗ ಅಗತ್ಯವಾದದ್ದು ಸ್ಥಳ ವಿನ್ಯಾಸ ಸಂಬಂಧವಾದ ದಕ್ಷತೆಯಲ್ಲ, ಸಂಕೇತವಾದ ವಸ್ತುಗಳ ಹಾಗೂ ಸನ್ನಿವೇಶಗಳ ಪರಿಚಯವಷ್ಟೇ ಎನ್ನುವದನ್ನು ಗಮನಿಸಿದಾಗ ನಮಗೆ ಸೂಕ್ತ ಉತ್ತರ ಸಿಗುತ್ತದೆ. ಸಾರ್ಥಕವಾದ ವ್ಯತ್ಯಾಸ ಕಂಡುಬಂದ್ದಕ್ಕೆ ಕಾರಣ ಭಾರತದ ಮಕ್ಕಳಿಗೆ ಇರದ ಅನುಭವವನ್ನು ವಲಸೆ ಬಂದ ಮಕ್ಕಳು ಬ್ರಿಟನ್ನಿಗೆ ಬಂದ ಸ್ವಲ್ಪ ಕಾಲದಲ್ಲೇ ಪಡೆದುಕೊಂಡದ್ದು. ಈ ಎರಡು ಕೆಲಸಗಳಲ್ಲಿ ಪ್ರತಿರೂಪಿಸಿದ ಅಂಶಗಳು ಬ್ರಿಟನ್ನಿನ ಪರಿಸರಕ್ಕೆ ವಿಶಿಷ್ಟವಾದವೆನ್ನುವದನ್ನು ನಾವು ನೆನಪಿಗೆ ತಂದುಕೊಂಡಾಗ ನಮಗೆ ಫಲಿತಾಂಶದ ಅರ್ಥ ಮನದಟ್ಟಾಗುತ್ತದೆ.

ವೆಕ್ಸ್‌ಲರಿನ ಬುದ್ಧಿಮಾಪಕ ಕೊಟ್ಟ ಫಲಿತಾಂಶದ ಪ್ರಕಾರ ಈ ಎರಡು ಗುಂಪುಗಳ ನಡುವೆ ಸಾರ್ಥಕವಾದ ವ್ಯತ್ಯಾಸವಿದೆಯೆನ್ನುವುದು ಒಂದನೇ ಅನುಮಾನದ ದೃಷ್ಟಿಯಿಂದ ಗಮನಾರ್ಹವಾದ ವಿಷಯ.

ಎರಡನೇ ಅನುಮಾನ ಮೊದಲು ಬಂದ ಮಕ್ಕಳ ಹಾಗೂ ಈಚೆಗೆ ಬಂದ ಮಕ್ಕಳ ಬಗೆಗೆ, ಈ ಎರಡು ಗುಂಪುಗಳ ಹಿನ್ನೆಲೆಯ ವಿವರಗಳ ಸಾರಾಂಶ ಕೆಳಗಿದೆ:

	ಮೊದಲು ಬಂದವರು	ಈಚೆಗೆ ಬಂದವರು
ಮಕ್ಕಳ ಸಂಖ್ಯೆ	25	25
ಹುಡುಗರು	13	13
ಹುಡುಗಿಯರು	12	12
ಸರಾಸರಿ ವಯಸ್ಸು	9 ವರ್ಷ 10 ತಿಂಗಳು	9 ವರ್ಷ 11 ತಿಂಗಳು
ತಂದೆಯ ವಿದ್ಯಾಭ್ಯಾಸ-ಸರಾಸರಿ	9 ವರ್ಷ 7 ತಿಂಗಳು	8 ವರ್ಷ 9 ತಿಂಗಳು
ತಂದೆಯ ಕೆಲಸ		
ರೈತರು	8	8
ಅಧ್ಯಾಪಕರು	4	4
ಕಾರಖೂನರು	5	5
ವರ್ತಕರು	3	3
ಕೈಗೆಲಸದವರು	4	4
ಸಾಗಣೆ ಕೆಲಸದವರು	1	1
ಮನೆಮಾತು ; ಪಂಜಾಬಿ	17	18
ಇತರ ಭಾಷೆಗಳು	8	7

ಇಂಗ್ಲೆಂಡಿನಲ್ಲಿದ್ದ ಕಾಲ-
ಸರಾಸರಿ 7ವರ್ಷ 1 ತಿಂಗಳು 1ವರ್ಷ 9 ತಿಂಗಳು

ಇಂಗ್ಲೆಂಡಿನ ಶಾಲೆಗಳಲಿದ್ದ
ಕಾಲ 4ವರ್ಷ 8 ತಿಂಗಳು 1ವರ್ಷ 9 ತಿಂಗಳು

ಈ ಎರಡು ಗುಂಪುಗಳು ಸರಿಸಮವಾಗಿವೆ ಅನ್ನುವುದನ್ನು ಒತ್ತಿ ಹೇಳಬೇಕಾಗಿಲ್ಲ. ಭಿನ್ನ ವರ್ಷಗಳಲ್ಲಿ ಅವು ಗಳಿಸಿದ ಅಂಕಗಳ ವಿವರ ಹೀಗಿದೆ:

ಫಲಿತಾಂಶ

ಮಾಪಕ	ಮೊದಲುಬಂದವರು	ಈಚಿಗೆಬಂದವರು
ಸ್ಮರಣವ್ಯಾಪ್ತಿಯ ಸಮಸ್ಯೆ ಅಂಕಗಳ ವ್ಯಾಪ್ತಿ	5-16	5-15
ಸರಾಸರಿ	10-68	8-12
ವಿಚಲನೆ	2-89	2.17
ಚಿತ್ರಗಳನ್ನು ಪೂರೈಸುವ ಸಮಸ್ಯೆ ಅಂಕಗಳ ವ್ಯಾಪ್ತಿ	6-18	5-13
ಸರಾಸರಿ	11.08	9.12
ವಿಚಲನೆ	2.74	1.91
ಚಿತ್ರಗಳನ್ನು ಕ್ರಮದಲ್ಲಿ ಜೋಡಿಸುವ ಸಮಸ್ಯೆ ಅಂಕಗಳ ವ್ಯಾಪ್ತಿ	5-13	4-13
ಸರಾಸರಿ	8.52	7.12
ವಿಚಲನೆ	2.02	1.95

ಇಟ್ಟಿಗೆ ಜೋಡಿಸುವ ಸಮಸ್ಯೆ		
ಅಂಕಗಳವ್ಯಾಪ್ತಿ	5-16	6-12
ಸರಾಸರಿ	10.96	8.96
ವಿಚಲನೆ	2.22	1.78
ವಸ್ತುಗಳನ್ನು ಜೋಡಿಸುವ ಸಮಸ್ಯೆ		
ಅಂಕಗಳ ವ್ಯಾಪ್ತಿ	6-17	4-11
ಸರಾಸರಿ	9.68	7.64
ವಿಚಲನೆ	2.45	1.79
ಪಲ್ಲಟವಾದ ಚಿಸ್ಟೆಗಳ ಸಮಸ್ಯೆ		
ಅಂಕಗಳ ವ್ಯಾಪ್ತಿ	4-15	4-13
ಸರಾಸರಿ	9.64	8.36
ವಿಚಲನೆ	2.65	2.42
ಬುದ್ಧಿಮಟ್ಟ ವೆಕ್ಸ್ಲರ್		
ವ್ಯಾಪ್ತಿ	78-12	67-99
ಸರಾಸರಿ	99.96	87.96
n-25 ವಿಚಲನೆ	11.95	9.17
ಬುದ್ಧಿಮಟ್ಟ-ಮಾತ್ರಕೆ		
ವ್ಯಾಪ್ತಿ	86-124	72-112
ಸರಾಸರಿ	104.55	86.35
ವಿಚಲನೆ	8.27	11.55


ಮಕ್ಕಳ ಬುದ್ಧಿಮಟ್ಟ - ವೆಕ್ಸ್‌ಲರಿನ ಮಾಪಕ

ವರ್ಗಗಳು	ಮೊದಲು ಬಂದವರು ಆವರ್ತನ	ಸಂಖ್ಯೆ-ಶೇ	ಈಚೆಗೆ ಬಂದವರು ಆವರ್ತನ	ಸಂಖ್ಯೆ-ಶೇ
130-134				
125-129	1	4		
120-124	1	4		
115-119	2	8		
110-114	1	4		
105-109	1	4		
100-104	3	12		
95-99	7	28	6	24
90-94	7	28	7	28
85-89			5	20
80-84	1	4	1	4
75-79	1	4	3	12
70-74			2	8
65-69			1	4
60-64				

ಮಕ್ಕಳ ಬುದ್ಧಿ ಮಟ್ಟ-ಅನುಕ್ರಮಿಕ ಮಾತೃಕೆ

125-129				
120-124	1	5		
115-119	2	10		
110-115	2	10	1	5
105-109	7	35		
100-104	3	15	2	10
95-99	3	15	3	15
90-94	1	5	2	10
85-89	1	5	3	15
80-84			1	5
75-79			5	25
70-74			3	15
	ಆವರ್ತನ ಸಂಖ್ಯೆ—ಶೇ		ಆವರ್ತನ ಸಂಖ್ಯೆ-ಶೇ	

ವೆಕ್ಸಲರ್ ಬುದ್ಧಿಮಟ್ಟ



ಮೊದಲು ಬಂದವರು-ಈಚೆಗೆ ಬಂದವರು

ಸರಾಸರಿಗಳಲ್ಲಿ ವತ್ಯಾಸ

ಮಾಪಗಳು	ಮೊದಲು ಬಂದವರು ಸರಾಸರಿ	ಈಚೆಗೆ ಬಂದವರು ಸರಾಸರಿ	ಟಿ-ಬೆಲೆ	ಸಾರ್ಥಕತೆಯ ಮಟ್ಟ
ಸ್ಮರಣೆ ವ್ಯಾಪ್ತಿ	10-68	8.2	3.35	0.005
ಚಿತ್ರಗಳ ಪೂರೈಕೆ	11.00	9.12	2.77	0.005
ಚಿತ್ರಗಳ ಕ್ರಮ ಬದ್ಧ ಜೋಡಣೆ	8.52	7.12	2.23	0.025
ಇಟ್ಟಿಗೆಗಳ ಜೋಡಣೆ	10,96	8.96	3.444	0.005
ವಸ್ತುಗಳ ಜೋಡಣೆ	9.68	7.64	3.29	0.005
ಪಲ್ಲಟಿತ ಚಿಹ್ನೆಗಳು	9-64	8-36	1-749	0-05
ವೆಕ್ಸ್‌ಲರಿನ್ ಮಾಪಕ ಬುದ್ಧಿಮಟ್ಟ	99-96	87-96	3-85	0-0005
ಅನುಕ್ರಮಿಕ ಮಾತೃಕೆ ಬುದ್ಧಿಮಟ್ಟ	104.55	86-35	6-6	0-0005

ವಿವೇಚನೆ

ವೆಕ್ಸ್ಲರಿನ ಮಾಪಕ ಕೊಟ್ಟ ಬುದ್ಧಿಮಟ್ಟಗಳ ನಡುವಿಗಿರುವಂತೆ ಅನುಕ್ರಮಿಕ ಮಾತೃಕೆ ಕೊಟ್ಟ ಬುದ್ಧಿಮಟ್ಟಗಳ ನಡುವಿಗೂ ಈಗ ಉನ್ನತ ಮಟ್ಟದ ಸಾರ್ಥಕ ವ್ಯತ್ಯಾಸ ಕಾಣಿಸಿಕೊಳ್ಳುವುದು ಮೊದಲು ಕಣ್ಣಿಗೆ ಹೊಡೆಯುವಂತಹ ವಿಷಯ, (0.0005ದ ಮಟ್ಟದ) ಅಷ್ಟೆ ಗಮನಾರ್ಹವಾದುದು, ಇಟ್ಟಿಗೆಗಳನ್ನು ಹಾಗು ವಸ್ತುಗಳನ್ನು ಜೋಡಿಸುವ ಕೆಲಸಗಳಲ್ಲಿ, ಭಾರತದಲ್ಲಿರುವ ಮಕ್ಕಳನ್ನು ಈಚೆಗೆ ಬಂದವರನ್ನು ಹೋಲಿಸಿದಾಗ ಕಾಣದೇ ಹೋದ ಸಾರ್ಥಕ ಮಟ್ಟದ ವ್ಯತ್ಯಾಸ ಈಗ ಕಂಡುಬರುವ ಅಂಶ.

ಈ ಮೂರು ಮಾಪಕಗಳು ಒಡ್ಡುವ ಸಮಸ್ಯೆ, ಕೇಳುವ ದಕ್ಷತೆ, ಸ್ಥಳಸಂಬಧವಾದ ಹಾಗು ವಿಶಿಷ್ಟವಾದೊಂದು ದಕ್ಷತೆಯಿರಬಹುದೆನ್ನುವ ಗುಮಾನಿಯನ್ನು ಹಿಂದೆ ಹೇಳಿದ್ದನ್ನು ಈಗ ಜ್ಞಾಪಿಸಿಕೊಳ್ಳಬವುದು. ಈಗ ದೊರೆತ ಪಲಿತಾಂಶ ನಮ್ಮ ಅನುಮಾನ ನಿವಾರಣೆಗೆ ಸಾಕಷ್ಟು ಪ್ರಮಾಣವನ್ನು ಒದಗಿಸಿರುವುದರ ಜೊತೆಗೆ, ಭಾರತದ ಮಕ್ಕಳಲ್ಲಿ, ಹಾಗು ಈಚೆಗೆ ಬಂದವರಲ್ಲಿ ಆ ದಕ್ಷತೆ ಹೇಗೆ ಕುಂದಿತವಾಗಿದೆ ಅನ್ನುವುದನ್ನು ಸ್ಥಾನ ತೋರಿಸುತ್ತದೆ.

ಸ್ಮರಣ ವ್ಯಾಪ್ತಿಯ ಸಮಸ್ಯೆಯಲ್ಲೂ ಈಗ ಸಾರ್ಥಕ ಮಟ್ಟದ ವ್ಯತ್ಯಾಸ ತೋರಬರುವುದು ಈ ಫಲಿತಾಂಶದ ಇನ್ನೊಂದು ವಿಶೇಷ. ಸ್ಮರಣಶಕ್ತಿಯನ್ನು ಪರೀಕ್ಷಿಸುವ ಕೆಲಸಕ್ಕೆ ಉಪಯೋಗಿಸುವ ಸಾಮಗ್ರಿಯಲ್ಲಿ ಈ ಪಲಿತಾಂಷದ ಉಚಿತ ವಿವರಣೆಯನ್ನು ಕಾಣಬಹುದು. ಬ್ರಿಟನ್ನಿನ ಮಕ್ಕಳಿಗೆ ಅಂಕಿಗಳು ಎಷ್ಟು ಮುಖ್ಯವೋ, ಭಾರತದ ಮಕ್ಕಳಿಗೆ ಅವು ಅಷ್ಟು ಮುಖ್ಯವಲ್ಲ. ಮುಖ್ಯ ರಸ್ತೆಗಳಿಗೆ ಅಂಕಿಗಳನ್ನು ಉಪಯೋಗಿಸಿ ಗುರುತುಹಚ್ಚುವ ಅಥವ ಬೆಳಗಾದರೆ ಟೆಲಿಫೋನನ್ನು ಉಪಯೋಗಿಸುವ ರೂಢಿ ಬ್ರಿಟನ್ನಿಗೆ ವಿಶಿಷ್ಟವಾದುದು; ಭಾರತದಲ್ಲಿ ಅಪರೂಪವಾದುದು. ಬ್ರಿಟನ್ನಿಗೆ ವಲಸೆ ಬಂದ ಮಕ್ಕಳು ಕ್ರಮ ಕ್ರಮವಾಗಿ ಅವರ ಈ ಹೊಸ ಪರಿಸರ ಅಂಕಿಗಳನ್ನು ನೆನಪಿನಲ್ಲಿಟ್ಟಿಕೊಳ್ಳುವುದಕ್ಕೆ ಕೊಡುವ ಮನ್ನಣೆಯನ್ನು ಅರ್ಥವಯಡಿಕೊಂಡದ್ದೆ ಆ ದಕ್ಷತೆಯ ಏಳ್ಗಗೆ ಕಾರಣವೆನ್ನುವ ವಾದ ಸಮಂಜಸವಾಗಂವುದು.

ಪಲ್ಲಟಿತ ಚಿಹ್ನೆಗಳ ಕೆಲಸದಲ್ಲಿ ಕಂಡುಬರುವ ವ್ಯತ್ಯಾಸಕ್ಕೂ ಇಂತಹದೇ, ಪರಿಸರದ ಮಾತುಗಳ, ವಿವರಣೆ ಕೊಡಬಹುದು. ಬ್ರಿಟನ್ನಿನ ಪರಿಸರದಲ್ಲಿ ಚುರುಕಾಗಿ ಮಾಡಿದ ಕೆಲಸಕ್ಕೆ ಕೊಡುವ ಪ್ರಶಸ್ತಿ ವಲಸೆ ಬಂದವರಿಗೆ ಅರಿವಾಗಿ ಅವರೂ ಚುರುಕಾಗಿ ಕೆಲಸ ಮಾಡುವುದನ್ನು ಕಲಿತಿದ್ದಾರೆನ್ನಬಹುದು.

ಬ್ರಿಟನ್ನಿಗೆ ಮೊದಲೇ ವಲಸೆ ಬಂದ ಮಕ್ಕಳನ್ನು ಭಾರತದಲ್ಲಿರುವ ಮಕ್ಕಳ ಜೊತೆ ಹೋಲಿಸಿದಾಗ. ಒಂದೊಂದು ಮಾಪಕ ಕೊಡುವ ಅಳತೆಯಲ್ಲೂ ಸಾರ್ಥಕ ವ್ಯತ್ಯಾಸ ಇರುವುದನ್ನು ಬಿಡಿಸಿ ಹೇಳುವ ಅಗತ್ಯವಿರಲಾರದು.

ಪರಿಸರದಲ್ಲಿರುವ ಅಪೇಕ್ಷೆಗೆ ಅನುವಾಗಿ ಹೀಗೆ ಬೆಳೆಯುವ ದಕ್ಷತೆ ಎಂದೋ ಒಂದು ದಿನ ತನ್ನ ಪರಮಾವಧಿ ಮುಟ್ಟುತ್ತದೆ. ವಲಸೆ ಬಂದ ಮಕ್ಕಳು ಈ ಮಟ್ಟವನ್ನು ಮುಟ್ಟುವುದು ಯಾವಾಗ ಅನ್ನುವ ಸಮಸ್ಯೆಗೆ ಸೂಕ್ತ ಉತ್ತರ ಈ ಸಂಶೋಧನೆಯಲ್ಲಿ ಸಿಗುವ ಸಂಭವಿದೆ. ಈಚೆಗೆ ಬಂದವರನ್ನು, ಇನ್ನಷ್ಟು ಕಾಲವಾದ ಮೇಲೆ, ಮತ್ತೆ ಪರೀಕ್ಷೆ ಮಾಡುವುದೇ ಅನುಸರಿಸಿದ ಕ್ರಮ. ಈ ಸಂದರ್ಭದಲ್ಲಿ ಹಿಂದೆ ನಮೂದಿಸಿದ ಮೂರನೇ ಅನುಮಾನವನ್ನು ನೆನಪಿಗೆ ತಂದುಕೊಳ್ಳುವುದು ಅಗತ್ಯ.


ಪರೀಕ್ಷೆ–ಪುನರ್‌ಪರಿಕ್ಷೆಗಳಲ್ಲಿ 23 ಮಕ್ಕಳ ಕಾರ್ಯ ನಿರ್ವಾಹಣೆಯ ವಿವರಗಳು ಒಂದನೇ ಅನುಬಂಧದ ಏಳನೇಯ ತಃಖ್ತೆಯಲ್ಲಿ ನೋಡಬಹುದು. ಸದ್ಯಕ್ಕೆ ಅದ್ದರಿಂದ ಎತ್ತಿದ ಒಂದು ಅಳತೆಯನ್ನು ಮಾತ್ರ ಕೆಳಗೆ ಕೊಡಲಾಗಿದೆ.

ಈಚೆಗೆ ಬಂದವರ ಬುದ್ಧಿಮಟ್ಟ
ವೆಕ್ಸ್‌ಲರಿನ ಮಾಪಕ

ವರ್ಗಗಳು	ಪರೀಕ್ಷೆ		ಪುನರ್ ಪರೀಕ್ಷೆ	
	ಆವರ್ತನ	ಸಂಖ್ಯೆ-ಶೇ	ಆವರ್ತನ	ಸಂಖ್ಯೆ-ಶೇ
115-114				
110-114			1	4.3
105-109			4	17.4
100-104			4	17.4
95-99	3	13.0	4	17.4
90-94	6	26.1	1	4.3
85-89	6	26,1	4	17.4
80-84			2	8.7

75-79	4	1.74	2	8.7
70-74	2	8.7	1	4-3
65-69	1	4-3		
60-64	1	4-3		

ವೆಕ್ಸ್ಲರ್ ಬುದ್ಧಿಮಟ್ಟ



ಈಚೆಗೆ ಬಂದವರು

ಪರೀಕ್ಷೆ-ಪುನರ್ ಪರೀಕ್ಷೆಗಳ ಫಲಿತಾಂಶ

ಮಾಪಕಗಳು	ಪರೀಕ್ಷೆ ಸರಾಸರಿ	ಪುನರ್ ಪರೀಕ್ಷೆ ಸರಾಸರಿ	ಏ–ಬೆಲೆ	ಸಾರ್ಥಕತೆಯ ಮಟ್ಟ
ಸ್ಮರಣವ್ಯಾಪ್ತಿಯ ಸಮಸ್ಯೆ	7.43	8.61	0.117	0.005
ಚಿತ್ರಗಳನ್ನು ಪೂರೈಸುವ ಸಮಸ್ಯೆ	8.74	9.91	0.237	0,025
ಚಿತ್ರಗಳನ್ನು ಜೋಡಿಸುವ ಸಮಸ್ಯೆ	6.43	8.61	0.08	0.0005
ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆ	8.30	9.83	0.0727	0.0005
ವಸ್ತುಗಳನ್ನು ಜೋಡಿಸುವ ಸಮಸ್ಯೆ	7.17	9.04	0.082	0.0005
ಪಲ್ಲಟಿತ ಚಿಹ್ನೆಗಳ ಸಮಸ್ಯೆ	8.17	8.65	0.76	ಸಾರ್ಥಕ ವ್ಯತ್ಯಾಸವಲ್ಲ
ವೆಕ್ಸ್‌ಲರಿನ ಮಾಪಕ ಬುದ್ಧಿಮಟ್ಟ	84.52	94.56	0.062	0.0005

ಟಿಪ್ಪಣಿಗಳು

1. ಪರೀಕ್ಷೆ-ಪುನರ್ ಪರೀಕ್ಷೆಗಳ ನಡುವಿನ ಕಾಲ 23 ತಿಂಗಳು

2. ಈ ವಿಶ್ಲೇಷಣೆಯಲ್ಲಿ ಕೇವಲ 23 ಮಕ್ಕಳಿದ್ದದ್ದಕ್ಕೆ ಕಾರಣ ಉಳಿದವರು ಪ್ರೈಮ್ಯೂಲಿಗೆ ಅಥವಾ ಕ್ರಾಂತದ ಹೊರಗೆ ಹೋದದ್ದು.

3. ಬಹುಪಾಲು ಮಕ್ಕಳು ಅನುಕ್ರಮಿಕ ಮಾತೃಕೆ ಅನ್ವಯಿಸುವ ವಯಸ್ಸಿಗೆ ಈ ಅಂತರದಲ್ಲಿ ಹೊರಗಾದದ್ದೇ ಆ ಅಳತೆ ಇಲ್ಲದೇ ಹೋದದ್ದರ ಕಾರಣ.

4. ಸ್ಯಾಂಡ್ಲರಿನ ಏ ಬೆಲೆ-ವ್ಯತ್ಯಾಸಗಳ ವರ್ಗಗಳ ಮೊತ್ತ

ವ್ಯತ್ಯಾಸಗಳ ಮೊತ್ತದ ವರ್ಗ

(ಒಂದೇ ಗುಂಪಿನ ಪರೀಕ್ಷೆ-ಪುನರ್ ಪರೀಕ್ಷೆಗಳ ಸಂದರ್ಭಗಳಲ್ಲಿ ಉಪಯೋಗಿಸುವ ಸೂತ್ರ ಇದು.)

ವಿವೇಚನೆ

ಐದು ಉಪಮಾಪಕಗಳಲ್ಲಿ ಹಾಗೂ ವೆಕ್ಸ್ಲರಿನ ಬುದ್ಧಿಮಟ್ಟದಲ್ಲಿ ಸಾರ್ಥಕ ವ್ಯತ್ಯಾಸವಿರುವುದು ಗಮನಾರ್ಹವಾದ ವಿಷಯ. ಚಿತ್ರಗಳನ್ನು ಜೋಡಿಸುವ ಸಮಸ್ಯೆಯಲ್ಲಿ ಕಂಡುಬರುವ ವ್ಯತ್ಯಾಸ ನಿರೀಕ್ಷಿತ ದಿಕ್ಕಿನಲ್ಲಿದ್ದರೂ ಸಾರ್ಥಕವೆನಿಸುವ ಮಟ್ಟಕ್ಕೆ ಬಾರದಿರುವುದಕ್ಕೆ ಕಾರಣವಿದೆ. ವಲಸೆ ಬಂದ ಹೊಸದರಲ್ಲಿ ತುಂಬ ಬೆಳೆದ ದಕ್ಷತೆ ಕ್ರಮ ಕ್ರಮವಾಗಿ ತನ್ನ ಬೆಳವಣಿಗೆಯ ಗತಿಯನ್ನು ಕಡಿಮೆ ಮಾಡಿಕೊಳ್ಳುವುದು ಸಹಜ.

ಅಂಕಿಗಳು ಬ್ರಿಟನ್ನಿನ ಪರಿಸರದಲ್ಲಿ ಎಂತಹ ಸ್ಥಾನವನ್ನು ಪಡೆದಿದೆ ಅನ್ನುವುದರ ಮನವರಿಕೆಯಾಗಿರುವುದೇ ನಾವು ಕಾಣುವ ಬೆಳವಣಿಗೆಗೆ ಕಾರಣ ಎಂದೇ ಸ್ಮರಣ ಶಕ್ತಿಯಲ್ಲಿ ಸಾರ್ಥಕವತ್ಯಾಸ. ಅದೇ ರೀತಿ, ಮೊದಲ 19 ತಿಂಗಳಲ್ಲಿ ಅಷ್ಟಾಗಿ ಬೆಳೆಯದೇ ಹೋಗಿದ್ದ ಸ್ಥಳ ಸಂಬಂಧವಾದ ದಕ್ಷತೆ ಇನ್ನಷ್ಟು ಬೆಳೆದಿರುವುದೂ ಈ 23 ತಿಂಗಳ ಅವಧಿಯಲ್ಲಿ. ಎಂದೇ, ವಸ್ತುಗಳನ್ನು ಹಾಗೂ ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆಗಳಲ್ಲಿ ಸಾರ್ಥಕ ವ್ಯತ್ಯಾಸ.

ಮೊದಲು ಬಂದವರ ಕಾರ್ಯನಿರ್ವಹಣೆ ಹಾಗೂ ಈಚೆಗೆ ಬಂದವರ ಪುನರ್ ಪರೀಕ್ಷೆ

ಈಚೆಗೆ ಬಂದವರು ಪುನರ್‌ಪರೀಕ್ಷೆಯ ಹೊತ್ತಿಗೆ ಸರಾಸರಿ 3 1/2 ವರ್ಷ

ಗಳಷ್ಟು ಕಾಲವನ್ನು ಬ್ರಿಟನ್ನಿನ ಪರಿಸರದಲ್ಲಿ ಕಳೆದಿದ್ದಾರೆ. ಮೊದಲು ಬಂದವರು ಕಳೆದಿರುವ ಕಾಲದ ಸರಾಸರಿ ಸುಮಾರು 7ವರ್ಷ.

ಈ ವ್ಯತ್ಯಾಸವನ್ನು ಗಮನದಲ್ಲಿಟ್ಟುಕೊಂಡು ಅವರ ಕಾರ್ಯನಿರ್ವಾಹಣೆಯನ್ನು ಹೋಲಿಸಿ ನೋಡಬಹುದು. ಎರಡೂ ಗುಂಪುಗಳ ಹಿನ್ನಲೆಯ ವಿವರಗಳನ್ನು ಕೆಳಗೆ ಪಟ್ಟಿಹಾಕಿದೆ.

	ಪುನರ್ ಪರೀಕ್ಷೆ ಮಾಡಿದ ಈಚೆಗೆ ಬಂದವರು	ಮೊದಲುಬಂದವರು
ಮಕ್ಕಳ ಸಂಖ್ಯೆ	23	23
ತಂದೆಯ ವಿದ್ಯಾಭ್ಯಾಸ		
ಸರಾಸರಿ	89 ವರ್ಷ 6 ತಿಂಗಳು	9 ವರ್ಷ 10 ತಿಂಗಳು
ತಂದೆಯ ಕೆಲಸ		
ರೈತರು	8	8
ಅಧ್ಯಾಪಕರು	3	3
ಕಾರಖೂನರು	4	4
ವರ್ತಕರು	3	3
ಕೈ ಗೆಲಸದವರು	4	4
ಸಾಗಣೆ ಕೆಲಸದವರು	1	1
ಬ್ರಿಟನ್ನಿನಲ್ಲಿ ಇದ್ದ ಕಾಲ		
ಸರಾಸರಿ	3 ವರ್ಷ 6 ತಿಂಗಳು	7 ವರ್ಷ 1 ತಿಂಗಳು
ಬ್ರಿಟನ್ನಿನ ಶಾಲೆಯಲ್ಲಿದ್ದ ಕಾಲ		
ಸರಾಸರಿ	3 ವರ್ಷ 6 ತಿಂಗಳು	4 ವರ್ಷ 8 ತಿಂಗಳು

ವೆಕ್ಸ್‌ಲರಿನ ಮಾಪಕ ಕೊಟ್ಟ ಬುದ್ಧಿಮಟ್ಟ

ಕೆಳಗಿನ ಅಳತೆಗಳನ್ನು ಒಂದನೇ ಅನುಬಂಧದ ಐದನೇ ಹಾಗೂ ಏಳನೇ ಕೋಷ್ಟಗಳಿಂದ ಎತ್ತಲಾಗಿದೆ.

ಅನುಕ್ರಮಿಕ ಸಂಖ್ಯೆ	ಈಚೆಗೆ ಬಂದವರು ಪುನರ್ ಪರೀಕ್ಷೆ	ಮೊದಲು ಬಂದವರು
1	107	93
2	79	90
3	89	94
4	85	99
5	87	92
6	83	85
7	113	96
8	79	118
9	104	118
10	101	92
11	106	124
12	97	104
13	93	104
14	107	96
15	99	96
16	83	79

17	100	103
18	89	76
19	99	93
20	72	90
21	101	94
22	96	99
23	106	99
ಮೊತ್ತ	2175	2236
ಸರಾಸರಿ	94.56	97.22

ಸರಾಸರಿಗಳ ನಡುವಿನ ವ್ಯತ್ಯಾಸ 2.66

+-ಬೆಲೆ-0-81

ಸರಾಸರಿಗಳ ನಡುವಿನ ವ್ಯತ್ಯಾಸ ಸಾರ್ಥಕವಲ್ಲ.

ವಿವೇಚನೆ

ಈಚಿಗೆ ಬಂದವರು ಪುನರ್ ಪರೀಕ್ಷೆಯಲ್ಲಿ ಗಳಿಸಿದ ಬುದ್ಧಿಮಟ್ಟಕ್ಕೂ ಮೊದಲು ಬಂದವರ ಬುದ್ಧಿಮಟ್ಟಕ್ಕೂ ನಡುವೆ ವ್ಯತ್ಯಾಸವಿಲ್ಲವೆನ್ನುವ ತೀರ್ಮಾನ ಮುಖ್ಯವಾದುದ್ದು. ಇಂಗ್ಲೆಂಡಿನಲ್ಲಿ ಏಳು ವರ್ಷಗಳವರೆಗೆ ಮೊದಲು ಬಂದವರು ಇದ್ದರೂ ಅವರ ಬುದ್ಧಿಮಟ್ಟ ಕೇವಲ ಮೂರುವರೆ ವರ್ಷಗಳವರೆಗಿರುವ ಈಚಿಗೆ ಬಂದವರ ಬುದ್ಧಿಮಟ್ಟಕ್ಕೆ ಸಮ.

ಅಂದರೆ, ಬ್ರಿಟನ್ನಿಗೆ ವಲಸೆ ಬಂದ ಭಾರತದ ಮಕ್ಕಳು ಹೊಸ ಪರಿಸರದಲ್ಲಿ ಕಳೆದಿರುವ ಕಾಲಾವಧಿಗೂ ಅವರ ಬುದ್ಧಿಮಟ್ಟಕ್ಕೂ ಒಂದು ರೇಕಾದಿಶೆಯ ಸಂಬಂಧವನ್ನು ಕಲ್ಪಿಸುವುದು ಸುಲಭೀಕರಣದ ಮಾತಾಯಿತು. ಅದೇ, ಈ ಮಕ್ಕಳು ಇಂಗ್ಲೆಂಡಿನ ಶಾಲೆಗಳಲ್ಲಿ ಕಳೆದಿರುವ ಕಾಲಕ್ಕೂ ಅವರ ಬುದ್ಧಿಮಟ್ಟಕ್ಕೂ ಈ ತರಹದ ಸಂಬಂಧವಿದೆಯೆನ್ನುವುದು ಸಮಂಜಸವೆನ್ನಿಸುತ್ತದೆ. ಈ ಎರಡು ಗುಂಪುಗಳ

ನಡುವಿಗಿರುವ 3 ಅಂಕಿಗಳ ವ್ಯತ್ಯಾಸವನ್ನು ಮೊದಲು ಬಂದವರು ಈಚೆಗೆ ಬಂದವರಿಗಿಂತ ಹೊಂದಿರುವ ಒಂದು ವರ್ಷದ ಹೆಚ್ಚಿನ ಅವಕಾಶಕ್ಕೆ ಆರೋಪಿಸುವುದೂ ಸಾಧ್ಯವೆನಿಸುತ್ತದೆ.

ವಲಸೆ ಬಂದ ಮಕ್ಕಳ ವಿಷಯದಲ್ಲಿ ಮುಖ್ಯವಾದ ಅಂಶ ಶಾಲೆಯಲ್ಲಿ ಅವರು ಕಳೆದಿರುವ ಕಾಲ, ಇಂಗ್ಲೆಂಡಿನಲ್ಲಿದ್ದ ಅವಧಿಯಲ್ಲ. ಅನ್ನುವುದಕ್ಕೆ ಇನ್ನಷ್ಟು ಪ್ರಮಾಣ ಈ ಸಂಶೋಧನೆಯಲ್ಲಿ ದೊರೆಕುತ್ತದೆ. ನಾಲ್ಕನೇ ಅಧ್ಯಾಯದಲ್ಲಿ ಮಂಡಿಸಿದ ನಾಲ್ಕನೇ ಅನುಮಾನವನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುವುದು ಉಚಿತ. ವಲಸೆ ಬಂದ ಮಕ್ಕಳಿಗೂ ಬ್ರಿಟನ್ನಿನಲ್ಲೇ ಹುಟ್ಟಿದ ಭಾರತದ ಮಕ್ಕಳಿಗೂ ಶಾಲೆಗಳಲ್ಲಿ ಕಳೆದಿರುವ ಕಾಲದ ದೃಷ್ಟಿಯಲ್ಲಿ ವ್ಯತ್ಯಾಸವಿಲ್ಲದಾಗ, ಅವರ ಬುದ್ಧಿಮಟ್ಟಗಳಲ್ಲೂ ವ್ಯತ್ಯಾಸವಿರಬಾರದೆನ್ನುವುದೇ ಆ ಅನುಮಾನದ ತಿರುಳು.

ಈ ವಿಷಯದಲ್ಲಿ ಸದ್ಯದ ಸಂಶೋಧನೆ ಎಂತಹ ಪ್ರಮಾಣವನ್ನು ಒದಗಿಸುತ್ತದೆ ?

ಬ್ರಿಟನ್ನಿನಲ್ಲಿ ಹುಟ್ಟಿದ ಭಾರತದ ಮಕ್ಕಳು
ಮೊದಲು ಬಂದವರು

ಕೆಳಗಿನ ವಿವರಗಳನ್ನು ಒಂದನೇ ಅನುಬಂಧದ ಐದನೆ ತಃಖ್ತೆಯಿಂದ ಎತ್ತಲಾಗಿದೆ

	ಬ್ರಿಟನ್ನಿನಲ್ಲಿ ಹುಟ್ಟಿದವರು	ಮೊದಲು ಬಂದವರು
ಮಕ್ಕಳ ಸಂಖ್ಯೆ	16	16
ಹುಡುಗರು	8	10
ಹುಡುಗಿಯರು	8	6
ಸರಾಸರಿ ವಯಸ್ಸು	9 ವರ್ಷ 5 ತಿಂಗಳು	9 ವರ್ಷ 9 ತಿಂಗಳು
ತಂದೆಯ ವಿಧ್ಯಾಭ್ಯಾಸದ ಸರಾಸರಿ	10 ವರ್ಷ 7ತಿಂಗಳು	10 ವರ್ಷ 2ತಿಂಗಳು
ತಂದೆಯ ಕೆಲಸ		
ರೈತರು	6	3
ಅಧ್ಯಾಪಕರು		1

ಕಾರಖೂನರು	2	2
ತರಪೇತುಪಡೆದ ಕೆಲಸದವರು	8	7
ವರ್ತಕರು		2
ಕೈ ಗೆಲಸದವರು		1
ಇಂಗ್ಲೆಂಡಿನ ಶಾಲೆಗಳಲ್ಲಿ ಕಳೆದಿರುವ ಕಾಲ		
ಸರಾಸರಿ	4 ವರ್ಷ 5 ತಿಂಗಳು	4 ವರ್ಷ 6 ತಿಂಗಳು

ಟಿಪ್ಪಣಿ

ಹಿಂದೆ, ಎರಡೂ ಗುಂಪುಗಳನ್ನು ಹೋಲಿಸಿದಾಗ, ಸಾಮಾನ್ಯವಾಗಿ ಸಾಧ್ಯವಾದ ಪರಿಶುದ್ಧ ಹೊಂದಾಣಿಕೆ ಇಲ್ಲಿಲ್ಲದಿರುವುದನ್ನು ನೋಡಬಹುದು. ತಂದೆಯ ವಿಧ್ಯಾಭ್ಯಾಸ ಹಾಗೂ ಕೆಲಸದ ದೃಷ್ಟಿಯಿಂದ ಸುಮಾರಾದ ಹೊಂದಾಣಿಕೆ ಮಾತ್ರ ಇದೆ; ಇಬ್ಬರು ವರ್ತಕರ ಹಾಗೂ ಒಬ್ಬ ಕೈ ಗೆಲಸದವನ ಮಕ್ಕಳು, ರೈತವರ್ಗದ ಮೂರು ಮಕ್ಕಳಿಗೆ ಸರಿಸಮವೆಂದು ಪರಿಗಣಿಸಿ ಸೇರಿಸಲಾಗಿದೆ. ತರಪೇತು ಪಡೆದ ಕೆಲಸದವನ ಮಗು ಸಿಕ್ಕದೇ ಹೋದಾಗ ಅಧ್ಯಾಪಕನ ಮಗುವನ್ನು ಸಮವೆಂದು ಕೊಂಡಿರುವುದೂ ಕಾಣಸಿಗುತ್ತದೆ. ಮುಖ್ಯವಾದ ಪರಿಮಾಣ ಮಕ್ಕಳು ಶಾಲೆಗಳಲ್ಲಿ ಕಳೆದಿರುವ ಕಾಲ ಆ ಅಂಶದಲ್ಲಿ ಹೊಂದಾಣಿಕೆಯಿರುವಾಗ, ಉಳಿದವುಗಳಲ್ಲಿ ಮಾಡಿಕೊಂಡ ಸಣ್ಣ ಪುಟ್ಟ ಬದಲಾವಣೆ ಮುಖ್ಯವಲ್ಲ.

ಬ್ರಿಟನ್ನಿನಲ್ಲಿ ಹುಟ್ಟಿದವರು - ಮೊದಲು ಬಂದವರು

	ಬ್ರಿಟನ್ನಿನಲ್ಲಿ ಹುಟ್ಟಿದವರು								ಮೊದಲು ಬಂದವರು							
ಅನುಕ್ರಮಿಕ ಸಂಖ್ಯೆ	ಸ್ಮರಣವ್ಯಾಪ್ತಿ	ಚಿತ್ರಗಳ ಪೂರೈಕೆ	ಚಿತ್ರಗಳ ಜೋಡಣೆ	ಇಟ್ಟಿಗೆಗಳ ಜೋಡಣೆ	ವಸ್ತುಗಳ ಜೋಡಣೆ	ಪಲ್ಲಟಿತ ಚಿಹ್ನೆ	ವೆಕ್ಸ್‌ಲರ್	ಅನುಕ್ರಮಿಕ ಮಾತೃಕೆ	ಸ್ಮರಣ ವ್ಯಾಪ್ತಿ	ಚಿತ್ರಗಳ ಪೂರೈಕೆ	ಚಿತ್ರಗಳ ಜೋಡಣೆ	ಇಟ್ಟಿಗೆಗಳ ಜೋಡಣೆ	ವಸ್ತುಗಳ ಜೋಡಣೆ	ಪಲ್ಲಟಿತ ಚಿಹ್ನೆ	ವೆಕ್ಸ್‌ಲರ್	ಅನುಕ್ರಮಿಕ ಮಾತೃಕೆ
1	15	9	5	12	9	10	93	103	8	9	7	11	7	9	90	100
2	13	6	6	10	7	8	82	105	9	10	9	9	9	9	94	106
3	7	12	11	11	8	7	99	105	8	10	11	14	14	14	118	107
4	8	14	7	12	7	4	92	119	7	10	7	9	10	9	93	100
5	8	10	5	12	6	6	85	77	7	11	10	12	12	7	103	113

6	10	10	7	10	10	10	96	110	13	10	8	12	10	9	99	105
7	12	14	7	12	9	11	104	110	14	10	11	10	10	11	103	124
8	14	13	8	8	10	8	96	81	7	8	6	10	10	5	85	94
9	11	9	11	10	8	11	99	78	12	14	14	8	15	10	115	
10	12	11	6	11	10	10	97	76	15	11	14	6	8	9	97	84
11	12	11	7	11	11	17	110	124	12	13	12	15	14	9	118	106
12	10	11	12	13	11	12	113	107	15	9	7	16	11	15	111	107
13	9	12	13	14	17	14	128		8	10	10	7	6	10	90	84
14	13	12	8	8	11	11	100	103	11	11	8	9	8	11	96	96
15	13	14	11	13	9	5	103	105	8	11	8	8	9	6	89	107
16	5	11	7	9	9	8	92	96	7	7	8	7	12	8	89	

ಟಿಪ್ಪಣಿಗಳು

1. ಅನುಕ್ರಮಿಕ ಮಾತೃಕೆ ಅನ್ವಯಿಸುವ ವಯಸ್ಸನ್ನು ದಾಟಿದ್ದ ಮೂರು ಮಕ್ಕಳಿಗೆ ಆ ಮಾಪಕ ಕೊಡುವ ಬುದ್ಧಿಮಟ್ಟವಿಲ್ಲ.

2. ಈ ಅಳತೆಗಳನ್ನು ಒಂದನೇ ಅನುಬಂಧದ ಐದನೇ ತಃಖ್ತೆಯಿಂದ ಎತ್ತಲಾಗಿದೆ.

3. ಸಂಖ್ಯಾ ಪರಿಶೀಲನ ಶಾಸ್ತ್ರದ ದೃಷ್ಟಿಯಿಂದ ನಡೆಸಿದ ವಿಶ್ಲೇಷಣೆ ಮುಂದಿನ ಪುಟದಲ್ಲಿದೆ.

ಬ್ರಿಟನ್ನಿನಲ್ಲಿ ಹುಟ್ಟಿದವರು—ಮೊದಲು ಬಂದವರು ಸರಾಸರಿಗಳ ನಡುವಿನ ವತ್ಯಾಸ

ಮಾಪಕಗಳು	ಬ್ರಿಟನ್ನಿನಲ್ಲಿ ಹುಟ್ಟಿದವರು	ಮೊದಲು ಬಂದವರು	ಟಿ–ಬೆಲೆ	ಸಾರ್ಥಕತೆಯ ಮಟ್ಟ
ಸ್ಮರಣವ್ಯಾಪ್ತಿ	10.75	10.06	0.56	ಸಾರ್ಥಕವಲ್ಲ
ಚಿತ್ರಗಳ ಪೂರೈಕೆ	11.19	10.25	0.96	ಸಾರ್ಥಕವಲ್ಲ
ಚಿತ್ರಗಳ ಜೋಡಣೆ	8.19	9.38	1.38	ಸಾರ್ಥಕವಲ್ಲ
ಇಟ್ಟಿಗೆಗಳ ಜೋಡಣೆ	11.00	10.19	0.94	ಸಾರ್ಥಕವಲ್ಲ
ವಸ್ತುಗಳ ಜೋಡಣೆ	9.50	10.31	0,91	ಸಾರ್ಥಕವಲ್ಲ
ಪಲ್ಲಟಿತ ಚಿಹ್ನೆ	9.50	9.44	0.06	ಸಾರ್ಥಕವಲ್ಲ

ವೆಕ್ಸ್‌ಲರ್ ಬುದ್ಧಿಮಟ್ಟ	99.31	99.38	0.02	ಸಾರ್ಥಕವಲ್ಲ
ಅನುಕ್ರಮಿಕ ಮಾತೃಕೆ ಬುದ್ಧಿಮಟ್ಟ n–13	101.92	103,77	0.38	ಸಾರ್ಥಕವಲ್ಲ

ವಿವೇಚನೆ

ಈ ಅಳತೆಗಳು ತುಂಬ ಕುತೂಹಲಕಾರಿಯಾದಂಥವು. ಬುದ್ಧಿಮಟ್ಟಗಳಲ್ಲಾಗಲೀ, ಉಪಯೋಗಿಸಿದ ಉಪಮಾಪಕಗಳಲ್ಲಾಗಲೀ, ಎರಡು ಗುಂಪುಗಳ ನಡುವೆ ಸಾರ್ಥಕ ವ್ಯತ್ಯಾಸವೆನ್ನುವುದೇ ಇಲ್ಲ. ಬ್ರಿಟನ್ನಿನಲ್ಲಿ ಹುಟ್ಟಿದ ಮಕ್ಕಳಿಗೆ ಹುಟ್ಟಿನ ಅಥವಾ ಮೊದಲ ಐದು ವರ್ಷಗಳನ್ನು ಬ್ರಿಟನ್ನಿನ ಪರಿಸರದಲ್ಲಿ ಕಳೆದ ವಾಸ್ತವತೆಯಿಂದ ಏನೊಂದೂ ಪ್ರಯೋಜನವಾದಂತಿಲ್ಲ. ಎರಡು ಗುಂಪುಗಳ ಮುನ್ನಡೆಯೋ, ಒಂದರ ಅಚ್ಚು ಇನ್ನೊಂದು ಅನ್ನುವಂತಿದೆ. ಬ್ರಿಟನ್ನಿನ ಶಾಲೆಗಳಲ್ಲಿ ಸಮಾನ ಕಾಲವನ್ನು ಕಳೆದಿರುವ ಸತ್ಯಾಂಶವೊಂದೇ ಇಂತಹ ಫಲಿತಾಂಶಕ್ಕೆ ಕಾರಣವೆನ್ನುವದನ್ನು ಸಂಶೋಧನೆ ನಿರ್ವಿವಾದವಾಗಿ ಸಾಧಿಸಿ ತೋರಿಸಿದೆ.

ಭಾರತದ ಸಾಂಸ್ಕೃತಿಕ ಹಿನ್ನೆಲೆಗಿರುವ ಪ್ರಭಾವ

ಬ್ರಿಟನ್ನಿಗೆ ಅದೇ ತಾನೆ ವಲಸೆ ಬಂದ ಮಕ್ಕಳ ದಕ್ಷತೆಗಳಲ್ಲೇ ವ್ಯತ್ಯಾಸವಿದೆಯೇ? ಹಳ್ಳಿಯಿಂದ ಬರದೇ ಪಟ್ಟಣದಿಂದ ಬಂದ ಮಕ್ಕಳಲ್ಲಿ ಕೌಶಲ ಸಂಘಟನೆ ಬೇರೆ ಜಾತಿಯದೇ ? ಹುಡುಗರಿಗಿಂತ ಹುಡುಗಿಯರು ಹಿಂದುಳಿದವರೆ ?

ವಲಸೆ ಬಂದ ಮಕ್ಕಳಿಗೆ ಸೂಕ್ತ ವಿದ್ಯಾಭ್ಯಾಸವನ್ನು ರೂಪಿಸುವಾಗ ಈ ಪ್ರಶ್ನೆಗಳು ಮುಖ್ಯವಾಗುತ್ತವೆ. ಈ ಸಂದರ್ಭದಲ್ಲಿ ನಾಲ್ಕನೇ ಅಧ್ಯಾಯದಲ್ಲಿ ಹೇಳಿದ ಐದನೆಯ ಹಾಗೂ ಆರನೆಯ ಅನುಮಾನಗಳನ್ನು ನೋಡಬಹುದು. ಹಳ್ಳಿಯಿಂದ ಬಂದ ಮಕ್ಕಳಿಗೂ ಪಟ್ಟಣದಿಂದ ಬಂದ ಮಕ್ಕಳಿಗೂ ವ್ಯತ್ಯಾಸವಿಲ್ಲವೆನ್ನುವುದೇ ಈ ಅನುಮಾನಗಳ ಹಿಂದಿದ್ದ ಆಧಾರ ಕಲ್ಪನೆ.

ಭಾರತದ ಮಕ್ಕಳು

	ಹಳ್ಳಿ	ಪಟ್ಟಣ
ಮಕ್ಕಳ ಸಂಖ್ಯೆ	19	19
ಹುಡುಗರು	13	11
ಹುಡುಗಿಯರು	6	8
ಸರಾಸರಿ ವಯಸ್ಸು	9 ವರ್ಷ 8 ತಿಂಗಳು	10 ವರ್ಷ 9 ತಿಂಗಳು
ತಂದೆಯ ವಿಧ್ಯಾಭ್ಯಾಸ ಸರಾಸರಿ	6 ವರ್ಷ 6 ತಿಂಗಳು	9 ವರ್ಷ 3 ತಿಂಗಳು
ತಂದೆಯ ಕೆಲಸ		
ರೈತರು	10	1
ಕಾರಖಾನರು	4	4
ವರ್ತಕರು	1	1
ಕೈ ಗೆಲಸದವರು	2	4
ಸಾಗಣೆ ಕೆಲಸದವರು	2	
ಪೋಲಿಸ್		9

ಟಿಪ್ಪಣಿಗಳು

1. ಕೈಗೆಲಸದವರನ್ನೂ ಸಾಗಣೆ ಕೆಲಸದವರನ್ನೂ ಪೋಲೀಸ್ ಇಲಾಖೆಯ ಕೆಳದರ್ಜೆಯ ಜನಕ್ಕೆ ಆರ್ಥಿಕ – ಸಾಮಾಜಿಕ ದೃಷ್ಟಿಯಿಂದ ಸಮರೆಂದು ಪರಿಗಣಿಸಲಾಗಿದೆ.
2. ತಂದೆಯ ವಿಧ್ಯಾಭ್ಯಾಸದ ಮಟ್ಟದ ದೃಷ್ಟಿಯಿಂದ ಪಟ್ಟಣದ ಮಕ್ಕಳು ಉತ್ತಮವಾಗಿರುವದನ್ನು ಗಮನಿಸ ಬಹುದು.

ಭಾರತದಲ್ಲಿರುವ ಮಕ್ಕಳು

ಕೆಳಗಿನ ಅಳತೆಗಳನ್ನು ಒಂದನೇ ಅನುಬಂಧದ ಒಂದನೇ ತಃಖ್ತೆಯಿಂದ ಎತ್ತಲಾಗಿದೆ.

ಅನುಕ್ರಮಿಕ ಸಂಖ್ಯೆ	ಹಳ್ಳಿಯ ಮಕ್ಕಳು		ಪಟ್ಟಣದ ಮಕ್ಕಳು	
	ವೆಕ್ಸ್‌ಲರ್ ಬುದ್ಧಿಮಟ್ಟ	ಅನುಕ್ರಮಿಕ ಮಾತೃಕೆ ಬುದ್ಧಿಮಟ್ಟ	ವೆಕ್ಸ್‌ಲರ್ ಬುದ್ಧಿಮಟ್ಟ	ಅನುಕ್ರಮಿಕ ಮಾತೃಕೆ ಬುದ್ಧಿಮಟ್ಟ
1	68	75	62	71
2	74	81	69	75
3	64		69	
4	74	73	80	
5	67	76	68	73
6	74	75	92	
7	53		71	76
8	83	102	87	90
9	58	71	79	79
10	75	84	86	
11	71	84	85	105
12	78	81	71	
13	90	94	64	67

14	79	79	83	
15	74	75	76	75
16	65	84	90	103
17	57	84	68	
18	79	86	94	
19	86		80	
ಮೊತ್ತಗಳು	1359	1304	1474	824
ಸರಾಸರಿ	71.53	81.5	77.58	82.4

ಸರಾಸರಿಗಳ ನಡುವಿನ ವ್ಯತ್ಯಾಸ – ವೆಕ್ಸ್‌ಲರ್ — 6.05
ಟಿ. ಬೆಲೆ—1.804

ಸರಾಸರಿಗಳ ನಡುವಿನ ವ್ಯತ್ಯಾಸ — ಅನುಕ್ರಮಿಕ ಮಾತೃಕೆ — D. 90
ಟಿ. ಬೆಲೆ—0.23

ನಿರ್ಣಯ – ವ್ಯತ್ಯಾಸಗಳು ಸಾರ್ಥಕವಲ್ಲ.

ಈಚೆಗೆ ಬಂದವರಲ್ಲಿ ಹಳ್ಳಿಯ ಹಾಗು ಪಟ್ಟಣದ ಮಕ್ಕಳು

	ಹಳ್ಳಿಯಿಂದ ಬಂದವರು	ಪಟ್ಟಣದಿಂದ ಬಂದವರು
ಮಕ್ಕಳ ಸಂಖ್ಯೆ	19	19
ಹುಡುಗರು	14	10
ಹುಡುಗಿಯರು	5	9
ಸರಾಸರಿ ವಯಸ್ಸು	9 ವರ್ಷ 11 ತಿಂಗಳು	9ವರ್ಷ 11ತಿಂಗಳು

ತಂದೆಯುವಿಧ್ಯಾಭ್ಯಾಸ		
ಸರಾಸರಿ	8ವರ್ಷ 7 ತಿಂಗಳು	9ವರ್ಷ 9 ತಿಂಗಳು
ತಂದೆಯು ಕೆಲಸ		
ರೈತರು	6	2
ಅಧ್ಯಾಪಕರು	2	2
ಕಾರಖಾನರು	4	4
ಸೈನಿಕರು	3	3
ವರ್ತಕರು	1	5
ಕೈಗೆಲಸದವರು	3	3
ಬ್ರಿಟನ್ನಿನ ಶಾಲೆಗಳಲ್ಲಿ		
ಇದ್ದ ಕಾಲ-ಸರಾಸರಿ	19.9 ತಿಂಗಳು	19.9 ತಿಂಗಳು

ಟಿಪ್ಪಣಿಗಳು

1. ಭಾರತದಲ್ಲಿರುವ ಮಕ್ಕಳ ಬಗೆಗೆ ಇಟ್ಟುಕೊಂಡ ಆಧಾರ ಕಲ್ಪನೆಗಳನ್ನೇ ಈ ಎರಡು ಗುಂಪುಗಳನ್ನು ಸಮವೆಂದು ಪರಿಗಣಿಸುವಾಗಲೂ ಇಟ್ಟುಕೊಂಡಿದೆ.

2. ಮೊದಲು ಬಂದವರನ್ನು ಈರೀತಿಯಲ್ಲಿ ವಿಂಗಡಿಸಿ ನೋಡುವುದು ಸಾಧ್ಯವಾಗಲಿಲ್ಲ. ಇದ್ದ 43 ಮಕ್ಕಳಲ್ಲಿ ಮೂರು ಮಕ್ಕಳು ಮಾತ್ರಾ, ಬ್ರಿಟನ್ನಿಗೆ ಬರುವ ಮೊದಲು ಭಾರತದ ಶಾಲೆಗಳಿಗೆ ಹೋಗಿದ್ದದ್ದೇ ಇದಕ್ಕೆ ಕಾರಣ.

3. ವೆಕ್ಸ್‌ಲರ್ ಮತ್ತು ಮಾತೃಕೆಗಳು ಕೊಟ್ಟ ಅಳತೆಗಳು ಮುಂದಿನ ಪುಟದಲ್ಲಿವೆ.

ಈಚೆಗೆ ಬಂದವರಲ್ಲಿ ಹಳ್ಳಿಯ ಹಾಗೂ ಪಟ್ಟಣದ ಮಕ್ಕಳು

ಕೆಳಗಿನ ಅಳತೆಗಳನ್ನು ಒಂದನೇ ಅನುಬಂಧದ ಎರಡನೇ ತಃಖ್ತೆಯಿಂದ ಎತ್ತಲಾಗಿದೆ.

ಅನು ಕ್ರಮ ಸಂಖ್ಯೆ	ಹಳ್ಳಿಯಿಂದ ಬಂದವರು		ಪಟ್ಟಣದಿಂದ ಬಂದವರು	
	ವೆಕ್ಸಲರ್ ಬುದ್ಧಿಮಟ್ಟ	ಅನುಕ್ರಮ ಮಾತೃಕೆ ಬುದ್ಧಿಮಟ್ಟ	ವೆಕ್ಸಲರ್ ಬುದ್ಧಿಮಟ್ಟ	ಅನುಕ್ರಮಿಕ ಮಾತೃಕೆ ಬುದ್ಧಿಮಟ್ಟ
1	99	87	74	90
2	93	112	76	
3	71	73	89	81
4	87	72	79	
5	97	95	94	93
6	91	86	90	100
7	79	76	92	
8	96	88	82	
9	99	96	86	86
10	99	96	69	87
11	87	73	78	75
12	99	102	92	76
13	79	73	76	

14	80	100	67	75
15	82	75	83	76
16	83	75	79	73
17	83		92	
18	75	76	85	75
19	89	100	89	81
ಒಟ್ಟು	1668	1555	1572	1068
ಸರಾಸರಿ	28.79	86.39	82.74	82.15

ವೆಕ್ಸ್ಲರಿನ ಬುದ್ಧಿಮಟ್ಟಗಳ ಸರಾಸರಿಗಳ ನಡುವಿನ ವ್ಯತ್ಯಾಸ = 5.05
ಟಿ—ಬೆಲೆ = 1.78

ಅನುಕ್ರಮಿಂಕ ಮಾತೃಕೆಗಳ ಬುದ್ಧಿಮಟ್ಟಗಳಲ್ಲಿನ ವ್ಯತ್ಯಾಸ — 4.24
ಟಿ — ಬೆಲೆ 1.05

ನಿರ್ಣಯ : ಎರಡು ವ್ಯತ್ಯಾಸಗಳೂ ಸಾರ್ಥಕವಲ್ಲ

ವಿವೇಚನೆ

ಭಾರತದ ಮಕ್ಕಳು, ಹಳ್ಳಿಯಿಂದ ಬರಲಿ, ಪಟ್ಟಣದಿಂದ ಬರಲಿ, ಅವರಲ್ಲಿ ವ್ಯತ್ಯಾಸಲಿಲ್ಲ. ಶಾಬ್ದಿಕವಲ್ಲದ ದಕ್ಷತೆಗಳ ಅಭಾವ ಒಂದೇ ಮಟ್ಟದ್ದು. ಬ್ರಿಟನ್ನಿನ ಶಾಲೆಗಳಿಗೆ ಸೇರಿದಾಗ ಅವರಲ್ಲಿ ಒಂದೇ ಮಟ್ಟದ ಅಭಿವೃದ್ಧಿಯನ್ನು ನಿರೀಕ್ಷಿಸಬಹುದು.

ಇದೇ ಬಗೆಯ ವಿಶ್ಲೇಷಣೆಯನ್ನು ಹುಡುಗರ ಹುಡುಗಿಯರ ಸಂಬಂಧದಲ್ಲಿ ನಡೆಸಬಹುದು. ನಾವು ಹೇಳಿದ ಅನುಮಾನಗಳಲ್ಲಿ ಏಳನೆಯದು ಹಾಗು ಎಂಟನೆಯದೂ ಅವರ ನಡುವೆ ಇರಬಹುದಾದ ವ್ಯತ್ಯಾಸದ ಬಗೆಗೆ.

ಭಾರತದಲ್ಲಿರುವ ಹುಡುಗ-ಹುಡುಗಿಯರು

	ಹುಡುಗಿಯರು	ಹುಡುಗರು
ಮಕ್ಕಳ ಸಂಖ್ಯೆ	23	23
ಸರಾಸರಿ ವಯಸ್ಸು	10 ವರ್ಷ 5 ತಿಂಗಳು	10 ವರ್ಷ 0 ತಿಂಗಳು
ತಂದೆಯು ವಿಧ್ಯಾಭ್ಯಾಸ ಸರಾಸರಿ	9 ವರ್ಷ 5 ತಿಂಗಳು	9 ವರ್ಷ 0 ತಿಂಗಳು
ತಂದೆಯು ಕೆಲಸ		
ರೈತರು	5	5
ಅಧ್ಯಾಪಕರು	3	3
ಕಾರಖೂನರು	5	5
ಸೈನಿಕರು	4	4
ವರ್ತಕರು	2	2
ಕೈಗೆಲಸದವರು	4	4

ಬುದ್ಧಿ ಮಾಪಕಗಳಲ್ಲಿ ಈ ಎರಡು ಗುಂಪು ಮಕ್ಕಳು ಪಡೆದ ಫಲಿತಾಂಶ ಮುಂದೆ ಕಾಣಿಸಿರುವ ತಃಖ್ತೆಯಲ್ಲಿದೆ.

ಭಾರತದಲ್ಲಿರುವ ಹುಡುಗ-ಹುಡುಗಿಯರು

ಕೆಳಗಿನ ಅಳತೆಗಳನ್ನು ಒಂದನೇ ಅನುಬಂಧದ ಒಂದನೇ ತಃಖ್ತೆಯಿಂದ ಎತ್ತಲಾಗಿದೆ.

ಅನುಕ್ರಮಿಕ ಸಂಖ್ಯೆ	ಹುಡುಗಿಯರು		ಹುಡುಗರು	
	ವೆಕ್ಸ್‌ಲರ್ ಬುದ್ಧಿಮಟ್ಟ	ಅನುಕ್ರಮಿಕ ಮಾತೃಕೆ ಬುದ್ಧಿಮಟ್ಟ	ವೆಕ್ಸ್‌ಲರ್ ಬುದ್ಧಿಮಟ್ಟ	ಅನುಕ್ರಮಿಕ ಮಾತೃಕೆ ಬುದ್ಧಿಮಟ್ಟ
1	68	75	74	75
2	74	81	53	
3	64		83	102
4	74	73	62	71
5	67	76	75	84
6	75		87	76
7	87		76	87
8	74		72	79
9	71	84	78	81
10	69		90	94
11	72	73	75	90
12	78	75	79	79
13	68	73	92	90
14	92		85	105

15	71	76	71	
16	87	90	64	77
17	79	79	83	
18	68		80	
19	68	71	83	76
20	78	73	94	
21	76	75	57	84
22	90	103	79	86
20	68		76	
ಒಟ್ಟು	1718	1177	1768	1436
ಸರಾಸರಿ	74.7	78.47	76.82	84.47

ವ್ಯತ್ಯಾಸ — ವೆಕ್ಸ್ಲರ್ = 2.12
ಟಿ - ಬೆಲೆ = 0.76
ವ್ಯತ್ಯಾಸ — ಅನುಕ್ರಮಿಕ ಮಾತೃಕೆ = 6.00
ಟಿ - ಬೆಲೆ = 1.87

ನಿರ್ಣಯ - ಎರಡು ವ್ಯತ್ಯಾಸಗಳೂ ಸಾರ್ಥಕವಲ್ಲ.

ಈಚೆಗೆ ಬಂದವರಲ್ಲಿ ಹುಡುಗ ಹುಡುಗಿಯರು

	ಹುಡುಗಿಯರು	ಹುಡುಗರು
ಮಕ್ಕಳ ಸಂಖ್ಯೆ	16	16
ಸರಾಸರಿ ವಯಸ್ಸು	9 ವರ್ಷ 1 ತಿಂಗಳು	9 ವರ್ಷ 10 ತಿಂಗಳು

ತಂದೆಯ ವಿಧ್ಯಾಭ್ಯಾಸ		
ಸರಾಸರಿ	9 ವರ್ಷ 5 ತಿಂಗಳು	9 ವರ್ಷ 0 ತಿಂಗಳು
ತಂದೆಯ ಕೆಲಸ		
ರೈತರು	5	5
ಅಧ್ಯಾಪಕರು	2	2
ಕಾರಖಾನರು	3	3
ಸೈನಿಕರು	3	3
ವರ್ತಕರು	1	1
ಕೈಗೆಲಸದವರು	2	1
ಸಾಗಾಣಿ ಕೆಲಸದವರು		1
ಬ್ರಿಟನ್ನಿನಲ್ಲಿ ಇದ್ದ ಕಾಲ	18 ತಿಂಗಳು	20 ತಿಂಗಳು

ಕೆಳಗಿನ ಅಳತೆಗಳನ್ನು ಒಂದನೇ ಅನುಬಂಧದ ಎರಡನೇ ತಃಖ್ತೆಯಿಂದ ಎತ್ತಲಾಗಿದೆ

ಅನುಕ್ರಮ ಸಂಖ್ಯೆ	ಹುಡುಗಿಯರು		ಹುಡುಗರು	
	ವೆಕ್ಸ್‌ಲರ್ ಬುದ್ಧಿಪಟ್ಟ	ಅನುಕ್ರಮಿಕ ಮಾತೃಕೆ	ವೆಕ್ಸ್‌ಲರ್ ಬುದ್ಧಿವಂಟ್ಟ	ಅನುಕ್ರಮಿಕ ಮಾತೃಕೆ
1	99	87	62	
2	74	90	97	95
3	67	79	91	86
4	71	73	85	78
5	87	72	79	76
6	94	73	89	81

7	89	81	99	96
8	99	96	87	73
9	79		99	102
10	94	93	94	100
11	80	100	69	87
12	82		82	75
13	86	86	83	75
14	78	75	92	76
15	79	73	85	75
16	92		93	112
ಒಟ್ಟು	1350	1078	1382	1287
ಸರಾಸರಿ	84.37	82.92	86.37	85.80

ವ್ಯತ್ಯಾಸ—ವೆಕ್ಸ್‌ಲ್ = 2·00 ಟಿ-ಬೆಲೆ 0.57

ವ್ಯತ್ಯಾಸ-ಅನುಕ್ರಮ ಮಾತೃಕೆ =2.88 ಟಿ–ಬೆಲೆ 0.66

ನಿರ್ಣಯ–ವ್ಯತ್ಯಾಸಗಳು ಸಾರ್ಥಕವಲ್ಲ

ವಿವೇಚನೆ

ಭಾರತದಲ್ಲಿರುವ ಹುಡುಗ ಹುಡುಗಿಯರ ನಡುವೆಯಾಗಲೀ ಈಚೆಗೆ ಬಂದ ಹುಡುಗ ಹುಡುಗಿಯರ ನಡುವೆಯಾಗಲೀ ವ್ಯತ್ಯಾಸವಿಲ್ಲ. ವಲಸೆ ಬಂದ ಹೊಸದರಲ್ಲಿ ಹುಡುಗರ ಪರಿಸರ ಹುಡುಗಿಯರ ಪರಿಸರದ ಹಾಗೆ ಸಂಕುಚಿತವಾಗಿರುತ್ತದೆ ಅನ್ನುವ ವಾದಕ್ಕೆ ಇಲ್ಲಿ ಪ್ರಮಾಣ ಸಿಕ್ಕಿದೆ.

ಕ್ರಮಕ್ರಮವಾಗಿ, ಹುಡುಗರ ಪರಿಸರ ಹಿಗ್ಗುತ್ತದೆಯಾದರೂ ಹುಡುಗಿಯರ ಪರಿಸರ ಬದಲಾಗದೇ ಅವರ ನಡುವೆ ವ್ಯತ್ಯಾಸ ಕಾಣಬರುತ್ತದೆ ಅನ್ನುವ ತರ್ಕವೆ ನಮಗೆ ಒಂಬತ್ತನೇ ಅನುಮಾನವನ್ನು ಕೊಟ್ಟಿದ್ದು. ಆ ಬಗೆಗೆ ಸಂಶೋಧನೆ ಏನು ಪ್ರಮಾಣವನ್ನೊದಗಿಸಿದೆ ಅನ್ನುವದನ್ನು ನೋಡಬಹುದು.

ಮೊದಲು ಬಂದ ಹುಡುಗ ಹುಡುಗಿಯರು

ಕೆಳಗಿನ ವಿವರಗಳನ್ನು ಒಂದನೇ ಅನುಬಂಧದ ಆರನೇ ತಃಖ್ತೆಯಿಂದ ಎತ್ತಲಾಗಿದೆ,

	ಹುಡುಗಿಯರು	ಹುಡುಗರು
ಮಕ್ಕಳ ಸಂಖ್ಯೆ	17	17
ಸರಾಸರಿ ವಯಸ್ಸು	10ವರ್ಷ 0 ತಿಂಗಳು	10 ವರ್ಷ 0 ತಿಂಗಳು
ತಂದೆಯ ವಿದ್ಯಾಭ್ಯಾಸದ ಸರಾಸರಿ	10ವರ್ಷ 9ತಿಂಗಳು	11ವರ್ಷ 9ತಿಂಗಳು
ತಂದೆಯ ಕೆಲಸ		
ರೈತರು	3	3
ಅಧ್ಯಾಪಕರು	3	2
ತರಪೇತುಪಡೆದ-ಕೆಲಸದವರು	4	5
ಕಾರಕೂನರು	5	2
ಕೈಗೆಲಸದವರು	1	1
ವರ್ತಕರು	1	1
ಬ್ರಿಟನ್ನಿನ ಶಾಲೆಗಳಲ್ಲಿ ಇದ್ದ ಅವಧಿ	4 ವರ್ಷ 9 ತಿಂಗಳು	4 ವರ್ಷ 11 ತಿಂಗಳು

ಟಿಪ್ಪಣಿಗಳು

1. ಅಧ್ಯಾಪಕರು, ಕಾರಕೂನರು ಹಾಗೂ ತರಪೇತು ಪಡೆದ ಕೆಲಸದವರು ಆರ್ಥಿಕ - ಸಾಮಾಜಿಕ ದೃಷ್ಟಿಯಿಂದ ಸಮಾನವೆಂದು ಪರಿಗಣಿಸಲಾಗಿದೆ.

2. ಶಾಲೆಗೇ ಹೋಗದ ಇಬ್ಬರು ರೈತರ ಮಕ್ಕಳನ್ನು ಸೇರಿಸಿಲ್ಲ. ಅವರನ್ನು ಸೇರಿಸುವದರಿಂದ ತಂದೆಯ ವಿದ್ಯಾಭ್ಯಾಸದ ಮಟ್ಟ ತುಂಬ ವ್ಯತ್ಯಾಸವಾಗುತ್ತಿತ್ತು.

ಮೊದಲು ಬಂದ ಹುಡುಗ ಹುಡುಗಿಯರು

ಕೆಳಗಿನ ಅಳತೆಗಳನ್ನು ಒಂದನೇ ಅನುಬಂಧದ ಐದನೇ ತಃಖ್ತೆಯಿಂದ ಎತ್ತಲಾಗಿದೆ.

ಅನುಕ್ರಮಿಕ ಸಂಖ್ಯೆ	ಹುಡುಗಿಯರು		ಹುಡುಗರು	
	ವೆಕ್ಸಲರ್ ಬುದ್ಧಿಮಟ್ಟ	ಅನುಕ್ರಮಿಕ ಮಾತೃಕೆ ಬುದ್ಧಿಮಟ್ಟ	ವೆಕ್ಸಲರ್ ಬುದ್ಧಿಮಟ್ಟ	ಅನುಕ್ರಮಿಕ ಮಾತೃಕೆ ಬುದ್ಧಿಮಟ್ಟ
1	93	103	85	77
2	90	100	96	110
3	94	106	116	107
4	118	116	124	124
5	92	96	108	103
6	89	107	85	94
7	90	84	96	96
8	104	110	96	107
9	96	81	118	106
10	104	86	111	107
11	92	102	128	
12	99	78	110	124
13	89		115	

14	97	76	113	107
15	103	124	97	84
16	79		93	100
17	78		90	95
ಒಟ್ಟು	1607	1369	1783	1541
ಸರಾಸರಿ	94.53	97.77	104.88	102.73

ಸರಾಸರಿ ವ್ಯತ್ಯಾಸ-ವೆಕ್ಸ್‌ಲರ್= 104.35

ಟಿ-ಬೆಲೆ =3.401

ಸರಾಸರಿಗಳ ವತ್ಯಾಸ - ಅನುಕ್ರಮಿಕ ಮಾತೃಕೆ= 4.96

ಟಿ-ಬೆಲೆ =0.972

ನಿರ್ಣಯ : ವೆಕ್ಸ್‌ಲರಿನ ಬುದ್ಧಿಮಟ್ಟದಲ್ಲಿ ಸಾರ್ಥಕ ವ್ಯತ್ಯಾಸವಿದೆ;
ಅನುಕ್ರಮಿಕ ಮಾತೃಕೆಯಲ್ಲಿ ವ್ಯತ್ಯಾಸವಿಲ್ಲ.

ವಿವೇಚನೆ

ಈ ಫಲಿತಾಂಶ ಮುಖ್ಯವಾದೊಂದು ಅಂಶದ ಕಡೆಗೆ ನಮ್ಮ ಗಮನವನ್ನು ಎಳೆಯುವುದು ಅನಿವಾರ್ಯ. ಭಾರತದ ಸಾಂಸ್ಕೃತಿಕ ಹಿನ್ನೆಲೆಯ ಪ್ರಭಾವ, ಬ್ರಿಟನ್ನಿನಲ್ಲಿ ಸುಮಾರು ವರ್ಷಗಳನ್ನು ಕಳೆದಿರುವ ಸಂಸಾರಗಳ ಮೇಲೂ, ಹೇಗೆ ಒಂದು ಕೃತುಶಕ್ತಿಯಾಗಿ ಉಳಿದಿದೆ ಅನ್ನುವುದು ಇದರಿಂದ ಮನದಟ್ಟಾಗುತ್ತದೆ.

ಈ ಸಂದರ್ಭದಲ್ಲಿ, ಅರ್ಥಪೂರ್ಣವಾದ ಬದಲಾವಣೆಗಳು ವಲಸೆ ಬಂದ ಜನದ ಬದುಕಲ್ಲಿ ಕಾಣುವುದಕ್ಕೆ ಒಂದೆರಡು ತಲೆಮಾರುಗಳು ಬೇಕು ಎಂದು ಹೇಳಿದ ಮಾತನ್ನು ನಾವು ನೆನಪು ಮಾಡಿಕೊಳ್ಳುವುದು ಉಚಿತ. ಅನುಕ್ರಮಿಕ ಮಾತೃಕೆಯಲ್ಲಿ ವ್ಯತ್ಯಾಸ ಕಾಣದೇ ಹೋದದ್ದಕ್ಕೆ ನಾವು ಹೆಚ್ಚಿನ ಅರ್ಥ ಹಚ್ಚಬೇಕಾದ ಅಗತ್ಯವಿಲ್ಲ. ಆ ಮಾಪಕದ ಬಗೆಗೆ ಹಿಂದೆ ಸೂಚಿಸಿರುವ ಸಂದೇಹಗಳೇ ಸಾಕು.

ವಲಸೆ ಬಂದ ಹೆಣ್ಣುಮಕ್ಕಳು ಗಂಡುಮಕ್ಕಳ ಮಟ್ಟದಲ್ಲೇ ನಿಂತು ಕಲಿಯುವ ಕೆಲಸ ಸುರುಮಾಡಿದರೂ ಕ್ರಮಕ್ರಮವಾಗಿ ಗಂಡುಮಕ್ಕಳು ಮುಂದೆ ಹೋಗುವುದೂ, ಹೆಣ್ಣು ಮಕ್ಕಳು ಹಿಂದುಳಿಯುವುದೂ ಅವರ ವಿದ್ಯಾಭ್ಯಾಸದ ದೃಷ್ಟಿಯಿಂದ ಮುಖ್ಯವಾದ ಸಂಗತಿ.

ಅಧ್ಯಾಯ ಏಳು

ಇಂಗ್ಲಿಷ್ ಮಕ್ಕಳ ಜೊತೆಗೆ ಹೋಲಿಕೆ

ನಾಲ್ಕನೇ ಅಧ್ಯಾಯದಲ್ಲಿ ಪ್ರತಿಪಾದಿಸಿದ ಹತ್ತನೇ ಅನುಮಾನವನ್ನು ನಮ್ಮ ಕಣ್ಣ ಮುಂದಿಟ್ಟುಕೊಳ್ಳುವುದು ಅಗತ್ಯ :

ಬ್ರಿಟನ್ನಿನ ಶಾಲೆಗಳಲ್ಲಿ ಸಮಾನ ಕಾಲವನ್ನು ಕಳೆದಿರುವ ಭಾರತದ ಮಕ್ಕಳು ಹಾಗೂ ರೂಢಿಪ್ರಮಾಣಕ್ಕೆಂದು ಆರಿಸಿಕೊಂಡ ಇಂಗ್ಲಿಷ್ ಮಕ್ಕಳ ಬುದ್ಧಿಮಟ್ಟಗಳ ನಡುವೆ ಸಾರ್ಥಕವಾದ ವ್ಯತ್ಯಾಸವಿರುವುದಿಲ್ಲ.

ಸದ್ಯದ ಸಂಶೋಧನೆ ಒದಗಿಸಿರುವ ಪ್ರಮಾಣವನ್ನು ಮೇಲಿನ ಅನುಮಾನದ ದೃಷ್ಟಿಯಿಂದ ಪರೀಕ್ಷಿಸಬಹುದು.

ಮೊದಲು ಬಂದವರು ಇಂಗ್ಲಿಷ್ ಮಕ್ಕಳು

ಕೆಳಗಿನ ವಿವರಗಳನ್ನು ಒಂದನೇ ಅನುಬಂಧದ ಐದನೇ ತಃಖ್ತೆಯಿಂದ ಎತ್ತಲಾಗಿದೆ.

	ಮೊದಲು ಬಂದವರು	ಇಂಗ್ಲಿಷ್ ಮಕ್ಕಳು
ಮಕ್ಕಳಸಂಖ್ಯೆ	43	43
ಹುಡುಗರು	24	24
ಹುಡುಗಿಯರು	19	19
ಸರಾಸರಿ ವಯಸ್ಸು	10 ವರ್ಷ 1 ತಿಂಗಳು	10 ವರ್ಷ 7 ತಿಂಗಳು
ತಂದೆಯ ವಿದ್ಯಾಭ್ಯಾಸ ಸರಾಸರಿ	11 ವರ್ಷ 0 ತಿಂಗಳು	10 ವರ್ಷ 7 ತಿಂಗಳು
ತಂದೆಯ ಕೆಲಸ		
ರೈತರು	9	9
ಅಧ್ಯಾಪಕರು	5	5
ಕಾರಖೂನರು	7	7
ಕೈ ಗೆಲಸದವರು	5	5
ತರಪೇತು ಪಡೆದ ಕೆಲಸದವರು	14	14
ವರ್ತಕರು	3	3
ಒಡಹುಟ್ಟಿದವರ ಸಂಖ್ಯೆ ಸರಾಸರಿ	3.84	3.20
ಬ್ರಿಟನ್ನಿನ ಶಾಲೆಗಳಲ್ಲಿ ಕಳೆದ ಕಾಲ	4 ವರ್ಷ 7 ತಿಂಗಳು	5 ವರ್ಷ 7 ತಿಂಗಳು

ಮೊದಲು ಬಂದವರು - ಇಂಗ್ಲಿಷ್ ಮಕ್ಕಳು

ಮಾಪಕಗಳು		ಮೊದಲು ಬಂದವರು	ಇಂಗ್ಲಿಷ್ ಮಕ್ಕಳು
ಸ್ಮರಣವ್ಯಾಪ್ತಿಯ ಸಮಸ್ಯೆ			
	ವ್ಯಾಪ್ತಿ	5-16	5-16
	ಸರಾಸರಿ	10.32	10.63
	ವಿಚಲನೆ	2.94	2.62
ಚಿತ್ರಗಳನ್ನು ಪೂರೈಸುವ ಸಮಸ್ಯೆ			
	ವ್ಯಾಪ್ತಿ	6-18	4-18
	ಸರಾಸರಿ	10.81	10.67
	ವಿಚಲನೆ	2.46	2.97
ಚಿತ್ರಗಳನ್ನು ಜೋಡಿಸುವ ಸಮಸ್ಯೆ			
	ವ್ಯಾಪ್ತಿ	5-14	5-17
	ಸರಾಸರಿ	8.88	10.30
	ವಿಚಲನೆ	2.35	2.51
ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆ			
	ವ್ಯಾಪ್ತಿ	5-16	5-19
	ಸರಾಸರಿ	10.42	11.93
	ವಿಚಲನೆ	2.49	2.51
ವಸ್ತುಗಳನ್ನು ಜೋಡಿಸುವ ಸಮಸ್ಯೆ			
	ವ್ಯಾಪ್ತಿ	6-17	4-18

ಮಾಪಕಗಳು		ಮೊದಲು ಬಂದವರು	ಇಂಗ್ಲೀಷ್ ಮಕ್ಕಳು
	ಸರಾಸರಿ	9.74	12.04
	ವಿಚಲನೆ	2.47	3.34
ಪಲ್ಲಟಿತ ಚಿಹ್ನೆಗಳ ಸಮಸ್ಯೆ			
	ವ್ಯಾಪ್ತಿ	4-17	7-14
	ಸರಾಸರಿ	9.37	10,53
	ವಿಚಲನೆ	2.74	1.69
ವೆಕ್ಸ್‌ಲರ್–ಬುದ್ಧಿಮಟ್ಟ			
	ವ್ಯಾಪ್ತಿ	78-128	86-131
	ಸರಾಸರಿ	99.05	107.88
n= 43	ವಿಚಲನೆ	11.52	9.82
ಅನುಕ್ರಮಿಕ ಮಾತೃಕೆ ಬುದ್ಧಿಮಟ್ಟ			
	ವ್ಯಾಪ್ತಿ	77.124	90.145
	ಸರಾಸರಿ	104.42	109.74
n= 19	ವಿಚಲನೆ	9.85	15.39

ಮಕ್ಕಳ ಬುದ್ಧಿಮಟ್ಟ - ವೆಕ್ಸ್‌ಲರಿನ ಮಾಪಕ

ವರ್ಗಗಳು	ಮೊದಲು ಬಂದವರು		ಇಂಗ್ಲಿಷ್ ಮಕ್ಕಳು	
	ಆವರ್ತನ ಸಂಖ್ಯೆ	ಶೇ	ಆವರ್ತನ ಸಂಖ್ಯೆ	ಶೇ
130-134			1	2.3
125-129	1	2.3	2	4.7
120-124	1	2.3	5	11.6


ವರ್ಗಗಳು	ಮೊದಲು ಬಂದವರು		ಇಂಗ್ಲಿಷ್ ಮಕ್ಕಳು	
	ಆವರ್ತನ ಸಂಖ್ಯೆ	ಶೇ	ಆವರ್ತನ ಸಂಖ್ಯೆ	ಶೇ
115-119	4	9.4	1	2.3
110-114	3	7.0	5	11.6
105-119	1	2.3	13	30.3
100-104	6	13.9	10	23.2
95-99	9	21.0	4	9.3
90-94	11	25.6	1	2.3
85-89	4	9.3	1	2.3
80-84	1	2.3	1	
75-79	2	4.7		
70-74				
ಒಟ್ಟು ಮಕ್ಕಳು	43		43	

ಮಕ್ಕಳ ಬುದ್ಧಿಮಟ್ಟ - ಅನುಕ್ರಮಿಕ ಮಾತೃಕೆ

ವರ್ಗಗಳು	ಮೊದಲು ಬಂದವರು		ಇಂಗ್ಲಿಷ್ ಮಕ್ಕಳು	
	ಆವರ್ತನ ಸಂಖ್ಯೆ	ಶೇ	ಆವರ್ತನ ಸಂಖ್ಯೆ	ಶೇ
145-149			1	5.3
140-144				
135-139				
130-134			2	10.5

ವರ್ಗಗಳು	ಮೊದಲು ಬಂದವರು		ಇಂಗ್ಲೀಷ್ ಮಕ್ಕಳು	
	ಆವರ್ತನ ಸಂಖ್ಯೆ	ಶೇ	ಆವರ್ತನ ಸಂಖ್ಯೆ	ಶೇ
125-129			2	10.5
120-124	1	5.3		
115-119	1	5.3		
110-114	2	10.5	3	15.8
105-109	8	42.0	2	10.5
100-104	4	21.0	5	26.3
95-99	1	5.3	2	10.5
90-94	1	5.3	2	10.5
85-89				
80-84				
75-79	1	5.3		
ಒಟ್ಟು ಮಕ್ಕಳ ಸಂಖ್ಯೆ		19	19	

ವೆಕ್ಸ್ಲರ್ ಬುದ್ಧಿಮಟ್ಟ



ಸರಾಸರಿಗಳ ನಡುವಿನ ವ್ಯತ್ಯಾಸ

ಮಾಪಕಗಳು	ಮೊದಲು ಬಂದವರು	ಇಂಗ್ಲಿಷ್ ಮಕ್ಕಳು	ಟಿ-ಬೆಲೆ	ಸಾರ್ಥಕತೆಯ ಮಟ್ಟ
ಸ್ಮರಣ ವ್ಯಾಪ್ತಿಯ ಸಮಸ್ಯೆ	10.32	10.63	0.51	ಸಾರ್ಥಕವಲ್ಲ
ಚಿತ್ರಗಳನ್ನು ಪೂರೈಸುವ ಸಮಸ್ಯೆ	10.81	10.67	0.24	ಸಾರ್ಥಕವಲ್ಲ
ಚಿತ್ರಗಳನ್ನು ಜೋಡಿಸುವ ಸಮಸ್ಯೆ	8.88	10.30	2.577	0.02
ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆ	10.42	11.93	2.77	0.01
ವಸ್ತುಗಳನ್ನು ಜೋಡಿಸುವ ಸಮಸ್ಯೆ	9.74	12.04	3.304	0.01
ಪಲ್ಲಟಿತ ಚಿಹ್ನೆಗಳ ಸಮಸ್ಯೆ	9.37	10.53	2.353	0.02
ವೆಕ್ಸ್‌ಲರ್–ಬುದ್ಧಿಮಟ್ಟ	99.05	107.88	2.207	0.05
ಅನುಕ್ರಮಿಕ ಮಾತೃಕೆ–ಬುದ್ಧಿಮಟ್ಟ	104.42	109.74	1,257	ಸಾರ್ಥಕವಲ್ಲ

ವಿವೇಚನೆ

ಹೆಚ್ಚು ಕಡಿಮೆ, ಪ್ರತಿಯೊಂದು ಮಾಪಕದಲ್ಲೂ, ಇಂಗ್ಲಿಷ್ ಮಕ್ಕಳ ಸರಾಸರಿ ಭಾರತದ ಮಕ್ಕಳ ಸರಾಸರಿಗಿಂತ ಹೆಚ್ಚಾಗಿರುವುದೇ ಮೊದಲು ಕಣ್ಣಿಗೆ ಬೀಳುವ ವಿಷಯ. ನಾವು ಈ ಸಂಶೋಧನೆಗೆ ಅಳತೆಗೋಲಾಗಿ ಇಟ್ಟುಕೊಂಡ 0. 01 ಮಟ್ಟದ ಸಾರ್ಥಕತೆ ಎರಡು ಮಾಪಕಗಳಲ್ಲಿ ಮಾತ್ರ ಕಂಡುಬಂದರೂ ಇನ್ನು ಮೂರರಲ್ಲಿ ಸುಮಾರಾಗಿ ಸಾರ್ಥಕವಾದ ವ್ಯತ್ಯಾಸವಿರುವ ಅಂಶವನ್ನು ಅಲ್ಲಗಳೆಯುವುದು ಧರ್ಮವಲ್ಲ.

ಮೊದಲ ನೋಟಕ್ಕೆ ನಮ್ಮ ಅನುಮಾನ ಯಥಾರ್ಥವಾದದ್ದಲ್ಲ ಅನ್ನಿಸಬಹುದು ಅಥವಾ ಅದಕ್ಕೆ ಸಮಗ್ರ ಸಮರ್ಥನೆ ದೊರಕಿಲ್ಲವೆನ್ನಿಸಬಹುದು. ಇನ್ನಷ್ಟು ಯೋಚನೆ ಮಾಡಿದಾಗ ಹೊಳೆಯುವ ವಿವರಣೆ ಬೇರೆ. 0. 01 ಮಟ್ಟದ ಸಾರ್ಥಕತೆಯಿರವುದು

ಇಟ್ಟಿಗೆಗಳನ್ನು ಹಾಗೂ ವಸ್ತುಗಳನ್ನು ಜೋಡಿಸುವ ಸಮಸ್ಯೆಗಳಲ್ಲಿ ಈ ಎರಡರ ತಳಕ್ಕಿರುವ ದಕ್ಷತೆ ವಿಶಿಷ್ಟವಾದದ್ದೆನ್ನುವದನ್ನು ಮೊದಲೇ ಹೇಳಿದೆ. ಬಹುಶಃ ಭಾರತದ ಮಕ್ಕಳಲ್ಲಿ ಅತಿ ಮೊಟಕಾಗಿರುವ ಈ ದಕ್ಷತೆ ಬೆಳೆಯುವದಕ್ಕೆ ಬ್ರಿಟನ್ನಿನ ಶಾಲೆಗೆ ಹೋಗಿ ಬಂದರಷ್ಟೇ ಸಾಲದೇನೋ. ಆ ದಕ್ಷತೆಗಳನ್ನೇ ಗುರಿಯಾಗಿಟ್ಟುಕೊಂಡ ಒಂದು ವಿಶಿಷ್ಟ ಪ್ರವಚನ ಕ್ರಮ ಅಗತ್ಯವೇನೋ.

ವೆಕ್ಸ್‌ಲರಿನ ಬುದ್ಧಿಮಟ್ಟಗಳಲ್ಲೂ ಸುಮಾರಾದೊಂದು ವ್ಯತ್ಯಾಸವಿರುವದಕ್ಕೆ ಕಾರಣ ನಮ್ಮ ಸಂಶೋಧನೆಗೆ ಅನುಸರಿಸಿದ ಒಂದು ಕ್ರಮ. ರೂಢಿ ಪ್ರಮಾಣಕ್ಕೆಂದು ತೆಗೆದುಕೊಂಡ 66 ಇಂಗ್ಲಿಷ್ ಮಕ್ಕಳಲ್ಲಿ ಹೋಲಿಕೆಗೆ ಆರಿಸಿಕೊಂಡಿರುವುದು 43 ಮಕ್ಕಳನ್ನು, ಭಾರತದ ಒಂದು ಮಗುವಿಗೆ ಹಿನ್ನಲೆಯ ದೃಷ್ಟಿಯಿಂದ ಸರಿಸಮನೆನಿಸಿದ ಒಂದುಕ್ಕಿಂತ ಹೆಚ್ಚು ಮಕ್ಕಳು ಸಿಕ್ಕಾಗ ಆರಿಸಿಕೊಂಡಿದ್ದು ಹೆಚ್ಚಿನಬುದ್ಧಿಮಟ್ಟದ್ದನ್ನು. ಈ ಕ್ರಮದಿಂದ ಅಳತೆಗಳ ಮೇಲೆ ಆಗಿರುವ ಪರಿಣಾಮ ಸ್ಪಷ್ಟ. ಮಕ್ಕಳ ಬುದ್ಧಿಮಟ್ಟಗಳ ವ್ಯಾಪ್ತಿಯ ಕಡೆಗೆ ಗಮನ ಕೊಟ್ಟಾಗ ಭಾರತದ ಮಕ್ಕಳಲ್ಲಿ ಕಾಣುವ ವ್ಯಾಪ್ತಿಗಿಂತ ಹೆಚ್ಚಿನ ವ್ಯಾಪ್ತಿ ಇಂಗ್ಲಿಷ್ ಮಕ್ಕಳಲ್ಲಿ ಕಾಣುವುದನ್ನು ಗುರುತಿಸ ಬಹುದು. ಒಂದನೇ ಅನುಬಂಧದ ನಾಲ್ಕನೇ ತಃಖ್ತೆ.

ಒಟ್ಟಿನಲ್ಲಿ ಹೇಳುವದಾದರೆ ನಮ್ಮ ಅನುಮಾನ ಯಥಾರ್ಥವಾದದ್ದು. ಮೊದಲು ಬಂದವರಿಗೂ ಇಂಗ್ಲಿಷ್ ಮಕ್ಕಳಿಗೂ ಕಣ್ಣಿಗೆ ಹೊಡೆಯುವಂತಹ ವ್ಯತ್ಯಾಸವಿಲ್ಲ. ಇರುವ ಸಣ್ಣ ವ್ಯತ್ಯಾಸಕ್ಕೆ ವಲಸೆಬಂದವರ ಮನೆಗಳಲ್ಲಿ ಮಕ್ಕಳಿಗೆ ಸಿಗದಾದ ಅವಕಾಶ ಕಾರಣವೆನ್ನಬಹುದು. ದಕ್ಷತೆಯ ಬೆಳೆವಣಿಗೆಗೆ ಬ್ರಿಟನ್ನಿನ ಶಾಲೆ ಮಾಡುವ ಕೆಲಸಕ್ಕೆ ಸಹಾಯಕವಾಗುವಂತೆ ಆ ಮಕ್ಕಳ ಮನೆಯೂ ಕೆಲಸ ಮಾಡುವು ದಾದರೆ ಈ ಸಣ್ಣ ವ್ಯತ್ಯಾಸವೂ ಅಳಿಸಿಹೋಗುವದರಲ್ಲಿ ಸಂದೇಹವಿಲ್ಲ,

ಈ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಹಾಗೆ ನಡೆಸಬಹುದಾದ ಪ್ರತ್ಯೇಕ ವಿಶ್ಲೇಷಣೆ ಯಾವ ತರಹದ ನಿರ್ಣಯವನ್ನು ಕೊಡುತ್ತದೆ ಎಂದು ನೋಡ ಬಹುದು. ನಾಲ್ಕನೆಯ ಅಧ್ಯಾಯದಲ್ಲಿ ನಮೂದಿಸಿದ 11ನೇ ಅನುಮಾನ ಹೆಣ್ಣು ಮಕ್ಕಳ ನಡುವೆ ವ್ಯತ್ಯಾಸವಿರುವದನ್ನು, ಗಂಡು ಮಕ್ಕಳ ನಡುವೆ ವ್ಯತ್ಯಾಸವಿಲ್ಲ ಅನ್ನುವದನ್ನು ಸೂಚಿಸಿತು. ಇದಕ್ಕೆ ಭಾರತದ ಸಾಂಸ್ಕೃತಿಕ ಹಿನ್ನೆಲೆಯಲ್ಲಿರುವ ಅಂಶಗಳೇ ಕಾರಣವೆನ್ನುವ ವಾದವನ್ನು ಮಂಡಿಸಲಾಗಿತ್ತು. ಹೆಣ್ಣು ಮಕ್ಕಳಿಗೆ ಮನೆಯವರು ನಿರಾಕರಿಸುವ ಸ್ವಾತಂತ್ರ್ಯ ಗಂಡು ಮಕ್ಕಳಿಗೆ ದಕ್ಕಿ ಅವರು ಹೆಚ್ಚಿನ ಪ್ರಗತಿ ಸಾಧಿಸುತ್ತಾರೆಂದು ವಾದಿಸಲಾಗಿತ್ತು.

ಮೊದಲು ಬಂದವರು—ಇಂಗ್ಲಿಷ್ ಮಕ್ಕಳು

ಕೆಳಗಿನ ವಿವರಗಳನ್ನು ಒಂದನೇ ಅನುಬಂಧದ ಐದನೇ ತಃಖ್ತೆಯಿಂದ ಎತ್ತಲಾಗಿದೆ.

ಮಾಪಕಗಳು	ಮೊದಲು ಬಂದವರು	ಇಂಗ್ಲಿಷ್ ಮಕ್ಕಳು	ಟಿ-ಬೆಲೆ	ಸಾರ್ಥಕತೆಯ ಮಟ್ಟ
ಸ್ಮರಣವ್ಯಾಪ್ತಿಯ ಸಮಸ್ಯೆ				
ಹುಡುಗರು	10.67	10.00	<1	—
ಹುಡುಗಿಯರು	9.89	11.42	2.059	0.05
ಚಿತ್ರಗಳನ್ನು ಪೂರೈಸುವ ಸಮಸ್ಯೆ				
ಹುಡುಗರು	11.08	11.08	—	—
ಹುಡುಗಿಯರು	10.47	10.21	<1	—
ಚಿತ್ರಗಳನ್ನು ಜೋಡಿಸುವ ಸಮಸ್ಯೆ				
ಹುಡುಗರು	9.25	10.79	1.974	—
ಹುಡುಗಿಯರು	8.42	9.68	1.703	—
ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆ				
ಹುಡುಗರು	11.46	12.46	1.49	—
ಹುಡುಗಿಯರು	9.10	11.21	2.66	0.02
ವಸ್ತುಗಳನ್ನು ಜೋಡಿಸುವ ಸಮಸ್ಯೆ				
ಹುಡುಗರು	10.62	12.83	2.80	0.01
ಹುಡುಗಿಯರು	8.84	11.00	3.063	0.01
ಪಲ್ಲಟಿತ ಚಿಹ್ನೆಗಳ ಸಮಸ್ಯೆ				
ಹುಡುಗರು	9.75	10.66	1.15	—
ಹುಡುಗಿಯರು	8.89	10.32	2.76	0.01

ವೆಕ್ಸ್‌ಲರಿನ ಬುದ್ಧಿಮಟ್ಟ				
ಹುಡುಗರು	102.96	111.54	2.55	0.02
ಹುಡುಗಿಯರು	94.1	103.26	2.65	0.02

ಟಿಪ್ಪಣಿ : ಅನುಕ್ರಮಿಕ ಮಾತೃಕೆ ಹೇಳುವ ವಯಸ್ಸಿನ ವ್ಯಾಪ್ತಿಯೊಳಗಿದ್ದ ಮಕ್ಕಳ ಸಂಖ್ಯೆ ಸಣ್ಣದಾದ್ದರಿಂದ ಅದರ ಅಳತೆ ಇಲ್ಲ.

ವಿವೇಚನೆ

ಉಪಯೋಗಿಸಿದ ಏಳು ಮಾಪಕಗಳಲ್ಲಿ ಹುಡುಗರಿಗೆ ಸಂಬಂಧಸಿದ ಹಾಗೆ ಎರಡರಲ್ಲಿ ಮಾತ್ರಾ ಸಾರ್ಥಕವಾದ ವ್ಯತ್ಯಾಸವಿದೆ. 0.01 ಮಟ್ಟದ ವ್ಯತ್ಯಾಸವನ್ನು ಮಾತ್ರಾ ಸಾರ್ಥಕವೆಂದು ಪರಿಗಣಸುವ ನಮ್ಮ ನಿಲುವಿನ ಪ್ರಕಾರ ವ್ಯತ್ಯಾಸವಿರುವುದು ಒಂದರಲ್ಲಿ: ಅದೇ ಹೆಣ್ಣುಮಕ್ಕಳಿಗೆ ಸಂಬಂಧಸಿದ ಹಾಗೆ ವ್ಯತ್ಯಾಸವಿಲ್ಲದೇ ಇರುವುದು ಎರಡೆರಲ್ಲಿ; ಮೂರು ಮಾಪಕಗಳಲ್ಲಿ 0.1 ಮಟ್ಟದ ವ್ಯತ್ಯಾಸ.

ಭಾರತದ ಸಾಂಸ್ಕೃತಿಕ ಹಿನ್ನೆಲೆಯ ಆಧಾರದ ಮೇಲೆ ನಾವು ನಮೂದಿಸಿದ ಅನುಮಾನಕ್ಕೆ ನಿರ್ವಿವಾದವಾದ ಪ್ರಮಾಣ ಸಿಕ್ಕದೇ ಹೋಗಿದ್ದರೂ. ಅದರ ಯುಕ್ತತೆಗೆ ಒಂದಷ್ಟು ಬೆಂಬಲಸಿಕ್ಕಿದೆ ಅನ್ನಬಹುದು.

ಕಾರ್ಯನಿರ್ವಹಣೆಯ ಕ್ರಮ - ಕೆಲಸದ ಗತಿ

ಮಾಡಿದ ಕೆಲಸವನ್ನು ಆದಷ್ಟು ಬೇಗ ಮಾಡುವುದು ಪರಿಸರಕ್ಕೆ ಸಂಬಂಧಸಿದ ವಿಷಯುವೆನ್ನುವ ಆಧಾರ ಕಲ್ಪನೆಯಿಂದ ಹೊರಟು ವಲಸೆಬಂದ ಮಕ್ಕಳಲ್ಲಿ ಆಗಬಹು ವಾದ ಬದಲಾವಣೆಗಳನ್ನು ಹನ್ನೆರಡನೇ ಅನುಮಾನದಲ್ಲಿ ನಮೂದಿಸಲಾಯಿತು. ಕೆಲಕಾಲದ ಅನಂತರ ಮಕ್ಕಳ ಬದ್ಧಿಮಟ್ಟದಲ್ಲಿ ಕಾಣಸಿಗುವ ಬಡ್ತಿಗೆ ವೇಗವಾಗಿ ಕೆಲಸ ಮಾಡುವದನ್ನು ಕಲಿತದ್ದು ಮಾತ್ರಾ ಕಾರಣವಲ್ಲ, ಮೂಲಭೂತವಾದೊಂದು ಬದಲಾವಣೆ ಅಥವಾ ಬೆಳವಣಿಗೆ ಆಗಿರುತ್ತದೆ ಅನ್ನುವದನ್ನು ಹದಿಮೂರನೇ ಅನುಮಾನದಲ್ಲಿ ಪ್ರತಿಪಾದಿಸಲಾಯಿತು.

ವೆಕ್ಸ್‌ಲರಿನ ಬುದ್ಧಿಮಾಪಕದಲ್ಲಿ ಬೋನಸ್ ಅಂಕಗಳನ್ನು ಕೊಡುವ ವ್ಯವಸ್ಥೆ ಇರುವುದು ಈ ಅನುಮಾನಗಳನ್ನು ಪರೀಕ್ಷಿಸಿ ನೋಡುವುದಕ್ಕೆ ಸಹಾಯಕವಾಗುತ್ತದೆ. ಈ ಸಂಶೋಧನೆಯಲ್ಲಿರುವ ನಾಲ್ಕು ಗುಂಪು ಮಕ್ಕಳು ಎಷ್ಟು ಬೋನಸ್ ಅಂಕಗಳನ್ನು ಗಳಿಸಿದರು ಅನ್ನುವುದು ಕುತೂಹಲಕಾರಕವಾದ ವಿಷಯ. ಆ ದೃಷ್ಟಿಯಿಂದ ಕೆಳಗಿನ ತಃಖ್ತೆಯನ್ನು ನೋಡಬಹುದು.

ಗುಂಪುಗಳು	ಮಕ್ಕಳ ಸಂಖ್ಯೆ	ಬೋನಸ್ ಪಡೆದ ಮಕ್ಕಳ ಸಂಖ್ಯೆ	ಶೇ.	ಚಿತ್ರಗಳನ್ನು ಜೋಡಿಸುವ ಸಮಸ್ಯೆ-ಒಟ್ಟು ಬೋನಸ್ ಅಂಕ	ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆ-ಒಟ್ಟು ಬೋನಸ್ ಅಂಕ	ವಸ್ತುಗಳನ್ನು ಜೋಡಿಸುವ ಸಮಸ್ಯೆ-ಒಟ್ಟು ಬೋನಸ್ ಅಂಕ	ಮೊತ್ತ	ಸರಾಸರಿ
ಭಾರತದ ಮಕ್ಕಳು	58	19	32.8	5	20	21	46	0.79
ಈಚೆಗೆ ಬಂದವರು	43	24	55.8	40	16	20	76	1.76
ಮೊದಲೇ ಬಂದವರು	43	41	95.3	123	75	65	263	6.11
ಇಂಗ್ಲಿಷ್ ಮಕ್ಕಳು	66	63	95.5	225	232	187	644	9.76

ಪುನರ್ ಪರೀಕ್ಷೆಗೆ ಒಳಗಾದ ಈಚೆಗೆ ಬಂದ 23 ಮಕ್ಕಳ ಬಗೆಗೂ ಇಂತಹದೇ ಒಂದು ಪಟ್ಟಿ ಹಾಕುವುದು ಸಾಧ್ಯ :

	ಇಂಗ್ಲಿಷ್ ಶಾಲೆಯಲ್ಲಿದ್ದ ಅವಧಿ	ಬೋನಸ್ ಪಡೆದ ಮಕ್ಕಳ ಸಂಖ್ಯೆ	ಶೇ.	ಚಿತ್ರಗಳನ್ನು ಜೋಡಿಸುವ ಸಮಸ್ಯೆ	ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆ	ವಸ್ತುಗಳನ್ನು ಜೋಡಿಸುವ ಸಮಸ್ಯೆ	ಮೊತ್ತ	ಸರಾಸರಿ
ಪರೀಕ್ಷೆ	20.3 ತಿಂಗಳು	12	52.2	20	9	13	42	1.83
ಪುನರ್ ಪರೀಕ್ಷೆ	42 ತಿಂಗಳು	21	91.3	78	56	47	181	7.80

ವಿವೇಚನೆ

ಇಂಗ್ಲಿಷ್ ಶಾಲೆಗಳಲ್ಲಿ ಕಳೆದ ಕಾಲ ಹೆಚ್ಚಿದಂತೆ ಮಕ್ಕಳು ಗಳಿಸಿದ ಬೋನಸ್ ಅಂಕಗಳೂ ಹೆಚ್ಚುತ್ತ ಹೋಗಿರವುದು ಈ ಎರಡು ಪಟ್ಟಿಗಳಿಂದ ಸ್ಪಷ್ಟವಾಗುತ್ತದೆ. ಈ ಮಕ್ಕಳು ಪರೀಕ್ಷೆಯ ಹಾಗೂ ಪುನರ್‌ಪರೀಕ್ಷೆಯ ಸಂದರ್ಭಗಳಲ್ಲಿ ಸಮಸ್ಯೆಯನ್ನು ಪರಿಹರಿಸಿದ ವಿಧಾನವನ್ನು ಇನ್ನಷ್ಟು ಕೂಲಂಕಷವಾಗಿ ನೋಡಿದಾಗ ಪರೀಕ್ಷೆಯ ಸಂದರ್ಭದಲ್ಲಿ 11 ಮಕ್ಕಳು ಬೋನಸ್ ಅಂಕಗಳನ್ನು ಯಾವ ಒಂದು ಕೆಲಸದಲ್ಲೂ ಗಳಿಸದೇ ಹೋದದ್ದು, ಪುನರ್‌ಪರೀಕ್ಷೆಯಲ್ಲಿ ಇಬ್ಬರು ಮಾತ್ರಾ ಸೊನ್ನೆ ಬೋನಸ್ ಅಂಕಗಳನ್ನು ಗಳಿಸಿದ್ದೂ ಕಾಣುತ್ತದೆ. ಹಿಂದೆ ನಮೂದಿಸಿದ 'ಹನ್ನೆರಡೇ ಅನುಮಾನಕ್ಕೆ ಪ್ರಮಾಣ ಇಲ್ಲಿ ಸಿಕ್ಕಿದೆ, ಅನ್ನುವುದು ನಿರ್ವಿವಾದ.

ಮಕ್ಕಳ ದಕ್ಷತೆಯಲ್ಲಿ ಮೂಲಭೂತವಾದೊಂದು ಬೆಳವಣಿಗೆ ಆಗಿದೆಯೇ ಅಥವಾ, ಪುನರ್‌ಪರೀಕ್ಷೆಯಲ್ಲಿ ಅವುಗಳಿಸಿದ ಹೆಚ್ಚಿನ ಅಂಕಗಳಿಗೆ ಮೇಲಿನ ಬೋನಸ್ ಅಂಕಗಳೇ ಕಾರಣವೇ ಅನ್ನುವ ಪ್ರಶ್ನೆಗೆ ಉತ್ತರ ಕೊಡುವುದು ಅಗತ್ಯ. ನಿಗದಿಯಾದ ಕಾಲದಲ್ಲಿ ಸಮಸ್ಯೆಗೆ ಪರಿಹಾರ ಒದಗಿಸಿದ್ದನ್ನು ಮಾತ್ರಾ ಗಮನಕ್ಕೆ ತೆಗೆದುಕೊಂಡು ಬೋನಸ್ ಅಂಕಗಳನ್ನು ನಿರ್ಲಕ್ಷಿಸಿದಾಗ ಏನಾಗುವುದು ನೋಡಬವುದು.

ಪರೀಕ್ಷೆ, ಪುನರ್‌ಪರೀಕ್ಷೆ

ಅನುಕ್ರಮಿಕ ಸಂಖ್ಯೆ	ಪರೀಕ್ಷೆ: ಚಿತ್ರಗಳನ್ನು ಜೋಡಿಸುವ ಸಮಸ್ಯೆ	ಪರೀಕ್ಷೆ: ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆ	ಪರೀಕ್ಷೆ: ವಸ್ತುಗಳನ್ನು ಜೋಡಿಸುವ ಸಮಸ್ಯೆ	ಪುನರ್ ಪರೀಕ್ಷೆ: ಚಿತ್ರಗಳನ್ನು ಜೋಡಿಸುವ ಸಮಸ್ಯೆ	ಪುನರ್ ಪರೀಕ್ಷೆ: ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆ	ಪುನರ್ ಪರೀಕ್ಷೆ: ವಸ್ತುಗಳನ್ನು ಜೋಡಿಸುವ ಸಮಸ್ಯೆ
1	7	7	8	8	10	8
2	5	4	2	5	8	4
3	6	7	5	5	6	8
4	8	7	8	11	8	5
5	8	10	10	8	12	9
6	5	7	7	5	9	5

7	6	10	9	8	11	8
8	5	8	7	6	9	7
9	6	10	6	10	9	5
10	8	10	6	11	6	8
11	6	10	8	8	9	9
12	6	8	7	5	10	7
13	4	6	6	7	9	9
14	7	8	8	7	10	9
15	6	8	5	8	11	10
16	3	7	7	5	9	7
17	8	9	9	9	11	10
18	5	12	9	5	11	8
19	5	9	6	7	9	8
20	6	6	7	5	7	7
21	8	8	8	10	10	7
22	5	7	4	8	9	6
23	6	11	9	6	11	7
ಒಟ್ಟು	139	189	161	167	214	171
ಸರಾಸರಿ	6.04	8.20	7.00	7.26	9.30	7.43

ಸರಾಸರಿಗಳ ನಡುವಿನ ವ್ಯತ್ಯಾಸ

	ಚಿತ್ರಗಳನ್ನು ಜೋಡಿಸುವ ಸಮಸ್ಯೆ	ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆ	ವಸ್ತುಗಳನ್ನು ಜೋಡಿಸುವ ಸಮಸ್ಯೆ
ಸ್ಟ್ಯಾಂಡರ್ಡ್ ಎರರ್ ಅಥವಾ ಸ್ಯಾಂಡ್ಲರಿನ ಎ	0.103	0.110	2.25
ಸಾರ್ಥಕತೆಯ ಮಟ್ಟ	0.0005	0.0008	ಸಾರ್ಥಕವಲ್ಲ

ಮೂರು ರೂಪಕಗಳಲ್ಲಿ ಒಂದೇ ಸಮನಾದ ಸಾರ್ಥಕ ವ್ಯತ್ಯಾಸವಿಲ್ಲವಾದರೂ ಮೊದಲೆರಡರಲ್ಲಿ ಹೆಚ್ಚುಮಟ್ಟದ ವ್ಯತ್ಯಾಸವಿದೆ. ಚುರುಕಾಗಿ ಕೆಲಸ ಮಾಡುವದನ್ನು ಕಲಿತಿದ್ದು ಮಾತ್ರವಲ್ಲದೇ ಮೂಲಭೂತವಾದ ಬದಲಾವಣೆ ದಕ್ಷತೆಯಲ್ಲೇ ಆಗಿದೆ ಎಂದು ಹೇಳಬಹುದು.

ಇಂಗ್ಲಿಷ್ ಮಕ್ಕಳನ್ನು ಮೊದಲು ಬಂದವರನ್ನು ಹೋಲಿಸಿ ನೋಡಿದಾಗ ಹೇಳಿದ ಮಾತು ಮರೆಯಬಾರದು. ಅಷ್ಟು ಮಕ್ಕಳಿಗೆ ಸಂಬಂಧಿಸಿದ ಹಾಗೆ ಸಾರ್ಥಕವಾದ ವ್ಯತ್ಯಾಸ ಕಂಡು ಬಂದದ್ದು ವಸ್ತುಗಳನ್ನು ಜೋಡಿಸುವ ಸಮಸ್ಯೆಯಲ್ಲಿ. ಅದನ್ನು ಜ್ಞಾಪಿಸಿಕೊಂಡು ಪರೀಕ್ಷೆಯ ಹಾಗೂ ಪುನರ್‌ಪರೀಕ್ಷೆಯ ಸಂದರ್ಭಗಳಲ್ಲಿ ಬೆಳವಣಿಗೆ ಕಾಣದೇ ಹೋದದ್ದನ್ನು ನೋಡಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ ಶಾಲೆಯ ಪರಿಸರಕ್ಕೆ ಪೋಷಕವಾಗುವಂತಹ ಪರಿಸರ ವಲಸೆ ಬಂದ ಮಕ್ಕಳ ಮನೆಗಳಲ್ಲೂ ನಿರ್ಮಾಣವಾಗುವತನಕ ಈ ದಕ್ಷತೆಯಲ್ಲಿ ಸಮರ್ಪಕವೆನಿಸುವಷ್ಟು ಅಭಿವೃದ್ಧಿ ಸಾಧ್ಯವಾಗುವುದಿಲ್ಲ.

ನಾಲ್ಕನೇ ಅಧ್ಯಾಯದಲ್ಲಿ ನಮೂದಿಸಿದ ಅನುಮಾನಗಳ ಪರೀಕ್ಷೆ ಇದುವರೆಗೆ ಮಾಡಿಯಾಯಿತು. ಅವುಗಳ ಹಿಂದಿದ್ದ ವಿಚಾರದ ತರ್ಕಬದ್ಧತೆಗೆ ಪ್ರಮಾಣ ಸಾಕಷ್ಟು ಮಟ್ಟಿಗೆ ಸಿಕ್ಕಿದೆ ಅನ್ನುವದನ್ನು ಸಾಧಿಸಿ ತೋರಿಸಿಯಾಯಿತು. ಈ ಸಂಶೋಧನೆ ಇನ್ನು ಒಂದೆರಡು ದಿಕ್ಕುಗಳಲ್ಲಿ ಬೆಳಕು ಚೆಲ್ಲಿರುವದನ್ನು ಈಗ ನೋಡಬಹುದು. ಸಂಶೋಧನೆಗೆ ಬಳಸಿದ ನಾಲ್ಕು ಗುಂಪುಗಳನ್ನು ಒಟ್ಟಾರಿ ಹೋಲಿಸಿ ನೋಡುವುದು ನಾವು ಮಾಡಬಹುದಾದ ಮೊದಲನೇ ಕೆಲಸ.

ಆರ್ಥಿಕ ಹಾಗೂ ಸಾಮಾಜಿಕ ದೃಷ್ಟಿಯಿಂದ ಸಮಾನವೆನಿಸುವ ಇಪ್ಪತ್ತೈದು ಮಕ್ಕಳು ಪ್ರತಿಯೊಂದು ಗುಂಪಿನಲ್ಲೂ ಇದೆ. ಅವುಗಳ ನಡುವಿನ ವ್ಯತ್ಯಾಸ ಏಕ ಪರಿಮಾಣದ್ದಾಗಿದ್ದು, ಆ ಗುಂಪುಗಳ ಬುದ್ಧಿಮಟ್ಟಗಳಲ್ಲಿರಬಹುದಾದ ಅಂತರಕ್ಕೆ ಅದೇ ಕಾರಣವೆನ್ನಬಹುದು.

ಗುಂಪುಗಳ ಹೋಲಿಕೆ

	ಭಾರತದಲ್ಲಿರುವ ಮಕ್ಕಳು	ಈಚೆಗೆ ಬಂದವರು	ಮೊದಲು ಬಂದವರು	ಇಂಗ್ಲಿಷ್ ಮಕ್ಕಳು
ಮಕ್ಕಳ ಸಂಖ್ಯೆ	25	25	25	25
ಹುಡುಗರು	13	13	13	13
ಹುಡುಗಿಯರು	12	12	12	12

ಸರಾಸರಿ ವಯಸ್ಸು	10ವ 1ತಿಂ	9ವ 11ತಿಂ	9ವ 10ತಿಂ	10ವ 2ತಿಂ
ತಂದೆಯ ವಿದ್ಯಾಭ್ಯಾಸ ಸರಾಸರಿ	8ವ 7ತಿಂ	8ವ 9ತಿಂ	9ವ 7ತಿಂ	10ವ 4ತಿಂ
ತಂದೆಯ ಕೆಲಸ				
ರೈತರು	8	8	8	8
ಅಧ್ಯಾಪಕರು	4	4	4	4
ಕಾರಬೂನರು	5	5	5	5
ಕೈಗೆಲಸದವರು	4	4	4	4
ವರ್ತಕರು	3	3	3	3
ಸಾಗಣೆ ಕೆಲಸದವರು	1	1	1	1
ಹಳ್ಳಿಯಿಂದ ಬಂದವರು	13	15	14	9
ಪಟ್ಟಣದವರು	12	10	11	16
ಒಡಹುಟ್ಟಿದವರ ಸಂಖ್ಯೆ ಸರಾಸರಿ	4.7	4.0	4.0	3.2
ಬ್ರಿಟನ್ನಿನಲ್ಲಿದ್ದ ಕಾಲ	–	1ವ 9ತಿಂ	7ವ 1ತಿಂ	10ವ 2ತಿಂ
ಬ್ರಿಟನ್ನಿನ ಶಾಲೆಗಳಲ್ಲಿದ್ದ ಕಾಲ	–	1ವ 9ತಿಂ	4ವ 8ತಿಂ	5ವ 2ತಿಂ

ಉಪಯೋಗಿಸಿದ ಮಾಪಕಗಳಲ್ಲಿ ಈ ಮಕ್ಕಳು ಗಳಿಸಿದ ಅಂಕಗಳ ವಿವರ ಮುಂದೆ ಕೊಟ್ಟಿರುವ ಪಟ್ಟಿಯಲ್ಲಿದೆ.

ಮಾಪಕಗಳು	ಭಾರತದಲ್ಲಿರುವ ಮಕ್ಕಳು		ಈಚೆಗೆ ಬಂದವರು		ಮೊದಲು ಬಂದವರು		ಇಂಗ್ಲೀಷ್ ಮಕ್ಕಳು	
	ಸರಾಸರಿ	ವಿಚಲನೆ	ಸರಾಸರಿ	ವಿಚಲನೆ	ಸರಾಸರಿ	ವಿಚಲನೆ	ಸರಾಸರಿ	ವಿಚಲನೆ
ಸ್ಮರಣ ವ್ಯಾಪ್ತಿಯ ಸಮಸ್ಯೆ	6.96	1.99	8.2	2.17	10.68	2.89	10.56	2.33
ಚಿತ್ರಗಳನ್ನು ಪೂರೈಸುವ ಸಮಸ್ಯೆ	7.56	2.25	9.12	1.91	11.08	2.74	11.36	2.89
ಚಿತಗಳನ್ನು ಜೋಡಿಸುವ ಸಮಸ್ಯೆ	5.28	1.11	7.12	1.95	8.52	2.02	10.60	3.03
ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆ	7.48	2.01	8.96	7.78	10.96	2.22	12.04	2.32
ವಸ್ತುಗಳನ್ನು ಜೋಡಿಸುವ ಸಮಸ್ಯೆ	5.60	2.21	7.64	1.79	9.68	2.45	12.32	2.80
ಪಲ್ಲಟಿತ ಚಿಹ್ನೆಗಳ ಸಮಸ್ಯೆ	6.96	2.51	8.36	2.42	9.64	2.65	10.76	1.79
ವೆಕ್ಸ್‌ಲರ್ ಬುದ್ಧಿಮಟ್ಟ	76.24	9.10	87.96	9.17	99.96	11.95	109.76	11.80
ಅನುಕ್ರಮಿಕ ಮಾತೃಕೆ-- n= 9 ಬುದ್ಧಿಮಟ್ಟ	81.55	8.53	84.11	9.36	106.11	6.11	110.67	17.69

ವ್ಯತ್ಯಾಸಗಳ ವಿಶ್ಲೇಷಣೆ¹

ಸ್ಮರಣವ್ಯಾಪ್ತಿಯ ಸಮಸ್ಯೆ

ವ್ಯತ್ಯಾಸದ ಮೂಲ	ಸ್ವಾತಂತ್ರ್ಯದ ಮಿತಿ	ವರ್ಗದ ಮೊತ್ತ	ಸರಾಸರಿ ವರ್ಗ	ಎಫ್ ಬೆಲೆ	ಸಾರ್ಥಕತೆಯ ಮಟ್ಟ
ಗುಂಪುಗಳ ನಡುವೆ	3	251	83.66	13.37	...
ಗುಂಪುಗಳೊಳಗೆ	96	600	6.25	....	....
ಒಟ್ಟು	99	851	...	....	...

1. ANALYSIS OF VARIANCE

ಎರಡಕ್ಕಿಂತ ಹೆಚ್ಚು ಗುಂಪುಗಳನ್ನು ಹೋಲಿಸಿ ಅವುಗಳ ಸರಾಸರಿಗಳ ನಡುವಿನ ವ್ಯತ್ಯಾಸ ಸಾರ್ಥಕವೋ ಅಲ್ಲವೋ ಅನ್ನುವದನ್ನು ಇತ್ಯರ್ಥ ಮಾಡುವುದಕ್ಕೆ ಉಪಯೋಗಿಸುವ ಸಂಖ್ಯಾಪರಿಶೀಲನ ಶಾಸ್ತ್ರದ ವಿಧಾನ -

$$t\text{ - ಬೆಲೆಗೆ ಅನುವಾದ } F\text{ - ಬೆಲೆ} = \frac{\text{ಗುಂಪುಗಳ ನಡುವಿನ ಸರಾಸರಿವರ್ಗ}}{\text{ಗುಂಪುಗಳೊಳಗಿನ ಸರಾಸರಿವರ್ಗ}}$$

ಚಿತ್ರಗಳನ್ನು ಪೂರೈಸುವ ಸಮಸ್ಯೆ

ವ್ಯತ್ಯಾಸಗಳ ಮೂಲ	ಸ್ವಾತಂತ್ರ್ಯದ ಮಿತಿ	ವರ್ಗದ ಮೊತ್ತ	ಸರಾಸರಿ ವರ್ಗ	ಎಫ್ ಬೆಲೆ	ಸಾರ್ಥಕತೆಯ ಮಟ್ಟ
ಗುಂಪುಗಳ ನಡುವೆ	3	353	117.66	20.69	0.01
ಗುಪುಗಳೊಳಗೆ	96	500	5.21		
ಒಟ್ಟು	99	853			
ಚಿತ್ರಗಳನ್ನು ಜೋಡಿಸುವ ಸಮಸ್ಯೆ					
ಗುಂಪುಗಳ ನಡುವೆ	3	379	126.33	26.5	0.01
ಗುಂಪುಗಳೊಳಗೆ	96	458	4.77		
ಒಟ್ಟು	99	837			

ಇಟ್ಟಿಗೆಗಳನ್ನು ಜೋಡಿಸುವ ಸಮಸ್ಯೆ					
ಗುಂಪುಗಳ ನಡುವೆ	3	311.2	103.7	20.5	0.01
ಗುಂಪುಗಳೊಳಗೆ	96	438.8	4.57		
ಒಟ್ಟು	99	750			
ವಸ್ತುಗಳನ್ನು ಜೋಡಿಸುವ ಸಮಸ್ಯೆ					
ಗುಂಪುಗಳ ನಡುವ	3	622	207.33	36.55	0.01
ಗುಂಪುಗಳೊಳಗೆ	96	545	5.68		
ಒಟ್ಟು	99	1167			
ಪಲ್ಲಟಿತ ಚಿಹ್ನೆಗಳ ಸಮಸ್ಯೆ					
ಗುಂಪುಗಳ ನಡುವೆ	3	202	67.33	11.57	0.01
ಗುಂಪುಗಳೊಳಗೆ	96	558	5.82		
ಒಟ್ಟು	99	760			
ವೆಕ್ಸ್‌ಲರ್ - ಬುದ್ಧಿಮಟ್ಟ					
ಗುಪುಗಳ ನಡುವೆ	3	15780	5260	44.6	0.01
ಗುಂಪುಗಳೊಳಗೆ	96	11316	117.87		
ಒಟ್ಟು	99	27096			
ಅನುಕ್ರಮಿಕ ಮಾತೃಕೆ-ಬುದ್ಧಿಮಟ್ಟ					
ಗುಂಪುಗಳ ನಡುವೆ	3	4248	1416	9.61	0.01
ಗುಂಪುಗಳೊಳಗೆ	32	4712	147.24		
ಒಟ್ಟು	35	8960			

ವಿವೇಚನೆ

ಪ್ರತಿಯೊಂದು ಮಾಪಕದಲ್ಲೂ 0.01 ಮಟ್ಟದ ವ್ಯತ್ಯಾಸವಿರುವುದನ್ನು ನಾವು ನೋಡಬಹುದು, ಈ ನಾಲ್ಕು ಗುಂಪುಗಳು ಒಂದೇ ಜನ ಸ್ತೋಮದವಲ್ಲ ಎನ್ನುವುದು ನಿರ್ವಿವಾದ. ಮನೆಯ ಹಿನ್ನೆಲೆಯ ದೃಷ್ಟಿಯಿಂದ ಸಮಾನವಾದ ಈ ಗುಂಪುಗಳ ವ್ಯತ್ಯಾಸವಿರುವುದು ಬ್ರಿಟನ್ನಿನ ಪರಿಸರದ ಜೊತೆಗೆ ಅವು ಹೊಂದಿರುವ ಸಂಪರ್ಕದ ಪ್ರಮಾಣದಲ್ಲಿ.

ಕಂಡುಬಂದ ವ್ಯತ್ಯಾಸಕ್ಕೆ ಈ ಒಂದು ಅಂಶದ ಮಾತುಗಳಲ್ಲಿ ವಿವರಣೆ ಕೊಡುವುದು ಅನಿವಾರ್ಯವಾಗುವುದು. ಅದೇ ಕಾರಣದಿಂದ ಪ್ರಭಾವ ಬೀರುವ ಅಂಶ ಬ್ರಿಟನ್ನಿನ ಪರಿಸರವೆನ್ನುವುದರ ಜೊತೆಗೆ, ಮುಖ್ಯವಾದದ್ದು ಬ್ರಿಟನ್ನಿನ ಶಾಲೆಗಳ ಪರಿಸರವೆನ್ನುವದನ್ನು ನಾವು ಮರೆಯಬಾರದು. ಅಂತಹ ನಿರ್ಣಯಕ್ಕೆ ಅಗತ್ಯವಾದ ಪ್ರಮಾಣವನ್ನು ಹಿಂದೆಯೇ ಒದಗಿಸಲಾಗಿದೆ.

ಮಕ್ಕಳ ಬುದ್ಧಿಮಟ್ಟ — ಅಧ್ಯಾಪಕರ ಅಂದಾಜು

ಮಗುವೊಂದರ ಬುದ್ಧಿಮಟ್ಟದ ಬಗೆಗೆ ಅಧ್ಯಾಪಕ ಅಂದಾಜುಹಾಕುವಾಗ ಅವನು ಆ ಮಗುವಿನ ಸ್ವಭಾವಸಿದ್ಧವಾದ ಬುದ್ಧಿಯನ್ನೂ ಶಿಕ್ಷಣ ಕೊಟ್ಟಿದ್ದನ್ನೂ ಒಟ್ಟಿಗೆ ಗಮನದಲ್ಲಿಟ್ಟುಕೊಂಡಿರುತ್ತಾನೆ. ಇಂಗ್ಲಿಷ್ ಅಧ್ಯಾಪಕ ವಲಸೆಬಂದ ಮಕ್ಕಳ ಬಗೆಗೆ ಈ ತರಹದ ಅಂದಾಜು ಹಾಕುವಾಗ ಅವನಿಗೆ ಸಿಗುವ ಸೂಚನೆಗಳು ಸಾಲದೇ ಹೋಗುವುದು ಸಾಧ್ಯ. ಇಂಗ್ಲಿಷ್ ಮಕ್ಕಳ ಬಗೆಗೆ ಈ ತರಹದ ಸಮಸ್ಯೆಯಿಲ್ಲ ವೆಂದಲ್ಲ. ಅವನಿಗೆ ಹೆಚ್ಚಿನ ಸೂಚನೆಗಳು ಸಿಗುವುದು ಸಾಧ್ಯವೆನ್ನುವದಷ್ಟೇ ಈ ಮಾತಿನ ಅರ್ಥ.

ಪರಸ್ಪರ ಸಂಬಂಧಗಳನ್ನೂ ಸಂಕೇತಾರ್ಥಗಳನ್ನೂ ಗ್ರಹಿಸುವ ಶಕ್ತಿಯೇ ಬುದ್ಧಿಶಕ್ತಿಯೆನ್ನುವುದು ಪಾಶ್ಚಾತ್ಯರ ಮತ. ಅಧ್ಯಾಪಕನಾದವನು ವಲಸೆಬಂದ ಮಕ್ಕಳ ಬುದ್ಧಿಶಕ್ತಿಯ ಅಂದಾಜು ಹಾಕುವಾಗ ಅವನು ಈ ಲಕ್ಷಣ ಸಿದ್ಧಾಂತ ವನ್ನು ಅವನಿಗರಿವಿಲ್ಲದ ಹಾಗೇ ಮನಸ್ಸಿನಲ್ಲಿಟ್ಟುಕೊಂಡಿರುತ್ತಾನೆ.

ಕೆಲವು ಸಂದರ್ಭಗಳಲ್ಲಿ ಸೂಚನೆಗಳ ಅಭಾವದಿಂದ ತೊಂದರೆಯಾಗದೇ ಯಥಾರ್ಥವಾದ ಅಂದಾಜು ಒದಗುವ ಸಂದರ್ಭವು ಇದೆ. ಉದಾಹರಣೆಗೆ ಮಗು ವಿನ ತೊಡಿಗೆ ಇಂಗ್ಲಿಷ್ ಮಾತಾಡುವ ರೀತಿಗಳನ್ನು ಇಂತಹ ಅಂದಾಜ ಹಾಕುವಾಗ ಗಮನಕ್ಕೆ ತೆಗೆದುಕೊಳ್ಳದೇ ಹೋಗುವುದು ಕ್ಷೇಮವೇನೋ. ಈ ವಿವರಗಳಿಗೆ ಕೊಡಬೇಕಾದದ್ದಕ್ಕಿಂತ ಹೆಚ್ಚು ಮರ್ಯಾದೆ ಕೊಡುವ ಅಧ್ಯಾಪಕ ಕಣ್ಣೆದುರಿಗಿನ ಮಗುವನ್ನು ಯಾವುದೇ ಒಂದು ಸಾಮಾಜಿಕ ಗುಂಪಿನದೆಂದು ಊಹಿಸಿ ಅದಕ್ಕನುವಾದ ಅಂದಾಜು ಹಾಕಬಹುದು. ಸಮಾಜದ ವಿವಿಧ ಸ್ತರಗಳ ಬಗೆಗೆ ಮನಸ್ಸಿನಲ್ಲಿರುವ ಪೂರ್ವಾಗ್ರಹಗಳನ್ನು ಮರೆತು ಅಂದಾಜು ಹಾಕುವುದು ನಾವಂದುಕೊಂಡಷ್ಟು ಸುಲಭವಲ್ಲ.

ಇಂಗ್ಲಿಷ್ ಮಕ್ಕಳ ಬುದ್ಧಿಶಕ್ತಿಯನ್ನು ಅಂದಾಜು ಹಾಕುವ ಇಂಗ್ಲಿಷ್ ಅಧ್ಯಾಪಕ ಅನಗತ್ಯವಾದ ವಿವರಗಳಿಗೆ ಗಮನ ಕೊಟ್ಟು ಮೋಸ ಹೋಗುವುದು ಸಾಧ್ಯ. ವಲಸೆಬಂದ ಮಕ್ಕಳ ವಿಷಯದಲ್ಲಿ ಈ ತರಹದ ಕಷ್ಟವಿಲ್ಲದೇ ಹೋಗ

ಬಹುದು. ಒಂದು ಮಗುವಿಗೂ ಇನ್ನೊಂದಕ್ಕೂ ಇರುವ ಸಾಮಾಜಿಕ ವ್ಯತ್ಯಾಸಗಳನ್ನು ಸೂಚಿಸಬಹುದಾದ ಸಾಂಸ್ಕೃತಿಕ ವಿಶೇಷಗಳನ್ನು ತಿಳಿಯದ ಅಧ್ಯಾಪಕನ ಕಣ್ಣಿಗೆ ಎದುರಿಗಿರುವ ಭಾರತದ ಅಪ್ಪೂಮಕ್ಕಳು ಒಂದೇ ಸ್ತರದಿಂದ ಬಂದವು; ಅವರಾಡುವ ಇಂಗ್ಲಿಷ್ ಅವನು ಕಲಿಸಿಕೊಟ್ಟದ್ದು. ಹೀಗಾಗಿ ಅವನ ಅಂದಾಜಲ್ಲಿ ಯಥಾರ್ಥತೆ ಇರುವುದೂ ಸಾಧ್ಯ.

ಅಧ್ಯಾಪಕರ ಅಂದಾಜಿಗೂ ಮಕ್ಕಳ ಬುದ್ಧಿಮಟ್ಟಕ್ಕೂ ನಡುವೆ ಕಂಡುಬಂದ ಪರಸ್ಪರ ಸಂಬಂಧ ಸೂಚಕಗಳ ಬೆಲೆಗಳನ್ನು ಕೆಳಗೆ ಕೊಟ್ಟಿದೆ.

	ವೆಕ್ಸ್‌ಲರ್ ಬುದ್ಧಿಮಟ್ಟ	ಅನುಕ್ರಮಿಕ ಮಾತೃಕೆ-ಬುದ್ಧಿಮಟ್ಟ	ಅಧ್ಯಾಪಕರ ಅಂದಾಜು
ವೆಕ್ಸ್‌ಲರ್			
ಭಾರತದ ಮಕ್ಕಳು	...	0.721	...
ಈಚೆಗೆ ಬಂದವರು	...	0.54	0.06
ಮೊದಲು ಬಂದವರು	...	0.658	0.667
ಇಂಗ್ಲೀಷ್ ಮಕ್ಕಳು	...	0.703	0.564
ಅನುಕ್ರಮಿಕ ಮಾತೃಕೆ			
ಭಾರತದ ಮಕ್ಕಳು	0.721	...	...
ಈಚೆಗೆ ಬಂದವರು	0.54	...	0.192
ಮೊದಲು ಬಂದವರು	0.658	...	0.406
ಇಂಗ್ಲಿಷ್ ಮಕ್ಕಳು	0.703	...	0.135
ಅಧ್ಯಾಪಕರ ಅಂದಾಜು			
ಭಾರತದ ಮಕ್ಕಳು	...	...	...
ಈಚೆಗೆ ಬಂದವರು	0.06	0.192	...
ಮೊದಲು ಬಂದವರು	0.667	0,406	...
ಇಂಗ್ಲಿಷ್ ಮಕ್ಕಳು	0.564	0.135	...

ವಿವೇಚನೆ

ಈ ಫಲಿತಾಂಶದಲ್ಲಿ ಕೆಲವೊಂದು ವಿಶೇಷಾಂಶಗಳಿವೆ, ಉಪಯೋಗಿಸಿದ ಎರಡು ಬುದ್ಧಿಮಾಪಕಗಳ ನಡುವೆ ಹೆಚ್ಚಿನ ಮಟ್ಟದ ಪರಸ್ಪರ ಸಂಬಂಧ ಪ್ರತಿಯೊಂದು ಗುಂಪಿನಲ್ಲೂ ಇರುವುದು ಕಂಡು ಬರುವುದು ಒಂದು. ಸಂಬಂಧ ಸೂಚಕದ ಕನಿಷ್ಠ ಮಾನ O.54 ಈಚೆಗೆ ಬಂದವರ ಬಗೆಗೆ ; ಅತಿ ಹೆಚ್ಚಿನ ಮಾನ ಭಾರತದಲ್ಲಿರುವ ಮಕ್ಕಳ ಬಗೆಗೆ O. 721 ರಷ್ಟು.

ವೆಕ್ಸ್ಲರಿನ ಬುದ್ಧಿಮಟ್ಟಕ್ಕೂ ಅಧ್ಯಾಪಕರ ಅಂದಾಜಿಗೂ ಇರುವ ಪರಸ್ಪರ ಸಂಬಂಧ ಈಚೆಗೆ ಬಂದವರ ವಿಷಯದಲ್ಲಿ ಅತಿ ಕಡಿಮೆ ಪ್ರಮಾಣದ್ದಾಗಿರುವದನ್ನು ನೋಡಿ ಆಶ್ಚರ್ಯಪಡಬೇಕಾಗಿಲ್ಲ. ವೆಕ್ಸ್ಲರ್ ಬುದ್ಧಿಮಾಪಕ ಕೊಡುವ ಅಳತೆಕ್ರಮ ಕ್ರಮವಾಗಿ ಹೆಚ್ಚುತ್ತ ಹೋಗುವದನ್ನು, ಅಧ್ಯಾಪಕ ಅಂದಾಜು ಹಾಕುವಾಗ ಮಕ್ಕಳು ಪರಮಾವಧಿ ಕಾರ್ಯನಿರ್ವಹಣೆಯನ್ನು ಊಹಿಸಿಕೊಳ್ಳುವದನ್ನು ಜ್ಞಾಪಿಸಿ ಕೊಂಡಾಗ, ಈ ಫಲಿತಾಂಶ ಏಕೆ ಹೀಗೆ ಅನ್ನುವುದು ಸ್ಪಷ್ಟವಾಗುವುದು. ಬೆಳೆವಣಿಗೆಯ ಪ್ರಥಮ ಹೆಜ್ಜೆಗಳಲ್ಲಿ ವೆಕ್ಸ್ಲರ್ ಕೊಡುವ ಅಳತೆ ಅಧ್ಯಾಪಕನ ಅಂದಾಜಿನಿಂದ ದೂರವಿರುವುದು ಸಹಜ ಅಧ್ಯಾಪಕರ ಅಂದಾಜಿಗೂ ವೆಕ್ಸ್ಲರ್ ಕೊಟ್ಟ ಅಳತೆಗೂ ಸಂಬಂಧ ಸಮರ್ಪಕವಾಗಿರುವದನ್ನು ಸೂಚಕದ ಬೆಲೆ (O·667) ಯಿಂದ ಕಾಣಬಹುದು. ಮಕ್ಕಳ ಬೆಳೆವಣಿಗೆ ಇಷ್ಟರಲ್ಲಿ ಸಂಪೂರ್ಣವಾಗಿರುವುದೇ ಇದಕ್ಕೆ ಕಾರಣ.

ಅಧ್ಯಾಪಕರ ಅಂದಾಜಿಗೂ ವೆಕ್ಸ್ಲರಿನ ಅಳತೆಗೂ ಹೆಚ್ಚಿನ ಹೊಂದಾಣಿಕೆ ಇಂಗ್ಲಿಷ್ ಮಕ್ಕಳ ಬಗೆಗೆ ಕಾಣದೇ ಮೊದಲು ಬಂದವರ ಬಗೆಗಿರುವುದು ಕುತೂಹಲದ ವಿಷಯ. ಇದರ ವಿವರಣೆ ಸಿಗುವುದು ಅಧ್ಯಾಪಕರು ಅಂದಾಜು ಹಾಕಲು ಉಪಯೋಗಿಸಿದ ವಿಧಾನದಲ್ಲಿ ಪೂರ್ವಾಗ್ರಹಗಳಲ್ಲಿ. ರೈತರ ಇಂಗ್ಲೆಂಡಿನ ಕೈಗೆಲಸದವರ ಹಾಗೂ ವರ್ತಕರ ಮಕ್ಕಳ ಬುದ್ಧಿಮಟ್ಟದ ಸರಾಸರಿ ನಿಜಕ್ಕೂ 102.45 ಇದ್ದಾಗ, ಅಧ್ಯಾಪಕರ ಅಂದಾಜಿನ ಸರಾಸರಿ 98. O. ಇದಕ್ಕೆ ಕಾರಣ ಅವರ ಚೌಕಾಶಿ ಮಾಡುವ ಸ್ವಭಾವವೆನೋ ಅನ್ನಿಸಬಹುದು. ಈ ಅನ್ನಿಸಿಕೆ ತಪ್ಪೆಂದು ಗೊತ್ತಾಗುವುದು ಅಧ್ಯಾಪಕರ ಹಾಗೂ ತರಪೇತು ಪಡೆದ ಕೆಲಸದವರ ಮಕ್ಕಳ ಬಗೆಗೆ ಅವರು ಹಾಕಿದ ಅಂದಾಜನ್ನು ಅದರ ದಿಕ್ಕನ್ನೂ ನೋಡಿದಾಗ ಆ ಮಕ್ಕಳ ವಾಸ್ತವ ಬುದ್ಧಿಮಟ್ಟ 103.92; ಅದೇ ಅಧ್ಯಾಪಕರ ಅಂದಾಜಿನ ಸರಾಸರಿ 106.4 !

ತಂದೆ ತಾಯಿಂದಿರನ್ನು ನೋಡಿ ಮಕ್ಕಳ ಬಗೆಗೆ ನಿರ್ಣಯ ಮಾಡುವ ನಮ್ಮ ಪೂರ್ವಾಗ್ರಹಕ್ಕೆ ಇದೊಂದು ಉತ್ತಮ ನಿದರ್ಶನ.

ಅಧ್ಯಾಯ ಎಂಟು

ಸಿಂಹಾವಲೋಕನ

ಭಿನ್ನ ಸಂಸ್ಕೃತಿಗಳ ಗುಂಪುಗಳ ಹೋಲಿಕೆಗೆ ಹೊರಟ ಸಂಶೋಧನೆಗೆ ಸಂಬಂಧಪಟ್ಟ ಹಾಗೆ ಹಲವಾರು ವಿಧಾನಶಾಸ್ತ್ರದ ಸಮಸ್ಯೆಗಳಿವೆ. ಈ ಕಾರ್ಯಕ್ಷೇತ್ರಕ್ಕೆ ಆರಂಭದಲ್ಲಿ ಬಂದ ಸಮಾಜ ಶಾಸ್ತ್ರಜ್ಞರಾಗಲೀ ಕುಶಲಶಾಸ್ತ್ರಜ್ಞರಾಗಲೀ ಈ ಸಮಸ್ಯೆಗಳ ಕಡೆಗೆ ಸಾಕಷ್ಟು ಲಕ್ಷ್ಯಕೊಡಲಿಲ್ಲ. ಆರಿಸಿಕೊಂಡ ಗುಂಪುಗಳ ಬಗೆಗೆ ಮಾಪಕಗಳ ಬಗೆಗೆ ಅವರಿಟ್ಟುಕೊಂಡ ಆಧಾರ ಕಲ್ಪನೆಗಳ ವಿವೇಚನೆ ನಡೆಸಲಿಲ್ಲ, ಸರಿಸಮನೆಂದು ಹೋಲಿಸಿದ ಗುಂಪುಗಳ ನಡುವೆ ಕಂಡ ವ್ಯತ್ಯಾಸಕ್ಕೆ ಆನುವಂಶೀಯತೆಯ ಮಾತುಗಳಲ್ಲಿ ವಿವರಣೆ ಕೊಡುವುದು ಅನಿವಾರ್ಯವಾದದ್ದಕ್ಕೆ ಇದೇ ಕಾರಣವೆನ್ನಬಹುದು.

ಮನುಷ್ಯನ ಬುದ್ಧಿಶಕ್ತಿಯ ಮೇಲೆ, ಅವನ ವರ್ತನೆಯ ಮೇಲೆ ಪರಿಸರಕ್ಕೆ ಇರುವ ಪ್ರಭಾವ ಮನದಟ್ಟಾದದ್ದು ಕ್ರಮಕ್ರಮವಾಗಿ ಸಾಂಪ್ರದಾಯಿಕವಾದ ಸಂಶೋಧನೆಗಳ ಸರಳತೆಯ ಬಗೆಗೆ ಕೊಟ್ಟ ವಿವರಣೆಗಳ ಸುಲಭೀಕರಣದ ಬಗೆಗೆ ಹೆಚ್ಚು ಹೆಚ್ಚು ಅಸಮಾಧಾನ ಬೆಳೆದದ್ದೂ ಈ ಹೊತ್ತಿಗೇ, ಹೋಲಿಕೆಯ ದಾರಿ ಬಿಟ್ಟು ಪಾಶ್ಚಾತ್ಯವಲ್ಲದ ಸಮಾಜಗಳಲ್ಲಿ ಮನುಷ್ಯನ ದಕ್ಷತೆಗಳೂ ಅವುಗಳ ಸಂಘಟನೆಯೂ ಹೇಗೆ ಅವನ ಸಾಂಸ್ಕೃತಿಕ ಪರಿಸರದ ಕೆಲವೊಂದು ಅಂಶಗಳ ಜೊತೆಗೆ ಕಾರ್ಯಕಾರಣ ಸಂಬಂಧ ಹೊಂದಿದೆ ಅನ್ನುವ ಪ್ರಶ್ನೆ ಕೇಂದ್ರಕ್ಕೆ ಬಂದುನಿಂತಾಗ ಈ ಕಾರ್ಯ

ಕ್ಷೇತ್ರಕ್ಕೆ ಪ್ರಗತಿ ಸಾಧ್ಯವಾಯಿತು. ಪರಿಸರದ ಪರಿವರ್ತನೆಯಿಂದ ಮನುಷ್ಯನ ದಕ್ಷತೆಯನ್ನು ಬದಲಾಯಿಸಬಹುದು ಎಂದು ಹೊಳೆದಾಗ ಹೊಸ ಕಳೆ ಬಂತು.

ಪರಿಸರವಿಲ್ಲದೇ ಬುದ್ಧಿಯಿಲ್ಲವೆನುವುದು ಸ್ಪಷ್ಟವಾದಾಗ, ಮೊದ ಮೊದಲಿಗೆ ನಡೆದ ಸಂಸ್ಕೃತಿ ಸ್ವತಂತ್ರವಾದ ಮಾಪಕ ರಚನೆಯ ಪ್ರಯತ್ನ ನಿಂತಿತು. ಸಂಸ್ಕೃತಿ ಬದ್ಧವಾದ ಮಾಪಕಗಳನ್ನು ಉಪಯೋಗಿಸುವುದು ಅನಿವಾರ್ಯ, ಅವನ್ನು ಉಪಯೋಗಿಸುವ ಸಂಶೋಧನೆಗಳಿಂದ ಕಂಡುಬರುವುದಕ್ಕೆ ಬೆಲೆಯುಂಟು ಎಂದು ಮನವರಿಕೆಯಾದಾಗ ಕಾರ್ಯಕ್ಷೇತ್ರ ಇನ್ನಷ್ಟು ವಿಸ್ತರಿಸಿತು. ಪಾಶ್ಚಾತ್ಯ ದೇಶಗಳ ಪ್ರಗತಿಯನ್ನು ಗುರಿಯಾಗಿಟ್ಟುಕೊಂಡಿರುವ ಸಮಾಜಗಳು ಮುನ್ನಡಯಬೇಕಾದರೆ ಅವುಗಳ ಪರಿಸರದಲ್ಲಿ ಬದಲಾವಣೆ ಅಗತ್ಯವೆನ್ನುವ ತಿಳಿವು ಮೂಡಿತು.

ಪರಿಸರದ ಪ್ರಭಾವ ದಕ್ಷತೆಗಳ ಮೇಲಲ್ಲದೇ ಪರೀಕ್ಷೆಯ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಕೊಡುವ ಕಾರ್ಯನಿರ್ವಹಣೆಯ ಮೇಲು ಇರುತ್ತದೆ. ಪರೀಕ್ಷೆಗೆ ಕೂತವನ ಹಾಗು ಪರೀಕ್ಷಕನ ಸಂಬಂಧ, ಕೆಲಸ ಮಾಡುವ ಬಗೆಗೆ ವ್ಯಕ್ತಿ ರೂಢಿಸಿಕೊಂಡಿರುವ ಕ್ರಮ, ಸಮಸ್ಯೆಗಳಿಗಿರುವ ಸಾಂಸ್ಕೃತಿಕ ಸಾಂಗತ್ಯ, ಪರೀಕ್ಷೆ ಕೊಡುವ ಕ್ರಮ - ಈ ಬಗೆಯ ಬಾಹ್ಯಸ್ಥವಾದ ಅಂಶಗಳ ಪ್ರಭಾವ ವ್ಯಕ್ತಿಯ ಕಾರ್ಯನಿರ್ವಹಣೆಯ ಮೇಲೆ ಇರುವುದನ್ನು ತಿಳಿದ ಸಂಶೋಧಕ ವಿವರಣೆ ಕೊಡುವಾಗ ಎಚ್ಚರ ವಹಿಸುತ್ತಾನೆ. ಸಂಕೀರ್ಣವಾದೊಂದು ವರ್ತನೆಗೆ ಸರಳವಾದ ವಿವರಣೆ ಕೊಡಲಾರ.

ಹಿಂದುಳಿದ ದೇಶಗಳಿಂದ ಜನ ಸಂಪದ್ಭರಿತವಾದ ದೇಶಗಳಿಗೆ ವಲಸೆ ಹೋಗಿರುವುದು ಈ ಶತಮಾನದ ವೈಶಿಷ್ಟ್ಯಗಳಲ್ಲೊಂದು. ಇಂತಹ ಜನ ಮನೋವಿಜ್ಞಾನಿಗಳ ಹಲವಾರು ಸಂಶೋಧನೆಗಳ ಸಾಮಗ್ರಿಯಾಗಿದ್ದಾರೆ. ಹೊಸ ಪರಿಸರದ ಅಪೇಕ್ಷೆಗಳಿಗೆ ಅನುವಾಗಿ ಈ ಜನ ತಮ್ಮ ದಕ್ಷತೆಗಳಲ್ಲಿ, ಕೆಲಸ ಮಾಡುವ ಕ್ರಮದಲ್ಲಿ, ಸೂಕ್ತ ಬದಲಾವಣೆಗಳನ್ನು ಸಾಧಿಸಿರುವ ನಿದರ್ಶನಗಳು ಹಲವಾರು.

1960ರ ದಶಕದಲ್ಲಿ, ಬ್ರಿಟನ್ನಿಗೆ ವಲಸೆ ಬಂದ ಜನ ಸಾವಿರಾರು. ಹೆಚ್ಚಿನ ಜನ ಬಂದದ್ದು ಭಾರತ, ಪಾಕಿಸ್ತಾನ ಹಾಗೂ ವೆಸ್ಟ್‌ಇಂಡೀಸುಗಳ ಸಾಪ್ರದಾಯಿಕ ಸಮಾಜಗಳಿಂದ. ವಲಸೆ ಬಂದವರ ಮಕ್ಕಳು ಬ್ರಿಟನ್ನಿನ ಶಾಲೆಗಳಿಗೆ ಹೋದಾಗ ಅವರಿಗೆದುರಾಗುವುದು ಹಿಂದೆ ಕಂಡರಿಯದ ಒಂದು ಪ್ರಪಂಚ. ಇಂತಹ ಪರಿಸರಕ್ಕೆ ಏನೂತರಪೇತಿಲ್ಲದೆ ಕಾಲಿಡುವ ಮಕ್ಕಳ ವರ್ತನೆಗಳಲ್ಲಾಗಬಹುದಾದ ಬದಲಾವಣೆಗಳು ಸಂಶೋಧನೆಗೆ ತಕ್ಕ ವಿಷಯ. ಸಾಮಾನ್ಯವಾಗಿ ಪಾಶ್ಚಾತ್ಯದೇಶಗಳಲ್ಲಿ ಬಳಕೆಯಲ್ಲಿರುವ ಮಾಪಕಗಳನ್ನು ಇಂತಹ ಮಕ್ಕಳ ಪರೀಕ್ಷೆಗೆ ಉಪಯೋಗಿಸುವುದು ಉಚಿತ. ಈ ಮಕ್ಕಳು ಬ್ರಿಟನ್ನಿಗೆ ಬರುವಾಗ ತರುವ ದಕ್ಷತೆಗಳಲ್ಲಿನ ಕೊರತೆಯನ್ನು

ಅಳೆಯುವುದಕ್ಕೆ, ಆ ಕೊರತೆಗಳನ್ನು ತುಂಬಲು ಅಗತ್ಯವಾದ ಪ್ರವಚನದ ವಿಧಾನವನ್ನು ನಿರ್ಧರಿಸುವುದಕ್ಕೆ ಇಂತಹ ಸಂಶೋಧನೆಗಳು ಸಹಾಯಕವಾಗುವುದರಲ್ಲಿ ಅನುಮಾನವಿಲ್ಲ.

ಇಂತಹ ಮಕ್ಕಳ ಎರಡು ಗುಂಪುಗಳೇ ಸದ್ಯದ ಸಂಶೋಧನೆಯ ವಿಷಯ. ಒಂದು ಗುಂಪಿನ ಮಕ್ಕಳು ಬ್ರಿಟನ್ನಿಗೆ ಈಚೆಗೆ ಬಂದವರು. ಅವರಲ್ಲಿ ಯಾರೂ 12 ತಿಂಗಳಿಗಿಂತ ಕಡಿಮೆ ಅಥವಾ 30 ತಿಂಗಳಿಗಿಂತ ಹೆಚ್ಚು ಕಾಲವನ್ನು ಬ್ರಿಟನ್ನಿನಲ್ಲಿ ಕಳೆದಿರಲಿಲ್ಲ. ಇನ್ನೊಂದು ಗುಂಪಿನ ಮಕ್ಕಳು ಐದು ವರ್ಷಕ್ಕಿಂತ ಹೆಚ್ಚು ಕಾಲವನ್ನು ಬ್ರಿಟನ್ನಿನಲ್ಲಿ ಕಳೆದಿರುವರು ; ಕೆಲವರಂತೂ ಅಲ್ಲೇ ಹುಟ್ಟಿದವರು.

ಈ ಮಕ್ಕಳ ದಕ್ಷತೆಗಳಲ್ಲಿ, ವಲಸೆ ಬಂದದ್ದೇ ಕಾರಣವಾಗಿ, ಕಂಡುಬರಬಹುದಾದ ಬದಲಾವಣೆಗಳ ಬಗೆಗೆ ಹಲವು ಅನುಮಾನಗಳನ್ನು ಪ್ರತಿಪಾದಿಸಲಾಯಿತು. ಕೆಲವು ಅನುಮಾನಗಳ ಮೂಲ ನೀಗ್ರೋ ಮಕ್ಕಳು ವಲಸೆ ಹೋದದ್ದರ ಬಗೆಗೆ ಅಮೆರಿಕದಲ್ಲಿ ನಡೆದ ಸಂಶೋಧನೆಗಳಲ್ಲಿದ್ದರೆ, ಉಳಿದವುಗಳ ಮೂಲ ಭಾರತದ ಸಂಸ್ಕೃತಿಯ ವೈಶಿಷ್ಟ್ಯದಲ್ಲಿ. ಬ್ರಿಟನ್ನಿನ ಪರಿಸರ ಮುಖ್ಯವಲ್ಲ. ಈ ಮಕ್ಕಳ ದಕ್ಷತೆಗಳಲ್ಲಿ ಕಾಣಸಿಗುವ ಬದಲಾವಣೆಗೆ, ಬ್ರಿಟನ್ನಿನ ಶಾಲೆಯ ಪರಿಸರದ ಮುಖ್ಯ, ಅನ್ನುವ ವಾದವನ್ನು ಮಂಡಿಸುವುದರ ಜೊತೆಗೆ ಅದಕ್ಕೆ ಅನ್ವಯಿಸುವಂತಹ ಒಂದು ಅನುಮಾನವನ್ನು ಪ್ರತಿಪಾದಿಸಲಾಯಿತು.

ಸಂಶೋಧನೆಗೆ ಆರಿಸಿಕೊಂಡ ಮಕ್ಕಳ ಬಗೆಗೆ ಅಗತ್ಯವಾಗಿದ್ದ ವಿವರಗಳನ್ನು ಪಡೆಯುವುದಕ್ಕೆ ಪ್ರತಿಯೊಂದು ಮನೆಗೂ ಹೋಗಿ ತಂದೆ ತಾಯಂದಿರನ್ನು ಅಥವಾ ಮೇಲ್ವಿಚಾರಕರನ್ನು ಮಾತಾಡಿಸಿಯಾಯಿತು. ಈ ಸಂದರ್ಶನಗಳಿಂದ ಬಂದ ಮಾಹಿತಿಯೇ ಹೋಲಿಕೆಗೆ ಆರಿಸಿಕೊಂಡ ಗುಂಪುಗಳನ್ನು ಸರಿಸಮವೆಂದು ಪರಿಗಣಿಸುವದರಲ್ಲಿ ಆಧಾರವಾದದ್ದು.

ಬ್ರಿಟನ್ನಿನ ಪರಿಸರದ ಪ್ರಭಾವದ ಒಂದಂಚಿಗೆ ಭಾರತದಲ್ಲಿರುವ ಮಕ್ಕಳು, ಇನ್ನೊಂದಂಚಿಗೆ ಇಂಗ್ಲೆಂಡಿನಲ್ಲೇ ಹುಟ್ಟಿ ಇಂಗ್ಲೆಂಡಿನಲ್ಲೇ ಬೆಳೆದ ಇಂಗ್ಲಿಷ್ ಮಕ್ಕಳು. ನಡುವೆ ಎರಡು ನಿಲ್ದಾಣಗಳ ಹಾಗೆ ವಲಸೆ ಬಂದ ಈ ಎರಡು ಗುಂಪು, ಮಕ್ಕಳು — ಇದೇ ಸಂಶೋಧನೆಯ ಶಿಲ್ಪ. ಈಚೆಗೆ ಬಂದವರ ಹೋಲಿಕೆಗೆ, ರೂಢಿ ಪ್ರಮಾಣಕ್ಕೆ, ಭಾರತದಲ್ಲಿರುವ ಮಕ್ಕಳು, ಮೊದಲು ಬಂದವರ ಹೋಲಿಕೆಗೆ, ರೂಢಿ ಪ್ರಮಾಣಕ್ಕೆ, ಇಂಗ್ಲಿಷ್ ಮಕ್ಕಳು—ಶಿಲ್ಪದ ಪ್ರಧಾನ ಅಂಶಗಳು ಇವು.

